ಬುಧವಾರ, ಅಕ್ಟೋಬರ್ 29, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 298 | ಪುಟ 14
prajavani.net prajavani www.prajavani.net
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೂರ್ಯ ಪಡೆ ಸಜ್ಜು



ಸೂರ್ಯಕುಮಾರ್ ಯಾದವ್ ನಾಯಕತ್ವದ ಭಾರತ ತಂಡವು ಬುಧವಾರ ಕ್ಯಾನ್‌ಬೆರಾದಲ್ಲಿ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವನ್ನು ಎದುರಿಸಲಿದೆ

ಯುವ ಸಂಸತ್



ಬೆಂಗಳೂರಿನ ವಿಕಾಸಸೌಧದಲ್ಲಿ ಮಂಗಳವಾರ ಆಯೋಜಿಸಿದ್ದ ರಾಜ್ಯಮಟ್ಟದ 'ಯುವ ಸಂಸತ್' ಸ್ಪರ್ಧೆಯಲ್ಲಿ ವಿದ್ಯಾರ್ಥಿಯೊಬ್ಬರು ತನ್ನ ಅಭಿಪ್ರಾಯ ಮಂಡಿಸಿದ ಕ್ಷಣ

ಸೆನ್ಸೆಕ್ಸ್ 84,628 | ನಿಫ್ಟಿ 25,936 | $/₹ 88.29 | ಚಿನ್ನ (Std. 10g) ₹1,26,100 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,56,500 (ಬೆಂಗಳೂರು)

ಸರ್ಕಾರದ ನಡೆಗೆ ಕೋರ್ಟ್ ಅಂಕುಶ

ಸರ್ಕಾರಿ ಸ್ಥಳಗಳಲ್ಲಿ 10ಕ್ಕೂ ಹೆಚ್ಚು ಜನರ ಜಮಾವಣೆಗೆ ಪೂರ್ವಾನುಮತಿ ಕಡ್ಡಾಯ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಸಂಘ ಸಂಸ್ಥೆಗಳು, ಸಂಘಟನೆಗಳು ಸರ್ಕಾರದ ಸ್ಥಳ, ಆವರಣ ಹಾಗೂ ಸಾರ್ವಜನಿಕ ಆಸ್ತಿಗಳನ್ನು ಬಳಸುವ ಮುನ್ನ ಕಡ್ಡಾಯವಾಗಿ ಪೂರ್ವಾನುಮತಿ ಪಡೆಯಬೇಕು' ಎಂಬ ರಾಜ್ಯ ಸರ್ಕಾರದ ಆದೇಶ ಅನುಷ್ಠಾನಕ್ಕೆ ಹೈಕೋರ್ಟ್ ತಡೆ ನೀಡಿದೆ.

ರಾಜ್ಯ ಸಚಿವ ಸಂಪುಟದ ಈ ನಿರ್ಣಯವನ್ನು ಪ್ರಶ್ನಿಸಿ ಹುಬ್ಬಳ್ಳಿಯ, 'ಪುನಶ್ಚೇತನ ಸೇವಾ ಸಂಸ್ಥೆ' ಅಧ್ಯಕ್ಷ ವಿನಾಯಕ ಮತ್ತು 'ವಿ ಕೇರ್ ಫೌಂಡೇಶನ್' ಅಧ್ಯಕ್ಷ ಗಂಗಾಧರಯ್ಯ, ಧಾರವಾಡದ ರಾಜೀವ ಮಲ್ಹಾರ ಕುಲಕರ್ಣಿ ಹಾಗೂ ಬೆಳಗಾವಿಯ ಉಮಾ ಸತ್ಯಜಿತ್ ಚವಾಣ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ (ಧಾರವಾಡ) ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹಿರಿಯ ವಕೀಲ ಅಶೋಕ ಹಾರನಹಳ್ಳಿ ಅವರ ವಾದ ಆಲಿಸಿದ ನ್ಯಾಯಪೀಠ, 'ಸರ್ಕಾರದ ಈ ಆದೇಶವು ಸಂವಿಧಾನದ 13(2)ನೇ ವಿಧಿಯ ಸ್ಪಷ್ಟ ಉಲ್ಲಂಘನೆಯಾಗಿದೆ. ಹಾಗಾಗಿ, ಈ ಆಕ್ಷೇಪಾರ್ಹ ಆದೇಶದ ಕಾರ್ಯಾಚರಣೆ ಮತ್ತು ಅದರಿಂದ ಈಗಾಗಲೇ ಹೊರಹೊಮ್ಮಿರುವ ಎಲ್ಲಾ ಪರಿಣಾಮಗಳ ಪ್ರಕ್ರಿಯೆಗಳನ್ನು ಮುಂದಿನ ವಿಚಾರಣೆಯವರೆಗೆ ತಡೆಹಿಡಿಯುವುದು ಸೂಕ್ತವೆಂದು ಪರಿಗಣಿಸಿ ಈ ಆದೇಶ ನೀಡಲಾಗುತ್ತಿದೆ' ಎಂದು ಸ್ಪಷ್ಟಪಡಿಸಿತು.

▶10



ಸರ್ಕಾರದ ಆದೇಶವು ಸಂವಿಧಾನದ ಅಧ್ಯಾಯ IIIರಲ್ಲಿ ಪ್ರತಿಪಾದಿಸಲಾದ ಹಕ್ಕುಗಳನ್ನು, ಅದರಲ್ಲೂ ನಿರ್ದಿಷ್ಟವಾಗಿ 19(1)(ಎ) ಮತ್ತು (ಬಿ) ಅಡಿಯಲ್ಲಿ ಕೊಡಮಾಡಲಾಗಿರುವ ಸ್ವಾತಂತ್ರ್ಯಗಳನ್ನು ಉಲ್ಲಂಘಿಸುತ್ತದೆ
ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

ಧಾರವಾಡ ಹೈಕೋರ್ಟ್‌ನ ಏಕ ಸದಸ್ಯ ಪೀಠ ನೀಡಿರುವ ತಡೆಯಾಜ್ಞೆ ತೆರವುಗೊಳಿಸುವಂತೆ ದ್ವಿಸದಸ್ಯ ಪೀಠಕ್ಕೆ ಮೇಲ್ಮನವಿ ಸಲ್ಲಿಸುತ್ತೇವೆ
ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಾರ್ವಜನಿಕ ಸ್ಥಳಗಳಲ್ಲಿ ಜನರ ಜಮಾವಣೆಗೆ ಪೊಲೀಸ್ ಇಲಾಖೆ ಪೂರ್ವಾನುಮತಿ ಕಡ್ಡಾಯ ಎನ್ನುವ ಸಂಪುಟ ನಿರ್ಧಾರ ಜಾರಿಗೆ ಹೈಕೋರ್ಟ್ ತಡೆ ನೀಡಿರುವುದು ಸರ್ಕಾರಕ್ಕೆ ಹಿನ್ನಡೆ, ಕುತಂತ್ರ, ಷಡ್ಯಂತ್ರಕ್ಕೆ ತಡೆ
ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

'ಶಾಂತಿ ಸಭೆ'ಯಲ್ಲಿ ಮೂಡದ ಒಮ್ಮತ

ಕಲಬುರಗಿ: ಜಿಲ್ಲೆಯ ಚಿತ್ತಾಪುರದಲ್ಲಿ ನವೆಂಬರ್ 2ರಂದು 'ಪಥಸಂಚಲನ'–ಪ್ರತಿಭಟನೆಗೆ ಅನುಮತಿ ಕೋರಿರುವ ಸಂಘಟನೆಗಳೊಂದಿಗೆ ಹೈಕೋರ್ಟ್ ನಿರ್ದೇಶನದಂತೆ ಜಿಲ್ಲಾಡಳಿತ ಮಂಗಳವಾರ ನಡೆಸಿದ 'ಶಾಂತಿ ಸಭೆ'ಯಲ್ಲಿ ಒಮ್ಮತದ ತೀರ್ಮಾನ ಮೂಡಲಿಲ್ಲ.

ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ 11.45ಕ್ಕೆ ಆರಂಭವಾದ ಸಭೆ ಒಂದೂವರೆ ಗಂಟೆ ನಡೆಯಿತು. ಆರ್‌ಎಸ್‌ಎಸ್ ಹಾಗೂ ಭೀಮ್ ಆರ್ಮಿ, ಭಾರತೀಯ ದಲಿತ ಪ್ಯಾಂಥರ್ ಸೇರಿ ಉಳಿದ ಸಂಘಟನೆಗಳ ಮುಖಂಡರು ತಮ್ಮ ನಿಲುವುಗಳಿಗೆ ಅಂಟಿಕೊಂಡರು ಎಂದು ಮೂಲಗಳು ಹೇಳಿವೆ.

ಒಮ್ಮತದ ನಿರ್ಧಾರವಿಲ್ಲದೇ ಗೊಂದಲದಲ್ಲೇ ಸಭೆ ಮುಗಿಯಿತು. ಒಂದು ಹಂತದಲ್ಲಿ, 'ಪರ್ಯಾಯ ದಿನ, ಇಲ್ಲವೇ ಅದೇ ದಿನ ವಿಭಿನ್ನ ಸಮಯಕ್ಕೆ ಪಥಸಂಚಲನ ನಡೆಸಲು ಸಾಧ್ಯವೇ' ಎಂದು ಜಿಲ್ಲಾಧಿಕಾರಿ ಅವರು ಸಂಘಟನೆಗಳ ಪ್ರತಿನಿಧಿಗಳನ್ನು ಪ್ರಶ್ನಿಸಿದರು.

'ಆರ್‌ಎಸ್‌ಎಸ್‌ನವರು ಲಾಠಿ ಬಿಟ್ಟು, ರಾಷ್ಟ್ರಧ್ವಜ, ಸಂವಿಧಾನ ಹಿಡಿದು ಸಾಗಿದರೆ, ಪರ್ಯಾಯ ದಿನ, ಬದಲಿ ಸಮಯದ ಬಗ್ಗೆ ಆಲೋಚಿಸುತ್ತೇವೆ' ಎಂದು ಕೆಲ ಸಂಘಟನೆಗಳ ಪ್ರತಿನಿಧಿಗಳು ಹೇಳಿದರು. 'ಆರ್‌ಎಸ್‌ಎಸ್ ಪಥಸಂಚಲನದ ದಿನವೇ ತಮಗೂ ಸಮಯ ಕೊಡಬೇಕು' ಇತರೆ ಸಂಘಟನೆಗಳು ಆಗ್ರಹಿಸಿದವು.

'ಲಾಠಿ ಬಿಟ್ಟು, ರಾಷ್ಟ್ರಧ್ವಜವಾಗಲಿ, ಸಂವಿಧಾನವಾಗಲಿ ಹಿಡಿದು ಪಥಸಂಚಲನ ನಡೆಸುವ ಬಗ್ಗೆ ಆರ್‌ಎಸ್‌ಎಸ್ ತನ್ನ ನಿಲುವು ಸ್ಪಷ್ಟಪಡಿಸಲಿಲ್ಲ' ಎಂದು ಮೂಲಗಳು ತಿಳಿಸಿವೆ.

'ಪ್ರತಿ ಸಂಘಟನೆಯ ಪ್ರತಿನಿಧಿಗಳಿಗೆ ಮಾತನಾಡಲು 5 ನಿಮಿಷ ಸಮಯ ನೀಡಲಾಗಿತ್ತು. ಕೆಲವರು ಲಿಖಿತವಾಗಿ ಅಭಿಪ್ರಾಯ ತಿಳಿಸಿದ್ದಾರೆ. ಜಿಲ್ಲಾಡಳಿತ ಇದೆಲ್ಲವನ್ನೂ ದಾಖಲಿಸಿಕೊಂಡಿದೆ' ಎಂದು ಸಭೆಯಲ್ಲಿ ಪಾಲ್ಗೊಂಡಿದ್ದ ವಿವಿಧ ಸಂಘಟನೆಗಳ ಮುಖಂಡರು ತಿಳಿಸಿದ್ದಾರೆ.

▶10

ಹೈಕೋರ್ಟ್‌ಗೆ ವರದಿ

ಶಾಂತಿ ಸಭೆಯಲ್ಲಿ ಒಮ್ಮತ ಮೂಡದ ಬೆನ್ನಲ್ಲೇ ಈಗ ಎಲ್ಲರ ಚಿತ್ತ ಹೈಕೋರ್ಟ್ ನತ್ತ ನೆಟ್ಟಿದೆ. ಕೋರ್ಟ್ ಏನು ನಿರ್ಧಾರ ಪ್ರಕಟಿಸಲಿದೆ ಎಂಬ ಕುತೂಹಲ ಗರಿಗೆದರಿದೆ.

'ಈ ಕುರಿತ ಅರ್ಜಿ ವಿಚಾರಣೆಯನ್ನು ಹೈಕೋರ್ಟ್ ಅ.30ರ ಮಧ್ಯಾಹ್ನ 2.30ಕ್ಕೆ ನಿಗದಿಪಡಿಸಿದ್ದು, ಶಾಂತಿ ಸಭೆ ಕುರಿತ ವರದಿಯನ್ನು ಜಿಲ್ಲಾಡಳಿತ ಸಲ್ಲಿಸಲಿದೆ.

ಪೊಲೀಸರಿಗೆ ಪೀಕ್ ಕ್ಯಾಪ್

ಪ್ರಜಾವಾಣಿ ಚಿತ್ರ: ಪುಷ್ಕರ್ ವಿ.



ರಾಜ್ಯದ ಪೊಲೀಸರಿಗೆ ಪೀಕ್ ಕ್ಯಾಪ್ ಪರಿಚಯಿಸಲಾಗಿದ್ದು, ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ಮಹಿಳಾ ಕಾನ್‌ಸ್ಟೆಬಲ್‌ಗಳು ಹೊಸ ಕ್ಯಾಪ್ ಧರಿಸಿ ಸಲ್ಯೂಟ್ ಮಾಡಿದರು

ಜಿ.ಪರಮೇಶ್ವರ–ಎಚ್‌.ಸಿ.ಮಹದೇವಪ್ಪ ರಹಸ್ಯ ಸಭೆ

ದಲಿತ 'ಶಕ್ತಿ ಪ್ರದರ್ಶನ'ಕ್ಕೆ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕಮಾಂಡ್ ತೀರ್ಮಾನಿಸಿದರೆ ಐದು ವರ್ಷ ನಾನೇ ಮುಖ್ಯಮಂತ್ರಿ' ಎಂದು ಹೇಳುವ ಮೂಲಕ ನಾಯಕತ್ವ ಬದಲಾವಣೆ ಕುರಿತ ಚರ್ಚೆಗೆ ಸಿದ್ದರಾಮಯ್ಯ ಹೊಸ ಆಯಾಮ ನೀಡಿದ್ದಾರೆ. ಆ ಬೆನ್ನಲ್ಲೆ, ಸಚಿವರಾದ ಜಿ. ಪರಮೇಶ್ವರ ಮತ್ತು ಎಚ್‌.ಸಿ. ಮಹದೇವಪ್ಪ ರಹಸ್ಯ ಸಭೆ ನಡೆಸಿರುವುದು ಕಾಂಗ್ರೆಸ್ ಪಾಳಯದಲ್ಲಿ ನಾನಾ ವ್ಯಾಖ್ಯಾನಗಳಿಗೆ ಕಾರಣವಾಗಿದೆ.

ಮಹದೇವಪ್ಪ ಅವರ ನಿವಾಸಕ್ಕೆ ಮಂಗಳವಾರ ಬೆಳಿಗ್ಗೆ ತೆರಳಿದ ಪರಮೇಶ್ವರ ಒಂದು ಗಂಟೆಗೂ ಹೆಚ್ಚು ಕಾಲ ಸಮಾಲೋಚನೆ ನಡೆಸಿದರು. ಸಭೆಯ ನಂತರ ಉಭಯ ನಾಯಕರು, 'ನಮ್ಮದು ರಾಜಕೀಯ ಸಭೆಯಲ್ಲ' ಎಂದು ಸ್ಪಷ್ಟನೆ ನೀಡಿದ್ದಾರೆ.

ಆದರೆ, ಸಚಿವರ ಈ ನಡೆ ಕುತೂಹಲ ಕೆರಳಿಸಿದೆ. ದಲಿತ ಸಮಾವೇಶ ಆಯೋಜಿಸಿ 'ಶಕ್ತಿ ಪ್ರದರ್ಶನ'ಕ್ಕೆ ಸಚಿವರು ಮುಂದಾಗಿದ್ದು, ಈ ಬಗ್ಗೆ ಇಬ್ಬರೂ ಚರ್ಚೆ ನಡೆಸಿದ್ದಾರೆ ಎಂದು ಗೊತ್ತಾಗಿದೆ.

ಸಭೆಯ ನಂತರ ಮಾತನಾಡಿದ ಪರಮೇಶ್ವರ, 'ನಮ್ಮ ದೃಷ್ಟಿಯಿಂದ ಸಿದ್ದರಾಮಯ್ಯನವರೇ ಐದು ವರ್ಷ ಮುಖ್ಯಮಂತ್ರಿ ಆಗಿರುತ್ತಾರೆ. ಅದೇನೇ ಇದ್ದರೂ ನಾಯಕತ್ವ ಬದಲಾವಣೆ ಕುರಿತ ಗೊಂದಲವನ್ನು ಹೈಕಮಾಂಡ್ ಬಗೆಹರಿಸಲಿ' ಎಂದು ಆಗ್ರಹಿಸಿದರು.

'ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ನಾವೆಲ್ಲರೂ ಸೇರಿ ಸಿದ್ದರಾಮಯ್ಯ ಅವರನ್ನು ಐದು ವರ್ಷಗಳಿಗೆ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಿದ್ದೇವೆ. ಎರಡೂವರೆ ವರ್ಷಗಳ ಅಧಿಕಾರ ಹಂಚಿಕೆ ಬಗ್ಗೆ ಹೈಕಮಾಂಡ್‌ನಿಂದಾಗಲಿ, ಬೇರೆ ಯಾರಿಂದಲೂ ನಮಗೆ ಯಾವುದೇ ಮಾಹಿತಿ ಇರಲಿಲ್ಲ. ಮುಂದೆ ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೊ ಅದನ್ನು ಒಪ್ಪಿಕೊಳ್ಳುತ್ತೇವೆ' ಎಂದು ಹೇಳಿದರು.

▶6

'ದಲಿತ ಸಮಾವೇಶ ಶೀಘ್ರ'

'ದಲಿತ ಸಮುದಾಯದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲು ಶೀಘ್ರದಲ್ಲೇ ದಲಿತ ಸಮಾವೇಶ ನಡೆಸಲಾಗುವುದು' ಎಂದು ಪರಮೇಶ್ವರ ಇದೇ ವೇಳೆ ಪುನರುಚ್ಚರಿಸಿದರು.

ದಲಿತ ಮುಖ್ಯಮಂತ್ರಿ ಕುರಿತ ಪ್ರಶ್ನೆಗೆ, 'ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಗಲು ಬಹಳಷ್ಟು ಸಮರ್ಥರಿದ್ದಾರೆ. ಹೈಕಮಾಂಡ್ ಏನು ತೀರ್ಮಾನ ಮಾಡುತ್ತದೆಯೊ ನೋಡಬೇಕು' ಎಂದರು. ಮಹದೇವಪ್ಪ ಕೂಡ, 'ದಲಿತ ಮುಖ್ಯಮಂತ್ರಿ ಸ್ಥಾನ ಕೇಳುವ ಸನ್ನಿವೇಶ ಬಂದಾಗ ಮಾತನಾಡುತ್ತೇನೆ' ಎಂದು ಹೇಳಿದರು.

ಮಹದೇವಪ್ಪ ಮತ್ತು ಪರಮೇಶ್ವರ ಭೇಟಿ ಕುರಿತು ಪ್ರತಿಕ್ರಿಯಿಸಿದ ಸಚಿವ ಸತೀಶ ಜಾರಕಿಹೊಳಿ, 'ಈ ಭೇಟಿಗೆ ವಿಶೇಷ ಅರ್ಥ ಕಲ್ಪಿಸುವ ಅಗತ್ಯವಿಲ್ಲ. ದಲಿತ ಸಮಾವೇಶ ಮಾಡಬೇಕೆಂಬ ವಿಚಾರ ಬಂದಿದೆ. ಆದರೆ, ಸಮಾಜದ ಸಮಾವೇಶ ಮಾಡಬೇಕೆ ಅಥವಾ ಪಕ್ಷದ ಸಮಾವೇಶ ಮಾಡಬೇಕೆ ಎಂಬ ಬಗ್ಗೆ ಚರ್ಚೆಯಾಗಿಲ್ಲ' ಎಂದರು.

ರಾಜ್ಯಕ್ಕೆ ನ. 20ರಂದು ರಾಹುಲ್?

'ಗಾಂಧಿ ಭಾರತ' ಶತಮಾನೋತ್ಸವದ ಅಂಗವಾಗಿ ರಾಜ್ಯದಾದ್ಯಂತ ನಿರ್ಮಿಸಲು ಉದ್ದೇಶಿಸಿರುವ 100 ಕಾಂಗ್ರೆಸ್ ಕಚೇರಿ ಕಟ್ಟಡಗಳಿಗೆ ಶಂಕುಸ್ಥಾಪನೆ ನೆರವೇರಿಸಲು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ನ. 20ರಂದು ರಾಜ್ಯಕ್ಕೆ ಬರುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಅದೇ ದಿನ ರೇಸ್ ಕೋರ್ಸ್ ರಸ್ತೆಯಲ್ಲಿ, ಕಾಂಗ್ರೆಸ್ ಭವನ ಇರುವ ಜಾಗದಲ್ಲಿ ವಾಣಿಜ್ಯ ಕಟ್ಟಡ ಮತ್ತು ಪಕ್ಷದ ಕಚೇರಿಗೆ ಸ್ಥಳಾವಕಾಶ ಒದಗಿಸಲು ನಿರ್ಮಿಸಲಾಗುವ ಕಟ್ಟಡಕ್ಕೂ ಶಂಕು ಸ್ಥಾಪನೆ ನಡೆಯಲಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡಾ ಈ ವೇಳೆ ಉಪಸ್ಥಿತರಿರಲಿದ್ದಾರೆ ಎಂದೂ ಮೂಲಗಳು ಹೇಳಿವೆ.

ಸಿದ್ದರಾಮಯ್ಯ ಅವರ ನೇತೃತ್ವ ನಮಗೆ ಅವಶ್ಯವಿದೆ. ಇಂದು, ಮುಂದೆಯೂ ಅವರ ಆಶೀರ್ವಾದ ಬೇಕು. ರಾಜಕೀಯದಲ್ಲಿ ಯಾವುದೇ ನಿವೃತ್ತಿ ಇಲ್ಲ
ಸತೀಶ ಜಾರಕಿಹೊಳಿ, ಸಚಿವ

ಕಸಾಪ: ಅಧಿಕಾರ, ಹಣಕಾಸು ದುರ್ಬಳಕೆ ಆರೋಪದ ವಿಚಾರಣೆಗೆ ನೇಮಕಾತಿ

ಆಡಳಿತಾಧಿಕಾರಿ ಅಧಿಕಾರ ಸ್ವೀಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಆಡಳಿತಾಧಿಕಾರಿಯಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ.ಗಾಯಿತ್ರಿ ಅವರು ಮಂಗಳವಾರ ಅಧಿಕಾರ ಸ್ವೀಕರಿಸಿದರು.

ಸೆ.30ರಂದೇ ಸಹಕಾರ ಇಲಾಖೆಯು ಆಡಳಿತಾಧಿಕಾರಿಯನ್ನು ನೇಮಕ ಮಾಡಿ ಆದೇಶ ಹೊರಡಿಸಿತ್ತು. ಅಧಿಕಾರ ದುರ್ಬಳಕೆ, ಹಣಕಾಸು ದುರುಪಯೋಗ ಸೇರಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ವಿರುದ್ಧದ ವಿವಿಧ ಆರೋಪಗಳಿಗೆ ಸಂಬಂಧಿಸಿದಂತೆ ವಿಚಾರಣೆಗೆ ಈ ನೇಮಕಾತಿ ಮಾಡಲಾಗಿದೆ.

ಈ ಆದೇಶಕ್ಕೆ ತಡೆ ಕೋರಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಬಗ್ಗೆ ಸೋಮವಾರ ನಡೆದ ವಿಚಾರಣೆಯಲ್ಲಿ, ಸರ್ಕಾರವು ಆಡಳಿತಾಧಿಕಾರಿ ನೇಮಕಕ್ಕೆ ಸಂಬಂಧಿಸಿದಂತೆ ಅಗತ್ಯ ದಾಖಲಾತಿಗಳನ್ನು ಕೋರ್ಟ್‌ಗೆ ಸಲ್ಲಿಸಿತ್ತು. ಮಂಗಳವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಕಸಾಪಕ್ಕೆ ಬಂದ ಗಾಯಿತ್ರಿ ಅವರು, ಆಡಳಿತಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದರು.

ಆದೇಶ ಹೊರಡಿಸಿದ ದಿನಾಂಕದಿಂದ ಮುಂದಿನ ಮೂರು ತಿಂಗಳು ಅಥವಾ ವಿಚಾರಣೆ ಪೂರ್ಣಗೊಳ್ಳುವವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ.

ಕಸಾಪದಲ್ಲಿ ಹಣಕಾಸಿನ ಅವ್ಯವಹಾರ, ಅಧಿಕಾರ ದುರ್ಬಳಕೆಯ ಆರೋಪಗಳ ವಿಚಾರಣೆಗೆ ಸಂಬಂಧಿಸಿದಂತೆ ಜುಲೈನಲ್ಲಿ ಆದೇಶ ಹೊರಡಿಸಿದ್ದ ಸಹಕಾರ ಇಲಾಖೆ, ವಿಚಾರಣಾಧಿಕಾರಿಯನ್ನು ನೇಮಕ ಮಾಡಿತ್ತು.

ಸೆ. 22ರಂದು ವಿಚಾರಣೆಗೆ ಹಾಜರಾಗುವಂತೆ ಮಹೇಶ ಜೋಶಿ ಅವರಿಗೆ ನೋಟಿಸ್ ನೀಡಿದ್ದ ಇಲಾಖೆ ಕಾರ್ಯದರ್ಶಿ, 'ಮೇಲ್ನೋಟಕ್ಕೆ ಆರೋಪಗಳು ಸಾಬೀತಾಗಿರುವುದರಿಂದ ಏಕೆ ಆಡಳಿತಾಧಿಕಾರಿ ನೇಮಿಸಬಾರದು' ಎಂದು ನೋಟಿಸ್‌ನಲ್ಲಿ ಪ್ರಶ್ನಿಸಿದ್ದರು. ಈ ನೋಟಿಸ್‌ಗೆ ಸಂಬಂಧಿಸಿದಂತೆ ಪತ್ರ ಬರೆದಿದ್ದ ಮಹೇಶ ಜೋಶಿ, 15 ದಿನಗಳ ಕಾಲಾವಕಾಶ ನೀಡುವಂತೆ ಮನವಿ ಮಾಡಿದ್ದರು. ಇಲಾಖೆಗೆ ಲಿಖಿತ ಹೇಳಿಕೆ ಸಲ್ಲಿಸಿದ್ದರು.

ವಿಚಾರಣೆಗೆ ಸಂಬಂಧಿಸಿದಂತೆ ನಿಗದಿತ ಕಾಲಾವಧಿಯಲ್ಲಿ ಹಾಜರಾಗದಿರುವುದು, ಅಗತ್ಯ ದಾಖಲಾತಿಗಳನ್ನು ಒದಗಿಸದಿರುವ ಕಾರಣ ಆಡಳಿತಾಧಿಕಾರಿ ನೇಮಿಸುವಂತೆ ಇಲಾಖೆ ಶಿಫಾರಸು ಮಾಡಿತ್ತು.

ಪರಿಷತ್ತಿನ ವಿರುದ್ಧದ 17 ಆರೋಪಗಳಿಗೆ ಸಮರ್ಪಕ ಹಾಗೂ ಸಮರ್ಥನೀಯ ಹೇಳಿಕೆ ಅಥವಾ ದಾಖಲಾತಿಯನ್ನು ಸಲ್ಲಿಸಲು ಪರಿಷತ್ತಿನ ಅಧ್ಯಕ್ಷರು ವಿಫಲರಾಗಿದ್ದಾರೆ. ಇಲಾಖೆ ನೇಮಿಸಿದ್ದ ವಿಚಾರಣಾಧಿಕಾರಿಯ ವರದಿ, ಜಿಲ್ಲಾ ನೋಂದಣಾಧಿಕಾರಿಗಳ ಶಿಫಾರಸು ಹಾಗೂ ಸಹಕಾರ ಸಂಘಗಳ ನಿಬಂಧಕರ ಪ್ರಸ್ತಾವದ ಅನುಸಾರ ವಿಚಾರಣೆಗೆ ಆಡಳಿತಾಧಿಕಾರಿ ನೇಮಕಕ್ಕೆ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

17 ಆರೋಪಗಳ ಪೈಕಿ ಏಳು ಆರೋಪಗಳಿಗೆ ಮಾತ್ರ ವಿಚಾರಣಾ ಅವಧಿಯಲ್ಲಿ ಭಾಗಶಃ ಉತ್ತರವನ್ನು ಕಸಾಪ ಅಧ್ಯಕ್ಷರು ವಿಚಾರಣಾಧಿಕಾರಿಗೆ ನೀಡಿರುತ್ತಾರೆ. ವಿಚಾರಣಾಧಿಕಾರಿ ಕಾಲಾವಕಾಶ ನೀಡಿದರೂ ನಿಗದಿತ ಸಮಯದೊಳಗೆ ದಾಖಲೆಗಳೊಂದಿಗೆ ಉತ್ತರಿಸಲು ವಿಫಲರಾಗಿರುತ್ತಾರೆ ಎಂದು ಉಲ್ಲೇಖಿಸಲಾಗಿದೆ.



ಸರ್ಕಾರದ ಸೂಚನೆ ಮೇರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಆಡಳಿತಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡಿದ್ದೇನೆ
ಕೆ.ಎಂ.ಗಾಯಿತ್ರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ಚಿನಕುರುಳಿ ಪ್ರಕಾಶ್ ಶೆಟ್ಟಿ



ವೈಟಿಪಿಎಸ್‌ನಲ್ಲಿ ಬೆಂಕಿ ಅವಘಡ

ರಾಯಚೂರು: ಯರಮರಸ್ ಉಷ್ಣ ವಿದ್ಯುತ್ ಸ್ಥಾವರದ (ವೈಟಿಪಿಎಸ್) ಸಿಎಚ್‌ಪಿ-3 ವಿಭಾಗದ ಕಲ್ಲಿದ್ದಲು ಬೆಲ್ಟ್‌ನಲ್ಲಿ ಮಂಗಳವಾರ ಬೆಂಕಿ ಅವಘಡ ಸಂಭವಿಸಿ ಕೋಟ್ಯಂತರ ರೂಪಾಯಿ ಮೌಲ್ಯದ ಪರಿಕರಗಳು ಸುಟ್ಟಿವೆ.



ಉಷ್ಣ ವಿದ್ಯುತ್ ಸ್ಥಾವರದಲ್ಲಿ ಬೆಂಕಿ ಕಾಣಿಸಿಕೊಂಡಿತ್ತು

ವಿದ್ಯುತ್ ಘಟಕಗಳಿಗೆ ಕಲ್ಲಿದ್ದಲು ಪೂರೈಸುವ 600 ಮೀಟರ್ ಬೆಲ್ಟ್ ಇತರೆ ಸಾಮಗ್ರಿಗಳು ಸುಟ್ಟಿವೆ. ಆರ್‌ಟಿಪಿಎಸ್, ವೈಟಿಪಿಎಸ್, ರಾಯಚೂರು ಅಗ್ನಿಶಾಮಕ ಸಿಬ್ಬಂದಿ ಬಂದು ಬೆಂಕಿ ನಂದಿಸಿದ್ದಾರೆ. ಹಿರಿಯ ಎಂಜಿನಿಯರ್, ಸಿಬ್ಬಂದಿ ಕೊರತೆಯಿಂದ ಸರಿಯಾಗಿ ನಿಗಾ ಇಡಲಾಗಿಲ್ಲ. ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ. ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯ ಪರಿಶೀಲಿಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ನಿವೃತ್ತ ನ್ಯಾ. ರಂಜನಾ ಪ್ರಕಾಶ್ ದೇಸಾಯಿ ಅಧ್ಯಕ್ಷತೆ • 2026ರ ಜನವರಿ 1ರಿಂದ ಜಾರಿ ಸಾಧ್ಯತೆ

8ನೇ ವೇತನ ಆಯೋಗ: ಸಂಪುಟ ಒಪ್ಪಿಗೆ

ನವದೆಹಲಿ (ಪಿಟಿಐ): 8ನೇ ವೇತನ ಆಯೋಗ ರಚನೆಯ ನಿಯಮ ಮತ್ತು ನಿಬಂಧನೆಗಳಿಗೆ (ಟಿಒಆರ್) ಕೇಂದ್ರ ಸಚಿವ ಸಂಪುಟವು ಮಂಗಳವಾರ ಅನುಮೋದನೆ ನೀಡಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ರಂಜನಾ ಪ್ರಕಾಶ್ ದೇಸಾಯಿ ಅಧ್ಯಕ್ಷತೆಯಲ್ಲಿ 8ನೇ ವೇತನ ಆಯೋಗ ರಚಿಸಲಾಗಿದೆ. ಆಯೋಗಕ್ಕೆ ತಾತ್ವಿಕ ಒಪ್ಪಿಗೆ ಲಭಿಸಿ ಒಂಬತ್ತು ತಿಂಗಳಾದ ಬಳಿಕ, ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿನ ಕೇಂದ್ರ ಸಚಿವ ಸಂಪುಟ 'ಟಿಒಆರ್'ಗೆ ಅನುಮೋದನೆ ನೀಡಿದೆ.

ಮುಂದಿನ ತಿಂಗಳು ನಡೆಯಲಿರುವ ಬಿಹಾರ ವಿಧಾನಸಭೆ ಚುನಾವಣೆಗೆ ಮುನ್ನ ಸಚಿವ ಸಂಪುಟ ಈ ನಿರ್ಧಾರ ಕೈಗೊಂಡಿದೆ.

ಆಯೋಗ ರಚನೆಯಾದ ದಿನದಿಂದ 18 ತಿಂಗಳ ಒಳಗಾಗಿ ಅಂತಿಮ ವರದಿ ಸಲ್ಲಿಸಬೇಕಿದೆ. ಆಯೋಗದ ಶಿಫಾರಸುಗಳು 2026ರ ಜನವರಿ 1ರಿಂದಲೇ ಪೂರ್ವಾನ್ವಯವಾಗುವಂತೆ ಜಾರಿಯಾಗುವ ಸಾಧ್ಯತೆ ಇದೆ.

'ಕೇಂದ್ರ ಸರ್ಕಾರದ ಸುಮಾರು 50 ಲಕ್ಷದಷ್ಟು ನೌಕರರಿಗೆ, 69 ಲಕ್ಷದಷ್ಟು ಪಿಂಚಣಿದಾರರಿಗೆ 8ನೇ ವೇತನ ಆಯೋಗದ ಶಿಫಾರಸಿನ ಪ್ರಯೋಜನಗಳು ದೊರೆಯಲಿವೆ. ಆಯೋಗವು ಕೇಂದ್ರ ಸರ್ಕಾರ ಮತ್ತು ಖಾಸಗಿ ವಲಯದ ನೌಕರರಿಗೆ ಈಗಿರುವ ವೇತನ, ಭತ್ಯೆ ಮತ್ತಿತರೆ ಸೌಲಭ್ಯಗಳು ಹಾಗೂ ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಲಭ್ಯ ಇರುವ ಸಂಪನ್ಮೂಲಗಳನ್ನು ಗಮನಕ್ಕೆ ತೆಗೆದುಕೊಳ್ಳಲಿದೆ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿ, ಅಗತ್ಯ ಬದಲಾವಣೆಗಳನ್ನು ಶಿಫಾರಸು ಮಾಡಲಿದೆ.

8ನೇ ವೇತನ ಆಯೋಗದಲ್ಲಿ ಬೆಂಗಳೂರಿನ ಐಐಎಂನ ಪ್ರೊ. ಪುಲಕ್ ಘೋಷ್ ಅರೆಕಾಲಿಕ ಸದಸ್ಯರಾಗಿ ಹಾಗೂ ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯದ ಕಾರ್ಯದರ್ಶಿ ಪಂಕಜ್ ಜೈನ್ ಅವರು ಸದಸ್ಯ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಲಿದ್ದಾರೆ.

ರಂಜನಾ ಪ್ರಕಾಶ್ ದೇಸಾಯಿ ಅವರು ಭಾರತೀಯ ಪತ್ರಿಕಾ ಮಂಡಳಿಯ ಅಧ್ಯಕ್ಷೆಯೂ ಆಗಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಕ್ಷೇತ್ರ ಪುನರ್‌ವಿಂಗಡಣಾ ಆಯೋಗ ಮತ್ತು ಉತ್ತರಾಖಂಡದಲ್ಲಿ ಏಕರೂಪ ನಾಗರಿಕ ಸಂಹಿತೆ (ಯುಸಿಸಿ) ಜಾರಿಯ ತಜ್ಞರ ಸಮಿತಿ ಅಧ್ಯಕ್ಷೆಯಾಗಿಯೂ ಅವರು ಕಾರ್ಯನಿರ್ವಹಿಸಿದ್ದಾರೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಹುದ್ದೆಯಿಂದ ನಿವೃತ್ತರಾದ ನಂತರ ಅವರು ವಹಿಸಿಕೊಳ್ಳುತ್ತಿರುವ ನಾಲ್ಕನೆಯ ಮಹತ್ವದ ಹೊಣೆಗಾರಿಕೆ ಇದಾಗಿದೆ.



8ನೇ ವೇತನ ಆಯೋಗದ ಶಿಫಾರಸು ಜಾರಿಯು ಮಧ್ಯಂತರ ವರದಿ ಬಂದ ನಂತರ ಖಚಿತವಾಗುತ್ತದೆ. ಆದರೂ, ಇದು 2026ರ ಜ.1ರಿಂದಲೇ ಜಾರಿಗೆ ಬರಬಹುದು
ಅಶ್ವಿನಿ ವೈಷ್ಣವ್, ಕೇಂದ್ರ ಸಚಿವ

ರಸಗೊಬ್ಬರ ಸಬ್ಸಿಡಿ ಏರಿಕೆ

2025–26ನೇ ಸಾಲಿನ ಹಿಂಗಾರು ಹಂಗಾಮಿಗೆ ಯೂರಿಯಾ ಹೊರತುಪಡಿಸಿ, ರಂಜಕ –ಪಿ ಮತ್ತು ಗಂಧಕ–ಎಸ್ (ಡಿಎಪಿ, ಎಂಒಪಿ, ಎಸ್‌ಎಸ್‌ಪಿ, ಎನ್‌ಪಿಕೆ, ಕಾಂಪ್ಲೆಕ್ಸ್) ರಸಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು ₹37,952 ಕೋಟಿಗೆ ಹೆಚ್ಚಿಸಲು ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ.

ಹಿಂಗಾರು ಹಂಗಾಮು ಅಕ್ಟೋಬರ್ 10ರಿಂದ ಆರಂಭಗೊಂಡಿದ್ದು, ಮುಂದಿನ ವರ್ಷದ ಮಾರ್ಚ್ 31ಕ್ಕೆ ಕೊನೆಗೊಳ್ಳಲಿದೆ. 2025ರ ಮುಂಗಾರು ಹಂಗಾಮಿನ ರಸಗೊಬ್ಬರ ಸಬ್ಸಿಡಿಗೆ ಹೋಲಿಸಿದರೆ ಈ ಮೊತ್ತವು ₹736 ಕೋಟಿಯಷ್ಟು ಹೆಚ್ಚಿದೆ.

ಕೆ.ಜಿಗೆ ₹43.60 ಇದ್ದ ರಂಜಕದ ಸಬ್ಸಿಡಿಯು ಈಗ ₹47.96ಕ್ಕೆ ಏರಿಕೆಯಾಗಿದೆ. ಗಂಧಕದ ಸಬ್ಸಿಡಿ ಕೆ.ಜಿಗೆ ₹1.77ರಿಂದ ₹2.87ಕ್ಕೆ ಏರಿಕೆಯಾಗಿದೆ. ನೈಟ್ರೋಜನ್ ಮತ್ತು ಪೊಟ್ಯಾಶ್ ರಸಗೊಬ್ಬರದ ಸಬ್ಸಿಡಿಯಲ್ಲಿ ಯಾವುದೇ ವ್ಯತ್ಯಾಸವಾಗಿಲ್ಲ. ಇವು ಕ್ರಮವಾಗಿ ಕೆ.ಜಿಗೆ ₹43.02 ಮತ್ತು ₹2.38 ಇವೆ. ಡಿಎಪಿ ಮತ್ತು ಟಿಎಸ್‌ಪಿ ರಸಗೊಬ್ಬರದ ದರದಲ್ಲಿ ಸರ್ಕಾರ ಪರಿಷ್ಕರಣೆ ಮಾಡಿಲ್ಲ.

10 ವರ್ಷಗಳಿಗೊಮ್ಮೆ ಶಿಫಾರಸು ಜಾರಿ

ಸಾಮಾನ್ಯವಾಗಿ ವೇತನ ಆಯೋಗದ ಶಿಫಾರಸುಗಳನ್ನು ಪ್ರತಿ 10 ವರ್ಷಗಳಿಗೊಮ್ಮೆ ಜಾರಿಗೊಳಿಸಲಾಗುತ್ತದೆ. ಇದೇ ಸಂಪ್ರದಾಯದಂತೆ 8ನೇ ವೇತನ ಆಯೋಗದ ಶಿಫಾರಸುಗಳು 2026ರ ಜ.1ರಿಂದ ಜಾರಿಗೆ ಬರಲಿದೆ ಎಂದು ಸರ್ಕಾರ ಪ್ರಕಟಣೆಯಲ್ಲಿ ತಿಳಿಸಿದೆ.

7ನೇ ವೇತನ ಆಯೋಗವನ್ನು 2014ರ ಫೆಬ್ರುವರಿಯಲ್ಲಿ ರಚಿಸಲಾಗಿತ್ತು. ಆಯೋಗದ ಶಿಫಾರಸುಗಳು 2016ರ ಜನವರಿ 1ರಿಂದ ಜಾರಿಗೆ ಬಂದಿದ್ದವು.

ಆಂಧ್ರಕ್ಕೆ ಅಪ್ಪಳಿಸಿದ 'ಮೊಂಥಾ'

ಅಮರಾವತಿ/ಭುವನೇಶ್ವರ (ಪಿಟಿಐ): ಮೊಂಥಾ ಚಂಡಮಾರುತವು ತೀವ್ರ ಸ್ವರೂಪ ಪಡೆದುಕೊಂಡಿದ್ದು, ಆಂಧ್ರ ಪ್ರದೇಶದ ಮಚಲಿಪಟ್ಟಣ ಮತ್ತು ಕಾಕಿನಾಡ ನಡುವೆ ಮಂಗಳವಾರ ರಾತ್ರಿ 7ರ ಹೊತ್ತಿಗೆ ಅಪ್ಪಳಿಸಿದೆ. ಈ ವೇಳೆ ಗಾಳಿಯ ವೇಗವು ಗಂಟೆಗೆ 110 ಕಿ.ಮೀನಷ್ಟು ಇತ್ತು ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.

'ರಾತ್ರಿ 7.23ರ ಸುಮಾರಿಗೆ ಚಂಡಮಾರುತ ಅಪ್ಪಳಿಸುವ ಪ್ರಕ್ರಿಯೆ ಆರಂಭಗೊಂಡಿದ್ದು, ನಂತರದ 6 ತಾಸು ಮುಂದುವರಿದಿದೆ' ಎಂದು ಇಲಾಖೆ 'ಎಕ್ಸ್'ನಲ್ಲಿ ಪೋಸ್ಟ್ ಹಂಚಿಕೊಂಡಿದೆ. ಆಂಧ್ರ ಪ್ರದೇಶ ಮತ್ತು ಒಡಿಶಾದ ಮೇಲೆಯೇ ಚಂಡ ಮಾರುತವು ಹೆಚ್ಚು ಪರಿಣಾಮ ಬೀರಲಿದೆ.

'ಯಾವುದೇ ಸಾವು ನೋವು ಸಂಭವಿಸದಂತೆ ನೋಡಿಕೊಳ್ಳುವುದೇ ಸರ್ಕಾರದ ಗುರಿ' ಎಂದು ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಂಝಿ ಹೇಳಿದರು. ತೀವ್ರ ಮಳೆಯಾಗುವ ಪ್ರದೇಶಗಳು, ತಗ್ಗು ಪ್ರದೇಶಗಳ ಜನರನ್ನು ಸ್ಥಳಾಂತರಿಸುವ ಕಾರ್ಯವನ್ನು ಈ ರಾಜ್ಯಗಳಲ್ಲಿ ನಡೆಸಲಾಗುತ್ತಿದೆ. ಶಾಲೆಗಳು, ಅಂಗನವಾಡಿಗಳಿಗೆ ಅ.30ರವರೆಗೆ ಇಲ್ಲಿ ರಜೆ ಘೋಷಿಸಲಾಗಿದೆ.

▶6

ಮಹಿಳೆ ಸಾವು

ವೇಗವಾಗಿ ಬೀಸುತ್ತಿರುವ ಗಾಳಿಯ ಕಾರಣದಿಂದ ತಲೆಯ ಮೇಲೆ ಮರವೊಂದು ಬಿದ್ದು ಆಂಧ್ರ ಪ್ರದೇಶದ ಕೋನಸೀಮಾ ಜಿಲ್ಲೆಯಲ್ಲಿ ಮಹಿಳೆಯೊಬ್ಬರು ಮಂಗಳವಾರ ಮೃತಪಟ್ಟಿದ್ದಾರೆ.

ಒಡಿಶಾ: ಭೂಕುಸಿತ

'ಮೊಂಥಾ'ದಿಂದ ಒಡಿಶಾದ ಕರಾವಳಿ ಮತ್ತು ದಕ್ಷಿಣ ಭಾಗದ 8 ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಭೂಕುಸಿತ ಸಂಭವಿಸಿದೆ. ಹಲವು ಮರಗಳು ಧರೆಗೆ ಉರುಳಿದ್ದು, ಕೆಲವು ಮನೆಗಳು ನೆಲಸಮವಾಗಿವೆ.

ಗಜಪತಿ ಜಿಲ್ಲೆಯ ಅನಕ ಗ್ರಾ.ಪಂ.ನಲ್ಲಿ ಗುಡ್ಡಗಳಿಂದ ದೊಡ್ಡ ಗಾತ್ರದ ಬಂಡೆಗಳು ರಸ್ತೆಗೆ ಉರುಳಿವೆ. ಇದರಿಂದ ಈ ಭಾಗದ ಐದು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ. ಇದೇ ಜಿಲ್ಲೆಯ ಮತ್ತೊಂದು ಪಂಚಾಯಿತಿ ವ್ಯಾಪ್ತಿಯಲ್ಲಿಯೂ ಭೂಕುಸಿತವಾಗಿದೆ. ಇದೇ ಜಿಲ್ಲೆಯಲ್ಲಿ ಮಣ್ಣಿನ ಮನೆಯೊಂದು ಕುಸಿದು ಬಿದ್ದು, ವ್ಯಕ್ತಿಗೆ ಗಾಯವಾಗಿದೆ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ

ಜೋಶಿ ವಿರುದ್ಧ ನಿಷ್ಪಕ್ಷಪಾತ ತನಿಖೆ ನಡೆಸಿ: ಎಂ.ಪ್ರಕಾಶಮೂರ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಮಹೇಶ ಜೋಶಿ ಅವರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಆಡಳಿತಾಧಿಕಾರಿ ನಿಷ್ಪಕ್ಷಪಾತ ತನಿಖೆ ನಡೆಸಿ, ವಾಸ್ತವವನ್ನು ಬಯಲಿಗೆಳೆಯಬೇಕು' ಎಂದು ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ.ಪ್ರಕಾಶಮೂರ್ತಿ ಆಗ್ರಹಿಸಿದ್ದಾರೆ.

'ಕನ್ನಡಿಗರ ತೆರಿಗೆ ಹಣದ ಅನುದಾನವನ್ನು ಮನಸೋಇಚ್ಛೆ ದುರ್ಬಳಕೆ ಮಾಡಿಕೊಂಡಿದ್ದ ಮಹೇಶ ಜೋಶಿ ಅವರು, ಪರಿಷತ್ತಿನಲ್ಲಿ ಭ್ರಷ್ಟಾಚಾರ ನಡೆಸಿದ್ದಾರೆ. ಅಲ್ಲದೆ, ಪ್ರಜಾಪ್ರಭುತ್ವ ವಿರೋಧಿಯಾಗಿ ನಡೆದುಕೊಂಡಿದ್ದಾರೆ. ಸಂವಿಧಾನಬಾಹಿರವಾಗಿ ಪರಿಷತ್ತಿನ ಬೈಲಾ ತಿದ್ದುಪಡಿ ಮಾಡಿ, ದುರಾಡಳಿತ ನಡೆಸಿದ್ದಾರೆ. ಸಿಬ್ಬಂದಿ ವೇತನ ಹಾಗೂ ಸಮ್ಮೇಳನಕ್ಕೆ ನೀಡಿದ್ದ ಕೋಟ್ಯಂತರ ರೂಪಾಯಿ ಅನುದಾನವನ್ನು ನಿಯಮಬಾಹಿರವಾಗಿ ಬಳಸಿ, ದುಂದುವೆಚ್ಚ ಮಾಡಿದ್ದಾರೆ' ಎಂದು ದೂರಿದ್ದಾರೆ.


ಎಂ.ಪ್ರಕಾಶಮೂರ್ತಿ

'ಅವರ ಕಾರ್ಯವೈಖರಿ ಪ್ರಶ್ನಿಸಿದ್ದ ನನಗೆ ಮತ್ತು ಕೆಲ ಜಿಲ್ಲಾಧ್ಯಕ್ಷರಿಗೆ ಕಿರುಕುಳ ನೀಡಿದ್ದರು. ಕನ್ನಡದ ಕೆಲಸಗಳಿಗೆ ಅಡ್ಡಿ ಉಂಟುಮಾಡಿ, ಕಾನೂನಿನ ಬೆದರಿಕೆಗಳನ್ನು ಒಡ್ಡುವ ಮೂಲಕ ಕನ್ನಡ ಸಾಹಿತ್ಯ ಪರಿಷತ್ತನ್ನು ಕಾನೂನು ತಾಣದ ಪರಿಷತ್ತನ್ನಾಗಿ ಮಾಡಿದ್ದಾರೆ' ಎಂದು ಪ್ರಕಟಣೆಯಲ್ಲಿ ಆರೋಪಿಸಿದ್ದಾರೆ.

25 ಮಂದಿಗೆ ಪ್ರಸೂತಿ ಶುಶ್ರೂಷೆ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನ್ಯಾಷನಲ್ ಮಿಡ್‌ವೈಫ್ರಿ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ ಇಲ್ಲಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಹಮ್ಮಿಕೊಂಡಿದ್ದ 18 ತಿಂಗಳ ಪ್ರಸೂತಿ ಶುಶ್ರೂಷೆ ತರಬೇತಿಯನ್ನು 25 ಅಭ್ಯರ್ಥಿಗಳು ಪೂರ್ಣಗೊಳಿಸಿದ್ದಾರೆ.

ಆಸ್ಪತ್ರೆಯು ನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ತರಬೇತಿ ಪಡೆದ ಮೊದಲ ಬ್ಯಾಚ್‌ನ ಅಭ್ಯರ್ಥಿಗಳಿಗೆ ಪ್ರಮಾಣಪತ್ರಗಳನ್ನು ಪ್ರದಾನ ಮಾಡಲಾಯಿತು. ಆರೋಗ್ಯ ಇಲಾಖೆಯ (ತಾಯಿ ಆರೋಗ್ಯ ವಿಭಾಗ) ಉಪ ನಿರ್ದೇಶಕ ಡಾ. ರಾಜಕುಮಾರ್, ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ. ಸವಿತಾ ಸಿ., ಸ್ಥಾನಿಕ ವೈದ್ಯಾಧಿಕಾರಿ ಡಾ. ಸಂತೋಷ್, ಆಸ್ಟ್ರಿಕ್ ಫೌಂಡೇಷನ್ ಅಧ್ಯಕ್ಷೆ ಜಾಹ್ನವಿ ನಿಲೇಕಣಿ, ಕರ್ನಾಟಕ ಸ್ಟೇಟ್ ಡಿಪ್ಲೊಮಾ ಇನ್ ನರ್ಸಿಂಗ್ ಎಕ್ಸಾಮಿನೇಷನ್ ಬೋರ್ಡ್ ಕಾರ್ಯದರ್ಶಿ ಮಡಿವಾಳಪ್ಪ ನಾಗರಹಳ್ಳಿ ಪಾಲ್ಗೊಂಡಿದ್ದರು.

'ಕೇಂದ್ರ ಸರ್ಕಾರವು 2019ರಲ್ಲಿ 'ನರ್ಸ್ ಪ್ರಾಕ್ಟಿಷನರ್ಸ್ ಮಿಡ್‌ವೈಫ್ರಿ ಎಜುಕೇಟರ್ಸ್' (ಎನ್‌ಪಿಎಂಇ) ತರಬೇತಿ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಸಹಜ ಹಾಗೂ ಸುರಕ್ಷಿತ ಹೆರಿಗೆ, ತಾಯಿ ಮತ್ತು ನವಜಾತ ಶಿಶುಗಳ ಆರೈಕೆ ಬಗ್ಗೆ ಈ ತರಬೇತಿ ತಿಳಿಸಿಕೊಡಲಿದೆ. ಹೆರಿಗೆ ಮತ್ತು ಪ್ರಸವೋತ್ತರ ಅವಧಿಯಲ್ಲಿ ಉತ್ತಮ ಗುಣಮಟ್ಟದ, ಗೌರವಯುತ ಮತ್ತು ಮಹಿಳಾ ಕೇಂದ್ರಿತ ಆರೈಕೆ ನೀಡುವ ಗುರಿಯನ್ನು ಈ ತರಬೇತಿ ಹೊಂದಿದೆ' ಎಂದು ಡಾ. ಸವಿತಾ ಸಿ. ಹೇಳಿದರು.

'2023ರ ಜನವರಿಯಲ್ಲಿ ಇಲ್ಲಿ ಪ್ರಾರಂಭವಾದ ಈ ತರಬೇತಿಯಲ್ಲಿ ಅಂತರರಾಷ್ಟ್ರೀಯ ತರಬೇತುದಾರರ ಮಾರ್ಗದರ್ಶನದಲ್ಲಿ 25 ಅಭ್ಯರ್ಥಿಗಳು ತರಬೇತಿ ಪೂರ್ಣಗೊಳಿಸಿದ್ದಾರೆ. ಮೊದಲ ಆರು ತಿಂಗಳು ವಾಣಿವಿಲಾಸ ಆಸ್ಪತ್ರೆಯಲ್ಲಿಯೇ ಲಿಖಿತ ಮತ್ತು ಪ್ರಾಯೋಗಿಕ ತರಬೇತಿ ಪೂರ್ಣಗೊಳಿಸಲಾಯಿತು. ಉಳಿದ 12 ತಿಂಗಳು ರಾಜ್ಯದ ನಿಗದಿತ ಸ್ಟೇಟ್ ಮಿಡ್‌ವೈಫ್ರಿ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ಗಳಲ್ಲಿ ತರಬೇತಿ ನೀಡಲಾಯಿತು' ಎಂದರು.


ಕಾರ್ಯಕ್ರಮದಲ್ಲಿ ಪ್ರಸೂತಿ ಶುಶ್ರೂಷೆ ತರಬೇತಿ ಪಡೆದ ಅಭ್ಯರ್ಥಿಗಳೊಂದಿಗೆ ಡಾ. ಸವಿತಾ, ಡಾ. ರಾಜಕುಮಾರ್, ಜಾಹ್ನವಿ ನಿಲೇಕಣಿ, ಮಡಿವಾಳಪ್ಪ ನಾಗರಹಳ್ಳಿ, ಡಾ. ಸಂತೋಷ್ ಹಾಗೂ ವೈದ್ಯಾಧಿಕಾರಿಗಳು ಉಪಸ್ಥಿತರಿದ್ದರು

ಕರ್ನಾಟಕ ಸರ್ಕಾರ
ರೇಷ್ಮೆ ಇಲಾಖೆ
ರೇಷ್ಮೆ ಉಪ ನಿರ್ದೇಶಕರ ಕಛೇರಿ, ಬೆಂಗಳೂರು ನಗರ ಜಿಲ್ಲಾ ಪಂಚಾಯತ್,
ನಂ.14 ರೇಷ್ಮೆ ಭವನ, ವಾಟಾಳ್ ನಾಗರಾಜ್ ರಸ್ತೆ, ಓಕಳೀಪುರಂ, ಬೆಂಗಳೂರು-560021
e-mail:ddszpurbanbangalore.@gmail .com Phone:080-23120925 Mobile:9448672824

ಸಂ:DDS/BLR(U)/T/DIS/15/2025-26 ದಿನಾಂಕ: 27.10.2025

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
(e-Procurement Reference Number SD/2025-26/IND0131)

ಈ ಮೂಲಕ ಸಾರ್ವಜನಿಕರ ಮಾಹಿತಿಗಾಗಿ ತಿಳಿಯಪಡಿಸುವುದೇನೆಂದರೆ 2025-26ನೇ ಸಾಲಿನಲ್ಲಿ ಜಿಲ್ಲಾ ಪಂಚಾಯತ್ ಯೋಜನೆಯಡಿ ಬೆಂಗಳೂರು ನಗರ ಜಿಲ್ಲೆ ರೇಷ್ಮೆ ಇಲಾಖೆಯ ವ್ಯಾಪ್ತಿಯಲ್ಲಿನ ರೇಷ್ಮೆ ಬೆಳೆಗಾರರಿಗೆ ಉಚಿತವಾಗಿ ವಿತರಿಸಲು ಸೋಂಕು ನಿವಾರಕಗಳು, ಹಾಸಿಗೆ ಸೋಂಕು ನಿವಾರಕಗಳು, ಸಸ್ಯ ಸಂವರ್ಧಕಗಳು, ಊಜಿ ನಿಯಂತ್ರಕಗಳು, ಸುಣ್ಣ ಮತ್ತು ಗ್ರೇಡ್-1 ಬ್ಲೀಚಿಂಗ್ ಪೌಡರ್‌ಗಳನ್ನು ಜಿಲ್ಲೆಯ ತಾಂತ್ರಿಕ ಸೇವಾ ಕೇಂದ್ರಗಳಿಗೆ ಸರಬರಾಜು ಮಾಡಲು ಆಸಕ್ತ ಸರಬರಾಜುದಾರರು kppp.karnataka.gov.in ಪೋರ್ಟಲ್ ಮೂಲಕ ಟೆಂಡರ್‌ನಲ್ಲಿ (ದ್ವಿಲಕೋಟೆ) ಭಾಗವಹಿಸಬಹುದಾಗಿದೆ. ಬಿಡ್‌ಗಳನ್ನು ಸಲ್ಲಿಸಲು **ದಿನಾಂಕ:12/11/2025 ರಂದು ಸಂಜೆ 5.00 ಗಂಟೆ** ಕೊನೆಯ ದಿನವಾಗಿದ್ದು, ತಾಂತ್ರಿಕ ಬಿಡ್‌ಗಳನ್ನು **ದಿನಾಂಕ:14/11/2025 ರಂದು ಬೆಳಿಗ್ಗೆ 11.30** ಗಂಟೆ ನಂತರ ತೆರೆಯಲಾಗುವುದು. ಯಶಸ್ವಿ ತಾಂತ್ರಿಕ ಬಿಡ್‌ಗಳನ್ನು **ದಿನಾಂಕ:17/11/2025 ರಂದು ಬೆಳಿಗ್ಗೆ 11.30 ಗಂಟೆ** ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿಯನ್ನು **kppp.karnataka.gov.in** ಪೋರ್ಟಲ್‌ನಲ್ಲಿ ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಅಥವಾ ಮೊಬೈಲ್ ಸಂಖ್ಯೆ 9448672824 ಗೆ ಸಂಪರ್ಕಿಸಬಹುದು.

ಸಹಿ/-
ರೇಷ್ಮೆ ಉಪ ನಿರ್ದೇಶಕರು
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಬೆಂಗಳೂರು

ವಾಸಾಸಂಇ/ವಾಪ್ರ/3438/ಎಸ್‌ಎಸ್‌ಸಿ/2025-26

ನಗರಸಭೆ ಕಾರ್ಯಾಲಯ ನೆಲಮಂಗಲ
ಬೆಂಗಳೂರು ಗ್ರಾಮಾಂತರ ಜಿಲ್ಲೆ-562123, ದೂರವಾಣಿ: 080-27722135,
Email : itstaff_ulb_nelamangala@yahoo.com

ಸಂಖ್ಯೆ: ನಸನೆ/ತಾಂ.ಶಾ(ವಿ)/ಟೆಂಡರ್/32/2025-26 ದಿನಾಂಕ: 27.10.2025

ಟೆಂಡರ್ ಪ್ರಕಟಣೆ (ಇ-ಪ್ರಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಕರ್ನಾಟಕ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW 2ರ ನಿಬಂಧನೆಗಳಂತೆ ಅರ್ಜಿ ಆಹ್ವಾನಿಸಲಾಗಿದೆ)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ನೆಲಮಂಗಲ ನಗರಸಭೆ ವ್ಯಾಪ್ತಿಯಲ್ಲಿ ಕೇಂದ್ರ ಪುರಸ್ಕೃತ ಅಮೃತ್ 2.0 ಯೋಜನೆಯಡಿಯಲ್ಲಿ ಕೈಗೊಳ್ಳಬೇಕಾದ ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳಿಗೆ ಐಟಂವಾರು ಇ-ತಂತ್ರಾಂಶದಲ್ಲಿ ಏಕ-ಲಕೋಟೆ ಪದ್ಧತಿಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ಗಳಿಗೆ ವೆಬ್ ವಿಳಾಸ **https://kppp.karnataka.gov.in** ಮೂಲಕ ಟೆಂಡರ್ ಸಲ್ಲಿಸುವುದು.
ಸದರಿ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಟೆಂಡರ್ ತೆರೆಯುವ ದಿನಾಂಕ ಹಾಗೂ ಸಂಬಂಧಿಸಿದ ಹೆಚ್ಚಿನ ವಿವರಗಳಿಗಾಗಿ ವೆಬ್‌ಸೈಟ್ **https://kppp.karnataka.gov.in** / ಹಾಗೂ ನಗರಸಭೆಯ ಇಂಜಿನಿಯರಿಂಗ್ ಶಾಖೆಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/-	ಸಹಿ/-	ಸಹಿ/-	ಸಹಿ/-
ಶ್ರೀ.ಎನ್.ಗಣೇಶ್ ಮಾನ್ಯ ಅಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀ ಆನಂದ್.ಜಿ ಮಾನ್ಯ ಉಪಾಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀ ಬಿ. ಪದ್ಮನಾಭ ಮಾನ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ನೆಲಮಂಗಲ	ಶ್ರೀ ಗಂಗಾಧರ ಹೆಚ್ ಪೌರಾಯುಕ್ತರು ನಗರಸಭೆ, ನೆಲಮಂಗಲ

ವಾ.ಸಾ.ಸಂ.ಇ/ವಾಪ್ರ/3455/ಎಸ್‌ಎಸ್‌ಸಿ/2025-26

(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ)
ಬಾಲಭವನ ಸೊಸೈಟಿ (ರಿ), ಬೆಂಗಳೂರು

ಸಂ.: :ಬಾಭಸೊ/ಶಾಕಾಲಉಸ/2025-26 ದಿನಾಂಕ: 24.10.2025

ಪ್ರಕಟಣೆ

2025-26 ಬಾಲ ಭವನ ವತಿಯಿಂದ ಶಾಲಾ ಮಕ್ಕಳಿಗೆ ಕಾರ್ಯಕ್ರಮಗಳನ್ನು ಆಯೋಜಿಸಲು ತೀರ್ಮಾನಿಸಿದ್ದು, ಅರ್ಹ ಕ್ಯಾಂಟೀನ್ / ಹೋಟೇಲ್ ರವರು ಮಕ್ಕಳಿಗೆ ವಾರ್ಷಿಕವಾರು ಲಘು ಉಪಹಾರ ಸರಬರಾಜು ಮಾಡಲು ಪ್ರಕಟಣೆ ಹೊರಡಿಸಿದ್ದು, ಆಸಕ್ತಿಯುಳ್ಳ ಅರ್ಹ ಕ್ಯಾಂಟೀನ್ / ಹೋಟೇಲ್ ರವರು ಕಛೇರಿಗೆ ಆಗಮಿಸಿ ಅರ್ಜಿಯನ್ನು ಪಡೆದು **ದಿನಾಂಕ: 03-11-2025 ರೊಳಗೆ** ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.
ಕಛೇರಿ ವಿಳಾಸ: **ಬಾಲ ಭವನ ಸೊಸೈಟಿ ಕಬ್ಬನ್ ಪಾರ್ಕ್, ಬೆಂಗಳೂರು-560001.**
ಇಮೇಲ್ : **secybalbhavan.bng@gmail.com**
ದೂರವಾಣಿ ಸಂಖ್ಯೆ: **08022864189.**

ಸಹಿ/- ಕಾರ್ಯದರ್ಶಿಗಳು,
ಬಾಲಭವನ ಸೊಸೈಟಿ, ಬೆಂಗಳೂರು.

ವಾಸಸಂಇ/ಸಿಪಿ/ಎಎಎ/3435/2025-26

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ರಾಮನಗರ ತಾಲ್ಲೂಕು ಪಂಚಾಯಿತಿ ಕಾರ್ಯಾಲಯ
ಬೆಂಗಳೂರು ದಕ್ಷಿಣ ಜಿಲ್ಲೆ. ದೂರವಾಣಿ: 080-27272223
ಇ-ಮೇಲ್: e-mail:- eotprmn@gmail.com

ಸಂ: ಕಾನಿಅ/ತಾಪಂರಾ/ದರಪಟ್ಟಿ/ಸಿಆರ್-1/ಇ.ಪ್ರ/2025-26 ದಿನಾಂಕ: 28.10.2025

ಇ-ಟೆಂಡರ್ ಪ್ರಕಟಣೆ

2025-26ನೇ ಸಾಲಿನ ರಾಮನಗರ ತಾಲ್ಲೂಕು ಪಂಚಾಯಿತಿ ರಾಜ್ಯ ಹಣಕಾಸು ಅನಿರ್ಬಂಧಿತ ಅನುದಾನದ ಲೆಕ್ಕ ಶೀರ್ಷಿಕೆ 2515-00-102-0-62 (059)ರ ಅನುದಾನಡಿ 5 ಲಕ್ಷಕ್ಕೆ ಮೇಲ್ಪಟ್ಟು **6 ಅಭಿವೃದ್ಧಿ ಕಾಮಗಾರಿಗಳನ್ನು** ಟೆಂಡರ್ ಕರೆಯುವ ಸಂಬಂಧ ಕೆ.ಪಿ.ಪಿ.ಪಿ ವೇದಿಕೆಯಲ್ಲಿ ದರಪಟ್ಟಿ ಆಹ್ವಾನಿಸಲಾಗಿದೆ, ಆಸಕ್ತಿಯುಳ್ಳ ಅರ್ಹ ಸರಬರಾಜುದಾರರು ಇ-ಸಂಗ್ರಹಣಾ ವೇದಿಕೆ ವೆಬ್‌ಸೈಟ್ **(Online) http://kppp.karnataka.gov.in** ನಲ್ಲಿ ಟೆಂಡರ್ ವಿವರಗಳನ್ನು ಪಡೆಯಬಹುದಾಗಿದೆ. ಕೆ.ಪಿ.ಪಿ.ಪಿ ವೇದಿಕೆಯ ಮೂಲಕ ಪ್ರಸ್ತಾವನೆ ಸಲ್ಲಿಸಲು ಕೊನೆಯ **ದಿನಾಂಕ 10.11.2025ರ ಸಂಜೆ 4.30 ಗಂಟೆಗೆ.** ಸಹಾಯವಾಣಿ ಸಂ.: 080-27272223.

ಸಹಿ/-
ಕಾರ್ಯನಿರ್ವಾಹಕ ಅಧಿಕಾರಿ
ತಾಲ್ಲೂಕು ಪಂಚಾಯತ್, ರಾಮನಗರ

DIPR/BSD/408/SA/2025-26

ನಗರದಲ್ಲಿ ಇಂದು

ಅಂತರ ಕಾಲೇಜು ಸ್ಪರ್ಧೆಗಳು, ವಾಣಿಜ್ಯೋತ್ಸವದ ಉದ್ಘಾಟನೆ: ಅತಿಥಿಗಳು: ಪನ್ನಗ ಎಲ್. ಕಾಂತ್, ಟಿ.ಎ. ಬಾಲಕೃಷ್ಣ, ಅಧ್ಯಕ್ಷತೆ: ಡಿ.ಆರ್. ಸುಧಾ, ಆಯೋಜನೆ ಮತ್ತು ಸ್ಥಳ: ಬಿ.ವಿ. ನಾರಾಯಣ ರಾವ್ ಸಭಾಂಗಣ, ವಿಜಯ ಕಾಲೇಜು, ಜಯನಗರ, ಬೆಳಿಗ್ಗೆ 9.30

ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನೆ: ಅತಿಥಿಗಳು: ಅನೀಶ್ ತೇಜೇಶ್ವರ್, ಬದರಿ ಪ್ರಸಾದ್ ಎನ್., ಅಧ್ಯಕ್ಷತೆ: ವಿಷ್ಣು ಭರತ್ ಎ.ಎಸ್., ಉಪಸ್ಥಿತಿ: ಎ. ಪ್ರಕಾಶ್, ಐ.ಎಸ್. ಪ್ರಸಾದ್, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ವಿಶ್ವ ಆರೈಕೆದಾರರ ದಿನಾಚರಣೆ: ಉದ್ಘಾಟನೆ: ಲಕ್ಷ್ಮೀ ಹೆಬ್ಬಾಳಕರ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಅತಿಥಿಗಳು: ಶಮ್ಲಾ ಇಕ್ಬಾಲ್, ದಾಸ್ ಸೂರ್ಯವಂಶಿ.
ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ.
ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 10.30

ಮಲ್ಲೇಪುರಂ ಜಿ. ವೆಂಕಟೇಶ್ ಅವರು ಸಂಪಾದಿಸಿದ 'ಪಾಲಿ-ಕನ್ನಡ ಶಬ್ದಕೋಶ' ನಾಲ್ಕನೇ ಸಂಪುಟದ ಬಿಡುಗಡೆ: ಎಸ್.ಸಿ. ಶರ್ಮಾ, ಅತಿಥಿಗಳು: ವೈ.ಎಸ್. ಸಿದ್ದೇಗೌಡ, ರಾಹುಲ್ ಎಂ. ಖರ್ಗೆ, ಅಧ್ಯಕ್ಷತೆ: ಬಿ. ರಮೇಶ್, ಸಂಪುಟದ ಕುರಿತು: ಸಿ. ಚಂದ್ರಮೋಹನ್.
ಆಯೋಜನೆ: ಪಾಲಿ ಇನ್‌ಸ್ಟಿಟ್ಯೂಟ್, ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಬೆಂಗಳೂರು ನಗರ ವಿಶ್ವವಿದ್ಯಾಲಯ,
ಸ್ಥಳ: ಜ್ಞಾನಜ್ಯೋತಿ ಆವರಣದ ಸೆಮಿನಾರ್ ಹಾಲ್, ಬೆಳಿಗ್ಗೆ 11

ಆರ್. ಕುಮಾರಸ್ವಾಮಿ ನಾಯಕ್, ವಿ. ಮಾರ್ಕಂಡಯ್ಯ ಅಭಿನಂದನಾ ಸಮಾರಂಭ: ಅಭಿನಂದಿಸುವವರು: ಸಂತೋಷ ಹಾನಗಲ್, ಅಧ್ಯಕ್ಷತೆ: ಮಧುರ ರಾಡ್ರಿಕ್ಸ್, ಅತಿಥಿಗಳು: ರುದ್ರೇಶ್ ಅದರಂಗಿ, ಬಿ.ಎಂ. ಗಂಗಣ್ಣ, ಉಪಸ್ಥಿತಿ: ಕೆ. ಕಾಳಯ್ಯ,
ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಸಾಂಸ್ಕೃತಿಕ ಕಲಾ ಕುಟೀರ,
ಸ್ಥಳ: ಮಹಿಳಾ ವಿಶ್ರಾಂತಿ ಕೊಠಡಿ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 5

32ನೇ ವಾರ್ಷಿಕ ಸಂಗೀತೋತ್ಸವ: ಗಾಯನ: ಎಂ. ಬಾಲಮುರಳಿ ಕೃಷ್ಣ, ಪಿಟೀಲು: ಎಚ್.ಎಂ. ಸ್ಮಿತಾ, ಮೃದಂಗ: ವಿಜಯ ನಟೇಸನ್, ಘಟ: ಓಂಕಾರ್ ಜಿ. ರಾವ್, ಆಯೋಜನೆ: ನಾದಸುರಭಿ, ಸ್ಥಳ: ಸೇಂಟ್ ಜಾನ್ಸ್ ಮೆಡಿಕಲ್ ಕಾಲೇಜಿನ ಆವರಣ, ಕೋರಮಂಗಲ, ಸಂಜೆ 6

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

ಏಷ್ಯನ್ ಸ್ಕೂಲ್ ಚೆಸ್: ಚಿನ್ನ ಗೆದ್ದ ನಕ್ಷತ್ರಾ

ಬೆಂಗಳೂರು: ಮಂಗೋಲಿಯಾದ ಉಲಾನ್‌ಬತಾರ್‌ನಲ್ಲಿ ಭಾನುವಾರ ಮುಕ್ತಾಯಗೊಂಡ 19ನೇ ಏಷ್ಯನ್ ಸ್ಕೂಲ್ಸ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ನಗರದ ನಕ್ಷತ್ರಾ ಗುಮುದವೆಲ್ಲಿ, 9 ವರ್ಷದೊಳಗಿನವರ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದಾಳೆ.


ನಕ್ಷತ್ರಾ ಗುಮುದವೆಲ್ಲಿ

ತಿಪ್ಪಸಂದ್ರದ ಶಿಶುಗೃಹ ಶಾಲೆಯ ನಕ್ಷತ್ರಾ ರ್‍ಯಾಪಿಡ್ ವಿಭಾಗದಲ್ಲಿ 7 ಸುತ್ತುಗಳಿಂದ 6 ಅಂಕ ಗಳಿಸಿದ್ದಳು ಎಂದು ಪ್ರಕಟಣೆ ತಿಳಿಸಿದೆ.

'ಬಿಬಿಸಿ–ಸಂಚಾರ ದಟ್ಟಣೆ ಕಡಿಮೆ'

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪೆರಿಫೆರಲ್ ರಿಂಗ್ ರಸ್ತೆ-1 ಬಿಬಿಸಿ) ಯೋಜನೆಯು ಉತ್ತರ ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುತ್ತದೆ ಎಂದು ಬಿಬಿಸಿ ವಿಶೇಷ ಉದ್ದೇಶದ ಘಟಕ (ಎಸ್‌ಪಿವಿ) ಅಧ್ಯಕ್ಷ ಎಲ್.ಕೆ.ಅತೀಕ್ ಹೇಳಿದ್ದಾರೆ.

ಯೋಜನೆಗೆ ಭೂಮಿ ನೀಡುವ ರೈತರಿಗೆ ಐದು ಪರಿಹಾರ ಆಯ್ಕೆಗಳನ್ನು ನೀಡಲಾಗಿದೆ. ರಾಜ್ಯದ ಯಾವುದೇ ಯೋಜನೆಯಲ್ಲಿ ಭೂಮಿ ಕಳೆದುಕೊಂಡ ರೈತರಿಗೆ ಹಿಂದೆಂದೂ ನೀಡದಂತಹ ವಿಸ್ತೃತ ಆಯ್ಕೆಗಳಾಗಿವೆ. ನವೆಂಬರ್‌ನಲ್ಲಿ ರೈತರಿಗೆ ಈ ಆಯ್ಕೆಗಳ ಬಗ್ಗೆ ವಿವರವಾಗಿ ತಿಳಿಸಲಾಗುವುದು ಎಂದು ಹೇಳಿದ್ದಾರೆ.

ಯೋಜನೆಗೆ 2,418 ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗುತ್ತಿದ್ದು, ಸುಮಾರು 5 ಸಾವಿರ ಕುಟುಂಬಗಳು ಮಾತ್ರ ಪೂರ್ಣ ಅಥವಾ ಭಾಗಶಃ ಭೂಮಿಯನ್ನು ಕಳೆದುಕೊಳ್ಳಲಿವೆ. ಎಲ್‌ಎಕ್ಯೂ ಮತ್ತು ಆರ್‌ಆರ್ 2013ರ ಕಾಯ್ದೆ ಪ್ರಕಾರ ನಗದು ಪರಿಹಾರ ಪಾವತಿಸಲಾಗುವುದು. ನಗರದ ಪ್ರದೇಶದಲ್ಲಿ ಪ್ರಸ್ತುತ ಮಾರ್ಗಸೂಚಿ ದರದ 2 ಪಟ್ಟು ಮತ್ತು ಗ್ರಾಮೀಣ ಪ್ರದೇಶದಲ್ಲಿ 2 ಪಟ್ಟು ನೀಡಲಾಗುವುದು. 2013ರ ಕಾಯ್ದೆಯಡಿ ಪರಿಹಾರ ನೀಡುವ ಬೇಡಿಕೆ ನ್ಯಾಯಯುತವಾಗಿದ್ದು, ಭೂ ಮಾಲೀಕರು ಮತ್ತು ಕೆಲವು ರೈತ ಸಂಘಟನೆಗಳೊಂದಿಗೆ ಮಾತುಕತೆ ಮುಂದುವರಿಸಲಾಗುವುದು ಎಂದಿದ್ದಾರೆ.

ನಗದು ಪರಿಹಾರ ಸಾಕಾಗದಿದ್ದರೆ, ಅಭಿವೃದ್ಧಿಪಡಿಸಿದ ವಾಣಿಜ್ಯ/ವಸತಿ ಭೂಮಿ, ಟಿಡಿಆರ್ (ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು) ಅಥವಾ ಎಫ್‌ಎಆರ್‌ಗಾಗಿ ಆಯ್ಕೆ ಮಾಡಬಹುದು. ಈ ಆಸ್ತಿಗಳ ಮೌಲ್ಯವು ಯೋಜನೆಯ ನಂತರ ಹೆಚ್ಚಾಗುತ್ತದೆ ಮತ್ತು ಹೂಡಿಕೆ ಮಾಡದಿದ್ದರೆ ಮೌಲ್ಯ ಕಳೆದುಕೊಳ್ಳುವ ನಗದಿಗಿಂತ ಹೆಚ್ಚು ಲಾಭದಾಯಕ ಎಂದಿದ್ದಾರೆ.

PUBLIC NOTICE:

NOTICE is hereby given to the public that we are investigating the right, title, interest, benefits, entitlements of whatsoever nature of the respective owners of lands situated at Chunchegowdahosahalli Village, Doddabelavangala Hobli, Doddaballapura Taluk, Bengaluru Rural District which are more particularly described in the Schedule hereunder written and hereinafter collectively referred to as the "Schedule Property". Our client ("Client") is desirous of entering into a sale transaction of the Schedule Property with the respective owners of the Schedule Property who have represented to our client that they are the absolute owners of their respective extents in the Schedule Property with rights of alienation over the same.

ALL persons including an individual, a Hindu Undivided Family, a company, banks, financial institution(s), non- banking financial institution(s), a firm, an association of persons or a body of individuals whether incorporated or not, lenders and/or creditors having any objection, claim, right, title and/or interest in respect of Schedule Property or any part or portion thereof by way of sale, memorandum of understanding, exchange, mortgage, pledge, charge, gift, trust, inheritance, bequest, succession, family arrangement, grant, possession, lease, sub-lease tenancy, sub-tenancy, maintenance easement, license, bequeath, share, assignment, lien, attachment, development rights, covenant, settlement right of way, Lis pendens, reservation, agreement, FSI consumption, development rights, order/decree/judgement of court or any liability or commitment or otherwise or demand of any nature whatsoever are hereby requested to inform the same in writing, supported with the original documents, to the undersigned having their office at 6/12, Gurappa Avenue, Primrose Road Bengaluru 560 025 within a period of 10 (Ten) days from the date of publication of this notice, failing which, the claim or claims, if any, of such person or persons shall be considered to have been waived and/or abandoned and our Client would be at liberty to proceed with the sale transaction in connection with the Schedule Property.

SCHEDULE PROPERTY.

Sl. No.	Sy No.	Extent	Boundaries: East By	West By	North By	South By
Chunchegowdahosahalli Village, Doddabelavangala Hobli, Doddaballapura Taluk, Bengaluru Rural District						
1.	31/5	14.08	Land belongs to C N Veeraraju	Land belongs to Parvatamma	Land belongs to Maare Gowda	Land belongs to Parvatamma (Sy No.32/1)
2.	31/10	09.08(Including 01 Gunta Karab)	Land belongs to C N. Nagaraju	Land belongs to N. Krishnappa	Land belongs to Maare Gowda	Land belongs to C N. Veeraraju (Sy No.32/3)
3.	31/11	08.12	Land belongs to C N Muniraju	Land belongs to C N. Veeraraju	Land belongs to Maare Gowda	Land belongs to C N. Nagaraju
4.	31/12	10.04	Land belongs to C N. Muneendra Kumar	Land belongs to C N. Nagaraju	Land belongs to Maare Gowda	Land belongs to C N Muniraju
5.	31/13	03	Land belongs to C N. Nagaraju	Land belongs to C N Muniraju	Land belongs to N. Krishnappa	Land belongs to C N. Muneendra Kumar (Sy No.32/2)
6.	32/1	04.04	Land belongs to C N. Veeraraju	Land belongs to Parvatamma	Land belongs to Parvatamma (Sy No.31/5)	Govt water Channel
7.	32/2	18(including 02 Guntas Karab)	Land belongs to Nagaraja	Land belongs to C N Muniraju	Land belongs to Maare Gowda	Land belongs to Nanjundappa
8.	32/3	10.04 Guntas	Land belongs to C N. Nagaraju	Land belongs to N. Krishnappa	Land belongs to C N. Veeraraju (Sy No.31/10)	Govt water Channel
9.	32/4	10 Guntas	Land belongs to C N. Muniraju	Land belongs to C N. Veeraraju	Land belongs to C N. Nagaraju	Govt water Channel
10.	32/5	08.08	Land belongs to C N. Muneendra Kumar	Land belongs to C N. Nagaraju	Land belongs to C N Muniraju	Govt water Channel
11.	34/1	01 Acre 1.12 Guntas (including01.12 Guntas Karab)	Land belongs to C N. Veeraraju	Land belongs to Dodda Muniyappa and Puttanna	Lake bed	Huskuru village boundary
12.	34/2	01Acre 01.12Guntas (including01.12 Guntas Karab)	Land belongs to C N. Nagaraju	Land belongs to N. Krishnappa	Land belongs to Narasimaiah	Huskuru village boundary
13.	34/3	01Acre 01.12Guntas (including01.12 Guntas Karab)	Land belongs to Nanjundappa and Siddamma	Land belongs to C N. Veeraraju	Land belongs to Narasimaiah	Huskuru village boundary
14.	34/4	01Acre	Land belongs to C N.Muniraju	Land belongs to C N. Nagaraju	Land belongs to M. Nanjundappa	Huskuru village boundary
15.	34/5	01Acre 01.12Guntas (including01.12 Guntas Karab	Land belongs to Sharadamma	Land belongs to Nanjundappa and Siddamma	Land belongs to Venkataramanappa	Huskuru village boundary
16.	34/6	20.08(including 0.00.08 Guntas Karab)	Land belongs to Munilakshmamma	Land belongs to C N.Muniraju	Land Belongs to Hanumantappa	Huskuru village boundary
17	34/7	20.08 (including 0.00.08 Guntas Karab)	Land belongs to C N. Muneendra Kumar	Land belongs to Sharadamma	Land belongs to Dodda Muniyappa	Huskuru village boundary
18	34/8	01Acre 02 Guntas (including 02 Guntas Karab)	Govt Land	Land belongs to Lakshmamma	Land Belongs to Hanumantappa	Land belongs to Nanjundappa
19	59/3	04	Land belongs to Sitaramayya and Ganganjinappa	Land belongs to C N. Nagaraja	Govt road	Land belongs to C N. Muniraju
20	59/4	04	Land belongs to Sitaramayya and Ganganjinappa	Land belongs to N. Krishnappa and C N. Nagaraju	Land belongs to C N. Muneendra Kumar	Land belongs to C N. Veeraraju
21	59/5	04	Land belongs to Sitaramayya and Ganganjinappa	Land belongs to N. Krishnappa	Land belongs to C N. Muniraju	Land belongs to C. Nagaraju
22	59/6	05.12(including 01.02 Guntas Karab)	Land belongs to C N. Muneendra Kumar and C N Muniraju	Land belongs to Timmarayappa	Govt Road	Land belongs to N. Krishnappa
23	59/7	05.12(including 01.02 Guntas Karab)	Land belongs to C N. Muniraju and C N. Veeraraju	Land belongs to Maare Gowda	Land belongs to C N. Nagaraju	Land belongs to C N. Nagaraju and C N. Muneendra Kumar

Dated: 28/10/2025
Place: Bangalore

Mr. S T Prashantha Kumar, Senior Partner
Mr. B.C. Keerthi Kishore, Practice Head
Fox Mandal & Associates, Solicitors & Advocates,
FM House, 6/12, Primrose Road, Bangalore – 560025, Karnataka, India
Phone: +91 80 2559 5911 e-mail : prashantha.kumar@foxmandal.in

ಮಾಹಿತಿ ನಿರಾಕರಿಸಿದ 6 ಲಕ್ಷ ಕುಟುಂಬ

ಜಿಬಿಎ ವ್ಯಾಪ್ತಿಯಲ್ಲಿ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ: ಶೇ 65ರ ಗಡಿ ದಾಟಿದ ಪ್ರಗತಿ

• ಜಯಸಿಂಹ ಆರ್.

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯಲ್ಲಿ 6 ಲಕ್ಷಕ್ಕೂ ಹೆಚ್ಚು ಕುಟುಂಬದವರು ತಾವು ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆಗೆ ಮಾಹಿತಿ ನೀಡುವುದಿಲ್ಲ ಎಂದಿದ್ದಾರೆ.

ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆ ಆರಂಭವಾದ ದಿನದಿಂದಲೂ ಕೆಲವು ಕುಟುಂಬದವರು ಮಾಹಿತಿ ನೀಡಲು ನಿರಾಕರಿಸುತ್ತಿದ್ದಾರೆ ಎಂದು ವರದಿಯಾಗಿತ್ತು. ಅಂತಹವರ ಮನೆಗಳಿಗೆ ಸೃಜಿಸಲಾಗಿದ್ದ ಯುಎಚ್‌ಐಡಿಯನ್ನು ಖಾಲಿಯೇ ಬಿಡಬೇಕಿದ್ದ ಕಾರಣ, ಸಮೀಕ್ಷೆ ನಡೆಸಿದ ಮನೆಗಳ ಲೆಕ್ಕಕ್ಕೆ ಅವುಗಳನ್ನು ಸೇರಿಸುತ್ತಿರಲಿಲ್ಲ. ಪರಿಣಾಮವಾಗಿ ಸಮೀಕ್ಷಕರು ಹತ್ತಾರು ಮನೆಗಳಿಗೆ ಭೇಟಿ ನೀಡಿದ್ದರೂ, ಮಾಹಿತಿ ನೀಡಿದವರ ಮನೆಗಳ ಲೆಕ್ಕವಷ್ಟೇ ಸಿಗುತ್ತಿತ್ತು.

ಜಿಬಿಎ ವ್ಯಾಪ್ತಿಯಲ್ಲಿ ಸಮೀಕ್ಷೆಯ ಅವಧಿ ಎರಡು ಬಾರಿ ವಿಸ್ತರಣೆ ಆದರೂ, ಇದೇ ಪರಿಸ್ಥಿತಿ ಮುಂದುವರಿದಿತ್ತು. ಆದರೆ, ಮಾಹಿತಿ ನೀಡಲು ನಿರಾಕರಿಸಿದ್ದವರ ಮನೆಗೂ ಭೇಟಿ ನೀಡಿ, ಯುಎಚ್‌ಐಡಿಯನ್ನೂ ದೃಢೀಕರಿಸಿ. ಅವರು ಮಾಹಿತಿ ನೀಡಿಲ್ಲ ಎಂಬುದನ್ನು ದಾಖಲಿಸಿ ಎಂದು ಅಕ್ಟೋಬರ್ 23ರ ನಂತರ ಸಮೀಕ್ಷಕರಿಗೆ ಮತ್ತು ಅವರ ಮೇಲ್ವಿಚಾರಕರಿಗೆ ಸೂಚಿಸಲಾಗಿದೆ.

'ಅಂತಹ ಮನೆಗಳಿಗೆ ಭೇಟಿ ನೀಡಿ, 'ಮಾಹಿತಿ ನೀಡಲು ನಿರಾಕರಣೆ' ಎಂದು ನಮೂದಿಸಲಾಗುತ್ತಿದೆ. ಈ ಕೆಲಸವನ್ನು ಯುದ್ಧೋಪಾದಿಯಲ್ಲಿ ನಡೆಸುವಂತೆ ಸೂಚನೆ ನೀಡಿದ್ದಾರೆ. ಯಾವ ಭಾಗದಲ್ಲಿ ಪ್ರಗತಿ ಕಡಿಮೆ ಇದೆಯೋ ಅಲ್ಲಿ, ಸಮೀಕ್ಷಕರು ಮತ್ತು ಮೇಲ್ವಿಚಾರಕರು ಬೆಳಿಗ್ಗೆ 10ರಿಂದ ರಾತ್ರಿ 9ರವರೆಗೂ ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ಜಿಬಿಎ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ನೀಡಲ್ಲ ಎಂದಿದ್ದವರು ನೀಡಿದರು

ಬೆಂಗಳೂರು ದಕ್ಷಿಣ ಭಾಗದ ಬಡಾವಣೆಯೊಂದರಲ್ಲಿನ ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘದ ಅಧ್ಯಕ್ಷರು, 'ನಮ್ಮ ಸದಸ್ಯರು ಯಾರೂ ಮಾಹಿತಿ ನೀಡಲು ಸಿದ್ಧರಿಲ್ಲ. ಸಮೀಕ್ಷೆಗೆ ಬರಬೇಡಿ' ಎಂದು ತಾಕೀತು ಮಾಡಿದ್ದರು. ಆ ಅಪಾರ್ಟ್‌ಮೆಂಟ್‌ನಲ್ಲಿ 450 ಫ್ಲ್ಯಾಟ್‌ಗಳಿದ್ದು, ಮೂವರು ಸಮೀಕ್ಷಕರ ಪ್ರಗತಿ ಶೂನ್ಯದಷ್ಟಿತ್ತು.

ಈ ಬಗ್ಗೆ 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾಗಿತ್ತು. ಅದರ ಬೆನ್ನಲ್ಲೇ ಜಿಬಿಎಯ ಸಹಾಯಕ ಕಂದಾಯ ಅಧಿಕಾರಿಯು ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘದ ಅಧ್ಯಕ್ಷರನ್ನು ಸ್ವತಃ ಭೇಟಿ ಮಾಡಿ, ಸಮೀಕ್ಷೆಗೆ ಅವಕಾಶ ನೀಡುವಂತೆ ಮನವಿ ಮಾಡಿದ್ದರು. ಆದರೂ ಸಮೀಕ್ಷೆಗೆ ಅವಕಾಶ ಸಿಕ್ಕಿರಲಿಲ್ಲ.

'ಈಗ ಮಾಹಿತಿ ನೀಡಲು ನಿರಾಕರಿಸುವವರ ವಿವರವನ್ನೂ ನಮೂದಿಸಬೇಕು ಎಂಬ ಸೂಚನೆಯ ಆಧಾರದಲ್ಲಿ ಸಮೀಕ್ಷಕರು ಅಪಾರ್ಟ್‌ಮೆಂಟ್‌ಗೆ ಪ್ರವೇಶ ಪಡೆದಿದ್ದಾರೆ. ಜತೆಗೆ 450 ಫ್ಲ್ಯಾಟ್‌ಗಳಿಗೂ ಭೇಟಿ ನೀಡಿ, ಯುಎಚ್‌ಐಡಿ ಸೃಜಿಸಿದ್ದಾರೆ. 'ಮಾಹಿತಿ ನೀಡಲು ನಿರಾಕರಣೆ' ಎಂದು ವಿವರ ದಾಖಲಿಸಿದ್ದಾರೆ. ಈ ವೇಳೆ ಹಲವು ಕುಟುಂಬದವರು ಸಮೀಕ್ಷೆಯಲ್ಲಿ ಭಾಗವಹಿಸಿ, ಅಗತ್ಯ ವಿವರಗಳನ್ನು ಒದಗಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಮಾಹಿತಿ ನಿರಾಕರಿಸುತ್ತಿರುವವರನ್ನೇ ಗುರಿಯಾಗಿಸಿ, ಈಗ ಸಮೀಕ್ಷೆ ನಡೆಸಲಾಗುತ್ತಿದೆ. ಈ ಕಾರಣದಿಂದ ಐದೇ ದಿನಗಳಲ್ಲಿ ಅಂತಹ 6 ಲಕ್ಷಕ್ಕೂ ಹೆಚ್ಚು ಕುಟುಂಬಗಳ ವಿವರ ನಮೂದಿಸಲು ಸಾಧ್ಯವಾಗಿದೆ. ಇವುಗಳ ಜತೆಯಲ್ಲಿ ಸಮೀಕ್ಷೆ ನಡೆಸಲು ಸಾಧ್ಯವಿಲ್ಲದ ಮತ್ತು ಬೀಗ ಹಾಕಿದ ಮನೆಗಳ ವಿವರಗಳನ್ನೂ ನಮೂದಿಸಲಾಗುತ್ತಿದೆ. ಮಾಹಿತಿ ನಿರಾಕರಿಸಿದವರ ಸಂಖ್ಯೆಯು ಸಮೀಕ್ಷೆಯ ಅವಧಿ ಮುಗಿಯುವ ವೇಳೆಗೆ ಇನ್ನಷ್ಟು ಹೆಚ್ಚಾಗುವ ನಿರೀಕ್ಷೆ ಇದೆ' ಎಂದು ವಿವರಿಸಿದರು.

ನ.1–2ಕ್ಕೆ 'ಕೃಷ್ಣೆಯಿಂದ ಕಾವೇರಿವರೆಗೆ' ಉತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯವು ನ.1 ಮತ್ತು ನ.2ರಂದು ದೊಮ್ಮಲೂರಿನಲ್ಲಿರುವ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರದಲ್ಲಿ (ಬಿಐಸಿ) 'ಕೃಷ್ಣೆಯಿಂದ ಕಾವೇರಿವರೆಗೆ' ಶೀರ್ಷಿಕೆಯಡಿ ಉತ್ಸವ ಹಮ್ಮಿಕೊಂಡಿದೆ.

ಕರ್ನಾಟಕ ರಾಜ್ಯೋತ್ಸವದ ಪ್ರಯುಕ್ತ ಬಿಐಸಿ ಸಹಯೋಗದಲ್ಲಿ ವಿಶ್ವವಿದ್ಯಾಲಯವು ಈ ಉತ್ಸವ ಆಯೋಜಿಸಿದೆ. ಎರಡು ದಿನಗಳ ಉತ್ಸವದಲ್ಲಿ ಬೆಳಿಗ್ಗೆಯಿಂದ ಸಂಜೆಯವರೆಗೆ ವಿವಿಧ ವೇದಿಕೆಗಳಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ನ.1ರಂದು ಬೆಳಿಗ್ಗೆ 10 ಗಂಟೆಗೆ ಈ ಉತ್ಸವದ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದ್ದು, ಚಲನಚಿತ್ರ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಉದ್ಘಾಟಿಸಲಿದ್ದಾರೆ.

ಜಾನಪದ ಕಲಾ ಪ್ರದರ್ಶನ, ಗಾಯನ, ಪುಸ್ತಕ ಬಿಡುಗಡೆ, ಉಪನ್ಯಾಸ, ವಿಚಾರಸಂಕಿರಣ, ಕಾರ್ಯಾಗಾರ, ಚರ್ಚೆ, ಸಾಂಸ್ಕೃತಿಕ ಕಾರ್ಯಕ್ರಮ ಸೇರಿ ಹಲವು ವೈವಿಧ್ಯವನ್ನು ಈ ಉತ್ಸವ ಒಳಗೊಂಡಿರಲಿದೆ. ಕರ್ನಾಟಕದಲ್ಲಿ ಹರಿಯುತ್ತಿರುವ ನದಿಗಳಲ್ಲಿ ಕೃಷ್ಣಾ ಮತ್ತು ಕಾವೇರಿ ಪ್ರಮುಖವಾಗಿವೆ. ಎರಡೂ ನದಿಗಳು ಈ ರಾಜ್ಯದ ವಿವಿಧ ಭೂ ಭಾಗಗಳಲ್ಲಿ ಹರಿಯುತ್ತಿರುವ ಹಾಗೆಯೇ, ಉತ್ಸವವೂ ಕರ್ನಾಟಕದ ವಿವಿಧ ಸಂಸ್ಕೃತಿ ಮತ್ತು ಭಾಷೆಗಳೊಂದಿಗೆ ಕೊಂಡಿ ಬೆಸೆಯುವ ಆಶಯ ಹೊಂದಿದೆ ಎಂದು ಫೌಂಡೇಷನ್‌ನ ಮುಖ್ಯ ಸಂವಹನಾಧಿಕಾರಿ ಸುಧೀಶ್ ವೆಂಕಟೇಶ್ ತಿಳಿಸಿದ್ದಾರೆ.

ಚಿಕ್ಕಮಕ್ಕಳಿಂದ ಎಲ್ಲ ವಯೋಮಾನದವರನ್ನೂ ಈ ಉತ್ಸವ ರಂಜಿಸುವ ವಿಶ್ವಾಸವಿದೆ. ಹಿಂದೂಸ್ತಾನಿ ಸಂಗೀತದ ಜತೆಗೆ, ಕನ್ನಡ ಕಲಿಕೆಯಂತಹ ಚಟುವಟಿಕೆಗಳೂ ನಡೆಯಲಿವೆ. ಸಾರ್ವಜನಿಕರಿಗೆ ಪ್ರವೇಶ ಉಚಿತ ಎಂದು ಫೌಂಡೇಷನ್‌ನ ಎಸ್.ವಿ. ಮಂಜುನಾಥ್ ವಿವರಿಸಿದರು.

ಮೊದಲ ದಿನ ನಡೆಯುವ 'ಮುಂಜಾನೆ ರಾಗಗಳು' ಕಾರ್ಯಕ್ರಮದಲ್ಲಿ ವಿನಾಯಕ್ ತೊರವಿ, ವ್ಯಾಸ ಮೂರ್ತಿ ಕಟ್ಟಿ ಮತ್ತು ಗುರುಮೂರ್ತಿ ವೈದ್ಯ ಅವರು ಹಿಂದೂಸ್ತಾನಿ ಸಂಗೀತ ಪ್ರಸ್ತುತಪಡಿಸುತ್ತಾರೆ. ರಾಜ್ಯದಲ್ಲಿರುವ ಸ್ಮಾರಕಗಳ ಪರಿಚಯ, ಪಾರಂಪರಿಕ ಮಣೆಯಾಟ, ಪಾರಂಪರಿಕ ಕಲಾ ಪ್ರದರ್ಶನ ಉತ್ಸವದ ಮೆರುಗು ಹೆಚ್ಚಿಸಲಿದೆ ಎಂದು ಬಿಐಸಿ ನಿರ್ದೇಶಕ ವಿಕ್ರಮ್ ಭಟ್ ಹೇಳಿದರು.

ರಿಯಲ್ ಬೆಂಗಳೂರು ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ



ಎಫ್‌ಸಿ ರಿಯಲ್ ಬೆಂಗಳೂರು ತಂಡದ ಎ.ವೈಶಾಖ (ಎಡ) ಹಾಗೂ ಭಾರತ್ ಬೆಂಗಳೂರು ತಂಡದ ಹೇಮಂತರಾಜ್ ಅವರು ಚೆಂಡಿಗಾಗಿ ಸೆಣಸಿದರು
–ಚಿತ್ರ: ಬಿ.ಕೆ.ಜನಾರ್ದನ

ಬೆಂಗಳೂರು: ಸಾಂಘಿಕ ಪ್ರದರ್ಶನ ನೀಡಿದ ಎಫ್‌ಸಿ ರಿಯಲ್ ಬೆಂಗಳೂರು ತಂಡವು ಕೆಎಸ್‌ಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಮಂಗಳವಾರ 5–1ರಿಂದ ಭಾರತ್ ಬೆಂಗಳೂರು ತಂಡವನ್ನು ನಿರಾಯಾಸವಾಗಿ ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು 3–0ಯಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ಎಫ್‌ಸಿ ವಿರುದ್ಧ ಸುಲಭ ಜಯ ದಾಖಲಿಸಿತು. ಎಂಇಜಿ ಆ್ಯಂಡ್ ಸೆಂಟರ್ ಎಫ್‌ಸಿ ಹಾಗೂ ಬೆಂಗಳೂರು ಸಿಟಿ ಎಫ್‌ಸಿ ನಡುವಣ ಪಂದ್ಯ 2–2 ಡ್ರಾ ಆಯಿತು.

ಗ್ರಂಥಾಲಯ ಮೇಲ್ವಿಚಾರಕ ಆತ್ಮಹತ್ಯೆ ಪಿಡಿಒ ವಿರುದ್ಧ ಎಫ್‌ಐಆರ್

ದಾಬಸ್‌ಪೇಟೆ: ನೆಲಮಂಗಲ ತಾಲ್ಲೂಕಿನ ಕಳಲುಘಟ್ಟ ಗ್ರಾಮ ಪಂಚಾಯಿತಿ ಪಿಡಿಒ ಗೀತಾಮಣಿ ಅವರ ವಿರುದ್ಧ ತ್ಯಾಮಗೊಂಡ್ಲು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 'ಗೋವೇನಹಳ್ಳಿ ಗ್ರಾಮದ ರಾಮಚಂದ್ರಯ್ಯ ಅವರ ಸಾವಿಗೆ ಪಿಡಿಒ ಅವರೇ ಕಾರಣ' ಎಂದು ಮೃತ ವ್ಯಕ್ತಿಯ ಸಂಬಂಧಿ ದೂರು ನೀಡಿದ್ದಾರೆ. ದೂರಿನ ಮೇರೆಗೆ ಎಫ್‌ಐಆರ್ ದಾಖಲಾಗಿದೆ.

'ರಾಮಚಂದ್ರಯ್ಯ ಪಂಚಾಯಿತಿಯ ಗ್ರಂಥಾಲಯದಲ್ಲಿ ಮೇಲ್ವಿಚಾರಕರಾಗಿ (ಅರೆಕಾಲಿಕ) ಕೆಲಸ ಮಾಡುತ್ತಿದ್ದರು. ಮೂರು ತಿಂಗಳಿಂದ ಗೀತಾಮಣಿ ಅವರು ರಾಮಚಂದ್ರಯ್ಯ ಅವರಿಗೆ ಸಂಬಳ ನೀಡಿರಲಿಲ್ಲ. ಹಾಜರಾತಿ ತೋರಿಸಲು ಬಯೋಮೆಟ್ರಿಕ್ ನೀಡದೇ ತೊಂದರೆ ನೀಡಿದ್ದರು. ಕೆಲಸಕ್ಕೆ ಬೇಡವೆಂದೂ ಹೇಳಿದ್ದರು. ಇದರಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಪಿಡಿಒ ವರ್ತನೆ ಖಂಡಿಸಿ ಹಾಗೂ ಅವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಬುಧವಾರ ಗ್ರಾಮ ಪಂಚಾಯಿತಿ ಎದುರು ಪ್ರತಿಭಟನೆ ನಡೆಸುವುದಾಗಿ ಗ್ರಂಥಾಲಯ ಮೇಲ್ವಿಚಾರಕರ ಸಂಘದ ಜಿಲ್ಲಾ ಅಧ್ಯಕ್ಷೆ ಶಾರದಮ್ಮ ತಿಳಿಸಿದ್ದಾರೆ.

ರಸ್ತೆ ರಂಪಾಟ ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ರಂಪಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಮಾರತ್‌ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೂರಜ್ ಬಿಸ್ವಾಲ್ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲು ಮಾಡಿಕೊಂಡು ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಅ.25ರಂದು ರಾತ್ರಿ 10ರ ಸುಮಾರಿಗೆ ಸೂರಜ್ ಅವರು ತಮ್ಮ ಸಹೋದರನ ಜತೆಗೆ ಕಾರು ನಿಲುಗಡೆ ಮಾಡಲು ತೆರಳುತ್ತಿದ್ದರು. ಆಗ ಅಡ್ಡ ಬಂದಿದ್ದ ಆರೋಪಿಗಳು, 'ನಿಮ್ಮ ಕಾರು 50 ಕಿ.ಮೀ. ವೇಗದಲ್ಲಿ ಸಂಚರಿಸುತ್ತಿದೆ' ಎಂಬುದಾಗಿ ಹೇಳಿದ್ದರು. 'ಇಲ್ಲ ನಾವು ಕಾರನ್ನು 30 ಕಿ.ಮೀ ವೇಗದಲ್ಲಿ ಓಡಿಸುತ್ತಿದ್ದೇವೆ' ಎಂದು ಸೂರಜ್ ಪ್ರತಿಕ್ರಿಯಿಸಿದ್ದರು. ಆಗ ಆರೋಪಿಗಳು ಹಾಗೂ ದೂರುದಾರರ ನಡುವೆ ವಾಗ್ವಾದ ನಡೆದಿತ್ತು. ದೂರುದಾರ ಹಾಗೂ ಅವರ ಸಹೋದರನ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಆರೋಪಿಗಳು ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ವಿಡಿಯೊ ಆಧರಿಸಿ ಆರೋಪಿಗಳನ್ನು ಪತ್ತೆ ಮಾಡಿ ಬಂಧಿಸಲಾಯಿತು ಎಂದು ಅವರು ಹೇಳಿದರು.

ಉಸಿರುಗಟ್ಟಿಸಿ ಬಾಲಕಿ ಕೊಲೆ: ಮಲತಂದೆ ಬಂಧನ

ಪ್ರಜಾವಾಣಿ ವಾರ್ತೆ



ದರ್ಶನ್



ಸಿರಿ

ಬೆಂಗಳೂರು: ಬಾಲಕಿಯನ್ನು ಉಸಿರು ಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದ ಮಲತಂದೆ ದರ್ಶನ್‌ನನ್ನು ಕುಂಬಳಗೋಡು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅಕ್ಟೋಬರ್ 24ರಂದು ಕುಂಬಳಗೋಡು ಠಾಣಾ ವ್ಯಾಪ್ತಿಯ ಕನ್ನಿಕಾ ಬಡಾವಣೆಯ ಮನೆಯೊಂದರಲ್ಲಿ ಸಿರಿ (7) ಎಂಬ ಬಾಲಕಿಯನ್ನು ಉಸಿರುಗಟ್ಟಿಸಿ ಕೊಲೆ ಮಾಡಿದ್ದ ಆರೋಪಿ ಬಳಿಕ ತಲೆಮರೆಸಿಕೊಂಡಿದ್ದ. ಆರೋಪಿ ಪತ್ತೆಗೆ ವಿಶೇಷ ಪೊಲೀಸ್ ತಂಡ ರಚಿಸಲಾಗಿತ್ತು. ಆರೋಪಿಯಿದ್ದ ಸ್ಥಳವನ್ನು ಪತ್ತೆ ಮಾಡಿ ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಅಪರಾಧ ಸುದ್ದಿ

'ಬಾಲಕಿಯ ತಾಯಿ ಶಿಲ್ಪಾ ಅವರ ಮೊದಲ ಪತಿ ಮೃತಪಟ್ಟಿದ್ದರು. ನಂತರ, ದರ್ಶನ್ ಜತೆಗೆ ಎರಡನೇ ಮದುವೆ ಆಗಿದ್ದರು. ಆನೇಕಲ್‌ನಲ್ಲಿದ್ದ ಕಂಪನಿಯೊಂದರಲ್ಲಿ ದರ್ಶನ್ ಕೆಲಸ ಮಾಡುತ್ತಿದ್ದ. ಮದುವೆಯಾದ ಆರಂಭದಲ್ಲಿ ಮಗುವನ್ನು ದರ್ಶನ್ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ಕೆಲವು ದಿನ ಕಳೆದ ಮೇಲೆ ಖಾಸಗಿ ಸಮಯಕ್ಕೆ ಸಿರಿ ಅಡ್ಡಿ ಆಗುತ್ತಿದ್ದಾಳೆಂದು ಥಳಿಸುತ್ತಿದ್ದ' ಎಂದು ಪೊಲೀಸರು ಹೇಳಿದರು.

ಹೆದರಿ ಅಂಗಡಿಯ ಎದುರೇ ನಿಂತಿದ್ದ ಮಗು: 'ಶುಕ್ರವಾರ ಸಂಜೆ ತಾಯಿ ಮನೆಯಲ್ಲಿ ಇಲ್ಲ ಎಂಬ ಮಾಹಿತಿ ಪಡೆದಿದ್ದ ಸಿರಿ, ಮನೆ ಎದುರಿಗಿದ್ದ ಅಂಗಡಿ ಎದುರು ನಿಂತಿದ್ದಳು.

ಈ ವೇಳೆ ಮನೆಯಲ್ಲಿದ್ದ ದರ್ಶನ್, ಬಾಲಕಿಯನ್ನು ಹುಡುಕಿಕೊಂಡು ಬಂದಿದ್ದ. ಅಂಗಡಿ ಬಳಿಯಿದ್ದ ಸಿರಿಯನ್ನು ಮನೆಗೆ ಹೋಗಲು ಕರೆದಾಗ ಆಕೆ ಮನೆಗೆ ಬರುವುದಿಲ್ಲ ಎಂದು ಹಟ ಮಾಡಿದ್ದಳು. ಅಲ್ಲಿದ್ದವರ ಬಳಿ ಅಪ್ಪ ನನಗೆ ಹೊಡೆಯುತ್ತಾನೆ ಎಂದು ಹೇಳಿದ್ದಳು.

ಆದರೂ ದರ್ಶನ್ ಬಲವಂತವಾಗಿ ಸಿರಿಯನ್ನು ಮನೆಗೆ ಕರೆದೊಯ್ದಿದ್ದ. ಮನೆಗೆ ಬಂದ ಬಳಿಕ ಕೋಪದಲ್ಲಿ ಸಿರಿಯನ್ನು ಥಳಿಸಿ, ಕತ್ತು ಹಿಸುಕಿ ಕೊಲೆ ಮಾಡಿದ್ದ' ಎಂದು ಪೊಲೀಸರು ಹೇಳಿದರು.

ಪ್ರೇಯಸಿಗಾಗಿ ದುಬಾರಿ ಬೆಲೆಯ ಮೊಬೈಲ್ ಕಳ್ಳತನ

ವರ್ತೂರು ಮತ್ತು ಬೆಳ್ಳಂದೂರಿನ ಕ್ರೋಮಾ ಶೋ ರೂಮ್‌ಗೆ ನುಗ್ಗಿ ದುಬಾರಿ ಬೆಲೆಯ ಮೊಬೈಲ್ ಕಳ್ಳತನ ಮಾಡಿದ್ದ ಆರೋಪಿಗಳನ್ನು ವರ್ತೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸಿಕ್ಕಿಂನ ದಿವಾಸ್ ಕಮಿ (22) ಮತ್ತು ಆತನ ಪ್ರೇಯಸಿ, ನೇಪಾಳದ ಅಸ್ಮಿತಾ(26), ದಿವಾಸ್ ಕಮಿ ಸ್ನೇಹಿತ ಅರೋಹಣ್ ತಾಪಾ (24) ಬಂಧಿತರು. ಆರೋಪಿಗಳಿಂದ ₹40 ಲಕ್ಷ ಮೌಲ್ಯದ 39 ಮೊಬೈಲ್‌ಗಳು, ಡಿಜಿಟಲ್ ವಾಚ್‌ಗಳು, ಚಿನ್ನಾಭರಣ, ಕ್ಯಾಮೆರಾ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ದಿವಾಸ್ ಕಮಿ ಮತ್ತು ಆರೋಹಣ್ ತಾಪಾ ಮೂರು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಸ್ವಿಗ್ಗಿ ಡೆಲಿವರಿ ಹುಡುಗರಾಗಿ ಕೆಲಸ ಮಾಡುತ್ತಿದ್ದರು. ನೇಪಾಳದ ಅಸ್ಮಿತಾ ಅವರಿಗೆ ಮದುವೆಯಾಗಿದ್ದು, ಪತಿಯಿಂದ ದೂರವಾಗಿ ಒಂದು ವರ್ಷದಿಂದ ದಿವಾಸ್ ಕಮಿ ಜತೆಗೆ ಸಹ ಜೀವನ ನಡೆಸುತ್ತಿದ್ದರು. ಅಸ್ಮಿತಾ ಅವರು ಮನೆಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ಹೇಳಿದರು.

ಫುಡ್ ಡೆಲಿವರಿ ಹುಡುಗರಾಗಿ ಕೆಲಸ ಮಾಡುತ್ತಿದ್ದ ದಿವಾಸ್ ಕಮಿ ಮತ್ತು ಆರೋಹಣ್ ತಾಪಾ ಕ್ರೋಮಾ ಮೊಬೈಲ್ ಅಂಗಡಿಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದರು. ಬೆಳ್ಳಂದೂರು ಮತ್ತು ವರ್ತೂರಿನಲ್ಲಿರುವ ಕ್ರೋಮಾ ಶೋ ರೂಮ್‌ಗಳ ಬಗ್ಗೆ ಇತ್ತೀಚೆಗೆ ಮಾಹಿತಿ ಸಂಗ್ರಹಿಸಿದ್ದರು. ಅಕ್ಟೋಬರ್ ಮೊದಲ ವಾರದಲ್ಲಿ ಬೆಳ್ಳಂದೂರಿನ ಕ್ರೋಮಾ ಶೋ ರೂಮ್ ಮತ್ತು ವರ್ತೂರಿನ ಕ್ರೋಮಾ ಶೋ ರೂಮ್‌ನಲ್ಲಿ ಮೊಬೈಲ್ ಕಳವು ಮಾಡಿ, ತುರ್ತು ನಿರ್ಗಮನ ಬಾಗಿಲು ತೆರೆದು ಪರಾರಿ ಆಗಿದ್ದರು.

ಕಳವು ಮಾಡುತ್ತಿದ್ದ ದುಬಾರಿ ಬೆಲೆಯ ಮೊಬೈಲ್‌ಗಳನ್ನು ಅಸ್ಮಿತಾ ನೀಡುತ್ತಿದ್ದರು ಅಸ್ಮಿತಾ ಅವರು ತಮಗೆ ಪರಿಚಯವಿದ್ದವರಿಗೆ ಕಡಿಮೆ ಮೊತ್ತಕ್ಕೆ ಮಾರಾಟ ಮಾಡುತ್ತಿದ್ದರು. ಕೆಲವು ದಿನಗಳ ಹಿಂದೆ ಮೊಬೈಲ್ ಮಾರಾಟ ಮಾಡಿದ್ದ ಹಣದಲ್ಲಿ ಎಂಟು ಗ್ರಾಂ ಚಿನ್ನ ಖರೀದಿಸಿದ್ದ ದಿವಾಸ್ ಕಮಿ, ಪ್ರೇಯಸಿಗೆ ನೀಡಿದ್ದರು. ಅದನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಸಾಮೂಹಿಕ ಅತ್ಯಾಚಾರ: ಪ್ರಮುಖ ಆರೋಪಿ ಬಂಧನ

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ಗಂಗೊಂಡನಹಳ್ಳಿಯಲ್ಲಿ ನಡೆದಿದ್ದ ಸಾಮೂಹಿಕ ಅತ್ಯಾಚಾರ ಹಾಗೂ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಆರೋಪಿ ಮಿಥುನ್(26) ಎಂಬಾತನನ್ನು ಪೊಲೀಸರು ಬಂಧಿಸಿದ್ದಾರೆ.

ತುಮಕೂರು ಜಿಲ್ಲೆ ಹೆಬ್ಬೂರು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಆರೋಪಿಯನ್ನು ಮಂಗಳವಾರ ನೆಲಮಂಗಲ ಡಿವೈಎಸ್ಪಿ ಜಗದೀಶ್ ನೇತೃತ್ವದಲ್ಲಿ ರಚಿಸಿದ್ದ ತಂಡವು ಬಂಧಿಸಿ ನೆಲಮಂಗಲಕ್ಕೆ ಕರೆತಂದಿದೆ.

ಪೊಲೀಸ್ ಬಾತ್ಮೀದಾರರು ಎಂದು ಹೇಳಿಕೊಂಡು ಏಳು ಮಂದಿ ಆರೋಪಿಗಳು ಬಾಡಿಗೆ ಮನೆಯೊಂದಕ್ಕೆ ನುಗ್ಗಿ ದರೋಡೆ ನಡೆಸಿ, ಪಶ್ಚಿಮ ಬಂಗಾಳದ ಮಹಿಳೆ ಮೇಲೆ ಅತ್ಯಾಚಾರ ನಡೆಸಿದ್ದರು. 6 ಆರೋಪಿಗಳನ್ನು ಬಂಧಿಸಿದ್ದ ಪೊಲೀಸರು, ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ಮಿಥುನ್ ಪತ್ತೆಗೆ ಮುಂದಾಗಿದ್ದರು.

ಕೊಲೆ ಆರೋಪಿಯನ್ನು ಬಂಧಿಸಿದ ಜ್ಞಾನಭಾರತಿ ಠಾಣೆ ಪೊಲೀಸರು



ಅವಿನಾಶ್



ಕಾರ್ತಿಕ್

ತಾಯಿಯನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದ ವ್ಯಕ್ತಿಗೆ ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಿರುವ ಉಲ್ಲಾಳದ ನಿವಾಸಿಯನ್ನು ಜ್ಞಾನಭಾರತಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಅವಿನಾಶ್ (36) ಅವರನ್ನು ಕೊಲೆ ಮಾಡಿದ ಆರೋಪದ ಅಡಿ ಆರೋಪಿ ಕಾರ್ತಿಕ್ (26) ಎಂಬಾತನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಕಾರ್ತಿಕ್ ಸಂಬಂಧಿಯೂ ಆಗಿದ್ದ ಅವಿನಾಶ್ ಅವರು ಶಾಲಾ ಬಸ್, ಆಟೊ ಚಾಲಕರಾಗಿ ಕೆಲಸ ಮಾಡುತ್ತಿದ್ದರು. ಮದ್ಯ ಸೇವನೆ ಅಭ್ಯಾಸವಿತ್ತು. ಪ್ರತಿನಿತ್ಯ ಮದ್ಯ ಸೇವಿಸಿ ಮನೆಗೆ ಬಂದು ಗಲಾಟೆ ಮಾಡುತ್ತಿದ್ದರಿಂದ ಪತ್ನಿ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಕೆಲವು ದಿನಗಳಿಂದ ಕೆಲಸಕ್ಕೆ ಹೋಗದ ಅವಿನಾಶ್ ಅವರು ಕಾರ್ತಿಕ್ ಮನೆಯ ಪಕ್ಕದಲ್ಲೇ ಸಣ್ಣ ಕೊಠಡಿಯಲ್ಲಿ ವಾಸವಿದ್ದರು ಎಂದು ಅವರು ಹೇಳಿದರು.

ಸಂಬಂಧಿಕ ಆಗಿದ್ದರಿಂದ ಅವಿನಾಶ್ ಅವರಿಗೆ ನಿತ್ಯ ಊಟ, ತಿಂಡಿಯನ್ನು ಕಾರ್ತಿಕ್ ಮನೆಯವರೇ ನೀಡುತ್ತಿದ್ದರು. ಸೋಮವಾರ ರಾತ್ರಿ 10.30ರ ಸುಮಾರಿಗೆ ಕಾರ್ತಿಕ್ ಮನೆಯಲ್ಲಿ ಇರಲಿಲ್ಲ. ಆಗ ಪಾನಮತ್ತನಾಗಿ ಬಂದಿದ್ದ ಅವಿನಾಶ್, ಆತನ ತಾಯಿ ಹಾಗೂ ಅಜ್ಜಿಯನ್ನು ಅವಾಚ್ಯ ಪದಗಳಿಂದ ನಿಂದಿಸಿದ್ದರು. ಅವಿನಾಶ್‌ನ ವರ್ತನೆಯಿಂದ ಬೇಸತ್ತ ಕಾರ್ತಿಕ್ ಅವರ ತಾಯಿ ಪುತ್ರನಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು.

ಕೆಲವೇ ಕ್ಷಣದಲ್ಲಿ ಸ್ಥಳಕ್ಕೆ ಬಂದಿದ್ದರು. ಆಗ ಕಾರ್ತಿಕ್ ಹಾಗೂ ಅವಿನಾಶ್ ನಡುವೆ ವಾಗ್ವಾದ ನಡೆದಿತ್ತು. ಬಳಿಕ ಅವಿನಾಶ್ ಅವರ ತಲೆಗೆ ಕಬ್ಬಿಣದ ರಾಡ್‌ನಿಂದ ಹೊಡೆದು ಕೊಲೆ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

ರೋಬೊ ಸ್ಪರ್ಧೆಗೆ ಸರ್ಕಾರಿ ಶಾಲೆ ವಿದ್ಯಾರ್ಥಿಗಳು

ಪ್ರಜಾವಾಣಿ ವಾರ್ತೆ

ಯಲಹಂಕ: ಅಮೆರಿಕದ ಪನಾಮದಲ್ಲಿ ನಡೆಯಲಿರುವ 'ಫಸ್ಟ್ ಗ್ಲೋಬಲ್ ಚಾಲೆಂಜ್-ರೋಬೋಟಿಕ್ಸ್ ಒಲಿಂಪಿಕ್ಸ್-2025'ರಲ್ಲಿ ಭಾರತವನ್ನು ಪ್ರತಿನಿಧಿಸಲು ನಗರದ ಸರ್ಕಾರಿ ಪ್ರೌಢಶಾಲೆಯ ಐವರು ವಿದ್ಯಾರ್ಥಿಗಳು ಆಯ್ಕೆ ಆಗಿದ್ದಾರೆ.

ಮಲ್ಲೇಶ್ವರ ಸರ್ಕಾರಿ ಪ್ರೌಢಶಾಲೆಯ ಅರ್ಜುನ್.ಕೆ ರಾಜ್(ರೋಬೋ ಕ್ಯಾಡ್ ಡಿಸೈನರ್), ಜಿ.ಎನ್.ಚಂದನ್ ರಾಜ್(ಎಲೆಕ್ಟ್ರಾನಿಕ್ಸ್ ಲೀಡ್), ಗೌರೇಶ್.ಕೆ (ರೋಬೊ ಪ್ರೋಗ್ರಾಮರ್), ನಿಂಗರಾಜ್(ಮೆಕ್ಯಾನಿಕಲ್ ಲೀಡ್) ಹಾಗೂ ಪರಶುರಾಮ್.ಎಂ(ರೋಬೊ ಡ್ರೈವರ್) ಆಯ್ಕೆಯಾಗಿರುವ ವಿದ್ಯಾರ್ಥಿಗಳು.



ಪನಾಮದಲ್ಲಿ ನಡೆಯಲಿರುವ ರೋಬೋಟಿಕ್ಸ್ ಒಲಿಂಪಿಕ್ಸ್‌ನಲ್ಲಿ ಭಾರತ ಪ್ರತಿನಿಧಿಸಲಿರುವ ಮಲ್ಲೇಶ್ವರಂ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ರೇವಾ ವಿಶ್ವವಿದ್ಯಾಲಯದಲ್ಲಿ ಸನ್ಮಾನಿಸಲಾಯಿತು

ಈ ವಿದ್ಯಾರ್ಥಿಗಳು ತಮ್ಮ ರೋಬೋ ಪ್ರದರ್ಶಿಸುವುದರ ಜೊತೆಗೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರೊಂದಿಗೆ ಸಂವಾದದಲ್ಲಿ ಪಾಲ್ಗೊಂಡು ಗಮನ ಸೆಳೆದರು.

ಸ್ಟೆಮ್ ಎಜುಕೇಷನ್ ಟ್ರಸ್ಟ್ ಮತ್ತು ಇನ್ನೊವೇಷನ್ ಸ್ಟೋರಿ ಸಹಯೋಗದೊಂದಿಗೆ ರೇವಾ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಐವರು ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿ, 'ಸರ್ಕಾರಿ ಶಾಲೆಯೊಂದರ ವಿದ್ಯಾರ್ಥಿಗಳ ಈ ಸಾಧನೆ ಹೆಮ್ಮೆಪಡುವಂತದ್ದು. ಇತರರಿಗೂ ಇದು ಸ್ಫೂರ್ತಿಯಾಗಲಿದೆ. ಶಿಕ್ಷಣವು ಕುತೂಹಲವನ್ನು ಹುಟ್ಟುಹಾಕುವುದರ ಜೊತೆಗೆ ಉದ್ಯಮಶೀಲ ಮನಸ್ಥಿತಿಯನ್ನು ಬೆಳೆಸಬೇಕು' ಎಂದು ಹೇಳಿದರು.

'ರೇವಾ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ನಾವೀನ್ಯವೆನ್ನುವುದು ದೈನಂದಿನ ವ್ಯವಹಾರವಾಗಿದೆ. ಕೇವಲ ಪದವಿಗಳನ್ನು ನೀಡದೆ, ನಾವೀನ್ಯಕಾರರು ಮತ್ತು ಸಂಶೋಧಕರನ್ನು ಸೃಷ್ಟಿಸುವುದು ನಮ್ಮ ಗುರಿಯಾಗಿದೆ' ಎಂದು ತಿಳಿಸಿದರು.

ಅಧಿಕಾರಿಗಳಿಗೆ ಜವಳಿ ಸಚಿವ ಶಿವಾನಂದ ಪಾಟೀಲ ನಿರ್ದೇಶನ

ನೆರೆ ರಾಜ್ಯಗಳ ಜವಳಿ ನೀತಿ ಅಧ್ಯಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಧ್ಯಪ್ರದೇಶ, ತಮಿಳುನಾಡು ಸೇರಿದಂತೆ ವಿವಿಧ ರಾಜ್ಯಗಳ ಜವಳಿ ನೀತಿಯನ್ನು ಅಧ್ಯಯನ ಮಾಡಿ, ಸಮಗ್ರ ವರದಿ ಸಿದ್ಧಪಡಿಸಲು ಜವಳಿ ಸಚಿವ ಶಿವಾನಂದ ಪಾಟೀಲ ಅವರು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ.

ಕರ್ನಾಟಕ ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ ಅನುಷ್ಠಾನ ಕುರಿತ ಉನ್ನತ ಮಟ್ಟದ ಸಬಲೀಕರಣ ಸಮಿತಿ ಸಭೆಯ ನಂತರ ಈ ಕುರಿತು ಮಾಹಿತಿ ನೀಡಿದ ಅವರು, 'ನೆರೆ ರಾಜ್ಯಗಳ ಜವಳಿ ಉದ್ಯಮಿಗಳನ್ನು ಆಕರ್ಷಿಸಲು ಅಧ್ಯಯನ ವರದಿ ಅಗತ್ಯವಿದೆ. ಇತರೆ ರಾಜ್ಯಗಳು ಉದ್ಯಮಿಗಳಿಗೆ ಯಾವ ಸವಲತ್ತುಗಳನ್ನು ನೀಡುತ್ತಿವೆ ಎಂಬ ಮಾಹಿತಿಯ ಆಧಾರದಲ್ಲಿ ರಾಜ್ಯದ ನೀತಿಗಳನ್ನು ಬದಲಾವಣೆ ಮಾಡಲಾಗುವುದು' ಎಂದರು.

'ಬಾಂಗ್ಲಾದೇಶದ ಪ್ರತಿಕೂಲ ಪರಿಸ್ಥಿತಿ ಪರಿಣಾಮ ಅಲ್ಲಿನ ಜವಳಿ ಉದ್ಯಮ ಬೇರೆಡೆಗೆ ಸ್ಥಳಾಂತರವಾಗುತ್ತಿದೆ. ಅಲ್ಲಿನ ಉದ್ಯಮಿಗಳನ್ನು ಕರ್ನಾಟಕಕ್ಕೆ ಸೆಳೆಯಲು ಯೋಜನೆ ರೂಪಿಸಲಾಗುತ್ತಿದೆ. ತಮಿಳುನಾಡಿನಲ್ಲಿ ಉದ್ಯಮ ಸುಸ್ಥಿತಿಯಲ್ಲಿದೆ. ಬಹುತೇಕ ಉದ್ಯಮಿಗಳು ತಮಿಳುನಾಡಿನಲ್ಲಿ ಹೂಡಿಕೆಗೆ ಆಸಕ್ತಿ ತೋರುತ್ತಿದ್ದಾರೆ. ಅವರನ್ನು ಕರ್ನಾಟಕ ರಾಜ್ಯದತ್ತ ಸೆಳೆಯಲು ಏನು ಮಾಡಬೇಕು ಎನ್ನುವ ಕುರಿತು ಅಧ್ಯಯನ ಮಾಡಬೇಕಿದೆ. ಮಹಾರಾಷ್ಟ್ರ ಸರ್ಕಾರ ವಿದ್ಯುತ್ ಬಿಲ್‌ನಲ್ಲೇ ಸಹಾಯಧನ ನೀಡುತ್ತಿದೆ. ನಮ್ಮಲ್ಲಿಯೂ ಈ ಪದ್ಧತಿ ಅನುಸರಿಸಿದರೆ ಮಹಾರಾಷ್ಟ್ರದ ಜವಳಿ ಉದ್ಯಮಿಗಳು ರಾಜ್ಯದಲ್ಲಿ ಬಂಡವಾಳ ಹೂಡಲು ಸಿದ್ಧರಿದ್ದಾರೆ' ಎಂದು ಮಾಹಿತಿ ನೀಡಿದರು.

'ಪಿಎಂ ಮಿತ್ರ ಪಾರ್ಕ್'ಗೆ ಸಾವಿರ ಎಕರೆ



ಶಿವಾನಂದ ಪಾಟೀಲ

'ಪಿಎಂ ಮಿತ್ರ ಪಾರ್ಕ್' ಯೋಜನೆಗೆ ರಾಜ್ಯ ಸರ್ಕಾರ ಒಂದು ಸಾವಿರ ಎಕರೆ ಭೂಮಿ ಜಮೀನು ನೀಡಿದ್ದು, ಮೂಲಸೌಕರ್ಯ ಕಲ್ಪಿಸಲು ಅನುದಾನ ಬಿಡುಗಡೆ ಮಾಡಿದೆ. ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಕಾಮಗಾರಿಗಳನ್ನು ತ್ವರಿತವಾಗಿ ಮುಗಿಸಲು ಸೂಚಿಸಲಾಗಿದೆ' ಎಂದು ಶಿವಾನಂದ ಪಾಟೀಲ ಹೇಳಿದರು.

'ನೂರಾರು ವರ್ಷಗಳಿಂದ ಮನೆಯಲ್ಲೇ ಕೈಮಗ್ಗ ಹಾಕಿಕೊಂಡವರಿಗೆ, ಪೂರ್ಣ ಪ್ರಮಾಣದಲ್ಲಿ ಇರುವ ನೇಕಾರರ ಕಾಲೊನಿಗಳಿಗೆ ಕರ್ನಾಟಕ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ವಿನಾಯಿತಿ ಕೊಡಿಸುವ ಪ್ರಯತ್ನ ಆಗಬೇಕಿದೆ. ಬೆಂಗಳೂರಿನ ಕಬ್ಬನ್ ಪೇಟೆ, ಕಾಟನ್ ಪೇಟೆ ಮತ್ತಿತರ ಕಡೆ ಇರುವ ನೇಕಾರರಿಗೆ ಸಮಸ್ಯೆಯಾಗಿದ್ದು, ಶಾಶ್ವತ ಪರಿಹಾರ ಕಂಡುಕೊಳ್ಳಲಾಗುತ್ತಿದೆ' ಎಂದು ಹೇಳಿದರು.

ಸುರಂಗ ರಸ್ತೆ: ಲಾಲ್‌ಬಾಗ್‌ನ 6 ಎಕರೆ ಬಳಕೆ

ಕಸಬಾ ಹೋಬಳಿಯ ನಾಲ್ಕು ಸರ್ವೆ ನಂಬರ್‌ಗಳಲ್ಲಿ ಭೂಸ್ವಾಧೀನಕ್ಕೆ ಡಿಪಿಆರ್‌ನಲ್ಲಿ ಅಲೈನ್‌ಮೆಂಟ್

● ಆರ್. ಮಂಜುನಾಥ್

ಬೆಂಗಳೂರು: ಸುರಂಗ ಮಾರ್ಗಕ್ಕೆ ಬೆಂಗಳೂರು ಉತ್ತರ ತಾಲ್ಲೂಕು ಕಸಬಾ ಹೋಬಳಿಯ ನಾಲ್ಕು ಸರ್ವೆ ನಂಬರ್‌ಗಳಲ್ಲಿ ಲಾಲ್‌ಬಾಗ್‌ನ ಆರು ಎಕರೆ ಪ್ರದೇಶವನ್ನು ಸ್ವಾಧೀನಪಡಿಸಿಕೊಳ್ಳಲು ವಿಸ್ತೃತ ಯೋಜನಾ ವರದಿಯಲ್ಲಿ (ಡಿಪಿಆರ್) ಅಲೈನ್‌ಮೆಂಟ್ ಜೊತೆಗೆ ವಿವರಿಸಲಾಗಿದೆ.

ಲಾಲ್‌ಬಾಗ್ ಸಿದ್ದಾಪುರ ಮುಖ್ಯರಸ್ತೆಯಲ್ಲಿ ಲಾಲ್‌ಬಾಗ್ ದಕ್ಷಿಣ ಗೇಟ್ (ಸಿದ್ದಾಪುರ ಗೇಟ್) ಪ್ರವೇಶದ್ವಾರ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಸುರಂಗ ಮಾರ್ಗದ ಪ್ರವೇಶ ಹಾಗೂ ನಿರ್ಗಮನವಿರಲಿದ್ದು, ಹಲವು ಸೌಲಭ್ಯಗಳನ್ನು ಒಳಗೊಂಡ ಐದು ಅಂತಸ್ತಿನ ವಾಣಿಜ್ಯ ಸಂಕೀರ್ಣವೂ ಇಲ್ಲಿ ನಿರ್ಮಾಣವಾಗಲಿದೆ.

ಕಸಬಾ ಹೋಬಳಿಯ ಲಾಲ್‌ಬಾಗ್, ಅಣ್ಣಿಪುರ, ಅರೆಕೆಂಪನಹಳ್ಳಿ, ಸಿದ್ದಾಪುರ ಗ್ರಾಮಗಳು ಬರುವ ವಿಶ್ವೇಶ್ವರಪುರ ವಾರ್ಡ್‌ನಲ್ಲಿ 2.56 ಲಕ್ಷಕ್ಕೂ ಹೆಚ್ಚು ಚದರಡಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಡಿಪಿಆರ್‌ನಲ್ಲಿ ಅಲೈನ್‌ಮೆಂಟ್ ಅನ್ನು ಗುರುತಿಸಲಾಗಿದೆ.


ಬಿ–ಸ್ಮೈಲ್‌ಗೆ ಸಲ್ಲಿಸಲಾಗಿರುವ ಡಿಪಿಆರ್‌ನಲ್ಲಿ 'ಭೂಸ್ವಾಧೀನ ನಕ್ಷೆ (ಲಾಲ್‌ಬಾಗ್)' ಎಂಬ ಶೀರ್ಷಿಕೆಯಲ್ಲಿ 2025ರ ಆಗಸ್ಟ್ 30ರಂದು ತಯಾರಿಸಿರುವ ಡ್ರಾಯಿಂಗ್ ನಂ. ಎಸ್ಎಸ್‌ಪಿ/ಡಿಡಬ್ಲ್ಯುಜಿ/24–25/002 ಅನ್ನು ವಿವರವಾಗಿ ನೀಡಲಾಗಿದೆ.

ಮರಿಗೌಡ ಜಂಕ್ಷನ್‌ನಿಂದ ಸಿದ್ದಾಪುರ ರಸ್ತೆಯಲ್ಲಿ ಲಾಲ್‌ಬಾಗ್‌ನ ಭೂಪ್ರದೇಶವನ್ನು ಬಳಸಿಕೊಂಡು, ರೇಸ್‌ಕೋರ್ಸ್ ಕಡೆಯಿಂದ ಬರುವ ಸುರಂಗ ರಸ್ತೆಯ ನಿರ್ಗಮನ ರ್‍ಯಾಂಪ್ ನಿರ್ಮಾಣವಾಗುತ್ತದೆ. ಮುಂದೆ, ಸಿದ್ದಾಪುರ ಗೇಟ್ ಸಮೀಪ ಬೃಹತ್ ಪ್ರಮಾಣದಲ್ಲಿ ಲಾಲ್‌ಬಾಗ್ ಪ್ರದೇಶವನ್ನು ಬಳಸಿಕೊಂಡು ಶಾಫ್ಟ್ ಸಂಕೀರ್ಣವನ್ನು ನಿರ್ಮಿಸಲಾಗುತ್ತದೆ.

ಅಶೋಕ ಪಿಲ್ಲರ್‌ನಿಂದ (ಸರ್ಕಾರಿ ಡ್ರಗ್ ಟೆಸ್ಟಿಂಗ್ ಲ್ಯಾಬೊರೇಟರಿ) ಸಿದ್ದಾಪುರ ಗೇಟ್‌ವರೆಗೆ ಸುರಂಗ ರಸ್ತೆಯ ಪ್ರವೇಶ ರ್‍ಯಾಂಪ್ ನಿರ್ಮಾಣವಾಗಲಿದ್ದು, ಈ ಹಾದಿಯಲ್ಲಿ ಲಾಲ್‌ಬಾಗ್ ಪ್ರದೇಶ ಬಳಕೆಯಾಗಲಿದೆ.

'ಲಾಲ್‌ಬಾಗ್‌ನೊಳಗೆ ಏನೂ ಬರುವುದಿಲ್ಲ, ಎಕರೆಗಟ್ಟಲೆ ಭೂಮಿ ಬಳಸುವುದಿಲ್ಲ. ಒಂದು ಬದಿಯಲ್ಲಿ ಮಾತ್ರ ಸಾಗುತ್ತದೆ ಎಂದು ಅಧಿಕಾರಿಗಳು ಸಬೂಬು ಹೇಳುತ್ತಿದ್ದಾರೆ. ಆದರೆ, ಡಿಪಿಆರ್‌ನಲ್ಲಿ 6 ಎಕರೆ ಭೂಸ್ವಾಧೀನದ ವಿವರ ಸ್ಪಷ್ಟವಾಗಿದೆ' ಎಂದು 'ಸಿಟಿಜನ್ಸ್ ಫಾರ್ ಸಿಟಿಜನ್ಸ್'ನ ಸಂಸ್ಥಾಪಕ ರಾಜಕುಮಾರ್ ದುಗಾರ್ ಹೇಳಿದರು.

'ಪಶ್ಚಿಮ ಘಟ್ಟಕ್ಕೆ ಹೊಂದಿಕೊಂಡಿರುವ ಬ್ಲಾಕ್‌ಗಳು ಲಾಲ್‌ಬಾಗ್‌ನಲ್ಲಿದ್ದು, ಶತಮಾನದ ಹಿಂದೆ ಲಾಲ್‌ಬಾಗ್‌ನಲ್ಲಿ ಹುಲಿ, ಕರಡಿಗಳಿದ್ದ ಪ್ರಾಣಿ ಸಂಗ್ರಹಾಲಯವೂ ಇತ್ತು' ಎಂದರು.



ಎಲ್ಲೆಲ್ಲಿ ಎಷ್ಟು ಭೂಸ್ವಾಧೀನ? (ಸರ್ವೆ ನಂಬರ್‌ನಲ್ಲಿ ಇರುವ ಪ್ರಕಾರ)

2,56,249.98 ಚದರಡಿ — ಲಾಲ್‌ಬಾಗ್‌ನಲ್ಲಿ ಒಟ್ಟು ಭೂಸ್ವಾಧೀನ

32,299.77 ಚದರಡಿ — ಲಾಲ್‌ಬಾಗ್ ಗ್ರಾಮದ ಲಾಲ್‌ಬಾಗ್– ಸರ್ಕಾರಿ ಆಸ್ತಿ


1,546.66 ಚದರಡಿ — ಅಣ್ಣಿಪುರ ಗ್ರಾಮದ ಲಾಲ್‌ಬಾಗ್– ಸರ್ಕಾರಿ ಆಸ್ತಿ

38,149.41 ಚದರಡಿ — ಅರೆಕೆಂಪನಹಳ್ಳಿ ಗ್ರಾಮದ ಲಾಲ್‌ಬಾಗ್– ಸರ್ಕಾರಿ ಆಸ್ತಿ

1,84,253.10 ಚದರಡಿ — ಸಿದ್ದಾಪುರ ಗ್ರಾಮದ ಲಾಲ್‌ಬಾಗ್– ಸರ್ಕಾರಿ ಆಸ್ತಿ

ಹೆಬ್ಬಾಳ ಕೆರೆ ನಾಲಾಗೆ ಕತ್ತರಿ?

ಹೆಬ್ಬಾಳ ಜಂಕ್ಷನ್‌ನಲ್ಲಿ ಉತ್ತರ ತಾಲ್ಲೂಕಿನ ಕಸಬಾ ಹೋಬಳಿಯ ಹೆಬ್ಬಾಳದ ಮೂರು ಸರ್ವೆ ನಂಬರ್‌ನಲ್ಲಿ ಸುಮಾರು ಎರಡು ಎಕರೆ ಭೂಸ್ವಾಧೀನದ ಅಗತ್ಯವಿದೆ ಎಂದು ಡಿಪಿಆರ್‌ನಲ್ಲಿ ವಿವರಿಸಲಾಗಿದೆ. 'ಡಿಫೆನ್ಸ್ ಭೂಮಿ'ಯಲ್ಲಿಯೇ ಭೂಸ್ವಾಧೀನವಾಗುತ್ತದೆ ಎಂದು ಹೇಳಲಾಗಿದೆ. ಆದರೆ, ಅಲೈನ್‌ಮೆಂಟ್‌ನಲ್ಲಿ ನಿರ್ಗಮನ ರ್‍ಯಾಂಪ್–8 ಹೆಬ್ಬಾಳ ಕೆರೆಯ ಬದಿಯಲ್ಲೇ ಸಾಗಲಿದ್ದು, ಕೆರೆ ಕೋಡಿಯ ನಾಲಾ ಕತ್ತರಿಸುವಂತೆ ತೋರಿಸಲಾಗಿದೆ. ಒಂದು ಬದಿ ನಿರ್ಗಮನ ರ್‍ಯಾಂಪ್ ಹಾದುಹೋದರೆ, ಅದರ ಪಕ್ಕದ ಕೆಳಭಾಗದಲ್ಲಿ ಸುರಂಗ ರಸ್ತೆಯ ಮುಖ್ಯ ಮಾರ್ಗದ ಎರಡು ಟ್ಯೂಬ್‌ಗಳು ನಿರ್ಮಾಣವಾಗಲಿವೆ ಎಂದು ವಿವರಿಸಲಾಗಿದೆ.



ಭೂಸ್ವಾಧೀನ

88,688.82 ಚದರಡಿ — ಹೆಬ್ಬಾಳ ಜಂಕ್ಷನ್‌ನಲ್ಲಿ ಒಟ್ಟು ಭೂಸ್ವಾಧೀನ

60,163.82 ಚದರಡಿ — ಹೆಬ್ಬಾಳದ ಸರ್ವೆ ನಂ.40ರ 'ಡಿಫೆನ್ಸ್ ಭೂಮಿ'

28,307.39 ಚದರಡಿ — ಹೆಬ್ಬಾಳದ ಸರ್ವೆ ನಂ.41ರ 'ಡಿಫೆನ್ಸ್ ಭೂಮಿ'

218.18 ಚದರಡಿ — ಹೆಬ್ಬಾಳದ ಸರ್ವೆ ನಂ.42ರ 'ಡಿಫೆನ್ಸ್ ಭೂಮಿ'

ಸುದ್ದಿ 2 ನಿಮಿಷ

'ಸುರಂಗ: ಮರ ಕತ್ತರಿಸುವಂತಿಲ್ಲ'

ಬೆಂಗಳೂರು: 'ಹೆಬ್ಬಾಳದಿಂದ ಸಿಲ್ಕ್ ಬೋರ್ಡ್‌ವರೆಗೂ ಸುರಂಗ ರಸ್ತೆ ನಿರ್ಮಾಣ ಯೋಜನೆಗೆ ಸಂಬಂಧಿಸಿದಂತೆ ಲಾಲ್‌ಬಾಗ್‌ನಲ್ಲಿ ಯಾವುದೇ ಮರಗಳನ್ನು ಕಡಿಯುವುದಿಲ್ಲ' ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ತಿಳಿಸಿದೆ.

'ಯೋಜನೆಗೆ ಸಂಬಂಧಿಸಿದ ಟೆಂಡರ್ ಅಧಿಸೂಚನೆ ರದ್ದುಪಡಿಸಬೇಕು' ಎಂದು ಕೋರಿ ಚಲನಚಿತ್ರ ನಟ ಪ್ರಕಾಶ್ ಬೆಳವಾಡಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ರಾಜ್ಯ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ್ ಶೆಟ್ಟಿ ಅವರನ್ನು ನ್ಯಾಯಪೀಠ, 'ಲಾಲ್‌ಬಾಗ್‌ನಲ್ಲಿ ಮರಗಳನ್ನು ಕತ್ತರಿಸಲಾಗುತ್ತಿದೆಯೇ' ಎಂದು ಪ್ರಶ್ನಿಸಿತು. ಇದಕ್ಕೆ ಶಶಿಕಿರಣ ಶೆಟ್ಟಿ 'ಇಲ್ಲ' ಎಂದು ಉತ್ತರಿಸಿದರು.

ಇದನ್ನು ಮನ್ನಿಸಿದ ನ್ಯಾಯಪೀಠ, 'ಮುಂದಿನ ವಿಚಾರಣೆಯವರೆಗೆ ಲಾಲ್‌ಬಾಗ್‌ನಲ್ಲಿ ಯಾವುದೇ ಮರಗಳನ್ನು ಕತ್ತರಿಸುವುದಿಲ್ಲ ಎಂದು ಅಡ್ವೊಕೇಟ್ ಜನರಲ್ ತಿಳಿಸಿದ್ದಾರೆ. ಹೀಗಾಗಿ, ಯಾವುದೇ ಮಧ್ಯಂತರ ಆದೇಶದ ಅಗತ್ಯವಿಲ್ಲ' ಎಂದು ನುಡಿಯಿತು.

ಅರ್ಜಿದಾರರ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಡಿ.ಆರ್. ರವಿಶಂಕರ್ ಮತ್ತು ಸಂಸದ ತೇಜಸ್ವಿ ಸೂರ್ಯ ಅವರು, 'ಯೋಜನೆ ಇನ್ನೂ ಕಾಗದದ ಮೇಲಷ್ಟೇ ಇದೆ. ಇದು ಕಾರ್ಯಗತ ಆಗಬೇಕಿರುವ ಯೋಜನೆಯಾದರೂ ಸರ್ಕಾರ ಈಗಾಗಲೇ ಟೆಂಡರ್ ಪ್ರಕ್ರಿಯೆ ಆರಂಭಿಸಿದೆ' ಎಂದು ಆಕ್ಷೇಪಿಸಿದರು.



ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಡಿಸೆಂಬರ್ 9ಕ್ಕೆ ಮುಂದೂಡಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ಡಿ.ಆರ್.ರವಿಶಂಕರ್ ಮತ್ತು ಸಂಸದರೂ ಆದ ವಕೀಲ ತೇಜಸ್ವಿ ಸೂರ್ಯ ಹಾಜರಿದ್ದರು.

ಕಾನೂನುಬದ್ಧತೆ ಪ್ರಶ್ನೆ: ನೋಟಿಸ್

ಬೆಂಗಳೂರು: 'ಕರ್ನಾಟಕ ನೌಕರರ ರಾಜ್ಯ ವಿಮಾ ಸೊಸೈಟಿ' ನೋಂದಣಿಯ ಕಾನೂನು ಬದ್ಧತೆ ಮತ್ತು ಸಿಂಧುತ್ವವನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಡಿ.ವಿ.ದೊರೈ ರಾಯನ ಗೌಡ ಸೇರಿದಂತೆ ಒಟ್ಟು 160 ಜನ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಡಿ.ಆರ್. ರವಿಶಂಕರ್ ಅವರ ವಾದ ಆಲಿಸಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಕಾರ್ಮಿಕ ಇಲಾಖೆ ಪ್ರಧಾನ ಕಾರ್ಯದರ್ಶಿ, ಕಾರ್ಮಿಕ ರಾಜ್ಯ ವಿಮಾ ಯೋಜನೆಯ ವೈದ್ಯಕೀಯ ಸೇವೆಗಳ ಇಲಾಖೆಯ ಆಯುಕ್ತರು, ಇಎಸ್ಐ ನಿಗಮ, ಇಎಸ್ಐ ಸೊಸೈಟಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಕಾರ್ಮಿಕ ರಾಜ್ಯ ವಿಮಾ ಯೋಜನೆಯ ವೈದ್ಯಕೀಯ ಸೇವೆಗಳ ಇಲಾಖೆ ರಚಿಸಿರುವ ಈ ಕಾನೂನನ್ನು ಪ್ರಶ್ನಿಸಿರುವ ಅರ್ಜಿದಾರರು ರಾಜ್ಯದ ವಿವಿಧ ಇಎಸ್ಐ ಆಸ್ಪತ್ರೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಬಿ.ಎಂ.ಸಂತೋಷ್ ವಕಾಲತ್ತು ವಹಿಸಿದ್ದಾರೆ.

ಚಿಟಿಕೆ ಸುದ್ದಿ

ಉತ್ತರ ವಿ.ವಿ ಇನ್ನು 'ಸುವರ್ಣ ಗಂಗೆ'

ಕೋಲಾರ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯಕ್ಕೆ 'ಸುವರ್ಣ ಗಂಗೆ' ಎಂದು ಸಚಿವರ ಸಮ್ಮುಖದಲ್ಲಿ ಬುಧವಾರ ನಾಮಕರಣ ನಡೆಯಲಿದೆ.

ವಿಶ್ವವಿದ್ಯಾಲಯದ ಮಂಗಸಂದ್ರದಲ್ಲಿನ ಸ್ನಾತಕೋತ್ತರ ಕೇಂದ್ರದಲ್ಲಿ ಪಿ.ಎಂ. ಉಷಾ ಯೋಜನೆ ಅಡಿಯಲ್ಲಿ ₹10 ಕೋಟಿ ವೆಚ್ಚದಲ್ಲಿ ಮಹಿಳಾ ವಸತಿ ನಿಲಯದ ಕಾಮಗಾರಿಗೆ ಬೆಳಿಗ್ಗೆ 10.30ಕ್ಕೆ ಶಂಕುಸ್ಥಾಪನೆ ನೇರವೇರಲಿದೆ. ಇದೇ ಸಂದರ್ಭದಲ್ಲಿ ಸ್ನಾತಕೋತ್ತರ ಕೇಂದ್ರದ ಮೊದಲ ಮಹಡಿ ಉದ್ಘಾಟನೆಯೂ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪರಿಷತ್: ಅಭ್ಯರ್ಥಿ ಹೆಸರು ಶೀಘ್ರ ಅಂತಿಮ– ಡಿಕೆಶಿ

ಬೆಂಗಳೂರು: 'ಪದವೀಧರ ಮತ್ತು ಶಿಕ್ಷಕರ ತಲಾ ಎರಡು ಕ್ಷೇತ್ರಗಳಿಂದ ವಿಧಾನ ಪರಿಷತ್‌ಗೆ ಮುಂದಿನ ವರ್ಷ ನಡೆಯಲಿರುವ ಚುನಾವಣೆಗೆ ಮುಂದಿನ 8-10 ದಿನಗಳಲ್ಲಿ ಪಕ್ಷದ ಅಭ್ಯರ್ಥಿಗಳನ್ನು ಅಂತಿಮಗೊಳಿಸಲಾಗುವುದು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

ಕೆಪಿಸಿಸಿ ಕಚೇರಿಯ ಭಾರತ ಜೋಡೊ ಸಭಾಂಗಣದಲ್ಲಿ ಪಶ್ಚಿಮ ಮತ್ತು ಆಗ್ನೇಯ ಪದವೀಧರ ಕ್ಷೇತ್ರ ಹಾಗೂ ಈಶಾನ್ಯ ಮತ್ತು ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯ ಪೂರ್ವಭಾವಿ ಸಿದ್ಧತಾ ಸಭೆಯ ಬಳಿಕ ಅವರು ಈ ವಿಷಯ ತಿಳಿಸಿದರು.

'ಈ ಚುನಾವಣೆಗೆ ಪಕ್ಷದ ಕಾರ್ಯಕರ್ತರನ್ನು ಸನ್ನದ್ಧಗೊಳಿಸಲು ಸಭೆ ನಡೆಸಿದ್ದೇವೆ. ಕಾರ್ಯಕರ್ತರು ಹಾಗೂ ಟಿಕೆಟ್ ಆಕಾಂಕ್ಷಿಗಳ ಜೊತೆ ಚರ್ಚಿಸಿದ ನಂತರ ಹೈಕಮಾಂಡ್‌ಗೆ ಹೆಸರುಗಳನ್ನು ಶಿಫಾರಸು ಮಾಡಲಾಗುವುದು' ಎಂದರು.

'ಸರ್ಕಾರಿ ವೈದ್ಯಕೀಯ ಕಾಲೇಜು ಹೋರಾಟ ಬೆಂಗಳೂರಿಗೆ ವಿಸ್ತರಣೆ'

ವಿಜಯಪುರ: 'ವಿಜಯಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗೆ ಆಗ್ರಹಿಸಿ 40 ದಿನಗಳಿಂದ ನಡೆದಿರುವ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ರಾಜ್ಯ ಸರ್ಕಾರ ಸ್ಪಂದಿಸದ ಕಾರಣ ಶೀಘ್ರವೇ ಬೆಂಗಳೂರಿಗೆ ಹೋರಾಟ ವಿಸ್ತರಿಸಲಾಗುವುದು. ನಿರ್ಲಕ್ಷ್ಯ ತೋರಿದ್ದಲ್ಲಿ, ತೀವ್ರ ಸ್ವರೂಪದ ಹೋರಾಟ ಕೈಗೊಳ್ಳಲಾಗುವುದು' ಎಂದು ಚಿಂತಕ ಸಿದ್ದನಗೌಡ ಪಾಟೀಲ ತಿಳಿಸಿದರು.

'ಕನಕಪುರದಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ ಸಾಧ್ಯವಾಗುವುದಾದರೆ, ವಿಜಯಪುರದಲ್ಲಿ ಯಾಕೆ ಖಾಸಗಿ ಸಹಭಾಗಿತ್ವದಲ್ಲಿ ವೈದ್ಯಕೀಯ ಕಾಲೇಜು ಸ್ಥಾಪಿಸಬೇಕು? ಜಿಲ್ಲೆಯ ಶಾಸಕರೊಬ್ಬರಿಗೆ ರಾಜಕೀಯ ಲಾಭಕ್ಕಾಗಿ ಮಾತು ಕೊಟ್ಟಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ' ಎಂದು ಅವರು ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ತಿಳಿಸಿದರು.

'ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆಗಾಗಿ ಜನರೇ ಹೋರಾಟ ನಡೆಸಿದ್ದು, ಇದರಲ್ಲಿ ರಾಜಕೀಯ ಹಿತಾಸಕ್ತಿ ಇಲ್ಲ. ಎಲ್ಲ ಪಕ್ಷದವರು ಜೊತೆಗೂಡಿ ಸರ್ಕಾರಿ ಕಾಲೇಜು ಸ್ಥಾಪನೆಗೆ ಆಗ್ರಹಿಸಬೇಕು' ಎಂದರು.

ಸುರಂಗ ರಸ್ತೆ: ನ್ಯಾಯಾಲಯವೇ ಸಮಿತಿ ರಚಿಸಿ ಪರಿಶೀಲಿಸಲಿ: ಉಪ ಮುಖ್ಯಮಂತ್ರಿ

ತೇಜಸ್ವಿ ಸಲಹೆ ಪರ್ಯಾಯವಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನ ಸಂಚಾರ ದಟ್ಟಣೆ ನಿವಾರಣೆಗೆ ಸಂಸದ ತೇಜಸ್ವಿ ಸೂರ್ಯ ಅವರು ಕೊಟ್ಟ ಸಲಹೆಗಳಲ್ಲಿ ಪರ್ಯಾಯ ಪರಿಹಾರಗಳು ಕಾಣಲಿಲ್ಲ. ಆದರೂ ಅವರ ಸಲಹೆಗಳನ್ನು ಗೌರವಿಸುತ್ತೇನೆ. ಅವುಗಳನ್ನು ಪರಿಶೀಲಿಸಲು ಅಧಿಕಾರಿಗಳಿಗೆ ಸೂಚಿಸುತ್ತೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸಂಸದ ತೇಜಸ್ವಿ ಸೂರ್ಯ ಅವರ ಭೇಟಿ ಬಗ್ಗೆ ಸುದ್ದಿಗಾರರು ಕೇಳಿದಾಗ, 'ತೇಜಸ್ವಿ ಸೂರ್ಯ ಅವರು ಕೆಲವು ಸಲಹೆ ನೀಡಿದ್ದಾರೆ. ಸುರಂಗ ರಸ್ತೆಯಲ್ಲಿ ಕೇವಲ ಕಾರುಗಳಿಗೆ ಅನುಕೂಲವಾಗುತ್ತದೆ. ಮೆಟ್ರೊ ಮಾರ್ಗ ಕೂಡ ವಿಸ್ತರಿಸಬೇಕು ಎಂದು ಹೇಳುತ್ತಿದ್ದಾರೆ. ಮೆಟ್ರೊ ಸೇರಿಸಲು ನಮ್ಮ ತಕರಾರು ಇಲ್ಲ. ಇದರ ಜೊತೆಗೆ ಅವರು ನೀಡಿರುವ ಇತರೆ ಸಲಹೆಗಳನ್ನು ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತೇನೆ. ಇನ್ನು ಬೆಂಗಳೂರಿನಲ್ಲಿ ಖಾಸಗಿ ಬಸ್‌ಗಳು, ಸಣ್ಣ ಬಸ್‌ಗಳಿಗೆ ಅವಕಾಶ ನೀಡಿ ಎಂದು ಹೇಳುತ್ತಿದ್ದಾರೆ. ಈಗಾಗಲೇ ಬೆಂಗಳೂರು ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಖಾಸಗಿ ಬಸ್‌ಗಳಿಗೆ ಅವಕಾಶ ನೀಡಿದರೆ ಏನು ಉಪಯೋಗ ಎಂದು ಚರ್ಚೆ ಮಾಡಬೇಕಿದೆ' ಎಂದರು.

'ಬೆಂಗಳೂರು ಮೆಟ್ರೊಪಾಲಿಟನ್ ಲ್ಯಾಂಡ್ ಟ್ರಾನ್ಸ್‌ಪೋರ್ಟ್ ಪ್ರಾಧಿಕಾರ (ಬಿಎಂಎಲ್‌ಟಿ) ಮಾಡಬೇಕು ಎಂದು ಅವರು ಹೇಳಿದರು. ಆಗ ನಾನು ನಿಮ್ಮ ಕಾಲದಲ್ಲಿ ಯಾಕೆ ಮಾಡಲಿಲ್ಲ ಎಂದು ಕೇಳಿದೆ. ಅದಕ್ಕೆ ಅವರು ಆಗ ಆಗಲಿಲ್ಲ ಎಂದರು. ಬೆಂಗಳೂರಿನ ಅಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ಎಷ್ಟು ಅನುದಾನ ಕೊಡಿಸುತ್ತೀರಿ ಎಂದು ಕೇಳಿದೆ. ನಿಮ್ಮ ಸಂಸದರೆಲ್ಲ ಬನ್ನಿ, ನಾನು ಕೂಡ ಬರುತ್ತೇನೆ. ಪ್ರಧಾನಮಂತ್ರಿಯವರನ್ನು ಭೇಟಿ ಮಾಡಿ ಅನುದಾನಕ್ಕೆ ಒತ್ತಾಯ ಮಾಡೋಣ ಎಂದು ಹೇಳಿದೆ' ಎಂದರು.

'ಜನ ತಮ್ಮ ವಾಹನದಲ್ಲೇ ತಾವು, ತಮ್ಮ ಮನೆಯವರು ಪ್ರಯಾಣ ಮಾಡಬೇಕು ಎಂದು ಬಯಸುತ್ತಾರೆ. ಅವರಿಗೆ ನಿಮ್ಮ ವಾಹನ ತರಬೇಡಿ ಎಂದು ತಡೆಯಲು ಆಗುತ್ತದೆಯೇ? ಬೇಕಿದ್ದರೆ ಸಂಸದರು ತಮ್ಮ ಕ್ಷೇತ್ರದ ಜನರಿಗೆ, ನೀವು ನಿಮ್ಮ ಕಾರುಗಳನ್ನು ಮನೆಯಲ್ಲೇ ನಿಲ್ಲಿಸಿ, ಸಾರ್ವಜನಿಕ ಸಾರಿಗೆಯಲ್ಲಿ ಸಂಚಾರ ಮಾಡಿ ಎಂದು ಕರೆ ನೀಡಲಿ. ಆಗ ಯಾರು ಪಾಲನೆ ಮಾಡುತ್ತಾರೆ ನೋಡೋಣ? ಕಾರಿಲ್ಲದ ಹುಡುಗನ ಮನೆಗೆ ಹೆಣ್ಣು ನೀಡಲು ಹಿಂದೇಟು ಹಾಕುತ್ತಾರೆ. ಇಂತಹ ಸಾಮಾಜಿಕ ಬಾಧ್ಯತೆಗಳ ಬಗ್ಗೆ ಸಂಸದರಿಗೆ ಅರಿವಿಲ್ಲ' ಎಂದರು.

'ಸುರಂಗ ರಸ್ತೆ ಬಗ್ಗೆ ಅವರು ಏನಾದರೂ ಪಿಐಎಲ್ ಹಾಕಿಕೊಳ್ಳಲಿ. ಬೇಕಿದ್ದರೆ ನ್ಯಾಯಾಲಯವೇ ಸಮಿತಿ ರಚಿಸಿ ಎಲ್ಲಾ ಸ್ಥಳಗಳನ್ನು ಪರಿಶೀಲಿಸಲಿ. ನಾನು ಅಥವಾ ನಮ್ಮ ಅಧಿಕಾರಿಗಳು ಏನಾದರೂ ತಪ್ಪು ಮಾಡಿದ್ದರೆ ತಿಳಿಸಲಿ. ಅದನ್ನು ಸರಿಪಡಿಸಿಕೊಳ್ಳಲು ಸಿದ್ಧರಿದ್ದೇವೆ' ಎಂದು ಹೇಳಿದರು.

ಹಣ ಕೊಡುವವರು ಯಾರು?: 'ಹಣದ ವಿಚಾರದಲ್ಲಿ ಖಾಲಿ ಟ್ರಂಕ್ ಎಂದು ಹೇಳಿದ್ದೆ. ಯಾವುದೇ ಯೋಜನೆ ಮಾಡಬೇಕಾದರೂ ಹಣ ಬೇಕು. ಕೇವಲ ಟ್ವೀಟ್, ಟೀಕೆಗಳಿಂದ ಪರಿಹಾರ ಸಿಗುವುದಿಲ್ಲ. ಪ್ರಧಾನಮಂತ್ರಿಯವರಿಂದ ಹಣ ಕೊಡಿಸಲಿ. ಸಲಹೆಗಳನ್ನು ಯಾರು ಬೇಕಾದರೂ, ಎಷ್ಟು ಬೇಕಾದರೂ ನೀಡುತ್ತಾರೆ. ಸುರಂಗ ರಸ್ತೆ ಬೇಡ ಎನ್ನುತ್ತೀರಿ, ಕಟ್ಟಡ ಕೆಡವಬಾರದು ಎನ್ನುತ್ತೀರಿ. ನಾವು ಹೆಚ್ಚು ಬಸ್ ಬಿಟ್ಟರೆ ಎಷ್ಟು ಜನ ಓಡಾಡುತ್ತಾರೆ. ಎಲ್ಲಾ ಕಡೆಗೂ ಮೆಟ್ರೊ ಕಲ್ಪಿಸಲು ಆಗುತ್ತದೆಯೇ' ಎಂದು ಪ್ರಶ್ನಿಸಿದರು.

'ಲಾಲ್‌ಬಾಗ್‌ನಲ್ಲಿ ಆರು ಎಕರೆ ಸ್ವಾಧೀನವಿಲ್ಲ'



'ಸುರಂಗ ರಸ್ತೆಗೆ ಲಾಲ್‌ಬಾಗ್‌ನಲ್ಲಿ ಆರು ಎಕರೆ ಭೂಮಿಯನ್ನು ಬಳಸಿಕೊಳ್ಳುವುದಿಲ್ಲ. ಲಾಲ್‌ಬಾಗ್‌ನ ಮೂಲೆಯಲ್ಲಿ ಸುರಂಗ ರಸ್ತೆ ಪ್ರವೇಶ ಹಾಗೂ ನಿರ್ಗಮನಕ್ಕೆ ಅವಕಾಶ ನೀಡಲಾಗುವುದು. ಇಲ್ಲಿ ಬೇಡ ಎಂದರೆ, ಬೇರೆ ಎಲ್ಲಿ ಇದಕ್ಕೆ ಅವಕಾಶ ಕಲ್ಪಿಸಬಹುದು, ನೀವೇ ಸಲಹೆ ನೀಡಿ ಎಂದು ತೇಜಸ್ವಿ ಅವರನ್ನು ಕೇಳಿದೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಎಲ್ಲಾ ದೇಶಗಳಲ್ಲೂ ಟನಲ್ ರಸ್ತೆ ಬೇಡ ಎನ್ನುತ್ತಿದ್ದಾರೆ' ಎಂದು ತೇಜಸ್ವಿ ಹೇಳಿದರು. ಅದಕ್ಕೆ ನಾನು, ನೀವು ಒಬ್ಬರು ಹೇಳಿದಂತೆ ಕೇಳಲು ಆಗುವುದಿಲ್ಲ ಎಂದು ಹೇಳಿದೆ. ಹೊರವರ್ತುಲ ರಸ್ತೆಯಲ್ಲಿ ಸಾರ್ವಜನಿಕ ಸಾರಿಗೆ ಬಸ್ ಸಂಚಾರ ಹೆಚ್ಚಿಸಬೇಕು. ಸಬ್ ಅರ್ಬನ್ ರೈಲುಗಳ ಸಂಖ್ಯೆಯನ್ನೂ ಹೆಚ್ಚಿಸಬೇಕು ಎಂದರು. 'ಕೇಂದ್ರ ಸರ್ಕಾರದ ಬಳಿ ಹೋಗಿ ಹಣ ಕೇಳೋಣ. ಸೋಮಣ್ಣ ಅವರ ಜೊತೆ ಚರ್ಚೆ ಮಾಡೋಣ. ಹಣ ಕೊಟ್ಟರೆ ಮಾಡೋಣ. ಇದುವರೆಗೂ ಕೇಂದ್ರ ಸರ್ಕಾರ ಹಣ ನೀಡದ ಕಾರಣ, ಒಂದು ರೈಲನ್ನೂ ಸೇರಿಸಿಲ್ಲ. ಎಲ್ಲಕ್ಕೂ ನಮ್ಮ ಮೇಲೆ ಅವಲಂಬಿತವಾದರೆ ಹೇಗೆ? ಕೇವಲ ಸಲಹೆ ಮಾತ್ರವಲ್ಲ, ಇದಕ್ಕೆ ಪೂರಕವಾಗಿ ಹಣವನ್ನು ತನ್ನಿ ಎಂದು ಹೇಳಿದ್ದೇನೆ' ಎಂದು ಶಿವಕುಮಾರ್ ತಿಳಿಸಿದರು.

ಸುಸ್ಥಿರ ಸಾರಿಗೆ ಅಗತ್ಯ: ತೇಜಸ್ವಿ ಸೂರ್ಯ



'ಸುರಂಗ ರಸ್ತೆಯ ಬದಲು ಮೆಟ್ರೊ, ಬಿಎಂಟಿಸಿ, ಸಬ್–ಅರ್ಬನ್ ಸಂಪರ್ಕ ಜಾಲವನ್ನು ಹೆಚ್ಚಿಸಬೇಕು. 'ಕಾರಿಗೆ ಮಾತ್ರ ಸುರಂಗ ರಸ್ತೆ'ಗಾಗಿ ಹೆಚ್ಚಿನ ಹಣ ವೆಚ್ಚ ಮಾಡುವ ಅಗತ್ಯವಿಲ್ಲ. ವಾಹನಗಳ ಬದಲಿಗೆ ಜನ ಸಂಚಾರವನ್ನು ಸುಗಮಗೊಳಿಸಬೇಕು. ಸರ್ಕಾರದ ಡಿಪಿಆರ್‌ನಂತೆಯೇ ಉದ್ದೇಶಿತ ಸುರಂಗ ರಸ್ತೆಯಲ್ಲಿ 1,800 ವಾಹನಗಳು ಒಂದು ಗಂಟೆಗೆ ಸಂಚರಿಸಬಹುದು. ಅದೇ ಮಾರ್ಗದಲ್ಲಿ ಮೆಟ್ರೊ ಸಂಪರ್ಕವಿದ್ದರೆ 69 ಸಾವಿರ ಜನರು ಪ್ರಯಾಣಿಸುತ್ತಾರೆ. ಈ ಬಗ್ಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಮನವರಿಕೆ ಮಾಡಿಕೊಡಲಾಗಿದೆ' ಎಂದು ಸಂಸದ ತೇಜಸ್ವಿ ಸೂರ್ಯ ತಿಳಿಸಿದರು.

ಶಿವಕುಮಾರ್ ಅವರೊಂದಿಗೆ ಮಂಗಳವಾರ ಮಾತುಕತೆ ನಡೆಸಿದ ಅವರು, 'ಸುರಂಗ ರಸ್ತೆಯಿಂದ ಯಾವುದೇ ರೀತಿಯಲ್ಲಿ ಲಾಲ್‌ಬಾಗ್‌ಗೆ ಸಮಸ್ಯೆ ಆಗುವುದಿಲ್ಲ ಎಂದು ಅವರು ಭರವಸೆ ನೀಡಿದರು. ಸುರಂಗ ರಸ್ತೆಯಿಂದ ಪರಿಸರದ ಮೇಲಷ್ಟೇ ಪರಿಣಾಮ ಬೀರುವುದಿಲ್ಲ, ಬೃಹತ್ ಮೊತ್ತ ವೆಚ್ಚವಾಗುವುದರಿಂದ ಅದು ಪ್ರಯೋಜನಕ್ಕೆ ಬರುವುದಿಲ್ಲ. ಇದಕ್ಕಾಗಿ ನಾವು ಅದನ್ನು ವಿರೋಧಿಸುತ್ತಿದ್ದೇವೆ ಎಂಬುದನ್ನು ಅವರಿಗೆ ತಿಳಿಸಲಾಯಿತು' ಎಂದರು.



ಬಿಟಿಎಂ ಬಡಾವಣೆಯಲ್ಲಿ ಅಕ್ರಮ ಶೆಡ್ ತೆರವು ಮಾಡಲಾಯಿತು

ಬಿಟಿಎಂ ಬಡಾವಣೆಯಲ್ಲಿ ಆಸ್ತಿ ವಶ

ಬೆಂಗಳೂರು: ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆಯನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮುಂದುವರಿಸಿದ್ದು, ಮಂಗಳವಾರ ನಡೆದ ಕಾರ್ಯಾಚರಣೆಯಲ್ಲಿ ಬಿಟಿಎಂ 1ನೇ ಹಂತದಲ್ಲಿ ₹12.25 ಕೋಟಿ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಬೆಂಗಳೂರು ದಕ್ಷಿಣ ತಾಲ್ಲೂಕಿನ ಬೇಗೂರು ಹೋಬಳಿಯ ತಾವರೆಕೆರೆ ಗ್ರಾಮದ ಸರ್ವೆ ನಂ. 50ರಲ್ಲಿ 6,629 ಚದರ ಅಡಿ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಲಾಗಿದ್ದ ಶೆಡ್ ಹಾಗೂ ಕಾಂಪೌಂಡ್ ಅನ್ನು ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡು, ಸುತ್ತಲೂ ಬೇಲಿ ಹಾಕಿದೆ.

ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಕಾರ್ಯಪಾಲಕ ಎಂಜಿನಿಯರ್‌ಗಳು, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಹಾಗೂ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು.

ರಾಷ್ಟ್ರೋತ್ಥಾನ ಸಾಹಿತ್ಯದಿಂದ ಕನ್ನಡ ಪುಸ್ತಕ ಹಬ್ಬ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೋತ್ಥಾನ ಸಾಹಿತ್ಯ ವತಿಯಿಂದ ನವೆಂಬರ್ 1ರಿಂದ ಡಿಸೆಂಬರ್ 7ರವರೆಗೆ ಕನ್ನಡ ಪುಸ್ತಕ ಹಬ್ಬವನ್ನು ಚಾಮರಾಜಪೇಟೆಯ ಕೇಶವಶಿಲ್ಪ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ.

37 ದಿನಗಳ ಐದನೇ ಪುಸ್ತಕ ಹಬ್ಬದಲ್ಲಿ 40 ಸಾವಿರದಿಂದ 50 ಸಾವಿರ ಪುಸ್ತಕಗಳ ಪ್ರದರ್ಶನ ಹಾಗೂ ಮಾರಾಟ ಇರಲಿದೆ. ರಾಷ್ಟ್ರೋತ್ಥಾನ ಸಾಹಿತ್ಯವಲ್ಲದೇ ಇತರೆ ಪ್ರಕಾಶನಗಳ ಪುಸ್ತಕಗಳು ರಿಯಾಯಿತಿ ದರದಲ್ಲಿ ಪ್ರದರ್ಶನದಲ್ಲಿ ಸಿಗಲಿವೆ ಎಂದು ರಾಷ್ಟ್ರೋತ್ಥಾನ ಸಾಹಿತ್ಯ ವಿಶ್ವಸ್ಥ ಕೆ.ಎಸ್.ನಾರಾಯಣ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಪುಸ್ತಕ ಹಬ್ಬದ ಅಂಗವಾಗಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಪ್ರಬಂಧ ಮತ್ತು ಚರ್ಚಾಸ್ಪರ್ಧೆ, ಶಾಲಾ ವಿದ್ಯಾರ್ಥಿಗಳಿಗಾಗಿ ಪುಸ್ತಕ ಪರಿಚಯ ಮತ್ತು ಲೇಖನ ಸ್ಪರ್ಧೆಗಳನ್ನು ಯೋಜಿಸಲಾಗಿದೆ. ಮಕ್ಕಳಿಗಾಗಿ ಕಗ್ಗ, ಕನ್ನಡ ಗದ್ಯ ಹಾಗೂ ಪದ್ಯ ಭಾಗ ಓದುವ ಸ್ಪರ್ಧೆಗಳೂ ಇರಲಿವೆ. 10 ಹೊಸ ಪುಸ್ತಕಗಳು ಜನಾರ್ಪಣೆಯಾಗಲಿವೆ ಎಂದು ಮುಖ್ಯಸ್ಥರಾದ ಬಿ.ಎ.ಸುಬ್ರಹ್ಮಣ್ಯ ಹಾಗೂ ಪ್ರಧಾನ ಸಂಪಾದಕ ವಿಘ್ನೇಶ್ವರ ಭಟ್ಟ ತಿಳಿಸಿದರು.

ಸಾಂಸ್ಕೃತಿಕ ಕಾರ್ಯಕ್ರಮ: ಪ್ರತಿದಿನ ಸಂಜೆ ಸಂಸ್ಕಾರಭಾರತೀ ಸಹಯೋಗದಲ್ಲಿ ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸಂಗೀತ, ನೃತ್ಯ, ಜಾನಪದ, ಏಕವ್ಯಕ್ತಿ ತಾಳಮದ್ದಲೆ, ಯಕ್ಷಗಾನ, ಹಾಸ್ಯ, ಮ್ಯಾಜಿಕ್, ವಿವಿಧ ವಾದ್ಯಗೋಷ್ಠಿಗಳು, ಹರಿಕಥೆ, ಗಮಕ, ನಾಟಕ, ಅಷ್ಟಾವಧಾನ, ತಾಳವಾದ್ಯ ಕಛೇರಿ ಇರಲಿವೆ. ವಿದ್ಯಾಭೂಷಣ, ಫಯಾಜ್ ಖಾನ್, ಸಂಗೀತಾ ಕಟ್ಟಿ ಸೇರಿದಂತೆ ಪ್ರಮುಖ ಕಲಾವಿದರು ಕಾರ್ಯಕ್ರಮ ನೀಡಲಿದ್ದಾರೆ ಎಂದರು.

ನ.1 ರಂದು ಬೆಳಿಗ್ಗೆ 11 ಗಂಟೆಗೆ ಲೋಕಸಭಾ ಸದಸ್ಯ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಪುಸ್ತಕ ಹಬ್ಬವನ್ನು ಉದ್ಘಾಟಿಸುವರು. ಮುಖ್ಯ ಅತಿಥಿಯಾಗಿ ಕೇಂದ್ರ ಸರ್ಕಾರದ ಸಾಮರ್ಥ್ಯನಿರ್ಮಾಣ ಆಯೋಗದ ಮಾನವ ಸಂಪನ್ಮೂಲ ಸದಸ್ಯ ಆರ್. ಬಾಲಸುಬ್ರಮಣ್ಯಂ, ವಿಶ್ರಾಂತ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ ಭಾಗವಹಿಸುವರು. ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷ ಎಂ.ಪಿ.ಕುಮಾರ್ ಅಧ್ಯಕ್ಷತೆ ವಹಿಸುವರು ಎಂದು ತಿಳಿಸಿದರು.

ಶೋಭಾಯಾತ್ರೆಗೆ ಅನುಮತಿ

'ಪುಸ್ತಕ ಹಬ್ಬದ ಉದ್ಘಾಟನಾ ಕಾರ್ಯಕ್ರಮಕ್ಕೂ ಮುನ್ನ ಬೆಳಗ್ಗೆ 9.30ಕ್ಕೆ ಗಂಟೆಗೆ ಎನ್. ಆರ್. ಕಾಲೊನಿಯಲ್ಲಿರುವ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ಆವರಣದಿಂದ ರಾಷ್ಟ್ರೋತ್ಥಾನ ಪರಿಷತ್ತಿನ ವರೆಗೆ ಭುವನೇಶ್ವರಿ ತಾಯಿ ಶೋಭಾಯಾತ್ರೆ ನಡೆಯಲಿದ್ದು. ಇದಕ್ಕೆ ಅಗತ್ಯ ಅನುಮತಿಗಳನ್ನು ಪಡೆದುಕೊಂಡಿದ್ದೇವೆ. ಎಲ್ಲಾ ಸೂಚನೆಗಳನ್ನು ಪಾಲಿಸುತ್ತೇವೆ' ಎಂದು ವಿಘ್ನೇಶ್ವರ ಭಟ್ ತಿಳಿಸಿದರು.

'ಡಿಕೆಶಿ ಮುಖ್ಯಮಂತ್ರಿ ಆಗೋದು ನಿಶ್ಚಿತ'

ಹಾರೋಹಳ್ಳಿ:'ಉಪ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗೋದು ಖಚಿತ. ಈ ಬಗ್ಗೆ ಹೈಕಮಾಂಡ್ ನಿರ್ಧಾರ ಕೈಗೊಳ್ಳಲಿದೆ' ಎಂದು ಶಾಸಕ ಇಕ್ಬಾಲ್ ಹುಸೇನ್ ಪುನರುಚ್ಚರಿಸಿದರು. ತಾಲ್ಲೂಕಿನ ಟಿ.ಹೊಸಹಳ್ಳಿ ಗ್ರಾಮ ಪಂಚಾಯಿತಿ ವಿವಿದೆಡೆ ಹಲವು ಕಾಮಗಾರಿಗಳಿಗೆ ಮಂಗಳವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಡಿ.ಕೆ. ಶಿವಕುಮಾರ್ ಪಕ್ಷ ಸಂಘಟಿಸಿದ್ದಾರೆ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಆಗಲಿದ್ದಾರೆ ಎಂದು ತಿಳಿಸಿದರು.

ಆಸ್ಟಿಯೊಪೊರೊಸಿಸ್ ದಿನಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಒಂದಾದ ರಾಮಯ್ಯ ಮೆಮೊರಿಯಲ್ ಆಸ್ಪತ್ರೆ ವತಿಯಿಂದ ವಿಶ್ವ ಆಸ್ಟಿಯೊಪೊರೊಸಿಸ್ ದಿನ ಆಚರಿಸಲಾಯಿತು. ಆಸ್ಟಿಯೊಪೊರೊಸಿಸ್ ಕುರಿತು ಆಸ್ಪತ್ರೆ ವೈದ್ಯರು ಅರಿವು ಮೂಡಿಸಿದರು.

ವಿಶ್ವದಲ್ಲಿ ಲಕ್ಷಾಂತರ ಜನರು ಈ ಕಾಯಿಲೆಯಿಂದ ಬಳಲುತ್ತಿದ್ದಾರೆ. ಭಾರತದಲ್ಲಿ 50 ವರ್ಷಕ್ಕಿಂತ ಮೇಲ್ಪಟ್ಟ ಸುಮಾರು 5 ಮಹಿಳೆಯರಲ್ಲಿ ಒಬ್ಬರು ಮತ್ತು 20 ಪುರುಷರಲ್ಲಿ ಒಬ್ಬರು ಆಸ್ಟಿಯೊಪೊರೊಸಿಸ್‌ನಿಂದ ಬಳಲುತ್ತಿದ್ದಾರೆ. ಹೊಸ ಹಾಗೂ ಅತ್ಯಾಧುನಿಕ ಡಿಎಕ್ಸ್‌ಎ ಸ್ಕ್ಯಾನರ್ ಮೂಲಕ ರೋಗವನ್ನು ಪತ್ತೆ ಮಾಡಿ, ಚಿಕಿತ್ಸೆ ನೀಡಬಹುದು ಎಂದು ವೈದ್ಯರು ತಿಳಿಸಿದ್ದಾರೆ.

ಡಾ.ಎಸ್.ಚಿತ್ರಾ ಮಾತನಾಡಿ, 'ಆಸ್ಟಿಯೊಪೊರೊಸಿಸ್ ಅನ್ನು ತಡೆಗಟ್ಟಬಹುದು ಮತ್ತು ಚಿಕಿತ್ಸೆ ನೀಡಬಹುದು. ಆರೋಗ್ಯದ ಬಗ್ಗೆ ಪ್ರತಿಯೊಬ್ಬರು ಕಾಳಜಿ ವಹಿಸಬೇಕು. ಆರಂಭದಲ್ಲಿಯೇ ರೋಗದ ಲಕ್ಷಣಗಳನ್ನು ಪತ್ತೆ ಮಾಡದಿದ್ದರೆ ಚಿಕಿತ್ಸೆಗೆ ತೊಂದರೆ ಆಗುತ್ತದೆ. ರೋಗದ ಬಗ್ಗೆ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಮತ್ತು ಜಾಗೃತಿ ಮೂಡಿಸುವ ಅಗತ್ಯವಿದೆ' ಎಂದರು.



ಆಸ್ಟಿಯೊಪೊರೊಸಿಸ್ ದಿನಾಚರಣೆಯಲ್ಲಿ ವೈದ್ಯರು ಭಾಗವಹಿಸಿದ್ದರು

ಆಸ್ಟಿಯೊಪೊರೊಸಿಸ್ ಅಂದರೆ ಮೂಳೆ ತೆಳುವಾಗಿ ಮತ್ತು ದುರ್ಬಲವಾಗಿ ಮೂಳೆ ಮುರಿತಕ್ಕೆ ಕಾರಣವಾಗುವ ಸ್ಥಿತಿ. ದೇಹವು ಹೊಸ ಮೂಳೆಗಳ ರಚನೆ ರೂಪಿಸಲು ವಿಫಲವಾದರೆ ಅಥವಾ ಹಳೆಯ ಮೂಳೆಗಳು ಹೆಚ್ಚಿನ ಸಂಖ್ಯೆಯಲ್ಲಿ ನಾಶವಾದರೆ ಈ ರೋಗವು ಸಂಭವಿಸುತ್ತದೆ ಎಂದು ವೈದ್ಯರು ತಿಳಿಸಿದ್ದಾರೆ.

ಮನೆಗೆಲಸದ ಮಹಿಳೆಯ ಮೇಲೆ ಅತ್ಯಾಚಾರ ಎಸಗಿದ ಪ್ರಕರಣ

ಪ್ರಜ್ವಲ್ ಮೇಲ್ಮನವಿ: ಆಕ್ಷೇಪಣೆಗೆ ಕಾಲಾವಕಾಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜೀವಾವಧಿ ಕಠಿಣ ಜೈಲು ಶಿಕ್ಷೆ ರದ್ದುಗೊಳಿಸುವಂತೆ ಕೋರಿಕೆ
- ತೀರ್ಪು ವಾಸ್ತವಾಂಶಕ್ಕೆ ವಿರುದ್ಧವಾಗಿದೆ: ಪ್ರಜ್ವಲ್
- 'ರಾಜಕೀಯ ದುರುದ್ದೇಶದಿಂದ ಪ್ರಕರಣ ದಾಖಲು'



ಪ್ರಜ್ವಲ್

ಬೆಂಗಳೂರು: ಮನೆಗೆಲಸದ ಮಧ್ಯವಯಸ್ಕ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರ ಎಸಗಿದ ದುಷ್ಕೃತ್ಯದಲ್ಲಿ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ವಿಧಿಸಿರುವ ಜೀವಾವಧಿ ಕಠಿಣ ಜೈಲು ಶಿಕ್ಷೆ ರದ್ದುಗೊಳಿಸುವಂತೆ ಕೋರಿ ಹಾಸನ ಲೋಕಸಭಾ ಕ್ಷೇತ್ರದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಎರಡು ವಾರ ಕಾಲಾವಕಾಶ ನೀಡಿದೆ.

ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರ ತೀರ್ಪು ಪ್ರಶ್ನಿಸಿ ಪ್ರಜ್ವಲ್ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಯನ್ನು ನ್ಯಾಯಮೂರ್ತಿ ಕೆ.ಎಸ್. ಮುದಗಲ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ರಾಜ್ಯ ಸರ್ಕಾರದ ಪರ ಹಾಜರಿದ್ದ ವಿಶೇಷ ಪ್ರಾಸಿಕ್ಯೂಟರ್ ರವಿವರ್ಮ ಕುಮಾರ್, ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ ನೀಡುವಂತೆ ನ್ಯಾಯಪೀಠಕ್ಕೆ ಮನವಿ ಮಾಡಿದರು.

ಪ್ರಜ್ವಲ್ ಪರ ಹಾಜರಾಗಿದ್ದ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ್ ಲೂಥ್ರಾ ಅವರು ಇದಕ್ಕೆ ಸಮ್ಮತಿಸಿದರು. ಉಭಯ ಪಕ್ಷಗಾರರ ವಾದ ಆಲಿಸಿದ ನ್ಯಾಯಪೀಠ ಆಕ್ಷೇಪಣೆ ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ವಿಚಾರಣೆಯನ್ನು ನವೆಂಬರ್ 13ಕ್ಕೆ ಮುಂದೂಡಿತು.

ಮೇಲ್ಮನವಿ: 'ರಾಜಕೀಯ ದುರುದ್ದೇಶದಿಂದ ಮಹಿಳೆಯನ್ನು ಅಸ್ತ್ರವನ್ನಾಗಿಸಿ ನನ್ನ ವಿರುದ್ಧ ಎಫ್ಐಆರ್ ದಾಖಲು ಮಾಡಲಾಗಿದೆ. ಸಂತ್ರಸ್ತೆ 2023ರಲ್ಲಿ ಫಾರ್ಮ್ ಹೌಸ್‌ನಲ್ಲಿನ ನಮ್ಮ ಗೃಹಪ್ರವೇಶದಲ್ಲಿ ಪಾಲ್ಗೊಂಡಿದ್ದಾರೆ. ನಾನು ಅತ್ಯಾಚಾರ ಎಸಗಿದ್ದೇನೆ ಎನ್ನುವುದಾದರೆ ಆಕೆ ನಮ್ಮ ಗೃಹಪ್ರವೇಶಕ್ಕೆ ಹೇಗೆ ತಾನೇ ಬರುತ್ತಿದ್ದರು' ಎಂದು ಮೇಲ್ಮನವಿಯಲ್ಲಿ ಪ್ರಶ್ನಿಸಿರುವ ಪ್ರಜ್ವಲ್ ರೇವಣ್ಣ, 'ವಿಚಾರಣಾ ನ್ಯಾಯಾಲಯದ ತೀರ್ಪು ಮಿಥ್ಯಾದೇಶ, ಕಾನೂನುಬಾಹಿರ, ಪ್ರಕರಣದ ದಾಖಲೆಗಳಲ್ಲಿರುವ ವಾಸ್ತವಾಂಶಗಳಿಗೆ ವಿರುದ್ಧವಾದ ನಿಲುವುಗಳಿಂದ ಕೂಡಿದ್ದು ಇದನ್ನು ರದ್ದುಗೊಳಿಸಬೇಕು' ಎಂದು ಕೋರಿದ್ದಾರೆ.

ನೆಲಮಂಗಲ ತಾಲ್ಲೂಕಿಗೆ ಮಾಗಡಿಯ 68 ಗ್ರಾಮಗಳು


ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲೆಯ ಮಾಗಡಿ ತಾಲ್ಲೂಕಿನ ಸೋಲೂರು ಹೋಬಳಿಯ 68 ಗ್ರಾಮಗಳನ್ನು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇರಿಸಿ, ಕಂದಾಯ ಇಲಾಖೆ ಆದೇಶ ಹೊರಡಿಸಿದೆ.

68 ಗ್ರಾಮಗಳನ್ನು ನೆಲಮಂಗಲ ತಾಲ್ಲೂಕಿಗೆ ಸೇರಿಸಲು ಸೆಪ್ಟೆಂಬರ್ 9ರಂದು ಕರಡು ಅಧಿಸೂಚನೆ ಹೊರಡಿಸಿ, ಆಕ್ಷೇಪಣೆಗೆ ಅವಕಾಶ ಕಲ್ಪಿಸಲಾಗಿತ್ತು. ಅವುಗಳನ್ನು ಪರಿಗಣಿಸಿ, ಅ.27ರಂದು ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ.

ಮಾಗಡಿ ತಾಲ್ಲೂಕಿನಿಂದ ನೆಲಮಂಗಲ ತಾಲ್ಲೂಕಿಗೆ ಸೇರ್ಪಡೆಯಾದ ಗ್ರಾಮಗಳು ಹೀಗಿವೆ:

ಸೋಲೂರು, ಕಲ್ಯಾಣಪುರ, ತೂಬರಪಾಳ್ಯ, ಎಣ್ಣೆಗೆರೆ, ಚಿಕ್ಕನಹಳ್ಳಿ, ವಡ್ಡರಹಳ್ಳಿ, ಗಂಗೇನಪುರ, ಕನಕೇನಹಳ್ಳಿ, ಭೈರಾಪುರ, ಮಲ್ಲಿಕಾರ್ಜುನ ಪಾಳ್ಯ, ಲಕ್ಕೇನಹಳ್ಳಿ, ಬೀರವಾರ, ಕೋರಮಂಗಲ, ಕನ್ನಸಂದ್ರ, ಪರ್ವತಪಾಳ್ಯ, ಗುಡೇಮಾರನಹಳ್ಳಿ, ಉಡುಕುಂಟೆ, ಮೈಲನಹಳ್ಳಿ, ಪಾಲನಹಳ್ಳಿ, ಶಾಂತಪುರ, ಕಲ್ಲಹಟ್ಟಿಪಾಳ್ಯ, ಭೈರಸಂದ್ರ, ಮಲ್ಲೂರು, ಭಂಟರಕುಪ್ಪೆ, ನಾಗನಹಳ್ಳಿ, ಮುಮ್ಮೇನಹಳ್ಳಿ, ಬೊಮ್ಮನಹಳ್ಳಿ, ತೊರೆಚನ್ನೋಹಳ್ಳಿ, ವೋಟಗೊಂಡನಹಳ್ಳಿ, ಗೊಲ್ಲಹಳ್ಳಿ, ಕೊತ್ತಗೊಂಡನಹಳ್ಳಿ, ಮರೇನಹಳ್ಳಿ, ಗರ್ಗೇಶ್ವರಪುರ, ಕೋಡಿಹಳ್ಳಿ, ಪೆಮ್ಮನಹಳ್ಳಿ, ಹಕ್ಕಿನಾಳು, ಮರಿಕುಪ್ಪೆ, ಬಸವನೇನಹಳ್ಳಿ, ಹೊಸಹಳ್ಳಿ, ಬಾಣವಾಡಿ, ಹಾಲೂರು, ಶಿರಗನಹಳ್ಳಿ, ಮಲ್ಲಾಪುರ, ಮೂಗನಹಳ್ಳಿ, ಬಿಟ್ಟಸಂದ್ರ, ಹೇಮಾಪುರ, ರಂಗೇನಹಳ್ಳಿ, ಕೆಂಪಾಪುರ, ತಟ್ಟೇಕೆರೆ, ಲಿಂಗೇನಹಳ್ಳಿ, ತಿಮ್ಮಸಂದ್ರ, ರಾಮನಹಳ್ಳಿ, ಗೊರೂರು, ರಂಗನಬೆಟ್ಟ, ಮುಪ್ಪೇನಹಳ್ಳಿ, ಚನ್ನೋಹಳ್ಳಿ, ಅರಿಶಿನಕುಂಟೆ, ಊದ್ದಂಡಹಳ್ಳಿ, ಚಿಕ್ಕಸೋಲೂರು, ಹ್ಯಾಗನಹಳ್ಳಿ, ಬ್ಯಾಡರಹಳ್ಳಿ, ಕೂಡ್ಲುರು, ಸೋಮೇದೇವನಹಳ್ಳಿ, ಒಂಭತ್ತನಕುಂಟೆ, ಕುಪ್ಪೇಮಾಳ, ತಿರುಮಲಾಪುರ, ಹೊಸೂರು.



ರಷ್ಯಾದ ಮಾಸ್ಕೊದಲ್ಲಿ ಬೆಂಗಳೂರಿನ ಎಚ್‌ಎಎಲ್ ಪ್ರಭಾತ್ ರಂಜನ್ ಮತ್ತು ಯುಎಸಿ ಕಂಪನಿಯ ಒಲೆಗ್ ಬೊಗೊಮೊಲೊವ್ ಅವರು ‘ಎಸ್‌ಜೆ–100’ ವಿಮಾನ ತಯಾರಿಕೆ ಒಪ್ಪಂದಕ್ಕೆ ಸೋಮವಾರ ಸಹಿ ಹಾಕಿದರು –ಪಿಟಿಐ ಚಿತ್ರ

ವಿಮಾನ ತಯಾರಿಕೆ: ರಷ್ಯಾ–ಎಚ್‌ಎಎಲ್ ಒಪ್ಪಂದಕ್ಕೆ ಸಹಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಪ್ರಾದೇಶಿಕ ಸಂಪರ್ಕ ಯೋಜನೆಗಳ ವಿಸ್ತರಣೆಯೊಂದಿಗೆ ಭಾರತದಲ್ಲಿ ವಿಮಾನಯಾನ ಮಾರುಕಟ್ಟೆ ವೃದ್ಧಿಯಾಗುವ ಹಿನ್ನೆಲೆಯಲ್ಲಿ ನಾಗರಿಕ ವಿಮಾನದ ವಾಣಿಜ್ಯ ತಯಾರಿಕೆಗಾಗಿ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಏರೊನಾಟಿಕ್ಸ್ ಲಿಮಿಟೆಡ್(ಎಚ್‌ಎಎಲ್), ರಷ್ಯಾದ ಪ್ರಮುಖ ವಾಣಿಜ್ಯ ವಿಮಾನ ಉತ್ಪಾದಕ ಸಂಸ್ಥೆಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ.

ಮಾಸ್ಕೊದ ಯುನೈಟೆಡ್ ಏರ್ ಕಾರ್ಪೊರೇಷನ್‌ನೊಂದಿಗೆ ಎಚ್‌ಎಎಲ್ ಸಂಸ್ಥೆ ಸೋಮವಾರ ಈ ಒಪ್ಪಂದಕ್ಕೆ ಸಹಿ ಹಾಕಿದೆ. ಎಚ್‌ಎಎಲ್ ಸಿಎಂಡಿ ಡಿ.ಕೆ ಸುನೀಲ್ ಮತ್ತು ಯುಎಸಿ ಕಂಪನಿಯ ಮಹಾನಿರ್ದೇಶಕ ವಾಡಿಮ್ ಬಡೇಖಾ ಅವರ ಸಮ್ಮುಖದಲ್ಲಿ ಎಚ್‌ಎಎಲ್‌ನ ಪ್ರಭಾತ್ ರಂಜನ್ ಮತ್ತು ಯುಎಸಿ ಕಂಪನಿಯ ಒಲೆಗ್ ಬೊಗೊಮೊಲೊವ್ ಈ ಒಪ್ಪಂದಕ್ಕೆ ಸಹಿ ಹಾಕಿದರು.

ಈ ಒಪ್ಪಂದದ ಪ್ರಕಾರ ಎಚ್‌ಎಲ್, ದೇಶೀಯ ಗ್ರಾಹಕರಿಗಾಗಿ ಡಬ್ಬಲ್ ಎಂಜಿನ್ ಹೊಂದಿರುವ, ಸಣ್ಣ ಗಾತ್ರದ, ಎಸ್–ಜೆ 100(SJ-100) ವಿಮಾನವನ್ನು ತಯಾರಿಸಲಿದೆ. ಈಗಾಗಲೇ 200 ಕ್ಕೂ ಹೆಚ್ಚು ಎಸ್‌ಜೆ-100 ವಿಮಾನಗಳನ್ನು ತಯಾರಿಸಲಾಗಿದ್ದು, ವಿಶ್ವದ 16 ಕ್ಕೂ ಹೆಚ್ಚು ವಾಣಿಜ್ಯ ವಿಮಾನಯಾನ ಕಂಪನಿಗಳು ಇವುಗಳನ್ನು ಬಳಸುತ್ತಿವೆ.

‘ಎಸ್‌ಜೆ-100 ವಿಮಾನವು, ಭಾರತದಲ್ಲಿ ‘ಉಡಾನ್’ ಯೋಜನೆಯಡಿಯಲ್ಲಿ ಕಡಿಮೆ ದೂರ ಸಂಪರ್ಕದಲ್ಲಿ ಗೇಮ್ ಚೇಂಜರ್ ಆಗಲಿದೆ’ ಎಂದು ಎಚ್‌ಎಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

ಈ ವಿಮಾನವು ರಷ್ಯಾದ ಮಾರುಕಟ್ಟೆಯಲ್ಲಿ ಬೇಡಿಕೆಯಲ್ಲಿದ್ದು, ಅಲ್ಲಿನ ಒಂಬತ್ತು ವಿಮಾನಯಾನ ಸಂಸ್ಥೆಗಳು ಈ ಇವುಗಳನ್ನು ಬಳಕೆ ಮಾಡುತ್ತಿವೆ. ಇದು ಗರಿಷ್ಠ 103 ಆಸನಗಳ ಸಾಮರ್ಥ್ಯವನ್ನು ಹೊಂದಿದ್ದು, 3500 ಕಿ.ಮೀ.ಗಿಂತ ಹೆಚ್ಚಿನ ವ್ಯಾಪ್ತಿಯ ರೇಂಜ್ ಹೊಂದಿದೆ.

‘ಎಸ್‌ಜೆ-100 ವಿಮಾನಗಳ ತಯಾರಿಕೆಯು ಭಾರತೀಯ ವಾಯುಯಾನ ಉದ್ಯಮದ ಇತಿಹಾಸದಲ್ಲಿ ಹೊಸ ಅಧ್ಯಾಯದ ಆರಂಭದ ಸೂಚನೆಯಾಗಿದೆ. ಇದು ಖಾಸಗಿ ವಲಯವನ್ನು ಬಲಪಡಿಸುತ್ತದೆ. ಮಾತ್ರವಲ್ಲ, ವಾಯುಯಾನ ಉದ್ಯಮದಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಉದ್ಯೋಗಗಳನ್ನು ಸೃಷ್ಟಿಸುತ್ತದೆ’ ಎಂದು ಎಚ್‌ಎಎಲ್ ಹೇಳಿದೆ.

‘ದಿಲ್ಲಿ ಹಾಟ್’ ಮಾದರಿ ಸಿಕೆಪಿಯಲ್ಲಿ ‘ಚಿತ್ತಾರ’

ಒಂದೇ ಸೂರಿನಡಿ ದೇಶದ ವಿವಿಧ ಭಾಗಗಳ ಕಲಾಕೃತಿ, ಕರಕುಶಲ ವಸ್ತುಗಳ ಪ್ರದರ್ಶನ •70 ಸುಸಜ್ಜಿತ ಮಳಿಗೆಗಳ ನಿರ್ಮಾಣ

ಬ್ರ್ಯಾಂಡ್ ಬೆಂಗಳೂರು

• ವರುಣ ಹೆಗಡೆ

ಬೆಂಗಳೂರು: ನವದೆಹಲಿಯಲ್ಲಿ ಇರುವ ‘ದಿಲ್ಲಿ ಹಾಟ್’ ಮಾದರಿಯಲ್ಲಿಯೇ ದೇಶದ ವಿವಿಧ ಭಾಗಗಳ ಕಲಾಕೃತಿ ಹಾಗೂ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಕರ್ನಾಟಕ ಚಿತ್ರಕಲಾ ಪರಿಷತ್ತಿನ (ಸಿಕೆಪಿ) ಆವರಣದಲ್ಲಿ ‘ಚಿತ್ತಾರ’ ಮಳಿಗೆಗಳು ತಲೆಯೆತ್ತುತ್ತಿವೆ.

‘ದಿಲ್ಲಿ ಹಾಟ್’ ತೆರೆದ ಮಾರುಕಟ್ಟೆಯನ್ನು ಅಲ್ಲಿನ ಪ್ರವಾಸೋದ್ಯಮ ಇಲಾಖೆ ನಿರ್ವಹಣೆ ಮಾಡುತ್ತಿದೆ. ಅಲ್ಲಿ ದೇಶದ ವಿವಿಧ ಭಾಗಗಳ ಪ್ರಸಿದ್ಧ ಕಲಾಕೃತಿಗಳು ಹಾಗೂ ಕರಕುಶಲ ವಸ್ತುಗಳು ಲಭ್ಯ. ಸ್ಥಳೀಯ ಕುಶಲಕರ್ಮಿಗಳ ಜತೆಗೆ ಅನ್ಯ ರಾಜ್ಯಗಳ ಕುಶಲಕರ್ಮಿಗಳೂ ತಮ್ಮ ಕರಕುಶಲ ವಸ್ತುಗಳನ್ನು ಪ್ರಸ್ತುತಪಡಿಸಲು ಮತ್ತು ಮಾರಾಟ ಮಾಡಲು ಈ ಮಾರುಕಟ್ಟೆ ಸಹಕಾರಿಯಾಗಿದೆ. ಅದೇ ರೀತಿ, ಚಿತ್ರಕಲಾ ಪರಿಷತ್ತು ಸಹ ತನ್ನ ಆವರಣದಲ್ಲಿ ಕಲಾಕೃತಿಗಳು ಹಾಗೂ ಕರಕುಶಲ ವಸ್ತುಗಳ ಸಂಗಮಕ್ಕೆ ವೇದಿಕೆ ಕಲ್ಪಿಸುತ್ತಿದೆ.

ಈ ಸಂಬಂಧ 70 ಶಾಶ್ವತ ಮಳಿಗೆಗಳನ್ನು ನಿರ್ಮಿಸಲಾಗುತ್ತಿದ್ದು, ಮುಂದಿನ ಒಂದು ತಿಂಗಳ ಅವಧಿಯಲ್ಲಿ 40 ಮಳಿಗೆಗಳ ಕಾಮಗಾರಿ ಪೂರ್ಣಗೊಳ್ಳುವ ಸಾಧ್ಯತೆಯಿದೆ. ಇನ್ನುಳಿದ 30 ಮಳಿಗೆಗಳು ಜನವರಿ ವೇಳೆಗೆ ತಲೆಯೆತ್ತಲಿದ್ದು, ಇಲ್ಲಿಯೇ ದೇಶದ ಎಲ್ಲ ಭಾಗಗಳ ಕಲಾಕೃತಿ ಹಾಗೂ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ವರ್ಷದ ಎಲ್ಲ ದಿನಗಳು ನಡೆಯಲಿದೆ.

₹3.5 ಕೋಟಿ ವೆಚ್ಚ: ಈ ಮೊದಲು ಪರಿಷತ್ತಿನ ಆವರಣದಲ್ಲಿ ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ ವರ್ಷದ ಕೆಲ ದಿನಗಳು ನಡೆದರೂ, ಶಾಶ್ವತ ಮಳಿಗೆಗಳು ಇರದ ಕಾರಣ ಮಳೆ ಬಂದಲ್ಲಿ ಸಮಸ್ಯೆ ಎದುರಾಗುತ್ತಿತ್ತು. ಕಲಾಕೃತಿಗಳು ಹಾಗೂ ಕರಕುಶಲ ವಸ್ತುಗಳ ಸಂರಕ್ಷಣೆ, ದಾಸ್ತಾನು ಸಹ ಕಷ್ಟಸಾಧ್ಯವಾಗಿತ್ತು. ಆದ್ದರಿಂದ ಪರಿಷತ್ತು ಸುಮಾರು ₹3.5 ಕೋಟಿ ವೆಚ್ಚದಲ್ಲಿ ‘ಚಿತ್ತಾರ’ ತೆರೆದ ಮಾರುಕಟ್ಟೆಯನ್ನು ನಿರ್ಮಿಸುತ್ತಿದೆ. ಪ್ರತಿ ಮಳಿಗೆ ನಿರ್ಮಾಣಕ್ಕೂ ₹3 ಲಕ್ಷದಿಂದ ₹5 ಲಕ್ಷ ವೆಚ್ಚ ಮಾಡಲಾಗುತ್ತಿದೆ.

ಈ ಮಳಿಗೆಗಳ ನಿರ್ಮಾಣಕ್ಕೆ ಹಿಂದೆ ಬಿಬಿಎಂಪಿ ನೀಡಿದ್ದ ₹1 ಕೋಟಿಯನ್ನು ಪರಿಷತ್ತು ಬಳಸಿಕೊಳ್ಳುತ್ತಿದ್ದು, ಉಳಿದ ಹಣವನ್ನು ತನ್ನ ಸಂಪನ್ಮೂಲದಿಂದ ಭರಿಸುತ್ತಿದೆ. ಮಳಿಗೆಗಳು ನಿರ್ಮಿಸುತ್ತಿರುವ ಜಾಗದಲ್ಲಿ ಬೃಹತ್ ಕಲ್ಲಿನ ಬಂಡೆಗಳೂ ಇದ್ದು, ಅವುಗಳಿಗೆ ಹಾನಿಯಾಗದಂತೆ ಪ್ರಾಕೃತಿಕ ಸೌಂದರ್ಯ ಕಾಯ್ದುಕೊಳ್ಳಲಾಗಿದೆ. ಈ ಮಳಿಗೆಗಳು ಕಾರ್ಯಾರಂಭಿಸಿದ ಬಳಿಕ ವರ್ಷದ ಎಲ್ಲ ದಿನಗಳು ಕಲಾ ಪ್ರದರ್ಶನ ನಡೆಯಲಿದೆ. ಗುತ್ತಿಗೆ ಆಧಾರದಲ್ಲಿ ವಿವಿಧ ಸಂಸ್ಥೆಗಳಿಗೆ ಇಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಅವಕಾಶ ಕಲ್ಪಿಸಲು ಸಿಕೆಪಿ ಆಡಳಿತ ಮಂಡಳಿ ಚಿಂತಿಸಿದೆ.



ಮಳಿಗೆಗಳು ಶೀಘ್ರದಲ್ಲಿಯೇ ಕಾರ್ಯಾರಂಭ ಮಾಡಲಿವೆ. ಇವು ಕುಶಲಕರ್ಮಿಗಳಿಗೆ ಉತ್ತಮ ವೇದಿಕೆಯಾದರೆ, ನಗರದ ಜನರಿಗೆ ಒಂದೇ ಸೂರಿನಡಿ ದೇಶದ ವಿವಿಧ ಭಾಗಗಳ ಕರಕುಶಲ ವಸ್ತುಗಳು ದೊರೆಯಲಿವೆ

ಬಿ.ಎಲ್. ಶಂಕರ್, ಕರ್ನಾಟಕ ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ





ಕರ್ನಾಟಕ ಚಿತ್ರಕಲಾ ಪರಿಷತ್ತಿನಲ್ಲಿ ಮಳಿಗೆಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ಬಯಲು ರಂಗಮಂದಿರ ನವೀಕರಣ

ಚಿತ್ರಕಲಾ ಪರಿಷತ್ತಿನ ಆವರಣದಲ್ಲಿ ಬಯಲು ರಂಗಮಂದಿರವಿದ್ದು, ಈ ಹಿಂದೆ ಅಲ್ಲಿ ರಂಗ ಚಟುವಟಿಕೆಗಳು ನಡೆಯುತ್ತಿದ್ದವು. ನಿರ್ವಹಣೆ ಕೊರತೆ ಹಾಗೂ ತಾತ್ಕಾಲಿಕ ಮಳಿಗೆಗಳು ಅಲ್ಲಿ ತಲೆಯೆತ್ತಿದ್ದ ಕಾರಣ ಬಯಲು ರಂಗಮಂದಿರ ನಿರುಪಯುಕ್ತವಾಗಿತ್ತು. ಈಗ ಆ ರಂಗಮಂದಿರದ ನವೀಕರಣದ ಕಾಮಗಾರಿಯನ್ನೂ ಚಿತ್ರಕಲಾ ಪರಿಷತ್ತು ಕೈಗೆತ್ತಿಕೊಂಡಿದೆ. ಈ ನವೀಕರಣ ಕಾಮಗಾರಿ ಪೂರ್ಣಗೊಂಡ ಬಳಿಕ ಅಲ್ಲಿ ರಂಗ ಚಟುವಟಿಕೆ, ಸಂಗೀತ–ನೃತ್ಯದಂತಹ ಸಾಂಸ್ಕೃತಿಕ ಚಟುವಟಿಕೆಗಳಿಗೆ ನೀಡಲಾಗುತ್ತದೆ. ಇಲ್ಲಿ 200ರಿಂದ 300 ಮಂದಿ ಪ್ರೇಕ್ಷಕರಿಗೆ ಆಸನ ಸಾಧ್ಯ. ಈ ರಂಗ ಮಂದಿರದ ಸುತ್ತಲೂ ಶಾಶ್ವತ ಮಳಿಗೆಗಳು ತಲೆಯೆತ್ತುತ್ತಿರುವುದರಿಂದ, ಕರಕುಶಲ ವಸ್ತುಗಳ ಪ್ರದರ್ಶನದ ವೀಕ್ಷಣೆಗೆ ಬಂದವರು ಸಹ ಕಲಾ ಚಟುವಟಿಕೆಗಳನ್ನು ಕಣ್ತುಂಬಿಕೊಳ್ಳಲು ಸಾಧ್ಯವಾಗಲಿದೆ.

ಸಿಕೆಪಿ ಆವರಣದಲ್ಲಿರುವ ಬಯಲು ರಂಗಮಂದಿರದ ಬಳಿ ಗಾಂಧಿ ಕುಟೀರವಿದ್ದು, ಅದನ್ನು ನವೀಕರಣ ಮಾಡಲಾಗಿದೆ. ಇದನ್ನು ಬಾಡಿಗೆಗೆ ನೀಡಲು ಪರಿಷತ್ತು ನಿರ್ಧರಿಸಿದೆ. ಪುಸ್ತಕಗಳ ಬಿಡುಗಡೆ, ವಿಚಾರಸಂಕಿರಣದಂತಹ ಕಾರ್ಯಕ್ರಮಗಳಿಗೆ ನೀಡಲಾಗುತ್ತದೆ.

ವಿವಿಧ ಭಾಗಗಳ ಕಲಾವಿದರಿಗೆ ವೇದಿಕೆ

‘ಚಿತ್ತಾರ’ ಮಳಿಗೆಗಳು ದೇಶದ ವಿವಿಧ ಭಾಗಗಳ ಕಲಾವಿದರಿಗೆ ವೇದಿಕೆ ಕಲ್ಪಿಸಲಿದೆ. ವಿವಿಧ ರಾಜ್ಯಗಳ ಕಲಾವಿದರು ತಾವು ತಯಾರಿಸಿದ ಉತ್ಪನ್ನಗಳನ್ನು ತಂದು, ಮಧ್ಯವರ್ತಿಗಳ ಹಸ್ತಕ್ಷೇಪವಿಲ್ಲದೆ ನೇರವಾಗಿ ಗ್ರಾಹಕರಿಗೆ ಮಾರಾಟ ಮಾಡಲಿದ್ದಾರೆ. ಇದರಿಂದಾಗಿ ಗ್ರಾಹಕರಿಗೂ ಕೈಗೆಟುಕುವ ದರದಲ್ಲಿ ವಿವಿಧ ರಾಜ್ಯಗಳ ಕರಕುಶಲ ವಸ್ತುಗಳು ಲಭ್ಯವಾಗಲಿವೆ.

ಮಳಿಗೆಯಿಂದ ಸಿಕೆಪಿಗೆ ಆದಾಯ

ಕುಮಾರ ಕೃಪಾ ರಸ್ತೆಯಲ್ಲಿರುವ ಕರ್ನಾಟಕ ಚಿತ್ರಕಲಾ ಪರಿಷತ್ತು ಒಂದು ಕಲಾ ಸಂಕೀರ್ಣವಾಗಿದೆ. 60ರ ದಶಕದ ಮಧ್ಯಭಾಗದಿಂದ ದೃಶ್ಯ ಕಲೆಗಳ ಪ್ರಮುಖ ಕೇಂದ್ರವಾಗಿ ನಗರದಲ್ಲಿ ಕಾರ್ಯನಿರ್ವಹಿಸುತ್ತಿದೆ. ಎಂ.ಆರ್ಯ ಮೂರ್ತಿ ಅವರು ಇದರ ಸಂಸ್ಥಾಪನಾಧ್ಯಕ್ಷರಾದರೆ, ಪ್ರೊ.ಎಂ.ಎಸ್. ನಂಜುಂಡರಾವ್ ಅವರು ಸಂಸ್ಥಾಪನಾ ಕಾರ್ಯದರ್ಶಿಯಾಗಿದ್ದಾರೆ. ಪರಿಷತ್ತಿನ ಆಶ್ರಯದಲ್ಲಿ ಚಿತ್ರಕಲಾ ಮಹಾವಿದ್ಯಾಲಯವೂ ಕಾರ್ಯನಿರ್ವಹಿಸುತ್ತಿದೆ. ಸುಸಜ್ಜಿತ ಗ್ಯಾಲರಿಗಳು, ವಸ್ತು ಸಂಗ್ರಹಾಲಯವನ್ನು ಪರಿಷತ್ತು ಒಳಗೊಂಡಿದೆ. ಇದು ಪ್ರತಿ ವರ್ಷ ನಡೆಸುವ ಚಿತ್ರಸಂತೆ ದೇಶದ ಸಾವಿರಾರು ಕಲಾವಿದರ ಪ್ರತಿಭೆ ಅನಾವರಣಕ್ಕೆ ವೇದಿಕೆ ಕಲ್ಪಿಸುತ್ತಿದ್ದು, ಲಕ್ಷಾಂತರ ಮಂದಿ ಭೇಟಿ ನೀಡುತ್ತಿದ್ದಾರೆ. ಈ ಸಂತೆಯು ರಾಷ್ಟ್ರ ಮಟ್ಟದಲ್ಲಿ ಪ್ರಸಿದ್ಧಿ ಪಡೆದಿದೆ. ಈಗ ನಿರ್ಮಿಸುತ್ತಿರುವ ಶಾಶ್ವತ ಮಳಿಗೆಗಳಿಗೆ ಪರಿಷತ್ತು ಬಾಡಿಗೆ ನಿಗದಿಪಡಿಸಲಿದ್ದು, ಇದರಿಂದ ನಿಗದಿತ ಆದಾಯ ಬರಲಿದೆ. ಇದು ಪರಿಷತ್ತಿನ ನಿರ್ವಹಣೆಗೆ ಸಹಕಾರಿಯಾಗಲಿದೆ.

‘ಹೈಕಮಾಂಡ್ ತೀರ್ಮಾನವೇ ಅಂತಿಮ’

ಪೂರ್ವಭಾವಿ ಸಭೆಯಲ್ಲಿ ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ‘ಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು ಯಾರಾಗುತ್ತಾರೆ ಎನ್ನುವ ತೀರ್ಮಾನವನ್ನು ಹೈಕಮಾಂಡ್ ಕೈಗೊಳ್ಳಲಿದೆ. ಆದರೆ, 2028ರ ವಿಧಾನಸಭೆ ಚುನಾವಣೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸ್ಪರ್ಧೆ ಮಾಡುವುದು ಖಚಿತ’ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಹೇಳಿದರು.

ಕಾಂಗ್ರೆಸ್ ಪಕ್ಷದ ವತಿಯಿಂದ ಕೆ.ಆರ್.ಪುರದಲ್ಲಿ ಹಮ್ಮಿಕೊಂಡಿದ್ದ ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ)ಚುನಾವಣೆಗೆ ಸಂಬಂಧಿಸಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

‘ಒಂದು ವಾರದಿಂದಲೂ ರಾಜ್ಯ ರಾಜಕಾರಣದಲ್ಲಿ ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಅನೇಕ ಚರ್ಚೆಗಳು ನಡೆಯುತ್ತಿವೆ. ವಿರೋಧ ಪಕ್ಷದದವರು ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನಡುವೆ ರಾಜಕೀಯ ಸಂಬಂಧ ಹಳಸಿದೆ ಎಂದು ಇಲ್ಲಸಲ್ಲದ ಹೇಳಿಕೆ ನೀಡುತ್ತಿದ್ದಾರೆ. ಇಬ್ಬರ ನಡುವಿನ ಸಂಬಂಧ ಚೆನ್ನಾಗಿದ್ದು, ಈ ವಿಚಾರವಾಗಿ ಮುಖಂಡರು ಹಾಗೂ ಕಾರ್ಯಕರ್ತರು ತಲೆಕೆಡಿಸಿಕೊಳ್ಳಬೇಡಿ’ ಎಂದು ಹೇಳಿದರು.

‘ಸಿದ್ದರಾಮಯ್ಯ ಮುಂದೆ ಚುನಾವಣೆಗೆ ನಿಲ್ಲುವುದಿಲ್ಲ ಎಂದು ಹೇಳಿಕೊಂಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ಒಳಿತಾಗಬೇಕು ಎನ್ನುವ ದೃಷ್ಟಿಯಿಂದಾದರೂ ಅವರು ಚುನಾವಣೆ ಕಣದಿಂದ ಹಿಂದೆ ಸರಿಯಬಾರದು. ಸ್ಪರ್ಧೆ ಮಾಡುವಂತೆ ಮನವೊಲಿಸುತ್ತೇವೆ. ಅವರ ರಾಜಕೀಯ ಅನುಭವ ಮಾರ್ಗದರ್ಶನ ಪಕ್ಷಕ್ಕೆ ಬೇಕು’ ಎಂದು ಸುರೇಶ್ ಹೇಳಿದರು.

ಬೆಂಗಳೂರು ಪೂರ್ವ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಿ.ಕೆ. ಮೋಹನ್ ಬಾಬು ಮಾತನಾಡಿದರು. ವಿಧಾನಪರಿಷತ್ ಸದಸ್ಯ ಡಿ.ಟಿ. ಶ್ರೀನಿವಾಸ್, ಮಾಜಿ ಶಾಸಕಿ ಪೂರ್ಣಿಮಾ ಶ್ರೀನಿವಾಸ್, ವಿಧಾನಪರಿಷತ್ ಮಾಜಿ ಸದಸ್ಯ ಎಂ.ನಾರಾಯಣ ಸ್ವಾಮಿ, ಕಾಂಗ್ರೆಸ್ ಮುಖಂಡರಾದ ಡಿ.ಎ.ಗೋಪಾಲ್, ಕಲ್ಕೆರೆ ನಾರಾಯಣ ಸ್ವಾಮಿ, ಕಲ್ಕೆರೆ ಶ್ರೀನಿವಾಸ್, ಆಗರ ಪ್ರಕಾಶ್, ಡಿ.ಕೆ ದೇವೇಂದ್ರ, ಗಗನ್ ಯಾದವ್ ಇದ್ದರು.



ಕೆ.ಆರ್‌.ಪುರದಲ್ಲಿ ಜಿಬಿಎ ಪಾಲಿಕೆ ಚುನಾವಣೆ ಪೂರ್ವಭಾವಿ ಸಭೆಯಲ್ಲಿ ಬೈರತಿ ಸುರೇಶ್, ಡಿ.ಕೆ.ಮೋಹನ್ ಇದ್ದರು

ಸಿದ್ದರಾಮಯ್ಯ ಪೂರ್ಣಾವಧಿ ಮುಖ್ಯಮಂತ್ರಿ: ಮುನಿಯಪ್ಪ

ಪ್ರಜಾವಾಣಿ ವಾರ್ತೆ

ಕೋಲಾರ: ‘ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅವಧಿ ಪೂರ್ಣಗೊಳಿಸಲಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ನಾವು ತೀರ್ಮಾನ ಮಾಡುವುದಲ್ಲ. ಹೈಕಮಾಂಡ್ ತೀರ್ಮಾನವೇ ಅಂತಿಮ’ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದ್ದಾರೆ.



ಕೆ.ಎಚ್. ಮುನಿಯಪ್ಪ

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಹಾಗೂ ಸಚಿವರ ಬದಲಾವಣೆ ಬಗ್ಗೆ ಮಾತನಾಡುವುದು ಅಪ್ರಸ್ತುತ. ಪಕ್ಷದ ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ’ ಎಂದರು.

ಮುಖ್ಯಮಂತ್ರಿ ಬದಲಾವಣೆ ವಿಚಾರ ಮುನ್ನೆಲೆಗೆ ಬಂದಾಗ ಸಚಿವ ಸತೀಶ್ ಜಾರಕಿಹೊಳಿ ಹೆಸರೂ ಕೇಳಿಬರುತ್ತದೆ ಎಂಬ ಪ್ರಶ್ನೆಗೆ, ‘ಅವರು ಕೂಡ ಪಕ್ಷದ ನಿಷ್ಠಾವಂತ ಮುಖಂಡ. ಅವರು ಸಹ ಎಲ್ಲಾ ರೀತಿಯಲ್ಲೂ ಅರ್ಹರಿದ್ದಾರೆ. ಚಿತ್ರದುರ್ಗದಲ್ಲಿ ಎಲ್ಲಾ ಸಮುದಾಯದವರನ್ನು ಸೇರಿಸಿ ಕಾರ್ಯಕ್ರಮ ರೂಪಿಸಿದ್ದರು’ ಎಂದರು.

‘ಕೆ.ಎಚ್. ಮುನಿಯಪ್ಪ ಮುಖ್ಯಮಂತ್ರಿ ಆದರೆ ಸಂತೋಷ’ ಎಂಬ ಗೃಹ ಸಚಿವ ಜಿ.ಪರಮೇಶ್ವರ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ನಾನು ಮುಖ್ಯಮಂತ್ರಿ ಆಗಲು ಸಿದ್ಧ ಎಂದು ಹೇಳಲು ಅವಕಾಶವಿಲ್ಲ. ನನಗೆ ಮುಖ್ಯಮಂತ್ರಿ ಆಗುವ ಆಸೆಯೂ ಇಲ್ಲ’ ಎಂದರು.

ಪರಮೇಶ್ವರ ಅತ್ಯಂತ ಹಿರಿಯ ನಾಯಕ. ಎಂಟು ವರ್ಷ ಕೆಪಿಸಿಸಿ ಅಧ್ಯಕ್ಷರಾಗಿ ಅತ್ಯುತ್ತಮ ಆಡಳಿತ ನೀಡಿದವರು. ಈಗಲೂ ಅವರು ಸಚಿವರಾಗಿಯೇ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ರಾಜ್ಯ ಆರ್ಯವೈಶ್ಯ ಅಭಿವೃದ್ಧಿ ಮಂಡಳಿ ಅಧ್ಯಕ್ಷ ರಾಮಪ್ರಸಾದ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಲಕ್ಷ್ಮಿನಾರಾಯಣ, ಕಾರ್ಯಾಧ್ಯಕ್ಷ ಊರುಬಾಗಿಲು ಶ್ರೀನಿವಾಸ್, ಮುಖಂಡರಾದ ಕೆ.ಜಯದೇವ್, ಯಲ್ಲಪ್ಪ, ಪ್ರಸಾದ್ ಬಾಬು, ನವೀನ್ ಗೌಡ ಇದ್ದರು.

ಸಂಕ್ಷಿಪ್ತ ಸುದ್ದಿ

‘ಮೌಲ್ಯವರ್ಧಿತ ಉತ್ಪನ್ನಗಳಿಂದ ಹೆಚ್ಚು ಆದಾಯ’

ಬೆಂಗಳೂರು: ರೈತರು ತಮ್ಮ ಬೆಳೆಯನ್ನು ಸಂಸ್ಕರಿಸಿ, ಮೌಲ್ಯವರ್ಧನೆ ಮಾಡಿ ನೇರವಾಗಿ ಮಾರಾಟ ಮಾಡಿದರೆ ಹೆಚ್ಚು ಆದಾಯ ಗಳಿಸಬಹುದು ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ ಹೇಳಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ರೈತ ತರಬೇತಿ ಸಂಸ್ಥೆ, ಧಾರವಾಡದ ವಿಸ್ತರಣಾ ನಿರ್ದೇಶನಾಲಯ ಮತ್ತು ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರ ಸಹಯೋಗದಲ್ಲಿ ಆಯೋಜಿಸಿದ್ದ ‘ರೈತರ ಸಬಲೀಕರಣಕ್ಕಾಗಿ ನೇರ ಮಾರುಕಟ್ಟೆ ಒಂದು ಸಾಧನ ಕೌಶಲಾಭಿವೃದ್ಧಿ’ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ರೈತರು ಗ್ರಾಹಕರ ಬೇಡಿಕೆಗೆ ತಕ್ಕಂತೆ ಮೌಲ್ಯವರ್ಧಿತ ಉತ್ಪನ್ನಗಳನ್ನು ಪೂರೈಸಬೇಕು. ಮಾರಾಟದಲ್ಲಿ ನಾವಿನ್ಯತೆ ಇದ್ದರೆ, ಗ್ರಾಹಕರೇ ಹುಡುಕಿಕೊಂಡು ಬರುತ್ತಾರೆ. ಎಲ್ಲ ರೈತರು ಈ ತರಬೇತಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಬಹುಶಾಸ್ತ್ರೀಯ ವಿಕಾಸ ಸಂಶೋಧನಾ ಕೇಂದ್ರದ ನಿರ್ದೇಶಕ ಬಸವಪ್ರಭು ಜಿರ್ಲಿ ಮಾತನಾಡಿ, ‘ನಮ್ಮ ಕೇಂದ್ರದ ಮೂಲಕ ರೈತರಿಗೆ ವಿವಿಧ ಸೌಲಭ್ಯಗಳ ಕುರಿತು ಮಾಹಿತಿ ನೀಡಲಾಗುತ್ತಿದೆ. ರೈತರಿಗೆ ಮಾರುಕಟ್ಟೆ ಜ್ಞಾನದ ಅವಶ್ಯಕತೆ ಹೆಚ್ಚಿದೆ. ರೈತರು ತಮ್ಮ ಉತ್ಪನ್ನಗಳಿಗೆ ತಾವೇ ಬೆಲೆ ನಿಗದಿಪಡಿಸುವ ಮೂಲಕ ನೇರವಾಗಿ ಮಾರಾಟ ಮಾಡುವುದರಿಂದ ಹೆಚ್ಚು ಆದಾಯ ಗಳಿಸಲು ಸಾಧ್ಯ’ ಎಂದರು.

ಸಹ ವಿಸ್ತರಣಾ ನಿರ್ದೇಶಕ ಕೆ.ಪಿ. ರಘುಪ್ರಸಾದ್, ರೈತ ತರಬೇತಿ ಸಂಸ್ಥೆ ಮುಖ್ಯಸ್ಥ ಸಿ. ನಾರಾಯಣ ಸ್ವಾಮಿ, ಪ್ರಾಧ್ಯಾಪಕರಾದ ಲತಾ ಕುಲಕರ್ಣಿ, ಮಧುಶ್ರೀ ಎ. ಉಪಸ್ಥಿತರಿದ್ದರು.

ರಮೇಶ್ ಅಧಿಕಾರ ಸ್ವೀಕಾರ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ (ಬಿಸಿಯು) ಮೌಲ್ಯಮಾಪನ ಕುಲಸಚಿವರಾಗಿ ಬಿಸಿಯು ಗಣಿತ ವಿಭಾಗದ ಪ್ರಾಧ್ಯಾಪಕ ಬಿ. ರಮೇಶ್ ಕುಡೇನಟ್ಟಿ ಮಂಗಳವಾರ ಅಧಿಕಾರ ವಹಿಸಿಕೊಂಡರು.

ಕುಲಪತಿ ಬಿ. ರಮೇಶ್ ಅವರ ಸಮ್ಮುಖದಲ್ಲಿ ಪ್ರಭಾರ ಮೌಲ್ಯಮಾಪನ ಕುಲಸಚಿವರಾಗಿದ್ದ ಕೆ.ಆರ್. ಜಲಜಾ ಅವರು ರಮೇಶ್ ಬಿ. ಕುಡೇನಟ್ಟಿ ಅವರಿಗೆ ಅಧಿಕಾರ ಹಸ್ತಾಂತರಿಸಿದರು ಎಂದು ಪ್ರಕಟಣೆ ತಿಳಿಸಿದೆ.

ಇಸ್ರೇಲ್–ಹಮಾಸ್ ಮಧ್ಯೆ ಮತ್ತೆ ಸಂಘರ್ಷ

ಟೆಲ್ ಅವೀವ್ (ಎಪಿ): ಗಾಜಾ ಮೇಲೆ ಕೂಡಲೇ ‘ಪ್ರಬಲವಾದ ದಾಳಿ’ ನಡೆಸಲು ಸೇನೆಗೆ ಆದೇಶ ನೀಡಿರುವುದಾಗಿ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಮಂಗಳವಾರ ಹೇಳಿದ್ದಾರೆ.



ಬೆಂಜಮಿನ್ ನೆತನ್ಯಾಹು

ಇದಕ್ಕೆ ಪ್ರತಿಕ್ರಿಯಿಸಿರುವ ಹಮಾಸ್, ಒತ್ತೆಯಾಳುಗಳ ಮೃತದೇಹ ಹಸ್ತಾಂತರ ಪ್ರಕ್ರಿಯೆಯನ್ನು ವಿಳಂಬ ಮಾಡುವುದಾಗಿ ಹೇಳಿದೆ.

ಈ ಹಠಾತ್ ಬೆಳವಣಿಗೆಯು ಅಮೆರಿಕ ಮಧ್ಯಸ್ಥಿಕೆಯಲ್ಲಿ ನಡೆದಿದ್ದ ಇಸ್ರೇಲ್–ಹಮಾಸ್ ಕದನ ವಿರಾಮ ಒಪ್ಪಂದ ಮುರಿಯಲು ಕಾರಣವಾಗುವ ಸಾಧ್ಯತೆ ಇದೆ. ಗಾಜಾ ನಗರ ಮತ್ತು ದೀರ್ ಅಲ್–ಬಲಾಹ್ ಸೇರಿದಂತೆ ಗಾಜಾದ ಹಲವೆಡೆ ಟ್ಯಾಂಕರ್ ದಾಳಿ ಮತ್ತು ಸ್ಫೋಟದ ಸದ್ದು ಕೇಳಿಬಂದಿದೆ.

ಹಮಾಸ್ ಬಂಡುಕೋರರು ದಕ್ಷಿಣ ಗಾಜಾದಲ್ಲಿ ಇಸ್ರೇಲ್ ಸೇನಾಪಡೆಗಳ ಮೇಲೆ ದಾಳಿ ನಡೆಸಿದ್ದಾಗಿ ಇಸ್ರೇಲ್ ಅಧಿಕಾರಿಗಳು ಹೇಳಿದ ಬೆನ್ನಲ್ಲೇ ನೆತನ್ಯಾಹು ಅವರು ಈ ಆದೇಶ ನೀಡಿದ್ದಾರೆ.

ಪ್ರಾಣಿಗಳ ತಾಣದಲ್ಲಿ ವಿದ್ಯುತ್ ಸ್ವಾವಲಂಬಿ ಯೋಜನೆ ಜಾರಿಗೆ ಸಿದ್ಧತೆ

ಬನ್ನೇರುಘಟ್ಟ ಉದ್ಯಾನದಲ್ಲಿ ಸೌರ ಪಾರ್ಕ್

• ಉಮೇಶಭಟ್ಟ ಪಿ.ಎಚ್.

ಬೆಂಗಳೂರು: ರಾಜಧಾನಿಯ ಹೊರವಲಯದಲ್ಲಿರುವ ಬನ್ನೇರುಘಟ್ಟ ಜೈವಿಕ ಉದ್ಯಾನವು ವಿದ್ಯುತ್ ಸ್ವಾವಲಂಬಿಯಾಗುವ ನಿಟ್ಟಿನಲ್ಲಿ ಸೌರ ವಿದ್ಯುತ್ ಸ್ಥಾವರ ಸ್ಥಾಪಿಸಲು ಮುಂದಾಗಿದೆ.

ಸೌರ ವಿದ್ಯುತ್ ಒದಗಿಸುವ ವಾಹನ ಮತ್ತು ಉಪಕರಣಗಳನ್ನು ಮೃಗಾಲಯಗಳಲ್ಲಿ ಬಳಸುತ್ತಿದ್ದರೂ ಹೆಚ್ಚಿನ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದಿಸುವ ಘಟಕ ಇರಲಿಲ್ಲ. ಇದಕ್ಕಾಗಿ ಯೋಜನೆ ರೂಪಿಸಲಾಗಿದ್ದು, ಮುಂದಿನ ವಾರ ಸೌರ ವಿದ್ಯುತ್ ಘಟಕಕ್ಕೆ ಚಾಲನೆ ಸಿಗಲಿದೆ. ಐದಾರು ತಿಂಗಳಲ್ಲಿ ಸುಸಜ್ಜಿತ ವಿದ್ಯುತ್ ಘಟಕ ಸೇವೆಗೆ ಅಣಿಯಾಗಲಿದೆ. ಬಳಕೆ ಪ್ರಮಾಣ ನೋಡಿಕೊಂಡು ಘಟಕದ ಸಾಮರ್ಥ್ಯ ಹೆಚ್ಚಿಸಲು ಬನ್ನೇರುಘಟ್ಟ ಜೈವಿಕ ಉದ್ಯಾನದ ಆಡಳಿತ ಮಂಡಳಿ ನಿರ್ಧರಿಸಿದೆ.

ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಬಳಸಿಕೊಂಡು ಈ ಯೋಜನೆಯನ್ನು ಜಾರಿ ಮಾಡಲಾಗುತ್ತಿದೆ. ಇದರ ಅನುಷ್ಠಾನದ ಜವಾಬ್ದಾರಿಯನ್ನು ಐಸಿಐಸಿಐ ಫೌಂಡೇಷನ್ ಹೊತ್ತುಕೊಂಡಿದೆ. ಉದ್ಯಾನದ ಒಳಗೆ ಮೂರು ಎಕರೆ ವಿಶಾಲ ಪ್ರದೇಶದಲ್ಲಿ ವಿದ್ಯುತ್ ಉತ್ಪಾದನೆ ಘಟಕವನ್ನು ಆರಂಭಿಸಲಾಗುತ್ತಿದೆ.

ಬನ್ನೇರುಘಟ್ಟ ಜೈವಿಕ ಉದ್ಯಾನವೇ ವಿದ್ಯುತ್ ವಿತರಣೆಗೆ ಬೇಕಾದ ಗ್ರಿಡ್ ಅನ್ನು ನಿರ್ಮಿಸಿಕೊಳ್ಳಲಿದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ವಿದ್ಯುತ್ ಬಳಕೆ, ಹೆಚ್ಚುವರಿ ವಿದ್ಯುತ್ ಸರಬರಾಜಿಗೆ ಬೇಕಾದ ಅನುಮತಿ ಪಡೆಯುವ ಹೊಣೆ ಹೊತ್ತುಕೊಳ್ಳಲಿದೆ.

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದ ಅವಿಭಾಜ್ಯ ಅಂಗವಾಗಿರುವ ಜೈವಿಕ ಉದ್ಯಾನವು 2002ರಿಂದ ಸ್ವತಂತ್ರವಾಗಿ ಕಾರ್ಯನಿರ್ವಹಿಸುತ್ತಿದೆ. ಪ್ರಮುಖ ಪ್ರವಾಸಿ ಕೇಂದ್ರವಾಗಿರುವ ಬನ್ನೇರುಘಟ್ಟ ಜೈವಿಕ ಉದ್ಯಾನವು 780 ಹೆಕ್ಟೇರ್ ಪ್ರದೇಶದಲ್ಲಿ ಹರಡಿಕೊಂಡಿದೆ.

ಉದ್ಯಾನಗಳ ನಿರ್ವಹಣೆ ಸಹಿತ ಹಲವು ಉದ್ದೇಶಗಳಿಗೆ ವಿದ್ಯುತ್ ಬಳಸಲಾಗುತ್ತಿದೆ. ಪ್ರತಿವರ್ಷ ವಿದ್ಯುತ್ ನಿರ್ವಹಣೆಗೆ ₹40 ಲಕ್ಷ ವೆಚ್ಚ ಮಾಡಲಾಗುತ್ತಿದೆ. ಬೆಸ್ಕಾಂನಿಂದಲೇ ವಿದ್ಯುತ್ ಅನ್ನು ಪಡೆದುಕೊಳ್ಳಲಾಗುತ್ತಿದೆ. ತುರ್ತು ಬಳಕೆಗೆ ಜನರೇಟರ್ ವ್ಯವಸ್ಥೆಯಿದೆ.

ಸೌರ ವಿದ್ಯುತ್ ಘಟಕ ಸ್ಥಾಪನೆಯಾದರೆ ವಿದ್ಯುತ್ ವೆಚ್ಚ ಉಳಿತಾಯವಾಗಲಿದೆ. ಅಲ್ಲದೇ ಹೆಚ್ಚುವರಿ ವಿದ್ಯುತ್ ಅನ್ನು ಮಾರಾಟ ಮಾಡಿ ಅದರಲ್ಲೂ ಆದಾಯ ಪಡೆಯುವ ಉದ್ದೇಶ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

‘ದೇಶದ ಯಾವುದೇ ಜೈವಿಕ ಉದ್ಯಾನ, ಮೃಗಾಲಯದಲ್ಲೂ ಇಷ್ಟು ದೊಡ್ಡ ಪ್ರಮಾಣದಲ್ಲಿ ಸೌರ ವಿದ್ಯುತ್ ಉತ್ಪಾದನೆ ಮಾಡುವ ಘಟಕವಿಲ್ಲ. ಅಗತ್ಯ ನೋಡಿಕೊಂಡು ಯೋಜನೆ ವಿಸ್ತರಿಸಲಾಗುವುದು’ ಎಂದು ಬನ್ನೇರುಘಟ್ಟ ಜೈವಿಕ ಉದ್ಯಾನದ ಕಾರ್ಯನಿರ್ವಾಹಕ ನಿರ್ದೇಶಕ ಎ.ವಿ. ಸೂರ್ಯಸೇನ್ ತಿಳಿಸಿದರು.

ಮುಖ್ಯಾಂಶಗಳು

- ಯೋಜನೆಯ ಮೊತ್ತ ₹3.50 ಕೋಟಿ
- ವಿದ್ಯುತ್ ಉತ್ಪಾದನೆ ಪ್ರಮಾಣ 1 ಮೆಗಾವಾಟ್
- ಉಳಿತಾಯ ಆಗುವ ಹಣ ₹40 ಲಕ್ಷ



ಬನ್ನೇರುಘಟ್ಟ ಜೈವಿಕ ಉದ್ಯಾನದ ಭವಿಷ್ಯದ ಇಂಧನ ಅಗತ್ಯವನ್ನು ಸೌರ ವಿದ್ಯುತ್‌ನಿಂದಲೇ ಪೂರೈಸುವ ಯೋಜನೆಗೆ ಮುಂದಿನ ವಾರ ಚಾಲನೆ ನೀಡಲಾಗುವುದು

ಈಶ್ವರ ಬಿ. ಖಂಡ್ರೆ, ಅರಣ್ಯ ಸಚಿವ

‘ಮೆಗಾವಾಟ್’ನ ಮೊದಲ ಕೇಂದ್ರ



ಬನ್ನೇರುಘಟ್ಟ ಜೈವಿಕ ಉದ್ಯಾನ(ಸಾಂದರ್ಭಿಕ ಚಿತ್ರ)

ಚೆನ್ನೈನ ವ್ಯಾಂಡಲೂರ್ ಮೃಗಾಲಯದಲ್ಲಿ ಸೌರ ವಿದ್ಯುತ್ ಉತ್ಪಾದನೆ ಘಟಕ ವಿದ್ದರೂ ಅಲ್ಲಿ ಬರೀ 100 ಕಿಲೋ ವಾಟ್ ವಿದ್ಯುತ್ ಮಾತ್ರ ಉತ್ಪಾದಿಸಲಾಗುತ್ತಿದೆ. ಅದನ್ನು ಬಿಟ್ಟರೆ ಭಾರತದಲ್ಲಿರುವ ಪ್ರಮುಖ ಮೃಗಾಲಯ ಹಾಗೂ ಜೈವಿಕ ಉದ್ಯಾನಗಳಲ್ಲಿ 1 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದಿಸುವ ಮೊದಲ ಕೇಂದ್ರವೆಂಬ ಹೆಗ್ಗಳಿಕೆಗೆ ಬನ್ನೇರುಘಟ್ಟ ಉದ್ಯಾನ ಪಾತ್ರವಾಗಲಿದೆ.

ಧರ್ಮ ಮೀರಿ ಸತಿಪತಿಗಳಾದ ಅಂಧ ಜೋಡಿ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಎಲ್ಲರಂತೆ ವೈವಾಹಿಕ ಬದುಕು ನಡೆಸಬೇಕು ಎಂದುಕೊಂಡ ಅವರಿಬ್ಬರೂ ಅಂಧರು. ಅವರಿಗೆ ಕಂಕಣ ಭಾಗ್ಯ ಕೂಡಿ ಬಂದಿತು. ಧರ್ಮದ ಎಲ್ಲೆ ಮೀರಿ ಆ ಇಬ್ಬರೂ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಹೊಸ ಬದುಕಿಗೆ ಪ್ರವೇಶಿಸಿದರು.

ನಗರದ ಲಗ್ಗೆರೆಯ ಮಂಜುಶ್ರೀ ಕಲ್ಯಾಣ ಮಂಟಪದಲ್ಲಿ ಅರ್ಪಿತಾ ಸೇವಾ ಟ್ರಸ್ಟ್ ಅಂಧರು, ಅಂಗವಿಕಲರು, ಅಂತರ್ಜಾತಿ, ಅನ್ಯ ಧರ್ಮದವರಿಗೆ ಈಚೆಗೆ ಹಮ್ಮಿಕೊಂಡಿದ್ದ ಉಚಿತ ಸಾಮೂಹಿಕ ವಿವಾಹ ಮಹೋತ್ಸವದಲ್ಲಿ ಹಲವು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

ಸಾಮೂಹಿಕ ವಿವಾಹದಲ್ಲಿ ತಂದೆ, ತಾಯಿ, ಬಂಧು ಬಳಗವಿಲ್ಲದ 30 ವರ್ಷದ ಪ್ರಭಾವತಿ ಅವರನ್ನು ಗಂಗಾವತಿ ತಾಲ್ಲೂಕಿನ ಇಮಾಮ್ ಸಾಬ್ ಅವರು ಕೈಹಿಡಿದು ಹಿಂದೂ ಸಂಪ್ರದಾಯದಂತೆ ತಾಳಿ ಕಟ್ಟಿ ದಾಂಪತ್ಯ ಜೀವನಕ್ಕೆ ಕಾಲಿಟ್ಟರು.

‘ಮದುವೆಯಾಗಲು ಪರಸ್ಪರ ಒಪ್ಪಿಕೊಂಡೆವು. ನಮಗೆ ಜಾತಿ, ಧರ್ಮ ಅಡ್ಡಬರಲಿಲ್ಲ. ಅನಾಥೆಗೆ ಬಾಳುಕೊಡುತ್ತಿದ್ದೇನೆ ಎಂಬ ತೃಪ್ತಿ ನನಗಿದೆ. ನಾವೆಲ್ಲರೂ ಈ ಮಣ್ಣಿನ ಮಕ್ಕಳು ಎಂಬ ಮಾನವೀಯ ಭಾವನೆಯಿಂದ ನಮ್ಮಂಥವರೂ ಬದುಕುವ ವಾತಾವರಣ ನಿರ್ಮಾಣವಾಗಬೇಕು’ ಎಂದು ಇಮಾಮ್‌ಸಾಬ್ ಸಂತಸ ಹಂಚಿಕೊಂಡರು.

ಚಿತ್ರದುರ್ಗದ ಮಾದಾರ ಚೆನ್ನಯ್ಯ ಗುರು ಪೀಠದ ಬಸವಮೂರ್ತಿ ಮಾದಾರ ಚೆನ್ನಯ್ಯ ಸ್ವಾಮೀಜಿ ಮಾತನಾಡಿ,‘ವೈವಾಹಿಕ ಜೀವನ ಎಂಬುದು ಜೀವನದ ಬಹುದೊಡ್ಡ ಭಾಗ. ಎಂತಹ ಸಮಸ್ಯೆ ಬಂದರೂ ಪ್ರೀತಿ, ವಿಶ್ವಾಸದಿಂದ ಅರ್ಥ ಮಾಡಿಕೊಂಡು ಬದುಕುವರೆ ನಿಜವಾದ ಶ್ರೀಮಂತರು’ ಎಂದರು.


ಲಗ್ಗೆರೆಯ ಅರ್ಪಿತಾ ಸೇವಾ ಟ್ರಸ್ಟ್‌ನ ನಾರಾಯಣಸ್ವಾಮಿ, ‘ಇಲ್ಲಿಯವರೆಗೂ 100ಕ್ಕೂ ಹೆಚ್ಚು ಅಂಗವಿಕಲರಿಗೆ ಉಚಿತ ಮದುವೆ ನೆರವೇರಿಸಿ, ಅವರ ಆರೋಗ್ಯವಂತ ಮಕ್ಕಳಿಗೆ ಶಿಕ್ಷಣಕ್ಕೆ ಬೇಕಾಗುವ ಆರ್ಥಿಕ ನೆರವು, ಪ್ರೋತ್ಸಾಹ ನೀಡಲಾಗಿದೆ’ ಎಂದರು.


ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ತಾಳಿ ವಿತರಿಸಿದರು. ಅಥಣಿ ಶಿವಯೋಗಿ ಮಠದ ಶಿವ ಬಸವ ಸ್ವಾಮಿ, ಕೊರಟಗೆರೆ ಅನ್ನಪೂರ್ಣೇಶ್ವರಿ ಮಠದ ಮಹಾಲಿಂಗಸ್ವಾಮಿ, ಪಾಲಿಕೆ ಮಾಜಿ ಸದಸ್ಯರಾದ ಸಿದ್ದೇಗೌಡ, ವೇಲುನಾಯ್ಕರ್, ಮಂಜುಳಾ ನಾರಾಯಣಸ್ವಾಮಿ, ಬಿ.ಆರ್. ನಂಜುಂಡಪ್ಪ, ಜಿ.ಮೋಹನ್‌ಕುಮಾರ್, ದಾಸರಹಳ್ಳಿ ನಗರಸಭೆ ಮಾಜಿ ಅಧ್ಯಕ್ಷ ಅಂದಾನಪ್ಪ ಹಾಜರಿದ್ದರು.



ಲಗ್ಗೆರೆಯಲ್ಲಿ ಹಮ್ಮಿಕೊಂಡಿದ್ದ ಸಾಮೂಹಿಕ ವಿವಾಹ ಕಾರ್ಯಕ್ರಮದಲ್ಲಿ ಒಂದಾದ ಜೋಡಿಗಳು.

ಇರುವೆಗಳಲ್ಲಿ ಇರುವ ಸಹಕಾರದ ಸಿಹಿ





ಚಿತ್ರ: ತಡೆಗಳನ್ನೊಳಗೊಂಡ ಟಿ-ಕೋಣೆಗಳು

• ಎಸ್.ಎನ್.ಹೆಗಡೆ

ವಿಜ್ಞಾನಿಗಳು ಕೆಲವೊಮ್ಮೆ ಕೆಲವು ವಿಶಿಷ್ಟವಾದ ಹಾಗೂ ವಿಚಿತ್ರವಾದ ಪ್ರಯೋಗಗಳನ್ನು ನಡೆಸುತ್ತಾರೆ. ಇತ್ತೀಚೆಗೆ ಅಮೆರಿಕದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಜೀವವಿಜ್ಞಾನ ವಿಭಾಗದ ಸಂಶೋಧಕರು ವಿಚಿತ್ರ ಪ್ರಯೋಗವೊಂದನ್ನು ನಡೆಸಿ, ಇರುವೆಗಳು ಸಹಕಾರ ಜೀವನದ ಮೂಲಕ ಹೆಚ್ಚು ಶ್ರಮವಾದ, ಜಟಿಲವಾದ ಕೆಲಸಗಳನ್ನು, ಮಾನವರಿಗಿಂತ ಹೆಚ್ಚು ಸಮರ್ಥವಾಗಿ, ಯುಕ್ತಿಯಿಂದ ಮಾಡುತ್ತವೆ ಎಂದು ಕಂಡುಹಿಡಿದಿದ್ದಾರೆ. ಅಮೆರಿಕದ ಪ್ರಸಿದ್ಧ ವಿಜ್ಞಾನದ ಪತ್ರಕರ್ತ ಮತ್ತು ಲೇಖಕ, ಕ್ರಿಸ್ಟಿ ವಿಲ್ಕಾಕ್ಸ್ ಈ ತಂಡದ ಕಾರ್ಯವನ್ನು ತನ್ನ ಲೇಖನವೊಂದರಲ್ಲಿ ಶ್ಲಾಘಿಸಿದ್ದಾರೆ.

'ಒಂಟಿಯಾಗಿ ಮಾಡಲು ಸಾಧ್ಯವಾಗದ ಅನೇಕ ದೊಡ್ಡ ಕೆಲಸಗಳನ್ನು ಹಲವರು ಕೂಡಿ ಒಗ್ಗಟ್ಟಿನಿಂದ ಸುಲಭವಾಗಿ ಮಾಡಿ ಮುಗಿಸಬಹುದು. ಗುಂಪಿನಲ್ಲಿದ್ದಾಗ ನಾವು ಮಾತಿನ ಮೂಲಕ ಪರಸ್ಪರ ಚರ್ಚಿಸಿ ಅಸಾಧ್ಯವಾದ ಕೆಲಸವನ್ನು ಸಾಧಿಸುತ್ತೇವೆ. ಕೆಲಸವನ್ನು ಮಾಡುವಾಗ ಎದುರಾಗುವ ಅಡಚಣೆಗಳನ್ನು ಮಾತುಕತೆ ಅಥವಾ ಸನ್ನೆಗಳ ಮುಖಾಂತರ ಪರಿಹರಿಸಿಕೊಂಡು ಆ ಕಾರ್ಯವನ್ನು ನಿರ್ವಹಿಸುತ್ತೇವೆ. ಮಾನವನಂತೆಯೇ ಸಹಕಾರ ಜೀವನವನ್ನು ನಡೆಸುವ, ಆದರೆ ಮಾತನಾಡಲಾರದ ಮೂಕ ಇರುವೆಗಳು ಗುಂಪಾಗಿ ಒಗ್ಗಟ್ಟಿನಿಂದ ಅಷ್ಟೇ ಸಮರ್ಥವಾಗಿ ಅಸಾಧ್ಯವಾದ ಕೆಲಸಗಳನ್ನು ಸಾಧ್ಯವಾಗಿಸುತ್ತವೆ' ಎಂದು ಕಂಡುಹಿಡಿದಿರುವುದಾಗಿ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ತಂಡವು ಕಳೆದ ಫೆಬ್ರುವರಿಯಲ್ಲಿ ಅಮೆರಿಕದ 'ರಾಷ್ಟ್ರೀಯ ವಿಜ್ಞಾನ ಅಕಾಡೆಮಿಯ ನಡವಳಿಕೆಗಳು' ಎಂಬ ವೈಜ್ಞಾನಿಕ ನಿಯತಕಾಲಿಕೆಯಲ್ಲಿ ಪ್ರಕಟ ಮಾಡಿದೆ.

ಪ್ಯಾರಾಟ್ರೆಚಿನಾ ಲಾಂಗಿಕಾರ್ನಿಸ್ ಎಂಬ ಪ್ರಭೇದದ ಇರುವೆಗಳು ಮತ್ತು ಮಾನವರನ್ನು ಅಧ್ಯಯನಕ್ಕೊಳಪಡಿಸಿ ಈ ಎರಡು ಪ್ರಭೇದಗಳ ಗುಂಪುಕಾರ್ಯ ಸಾಮರ್ಥ್ಯವನ್ನು ಹೋಲಿಕೆ ಮಾಡಲಾಗಿದೆ. ಈ ಅಧ್ಯಯನದಲ್ಲಿ, ಮಾನವ ಮತ್ತು ಇರುವೆಗಳು ಗುಂಪಿನಲ್ಲಿ ಕೆಲಸ ಮಾಡುವಾಗ ಅಡ್ಡಬಂದ ತಡೆಗಳನ್ನು ಪರಿಹರಿಸಿಕೊಳ್ಳುವ ಸಾಮರ್ಥ್ಯವನ್ನು ಪರೀಕ್ಷಿಸಲಾಗಿದೆ. ಮಾನವನು ಮಾತು ಮತ್ತು ಸಂಜ್ಞೆಗಳ ಮೂಲಕ ಪರಸ್ಪರ ಸಂವೇದನೆ ನಡೆಸಿ ಅಡೆತಡೆಗಳನ್ನು ನಿವಾರಿಸಿಕೊಳ್ಳಬಲ್ಲ ಎಂಬುದು ನಾವೆಲ್ಲ ಬಲ್ಲ ವಿಚಾರ. ಒಂದು ವೇಳೆ ಮಾನವನಿಗೆ ಮಾತಾಡುವ ಸಾಮರ್ಥ್ಯ ಇಲ್ಲದಿದ್ದರೆ ಇಷ್ಟೇ ಸಮರ್ಥವಾಗಿ ಅಡೆತಡೆಗಳನ್ನು ನಿವಾರಿಸಿಕೊಳ್ಳುತ್ತಿದ್ದನೇ? 'ಇಲ್ಲ' ಎನ್ನುತ್ತವೆ, ಈ ಅಧ್ಯಯನಗಳು. ಈ ಎರಡು ಪ್ರಭೇದಗಳು (ಮಾನವ ಮತ್ತು ಇರುವೆ) ಅವುಗಳ ಕಾರ್ಯದ ನಡುವೆ ಅಡ್ಡಬರುವ ತಡೆಗಳನ್ನು ಒಟ್ಟಾಗಿ ಎಷ್ಟು ಸಮರ್ಥವಾಗಿ ನಿವಾರಿಸಿಕೊಳ್ಳುತ್ತವೆ ಎಂಬುದನ್ನು ತಿಳಿಯುವುದು ಈ ಪ್ರಯೋಗದ ಉದ್ದೇಶ.

ಈ ಪ್ರಯೋಗಗಳನ್ನು ನಡೆಸಲು ವಿಜ್ಞಾನಿಗಳು, ಮಾನವ ಮತ್ತು ಇರುವೆ ಎರಡೂ ಪ್ರಭೇದಗಳ ಗುಂಪನ್ನು ಪರಸ್ಪರ ಕಣಕ್ಕಿಳಿಸಿದರು. ಇದಕ್ಕೆ ಅವರು ಇಂಗ್ಲಿಷ್ ಟಿ- ಆಕಾರದ ಎರಡು ಕೋಣೆಗಳ ಜಾಲಗಳನ್ನು ನಿರ್ಮಿಸಿದರು (ಚಿತ್ರ ನೋಡಿ). ಮಾನವನಿಗೆ ದೊಡ್ಡ ಗಾತ್ರದ ಕೋಣೆಗಳು, ಇರುವೆಗಳಿಗೆ ಅವುಗಳ ಗಾತ್ರಕ್ಕೆ ಅನುಗುಣವಾಗಿ ಪುಟ್ಟ ಗಾತ್ರದ ಕೋಣೆಗಳು. ಜಾಲದ ಕೊನೆಯ ಕೋಣೆಯಲ್ಲಿ ಆಹಾರವನ್ನು ಇರಿಸಲಾಗಿತ್ತು. ಪ್ರಯೋಗಕ್ಕೆ ಒಳಪಡಿಸಿದ ವ್ಯಕ್ತಿಗಳು ತಮ್ಮಲ್ಲಿ ಪರಸ್ಪರ ಮಾತನಾಡಲು ಸಾಧ್ಯವಾಗದಂತೆ ಅವರ ಬಾಯಿಗೆ ಬಟ್ಟೆ ಕಟ್ಟಲಾಗಿತ್ತು, ಸಂಜ್ಞೆ ತೋರದಂತೆ ಕೈಗಳನ್ನೂ ಕಟ್ಟಿಹಾಕಲಾಗಿತ್ತು. ಅಂದರೆ ಅವರು ಇರುವೆಗಳಂತೆಯೇ ವಾಸನೆ ಮತ್ತು ದೃಷ್ಟಿಗಳನ್ನು ಮಾತ್ರ ಬಳಸಿ ಸಂಪರ್ಕ ಏರ್ಪಡಿಸಿಕೊಳ್ಳಬಹುದಿತ್ತು.

ಆರಂಭದ ಕೋಣೆಯನ್ನು ಮಾನವ/ಇರುವೆಗಳ ಪ್ರವೇಶಕ್ಕೆ ಮೀಸಲಿಟ್ಟಿದ್ದು, ಜಾಲದೋಪಾದಿಯಲ್ಲಿ ಅಳವಡಿಸಿದ್ದ ಕೋಣೆಗಳನ್ನು ದಾಟಿ ಅವು ಆಹಾರವನ್ನು ಇರಿಸಿದ್ದ ಕೊನೆಯ ಕೋಣೆಗೆ ಪ್ರವೇಶಿಸಬೇಕಿತ್ತು. ಈ ಕೋಣೆಗಳ ಜಾಲದಲ್ಲಿ ಆರು ವಿಶಿಷ್ಟವಾದ ದ್ವಾರಗಳನ್ನು ಅಳವಡಿಸಲಾಗಿತ್ತು. ಮಾನವ ಗುಂಪಿನ ಸದಸ್ಯರಿಗೆ ಒಟ್ಟಾಗಿ ದ್ವಾರಗಳನ್ನು ತೆರೆದು ಆಹಾರವನ್ನು ಇರಿಸಿದ ಕೋಣೆಯನ್ನು ಪ್ರವೇಶಿಸುವುದರೊಂದಿಗೆ ಪ್ರಯೋಗ ಮುಗಿಯುತ್ತದೆ ಎಂದು ಮೊದಲೇ ತಿಳಿಸಲಾಗಿತ್ತು. ಇರುವೆಗೆ ಕೊನೆಯ ಕೋಣೆಯಲ್ಲಿ ಆಹಾರವನ್ನಿರಿಸಿದ್ದರಿಂದ, ನಿರ್ದೇಶನವಿಲ್ಲದಿದ್ದರೂ ಅವು ಅದರ ಆಕರ್ಷಣೆಯಿಂದ ತಮ್ಮ ಕಾರ್ಯವನ್ನು ಆರಂಭಿಸಿದ್ದವು.

ಈ ಪ್ರಯೋಗದಲ್ಲಿ ವಿಜ್ಞಾನಿಗಳಿಗೆ ಅತ್ಯಾಶ್ಚರ್ಯಕರ ಫಲಿತಾಂಶಗಳು ದೊರಕಿದವು. ಇರುವೆಗಳು ಮಾನವರಿಗಿಂತ ಮೊದಲು ಕೋಣೆಗಳ ನಡುವೆ ಇರಿಸಿದ್ದ ತಡೆಗಳನ್ನು ಸರಿಸಿ ಆಹಾರವಿದ್ದ ಕೋಣೆಯನ್ನು ಪ್ರವೇಶಿಸಿದ್ದವು! ಮಾನವ ತನ್ನ ದ್ವಂದ್ವವರ್ತನೆಯಿಂದ, ಅಂದರೆ ಒಬ್ಬ ಒಂದೆಡೆ ತಡೆಯನ್ನು ತೆರವುಗೊಳಿಸಲು ಪ್ರಯತ್ನಿಸಿದರೆ ಇನ್ನೊಬ್ಬ ವಿರುದ್ಧ ದಿಕ್ಕಿನಿಂದ ಪ್ರಯತ್ನಿಸುತ್ತಿದ್ದ. ಅದರಿಂದ ಮಾನವಗುಂಪು ತಡೆಯನ್ನು ತೆರವುಗೊಳಿಸಲು ಅಸಮರ್ಥವಾಗುತ್ತಿತ್ತು. ಇರುವೆಗಳು ಯಾವುದೇ ದ್ವಂದ್ವ ಇಲ್ಲದೆ ಬಹುಬೇಗನೆ ತಡೆಯನ್ನು ನಿವಾರಿಸಿಕೊಂಡು ಮಾನವರಿಗಿಂತ ಮುಂಚೆ ಆಹಾರವನ್ನು ತಲುಪಿದ್ದವು!

ಇರುವೆಗಳು ಸಂವಹನಕ್ಕಾಗಿ ಶರೀರದಲ್ಲಿ ಉತ್ಪತ್ತಿಯಾಗುವ 'ಫೀರೊಮೋನ್' ಎಂಬ ರಸಾಯನಗಳನ್ನು ಅವಲಂಬಿಸಿವೆ. ಅವು ದ್ವಾರದ ಮೂಲಕ ಆಹಾರವನ್ನು ಪಡೆಯಲು ಯಾವುದೇ ಜ್ಯಾಮಿತಿಯ ಲೆಕ್ಕವನ್ನು ಹಾಕುವುದಿಲ್ಲ. ಗುಂಪಿನ ಎಲ್ಲ ಇರುವೆಗಳೂ ಫಿರೊಮೋನ್ ಆಧಾರಿತ ಸಂವಹನವನ್ನು ನಿರ್ದಿಷ್ಟವಾಗಿ ಪಾಲಿಸುತ್ತವೆ, ಎಲ್ಲವೂ ಒಂದೇ ದಿಕ್ಕಿನಲ್ಲಿ ಚಲಿಸುತ್ತವೆ, ಒಂದೇ ಕೆಲಸವನ್ನು ಮಾಡುತ್ತವೆ. ಮಾನವನ ಸಂವಹನ ಹಲವು ದಿಕ್ಕುಗಳಲ್ಲಿ ಸಾಗುತ್ತದೆ. 'ಎತ್ತು ಏರಿಗೆಳೆದರೆ ಕೋಣ ನೀರಿಗೆಳೆಯಿತು' ಎಂಬಂತೆ ಒಬ್ಬೊಬ್ಬ ಒಂದೊಂದು ರೀತಿ ಯೋಚಿಸುತ್ತಾನೆ, ಲೆಕ್ಕ ಹಾಕುತ್ತಾನೆ, ಒಂದೊಂದು ರೀತಿಯಲ್ಲಿ ತಡೆಯನ್ನು ನಿವಾರಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಅದರಿಂದ ಇರುವೆಗಳಿಗೆ ಹೋಲಿಸಿದರೆ ತಡೆಯನ್ನು ನಿವಾರಿಸಿಕೊಳ್ಳುವುದರಲ್ಲಿ ಸೋಲುತ್ತಾನೆ! ಹೀಗೆ ಈ ಪ್ರಯೋಗವು ಇರುವೆಗಳಲ್ಲಿ ಸಂಘಜೀವನ ಉತ್ಕೃಷ್ಟವಾಗಿ ವಿಕಾಸವಾಗಿದೆ ಎಂದು ತೋರಿಸಿತು. ಇರುವೆಗಳು ವಿಕಾಸದಲ್ಲಿ ಮಾನವನಿಗಿಂತ 150 ದಶಲಕ್ಷ ವರ್ಷಗಳ ಹಿಂದೆಯೇ ಉದಯವಾದುವು. ಆದರೂ ಸಹಕಾರ ಜೀವನದಿಂದಾಗಿ ಅವು ಇನ್ನೂ ಭೂಮಿಯ ಮೇಲೆ ಅಳಿಯದೆ ಉಳಿದಿವೆ. ಆಧುನಿಕ ಮಾನವ ಪ್ರಭೇದ ಕೇವಲ ಒಂದೂವರೆ ದಶಲಕ್ಷ ವರ್ಷಗಳ ಹಿಂದೆ ವಿಕಾಸವಾಯಿತು. ಇರುವೆ ಹಾಗೂ ಮಾನವವಿಕಾಸದ ಅವಧಿಯನ್ನು ಪರಿಗಣಿಸಿದರೆ, ಮಾನವವಿಕಾಸದ ಅವಧಿ ತೀರ ಕಡಿಮೆ. ಮಾತಿನ ಮೂಲಕ ಚರ್ಚಿಸುವ ಸಾಮರ್ಥ್ಯವಿಲ್ಲದಿದ್ದರೆ ಬಹುಶಃ ಮಾನವನಲ್ಲಿ ಸಹಕಾರ ಜೀವನ ಅಸಾಧ್ಯವಾಗುತ್ತಿತ್ತು – ಎಂದು ಈ ಅಧ್ಯಯನಗಳು ಹೇಳುತ್ತವೆ. ಇಂದಿನ ಕೆಲವು ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಮಾನವನಲ್ಲಿ ಸಾಮಾಜಿಕವಾದ ಎಷ್ಟೋ ದ್ವಂದ್ವ ನಿಲುವುಗಳನ್ನು ನಾವು ಕಾಣುತ್ತೇವೆ. ಹೀಗಾಗಿ ಮಾನವಗುಂಪುಗಳ ನಡುವೆ ಆಗಾಗ ಸಾಮರಸ್ಯ ಕೆಡುತ್ತಿದೆ. ಬಹುಶಃ ಸಾಮಾಜಿಕ ಜೀವನದ ಅರೆಬರೆ ವಿಕಾಸವೇ ಈ ವಿಫಲತೆಗೆ ಕಾರಣವಿರಬಹುದೆ? ಬಡವ-ಬಲ್ಲಿದ, ಮೇಲು-ಕೀಳುಗಳೆಂಬ ವೈರುದ್ಧ್ಯಗಳನ್ನೊಳಗೊಂಡ ಇಂಥ ದ್ವಂದ್ವ ಮನೋಭಾವವೇ ಮುಂದೊಂದು ದಿನ ಮಾನವನ ಅಳಿವಿಗೆ ಕಾರಣವಾಗಬಹುದು ಎಂಬ ಸಂದೇಶವನ್ನು ಕೂಡ ಈ ಪ್ರಯೋಗಗಳು ನೀಡುತ್ತಿವೆ. ❖

ಸೋಲಿಗೆ ಸೋಲದ ಸುಸುಮು

ನೊಬೆಲ್ ವಿಜ್ಞಾನಿಗಳು 3

• ಕ್ಷಮಾ ವಿ. ಭಾನುಪ್ರಕಾಶ್

ಅದು ಯಾವುದೇ ಕ್ಷೇತ್ರವಿರಲಿ, ಗೆದ್ದವರು ಮತ್ತು ಸೋತವರ ನಡುವೆ ಒಂದು ಸ್ಪಷ್ಟ ವ್ಯತ್ಯಾಸವಿರುತ್ತದೆ; ಅದೇ, ಅವರ ಮನೋಬಲ. ನಾವು ಸೋಲುವುದು ಯಾವಾಗ? ಮತ್ತ್ಯಾರೋ ಗೆದ್ದಾಗ ಅಲ್ಲ, ನಾವು ಸೋಲನ್ನು ಒಪ್ಪಿಕೊಂಡಾಗ ಮಾತ್ರ, ಅಲ್ಲವೇ? ಸವಾಲುಗಳೆಂದರೆ ಹೆದರಿ ಹಿಂದೋಡದೆ, ಸವಾಲಿನ ಹಿಂದೋಡಿ, ಅದಕ್ಕೆ ಸರಿಯಾದ ಜವಾಬು ನೀಡುವವರೆಗೂ ಕೈಕಟ್ಟಿಕೂರದ ವಿಜ್ಞಾನಿಯ ಬಗ್ಗೆ ತಿಳಿಯೋಣ ಬನ್ನಿ.

'ಯಾವುದೇ ಒಂದು ಕೆಲಸವನ್ನು ಅಸಾಧ್ಯ ಎಂದು ನೀವು ಒಪ್ಪಲು ತಯಾರಿಲ್ಲದಿದ್ದರೆ, ಅದು ಹೇಗೆ ಅಸಾಧ್ಯವಾಗಲು ಸಾಧ್ಯ?' ಎನ್ನುತ್ತಾರೆ, ಡಾ. ಸುಸುಮು ಕಿಟಾಗವಾ. ಈ ಬಾರಿ ರಸಾಯನ ವಿಜ್ಞಾನದಲ್ಲಿ ರಿಚರ್ಡ್ ರಾಬ್ಸನ್ ಮತ್ತು ಓಮರ್ ಯಾಘಿಯವರ ಜೊತೆಗೆ ನೊಬೆಲ್ ಪ್ರಶಸ್ತಿಗೆ ಭಾಜನರಾದ ಸುಸುಮು ಅವರ ಮಾತುಗಳನ್ನು ಕೇಳಿದರೆ, ಸ್ಥೈರ್ಯಗುಂದಿದ ಯಾರೇ ಆದರೂ, ಮತ್ತೊಮ್ಮೆ ಫೀನಿಕ್ಸ್‌ನಂತೆ ಎದ್ದುನಿಲ್ಲುವಂತಾಗುತ್ತದೆ; ಅಷ್ಟು ಧನಾತ್ಮಕತೆ, ಅಷ್ಟು ಗುರಿ ಕೇಂದ್ರೀಕೃತ ಮನಸ್ಸು ಮತ್ತು ಅಂತಹ ಛಲ ಬಿಡದ ಮನೋಭಾವ ಇವರದ್ದು.

2025ರ ರಸಾಯನವಿಜ್ಞಾನ ನೊಬೆಲ್ ದೊರೆತಿದ್ದು ಲೋಹ-ಸಾವಯವ ಚೌಕಟ್ಟುಗಳಿಗೆ ಎಂಬುದು ನಿಮಗೆ ಈಗಾಗಲೇ ತಿಳಿದಿದೆಯಲ್ಲವೇ? ಅದರ ರಚನೆಯ ಹಿಂದಿನ ಸಿದ್ಧಾಂತ, ರಿಚರ್ಡ್ ರಾಬ್ಸನ್ ಅವರದ್ದು, ಆ ಚೌಕಟ್ಟಿಗೆ ಭೌತಿಕ ಬಲ ತುಂಬಿದ್ದು ಓಮರ್ ಯಾಘಿ ಅವರ ಸಂಶೋಧನೆ ಮತ್ತು ಈ ಚೌಕಟ್ಟುಗಳ ಅನ್ವಯಿಕತೆಯನ್ನು ಸಾಧ್ಯವಾಗಿಸಿದ್ದು ಸುಸುಮು ಕಿಟಾಗವಾ ಅವರ ಪ್ರಯೋಗಗಳು. ಜಗತ್ತನ್ನು ಪೊರೆದದ್ದು ಅಚಾನಕ್ಕಾಗಿ ಆದ ಅನೇಕ ಆವಿಷ್ಕಾರಗಳು ಎಂಬ ಮಾತಿದೆ. ಏನೋ ಮಾಡಲು ಹೋಗಿ ಮತ್ತೇನೋ ಆದ ಕಥೆಗಳು ವಿಜ್ಞಾನಲೋಕದಲ್ಲಿ ಸಾಮಾನ್ಯ. 'ಪೆನಿಸಿಲಿನ್' ಎಂಬ ಮೊದಲ ಆ್ಯಂಟಿಬಯೋಟಿಕ್, ಎಕ್ಸ್‌-ರೇ, ಪೇಸ್‌ಮೇಕರ್, ಮೈಕ್ರೋವೇವ್ ಓವನ್ - ಹೀಗೆ ಪಟ್ಟಿ ದೊಡ್ಡದಿದೆ. 'ಅಂತಹದ್ದೇ ಒಂದು ಅಚಾನಕ್ಕಾಗಿ ಆದ ಆವಿಷ್ಕಾರವೇ ಈ ಲೋಹ-ಸಾವಯವ ಚೌಕಟ್ಟುಗಳೊಳಗೆ ರಂಧ್ರಗಳಿವೆ ಮತ್ತು ಅವುಗಳನ್ನು ಅನಿಲದ ಅಣುಗಳನ್ನು, ಲೋಹದ ಅಣುಗಳನ್ನು ಹಿಡಿದಿಡಲು ಬಳಸಬಹುದು ಎಂಬುದು' ಎನ್ನುತ್ತಾರೆ. ಸುಸುಮು.

ಹಿನ್ನೆಲೆ

1951ರ ಜುಲೈ 4ರಂದು ಜಪಾನಿನ ಕ್ಯೋಟೋದಲ್ಲಿ ಜನಿಸಿದ ಸುಸುಮು ಅವರು, ಚಿಕ್ಕಂದಿನಿಂದಲೂ ವಿಜ್ಞಾನದಲ್ಲಿ ಅಪಾರ ಆಸಕ್ತಿ ಹೊಂದಿದ್ದವರು; ಕ್ಯೋಟೋದಲ್ಲಿಯೇ ತಮ್ಮ ಶಿಕ್ಷಣ ಮತ್ತು ಸಂಶೋಧನೆಯನ್ನು ನಡೆಸಿದರು. ಅಸಾವಯವ ರಸಾಯನವಿಜ್ಞಾನ ಇವರ ಕಾರ್ಯಕ್ಷೇತ್ರ. ಕಿಂಡೈ ವಿಶ್ವವಿದ್ಯಾಲಯ, ಟೋಕ್ಯೋ ವಿಶ್ವವಿದ್ಯಾಲಯಗಳಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಾ, ಟೆಕ್ಸಸ್ ಮತ್ತು ನ್ಯೂಯಾರ್ಕ್ ವಿಶ್ವವಿದ್ಯಾಲಯಗಳಲ್ಲೂ ಗುರುತರ ಜವಾಬ್ದಾರಿಗಳನ್ನು ನಿರ್ವಹಿಸಿದರು; ತಮ್ಮ ವೃತ್ತಿಬದುಕಿನಲ್ಲಿ ವಿದ್ಯಾರ್ಥಿಗಳನ್ನು ಸಂಶೋಧನೆಯೆಡೆಗೆ ಸೆಳೆಯುವ ಮತ್ತು ವೈಜ್ಞಾನಿಕ ಮನೋಭಾವವನ್ನು ಅವರಲ್ಲಿ ಹಾಸುಹೊಕ್ಕಾಗಿಸುವ ಜವಾಬ್ದಾರಿಯನ್ನು ಹೊತ್ತ ಸುಸುಮು ಅವರು, ಐ.ಸಿ.ಇ.ಎಂ.ಎಸ್. ಸೇರಿದಂತೆ ಅನೇಕ ವಿಜ್ಞಾನ ಸಂಸ್ಥೆಗಳ ಸದಸ್ಯರಾಗಿ, ಅಧ್ಯಕ್ಷರಾಗಿಯೂ ಕಾರ್ಯಪ್ರವೃತ್ತರಾಗಿದ್ದರು.

ನೊಬೆಲ್ ಪ್ರಶಸ್ತಿ ಘೋಷಣೆಯಾದ ನಂತರ ನಡೆದ ಇವರ ಸಂದರ್ಶನದಲ್ಲಿ, ಸುಸುಮು ಕಿಟಾಗವಾ ಅವರು ನಗುತ್ತಾ, 'ಯಾರಾದರೂ ಅಸಾಧ್ಯವೆಂದದ್ದನ್ನು ಸಾಧ್ಯ ಮಾಡಿತೋರಿಸಲು ನನಗೆ ಬಹಳ ಹುರುಪು' ಎಂದು ಹೇಳಿದ್ದು, ಸಣ್ಣ ಸೋಲುಗಳಿಗೆ, ಚಿಕ್ಕ ಟೀಕೆಯೊಂದಕ್ಕೇ ಕೈಚೆಲ್ಲುವ ಹಲವರಿಗೆ ಸ್ಫೂರ್ತಿ ನೀಡುವಂತಿದೆ.

90ರ ದಶಕದಲ್ಲಿ ಲೋಹ-ಸಾವಯವ ಚೌಕಟ್ಟಿನ ರಂಧ್ರಗಳೊಳಗೆ ಅನಿಲದ ಅಣುಗಳನ್ನು ಹಿಡಿದಿಡಬಹುದು ಎಂದು ಸುಸುಮು ಮತ್ತು ಇನ್ನಿತರ ರಸಾಯನವಿಜ್ಞಾನಿಗಳು ಪ್ರತಿಪಾದಿಸಿದಾಗ, ಅದನ್ನು ಒಪ್ಪಲು ಬಹುಪಾಲು ವಿಜ್ಞಾನಿಗಳು ತಯಾರಿರಲಿಲ್ಲ. 'ಅವರ ಅಪನಂಬಿಕೆಯೇ ನನ್ನ ಬಲವಾಯ್ತು' ಎನ್ನುತ್ತಾರೆ, ಸುಸುಮು. ಬೇರೆ ಯಾವುದೇ ಸಂಶೋಧನೆ ಮಾಡುತ್ತಿದ್ದರೂ, ಈ ವಿಷಯವೊಂದು ಅವರ ಮನಸ್ಸಿನ ಮೂಲೆಯಲ್ಲಿ ಕುಳಿತು ಕುದಿಯುತ್ತಲೇ ಇತ್ತು. ಮತ್ತೇನೋ ವಿಷಯದ ಸಲುವಾಗಿ, ಲೋಹ-ಸಾವಯವ ಚೌಕಟ್ಟಿನ ಸ್ಫಟಿಕದ ರಚನೆಯನ್ನು ವಿಶ್ಲೇಷಣೆ ಮಾಡಲು ಖಾಸಗಿ ವಿಶ್ವವಿದ್ಯಾಲಯವೊಂದಕ್ಕೆ ಸುಸುಮು ಹೋಗಿದ್ದರು. ಅಲ್ಲಿ ಕಂಪ್ಯೂಟರ್ ಕೇಂದ್ರದಲ್ಲಿ, ಸ್ಫಟಿಕದ ವಿಶ್ಲೇಷಣೆಯ ಸಮಯದಲ್ಲಿ, ಈ ಲೋಹ-ಸಾವಯವ ಚೌಕಟ್ಟಿನಲ್ಲಿರುವ ವಿಶಿಷ್ಟ, ನಿರ್ದಿಷ್ಟ ಬಗೆಯ ರಂಧ್ರಗಳು ಅಚಾನಕ್ಕಾಗಿ ಕಣ್ಣಿಗೆ ಬಿದ್ದವು. ಇಂತಹ ಅಚಾನಕ್ ಆವಿಷ್ಕಾರವೇ, ನಿಜಜೀವನದಲ್ಲಿ ಅನೇಕ ಕ್ಷೇತ್ರಗಳಲ್ಲಿ ಲೋಹ-ಸಾವಯವ ಚೌಕಟ್ಟಿನ ಸಾರ್ಥಕ ಅನ್ವಯಿಕೆಗೆ, ನೊಬೆಲ್ ಪ್ರಶಸ್ತಿಯು ಒಲಿಯುವುದಕ್ಕೆ, ಜನರ ಅಪನಂಬಿಕೆಯನ್ನು ಹುಸಿಯಾಗಸಲು ದಾರಿ ಮಾಡಿಕೊಟ್ಟಿತು.



ಸುಸುಮು ಕಿಟಾಗವಾ

ಚಿತ್ರ: ನೊಬೆಲ್ ಅಧಿಕೃತ ವೆಬ್‌ಸೈಟ್

ಒಂದೇ ಗುಂಗಿನಲ್ಲಿ, ಅಪರಿಮಿತ ಏಕಾಗ್ರತೆಯಲ್ಲಿ ಸಂಶೋಧನೆಯಲ್ಲಿ ತೊಡಗುವುದು ಎಷ್ಟು ಮುಖ್ಯವೋ, ಸಂಶೋಧನಾ ಪರಿಸರವೂ ಅಷ್ಟೇ ಮುಖ್ಯ ಎಂಬ ಸುಸುಮು ಅವರ ಮಾತನ್ನು ಎಲ್ಲ ವಿಜ್ಞಾನಿಗಳೂ ಖಂಡಿತವಾಗಿ ಒಪ್ಪುತ್ತಾರೆ. ಜಪಾನಿಗೆ ವಿಜ್ಞಾನದಲ್ಲಿ ನೊಬೆಲ್ ತಂದುಕೊಟ್ಟ ಅನೇಕ ಸಂಶೋಧಕರು ಸುಸುಮು ಅವರ ಮಾರ್ಗದರ್ಶಿಗಳು ಮತ್ತು ಒಡನಾಡಿಗಳು. ನೊಬೆಲ್ ವಿಜೇತ ಕೆನಿಚಿ ಫುಕುಯಿ ಅವರನ್ನಂತೂ ಸುಸುಮು ಅವರು ತಮ್ಮ 'ಶೈಕ್ಷಣಿಕ ಪಿತಾಮಹ' ಎಂದೇ ಬಣ್ಣಿಸುತ್ತಾರೆ.

ಕೆನಿಚಿ ಫುಕುಯಿ, ಅಕಿರಾ ಯೊಶಿನೋರಂತಹ ವಿಜ್ಞಾನಲೋಕದ ದಿಗ್ಗಜಗಳು ಕಾರ್ಯನಿರ್ವಹಿಸಿದ ಪ್ರಯೋಗಾಲಯಗಳಲ್ಲೇ ತಾವೂ ಸಂಶೋಧನೆ ಮಾಡುತ್ತಾ, ಅವರ ಪರಂಪರೆಯಿಂದ ಸ್ಫೂರ್ತಿ ಪಡೆಯುತ್ತಾ, ಮುಂದಿನ ತಲೆಮಾರಿಗೆ ಪ್ರೇರಣೆ ಒದಗಿಸಿದ್ದಾರೆ, ಸುಸುಮು ಕಿಟಾಗವಾ. ಇವರ ಲೋಹ-ಸಾವಯವ ಚೌಕಟ್ಟುಗಳು ಅನಿಲದ ಅಣುಗಳನ್ನು, ವೇಗವರ್ಧಕಗಳನ್ನು ಹಿಡಿದಿಟ್ಟುಕೊಳ್ಳುವ ಹಾಗೆ, ಇವರ ಕಾರ್ಯವೈಖರಿಯು ಯುವಜನರನ್ನೂ ಸೆಳೆದು, ವಿಜ್ಞಾನದೆಡೆಗೆ ಗಮನ ಹರಿಯುವಂತೆ ಮಾಡಿದ ಇವರಿಗೆ ಅಭಿನಂದನೆಗಳು ಸಲ್ಲಿಸಲೇಬೇಕು. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಎಸ್ಎಲ್‌ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ವಿದ್ಯುಚ್ಛಕ್ತಿ

24) ಒಂದು ವಿದ್ಯುತ್ ಹೀಟರ್, ವಿದ್ಯುತ್ ಮೂಲದಿಂದ 4 A ವಿದ್ಯುತ್ ಸೆಳೆಯುವಾಗ ಅದರ ತುದಿಗಳ ನಡುವಿನ ವಿಭವಾಂತರವು 60 V ಆಗಿದ್ದು ಸದರಿ ವಿದ್ಯುತ್ ಹೀಟರ್‌ನ ವಿಭವಾಂತರವನ್ನು 120V ಗೆ ಹೆಚ್ಚಿಸಿದಾಗ ಆ ವಿದ್ಯುತ್ ಹೀಟರ್ ಸೆಳೆಯುವ ವಿದ್ಯುತ್ ಪ್ರವಾಹ ಎಷ್ಟು?

ಪರಿಹಾರ : ಕೊಟ್ಟಿರುವುದು, ವಿಭವಾಂತರ V = 60 V, ವಿದ್ಯುತ್‌ಪ್ರವಾಹ I = 4 A.

ಓಮ್‌ನ ನಿಯಮದ ಪ್ರಕಾರ, $R = \frac{V}{I} = \frac{60V}{4A} = 15\Omega$

ವಿದ್ಯುತ್ ಹೀಟರ್‌ನ ವಿಭವಾಂತರವನ್ನು 120 V ಗೆ ಹೆಚ್ಚಿಸಿದಾಗ ಆ ವಿದ್ಯುತ್ ಹೀಟರ್ ಸೆಳೆಯುವ ವಿದ್ಯುತ್ ಪ್ರವಾಹವು

ವಿದ್ಯುತ್ ಪ್ರವಾಹ =

$$= \frac{V}{R} = \frac{120V}{15\Omega} = 8A.$$

ವಿದ್ಯುತ್ ಹೀಟರ್ ಸೆಳೆಯುವ ವಿದ್ಯುತ್ ಪ್ರವಾಹ = 8 A

25) ಒಂದು ಲೋಹದ ತಂತಿಯ ಉದ್ದವು 1 ಮೀ ಆಗಿದ್ದು, ಅದರ ರೋಧವು 20° Cನಲ್ಲಿ 26 Ω ಆಗಿದೆ. ಅದರ ವ್ಯಾಸವು 0.3mm ಆದರೆ ಈ ತಾಪಮಾನದಲ್ಲಿ ಲೋಹದ ತಂತಿಯ ರೋಧಶೀಲತೆಯನ್ನು ಕಂಡುಹಿಡಿಯಿರಿ. ಕೋಷ್ಟಕ 11.2ನ್ನು ಬಳಸಿ, ತಂತಿಯು ಯಾವ ವಸ್ತುವಿನಿಂದ ಆಗಿದೆ ಎಂಬುದನ್ನು ಊಹಿಸಿ.

ಪರಿಹಾರ : ಕೊಟ್ಟಿರುವುದು, ಲೋಹದ ತಂತಿಯ ರೋಧವು = 26 Ω, **ಆಗಿದೆ**

ತಂತಿಯ ವ್ಯಾಸವು $d = 0.3\ mm = 3 \times 10^{-4}\ m$, **ಮತ್ತು**

ತಂತಿಯ ಉದ್ದ l=1 m. **ಸಮೀಕರಣ (11.10), ರಿಂದ ರೋಧಶೀಲತೆ**

$\rho = (RA/l) = (R\pi d^2/4l)$

ಕೊಟ್ಟಿರುವ ದತ್ತಾಂಶಗಳನ್ನು ಆದೇಶಿಸಿದಾಗ,

$$P = \frac{RA}{l} = \frac{R\pi d^2}{4l}$$

20°Cನಲ್ಲಿ **ಲೋಹದ ತಂತಿಯ ರೋಧಶೀಲತೆಯು** $1.84 \times 10^{-6}\ \Omega m$. **ಕೋಷ್ಟಕ 11.2ರ ಪ್ರಕಾರ ಇದು ಮ್ಯಾಂಗನೀಸ್‌ನ ರೋಧಶೀಲತೆಯಾಗಿದೆ.**

26) ಉದ್ದ l ಮತ್ತು ಅಡ್ಡಕೊಯ್ತ A ಇರುವ ಒಂದು ವಾಹಕ ತಂತಿಯ ರೋಧವು 4Ω ಆಗಿದೆ. ಅದೇ ರೀತಿಯ ಇನ್ನೊಂದು ವಾಹಕ ತಂತಿಯ ಉದ್ದ l/2 ಮತ್ತು ಅದರ ಅಡ್ಡಕೊಯ್ತ 2A ಆದಾಗ ಅದರ ರೋಧವನ್ನು ಕಂಡುಹಿಡಿಯಿರಿ.

ಪರಿಹಾರ:-

ಮೊದಲನೆ ತಂತಿ,

$$R_1 = \rho\frac{l}{A} = 4\Omega$$

ಈಗ ಎರಡನೇ ತಂತಿ,

$$R_2 = \rho\frac{l/2}{2A} = \frac{1}{4}\rho\frac{l}{A}$$

$$R_2 = \frac{1}{4}R_1$$

$$R_2 = 1\Omega$$

ಹೊಸ ತಂತಿಯ ರೋಧವು 1Ω ಆಗಿದೆ.

27) ಯಾವುದನ್ನು ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು ಎಂಬುದನ್ನು ವಿವರವಾಗಿ ವಿವರಿಸಿ?

ಉತ್ತರ:- ಶುಷ್ಕಕೋಶ ಅಥವಾ ವಿದ್ಯುತ್‌ಕೋಶಗಳು ವಿದ್ಯುಚ್ಛಕ್ತಿಯ ಆಕರಗಳಾಗಿವೆ. ವಿದ್ಯುತ್‌ಕೋಶದಲ್ಲಿ ಜರಗುವ ರಾಸಾಯನಿಕ ಕ್ರಿಯೆಗಳಿಂದ ಎರಡು ಧ್ರುವಗಳ ನಡುವೆ ವಿಭವಾಂತರವು ಉಂಟಾಗುತ್ತದೆ. ಇದು ಶುಷ್ಕಕೋಶಗಳೊಂದಿಗೆ ಸಂಯೋಜಿಸಲಾದ ರೋಧಕ ಅಥವಾ ರೋಧಕಗಳ ಮೂಲಕ ಇಲೆಕ್ಟ್ರಾನ್‌ಗಳ ಪ್ರವಾಹವನ್ನು ಉಂಟುಮಾಡುತ್ತದೆ. ವಿದ್ಯುತ್ ಪ್ರವಾಹವನ್ನು ಕಾಪಾಡಿಕೊಳ್ಳಲು ಅದರ ಆಕರವು ಶಕ್ತಿಯನ್ನು ವ್ಯಯಿಸುತ್ತಿರಬೇಕು ಈ ಶಕ್ತಿಯು ಎಲ್ಲಿಗೆ ಹೋಗಿದೆ ಎಂದರೆ. ವಿದ್ಯುತ್ ಪ್ರವಾಹದ ನಿರ್ವಹಣೆಯಲ್ಲಿ ಮೂಲಶಕ್ತಿಯ ಒಂದು ಭಾಗವು ಉಪಯುಕ್ತವಾದ ಕೆಲಸಕ್ಕೆ ಬಳಕೆಯಾಗುತ್ತಿರುತ್ತದೆ.(ವಿದ್ಯುತ್ ಫ್ಯಾನ್‌ನ ಚಕ್ರ ತಿರುಗಲು), ಉಳಿದ ಮೂಲ ಶಕ್ತಿಯು ಸಾಧನದಲ್ಲಿ ತಾಪವನ್ನು ಹೆಚ್ಚಿಸಿ ಉಷ್ಣವನ್ನು ವ್ಯಯಿಸುತ್ತಿರುತ್ತದೆ.

ಅಂದರೆ ರೋಧಕಗಳನ್ನು ಶುಷ್ಕಕೋಶದೊಂದಿಗೆ ಸಂಪರ್ಕಿಸಿದಾಗ ಮಾತ್ರ ಆಕರದಿಂದ ಶಕ್ತಿಯು ನಿರಂತರವಾಗಿ ಉಷ್ಣದ ರೂಪದಲ್ಲಿ ಸಂಪೂರ್ಣವಾಗಿ ವ್ಯಯವಾಗುತ್ತಿರುತ್ತದೆ. ಈ ವಿದ್ಯಮಾನವನ್ನು ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು

28) ಯಾವುದನ್ನು ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು. ಈ ತತ್ವವನ್ನಾಧರಿಸಿ ತಯಾರಿಸಿರುವ ಸಾಧನಗಳನ್ನು ಹೆಸರಿಸಿ

ಉತ್ತರ:- ವಿದ್ಯುತ್‌ಪ್ರವಾಹದ ಉಷ್ಣೋತ್ಪಾದನಾ ಪರಿಣಾಮ ಎನ್ನುವರು. ಈ ತತ್ವವನ್ನಾಧರಿಸಿ ತಯಾರಿಸಿರುವ ಸಾಧನಗಳೆಂದರೆ ವಿದ್ಯುತ್ ಇಸ್ತ್ರಿಪೆಟ್ಟಿಗೆ, ವಿದ್ಯುತ್‌ಹೀಟರ್ ಇತ್ಯಾದಿ..

29) ಕೆಳಗಿನವುಗಳನ್ನು ಸಮಾಂತರವಾಗಿ ಸಂಪರ್ಕಿಸಿದಾಗ ಸಮಾನ ರೋಧವನ್ನು ನಿರ್ಣಯಿಸಿ (A) 1 Ω, ಮತ್ತು 10^6 Ω, (B) 1 Ω, ಮತ್ತು 10^3 Ω, ಮತ್ತು 10^6 Ω,

ಉತ್ತರ:- (A)(ಎ) 1 Ω, ಮತ್ತು 10^6 Ω, ಇವುಗಳನ್ನು ಸಮಾಂತರವಾಗಿ ಸಂಪರ್ಕಿಸಿದಾಗ

ರೋಧ,

$$\frac{1}{R} = \frac{1}{1} + \frac{1}{10^6} = 1\Omega$$

$$\therefore R = \frac{10}{1+10^6} = \frac{10^6}{10^6} = 1\Omega$$

ಸಮಾನ ರೋಧ = 1 Ω,

ಉತ್ತರ:- (B) 1 Ω, ಮತ್ತು 10^3 Ω, ಮತ್ತು 10^6 Ω ಇವುಗಳನ್ನು ಸಮಾಂತರವಾಗಿ ಸಂಪರ್ಕಿಸಿದಾಗ

ರೋಧ

$$R = \frac{1}{1} + \frac{1}{10^3} + \frac{1}{10^6}$$

$$= \frac{10 + 10^3 + 1}{10^6}$$

$$= \frac{1000000}{1001001} = 0.999\Omega$$

ಸಮಾನ ರೋಧ = 0.999 Ω,

ನೆನಪಿಡಿ

ಜೌಲನ ಉಷ್ಣೋತ್ಪಾದನಾ ನಿಯಮದ ಪ್ರಕಾರ ರೋಧಕದಲ್ಲಿ ಉತ್ಪತ್ತಿಯಾದ ಉಷ್ಣವು, (i) ಕೊಟ್ಟಿರುವ ರೋಧದಲ್ಲಿ ಪ್ರವಹಿಸುತ್ತಿರುವ ವಿದ್ಯುತ್‌ಪ್ರವಾಹದ ವರ್ಗಕ್ಕೆ ನೇರಾನುಪಾತದಲ್ಲಿರುತ್ತದೆ. (ii) ಕೊಟ್ಟಿರುವ ವಿದ್ಯುತ್ ಪ್ರವಾಹಕ್ಕೆ, ರೋಧವು ನೇರ ಅನುಪಾತದಲ್ಲಿರುತ್ತದೆ (iii) ರೋಧಕಗಳ ಮೂಲಕ ಹರಿಯುವ ವಿದ್ಯುತ್‌ಪ್ರವಾಹದ ಕಾಲಕ್ಕೆ ನೇರ ಅನುಪಾತದಲ್ಲಿರುತ್ತದೆ.

PHYSICS

Chapter – 2

ELECTROSTATIC POTENTIAL AND CAPACITANCE

40. It is advised to be inside a car or a bus than to stand under a tree during thunder storm. Why?

Ans:- During thunder storm, a strong electric field exists in the atmosphere. A car or a bus can be compared to a conductor with a cavity. The electric field inside the cavity of the conductor is zero, hence we are electrostatically shielded inside the car, which is not true under a tree.

41. A large aluminium sheet duly insulated from ground is fixed in the open. Is there any chance of an elecric shock, if someone touches the aluminium sheet the next day?

Ans:- The aluminium sheet and the earth form a capacitor with the insulating slab as dielectric. The down pour of the atmospheric charge will raise the potential of the sheet of aluminium. When we touch the aluminium sheet, charge will flow to the earth through our body. This flow of charge constitutes an electric current and we will experience a shock.

42. 'n' small drops of same size are charged to V volt each. They coalesce to form a bigger drop. Calculate the potential of the bigger drop.

Ans :– Let r be radius of each small drop. Then, the capacitance of each small drop,

$$C = 4\pi\varepsilon_0 r$$

charge on each small drop,

$$q = CV = (4\pi\varepsilon_0 r)V$$

∴ total charge on 'n' small drops,

$$Q = nq = nCV = n.4\pi\varepsilon_0 r.V$$

When 'n' small drops coalesces, let the bigger drop formed be of radius R

Since, volume of the bigger drop = total volume of 'n' small drops

$$\Rightarrow \frac{4}{3}\pi R^3 = n\left(\frac{4}{3}\pi r^3\right)$$

$$\therefore R = n^{1/3} \times r$$

And since bigger drop will possess the same charge as that of the 'n' small drops, the p.d of the bigger drop is

$$\frac{n \times 4\pi\varepsilon_0 r \times V}{4\pi\varepsilon_0 n^{1/3} \times r} = n^{2/3} x r$$

43. Near the surface of the earth, the field is about $100Vm^{-1}$. Why do we then not experience an electric shock as we go into the open?

Ans:- Our body and the earth surface are at the same potential. It means there is no potential difference between the earth and our body. Hence, no current flows through our body and therefore we do not experience an electric shock.

44. What is meant by equivalent capacitor?

Ans:- A combination of capacitors in an electric circuit can be replaced by a single capacitor that has the same capacitance as the actual combination of the capacitors. Such capacitor is called equivalent capacitor.

45. Why is Van de Graaff generator enclosed in a steel tank filled with air?

Ans:- Van de Graaff generator is enclosed in a steel tank filled with air in order to prevent the leakage due to ionization of air surrounding the large shell because of very high voltage of the generator.

46. Why is the knowledge of dielectric strength useful to us?

Ans:- The dielectric strength decides the design of a capacitor. It gives the value of the maximum potential difference (voltage) which can be applied to a capacitor without any damage to it or its electric break down.

3 - CURRENT ELECTRICITY

1. Define current density?

Ans:- The current density is defined as the current per unit area through the conductor.

2. What are ohmic substances?

Ans:- Ohmic substances are the electrical devices that obey the Ohm's law.

Eg:- Galvanometer, ammeter , voltmeter etc.,

3. What are non ohmic substances?

Ans:- Non - ohmic substances are the electrical devices that do not obey the Ohm's law.

Eg:- electron tubes, voltameters, discharge tubes etc.,

4. Define branch currents.

Ans: - Branch currents - Branch currents are in the inverse ratio of resistances.

$$I_1 = IR_2 / (R_1 + R_2)$$

(current in a branch) = [(main current) (resistance of the other branch) / (sum of the branch resistances)]

5. Why is magnanin used for making standard resistors?

Ans:- Magnanin is used for making standard resistors because it has a low value of temperature co-efficient of resistance and high resistivity.

6. What is Ohm?

Ans:- Ohm is the S.I unit of resistance. It is defined as the electrical resistance of a conductor through which a current of one ampere flows when a potential difference of one volt is applied between its ends.

7. Define the temperature coefficient of resistance?

Ans:

(Contd.......)

ಚಿಟಿಕೆ ಸುದ್ದಿ

₹99.99 ಲಕ್ಷ ವಶ



ಕಾರವಾರ: ದಾಖಲೆ ಇಲ್ಲದ ಖಾಸಗಿ ಬಸ್‌ನಲ್ಲಿ ಸಾಗಿಸುತ್ತಿದ್ದ ₹99,99,500 ನಗದನ್ನು ಇಲ್ಲಿನ ಮಾಜಾಳಿ ಚೆಕ್‌ಪೋಸ್ಟ್‌ನಲ್ಲಿ ಮಂಗಳವಾರ ಬೆಳಿಗ್ಗೆ ಚಿತ್ತಾಕುಲ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ.

'ರಾಜಸ್ಥಾನದ ಕಲ್ಲೇಕರಮಾರ ಮತ್ತು ಭಮರಾ ರಾಮ ಹಣ ಸಾಗಿಸುತ್ತಿದ್ದರು. ಬಸ್ ಪಣಜಿಯಿಂದ ಬೆಂಗಳೂರಿಗೆ ಸಂಚರಿಸುತ್ತಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

'₹500 ಮುಖಬೆಲೆಯ ನೋಟುಗಳನ್ನು ಎರಡು ಬ್ಯಾಗ್‌ಗಳಲ್ಲಿ ತುಂಬಿಸಲಾಗಿತ್ತು. ತಮಿಳುನಾಡಿನ ಹೊಸೂರಿಗೆ ಹಣ ಸಾಗಿಸುತ್ತಿರುವುದಾಗಿ ಆರೋಪಿಗಳು ತಿಳಿಸಿದ್ದಾರೆ. ದಾಖಲೆ ಇಲ್ಲದ್ದರಿಂದ ಪ್ರಕರಣ ದಾಖಲಿಸಿ, ಹಣ ವಶಕ್ಕೆ ಪಡೆಯಲಾಗಿದೆ' ಎಂದಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ

ಯಾದಗಿರಿ: 18 ವರ್ಷ ತುಂಬಿದ ಬಳಿಕ ಮದುವೆ ಆಗುವುದಾಗಿ ನಂಬಿಸಿ 13 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಬಾಲಕಿ ಸಂಬಂಧಿ ವಿರುದ್ಧ ಪ್ರಕರಣ ದಾಖಲಾಗಿದೆ.

ಕೊಡೆಕಲ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ. ಬಾಲಕಿ ತಾಯಿ ಗಂಡನಿಂದ ದೂರವಿದ್ದು ದುಡಿಯಲು ಮಗನೊಂದಿಗೆ ಮುಂಬೈಗೆ ಹೋಗಿದ್ದರು. ಬಾಲಕಿಗೆ ಮನೆಯಲ್ಲಿ ಆಶ್ರಯ ನೀಡಿದ್ದ ಆರೋಪಿ ವಯಸ್ಕಳಾದ ಮೇಲೆ ಮದುವೆ ಆಗುವುದಾಗಿ ನಂಬಿಸಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಸಂತ್ರಸ್ತೆ ತಾಯಿ ದಸರಾ ಹಬ್ಬಕ್ಕೆ ಗ್ರಾಮಕ್ಕೆ ಬಂದಿದ್ದರು. ಆಗ, ಬಾಲಕಿಯನ್ನು ಮನೆಯಿಂದ ಕಳುಹಿಸಿದ್ದ ಆರೋಪಿ ಮದುವೆ ಆಗುವುದಿಲ್ಲ ಎಂದು ಹೇಳಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಿಯಾಂಕ್ ಖರ್ಗೆ– ಹಿಮಂತ ಜಟಾಪಟಿ

ಪರಸ್ಪರ ವೈಯಕ್ತಿಕ ಟೀಕೆಗಳನ್ನು ಮಾಡುತ್ತಿರುವ ಮುಖ್ಯಮಂತ್ರಿ, ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಸ್ಸಾಂನಲ್ಲಿ ಸೆಮಿ ಕಂಡಕ್ಟರ್ ಘಟಕ ಸ್ಥಾಪನೆಗೆ ಒಪ್ಪಿಗೆ ದೊರೆತ ಬಗ್ಗೆ ರಾಜ್ಯದ ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಮಾಡಿದ್ದ ಆರೋಪ ಮತ್ತು ಅದಕ್ಕೆ ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮಾ ನೀಡಿದ್ದ ಪ್ರತಿಕ್ರಿಯೆ ಈಗ ತಾರಕಕ್ಕೆ ಏರಿದೆ. ಇಬ್ಬರು ನಾಯಕರು ಈಗ ವೈಯಕ್ತಿಕ ಟೀಕೆಗೆ ಇಳಿದಿದ್ದಾರೆ.

ಅಸ್ಸಾಂಗೆ ಸೆಮಿಕಂಡಕ್ಟರ್ ಘಟಕ ಹೋದುದರ ಬಗ್ಗೆ ಸೋಮವಾರ ಸುದ್ದಿಗಾರರು ಪ್ರಶ್ನಿಸಿದಾಗ ಪ್ರಿಯಾಂಕ್ ಖರ್ಗೆ ಅವರು, 'ಬೆಂಗಳೂರಿಗೆ ಬರಲು ಆಸಕ್ತಿ ಹೊಂದಿದ್ದ ಕಂಪನಿಗಳಿಗೂ ಒತ್ತಡ ಹೇರಿ ಗುಜರಾತ್ ಮತ್ತು ಅಸ್ಸಾಂಗೆ ಹೋಗುವಂತೆ ಮಾಡಲಾಗಿದೆ. ಗುಜರಾತ್ ಮತ್ತು ಅಸ್ಸಾಂನಲ್ಲಿ ಏನಿವೆ? ಅಲ್ಲಿ ಪ್ರತಿಭೆಗಳು ಇದ್ದಾರೆಯೇ' ಎಂದು ಪ್ರಶ್ನಿಸಿದ್ದರು.

ಈ ಹೇಳಿಕೆಯನ್ನು ತೀವ್ರವಾಗಿ ಖಂಡಿಸಿದ್ದ ಹಿಮಂತ ಬಿಸ್ವ ಶರ್ಮಾ, 'ಪ್ರಿಯಾಂಕ್ ಖರ್ಗೆ ಮೊದಲ ದರ್ಜೆಯ ಮೂರ್ಖ' ಎಂದಿದ್ದರು. 'ಜತೆಗೆ, ಅಸ್ಸಾಂನ ಜನತೆಗೆ ತೀವ್ರ ಅವಮಾನ ಮಾಡಿದ್ದಾರೆ. ಆದರೆ ಇಲ್ಲಿನ ಕಾಂಗ್ರೆಸ್ ನಾಯಕರು ಪ್ರಿಯಾಂಕ್ ಖರ್ಗೆ ಮಾತನ್ನು ಖಂಡಿಸಿಲ್ಲ' ಎಂದು ಆಕ್ಷೇಪ ವ್ಯಕ್ತಪಡಿಸಿದ್ದರು.

ಇದಕ್ಕೆ ಪ್ರತಿಯಾಗಿ ನೀಡಿದ್ದ ಪ್ರಿಯಾಂಕ್, 'ನನ್ನ ಮಾತನ್ನು ತಿರುಚುವ ಕೆಲಸವನ್ನು ಬಿಜೆಪಿ ನಾಯಕರು ಮುಂದುವರಿಸಿದ್ದಾರೆ. ಕರ್ನಾಟಕಕ್ಕೆ ಬರಬೇಕಿದ್ದ ಕಂಪನಿಗಳನ್ನು ಬೇರೆ ರಾಜ್ಯಗಳತ್ತ ಹೇಗೆ ದಬ್ಬಲಾಗುತ್ತಿದೆ ಎಂಬುದನ್ನು ನಾನು ಪ್ರಶ್ನಿಸಿದ್ದೆ. ಅವರು ತಮ್ಮ ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಇದನ್ನು ವಿವಾದ ಮಾಡುತ್ತಿದ್ದಾರೆ' ಎಂದು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

ಜತೆಗೆ, 'ಹತ್ತು ವರ್ಷಗಳಿಂದ ಬಿಜೆಪಿ ಅಸ್ಸಾಂನಲ್ಲಿ ಆಡಳಿತ ನಡೆಸುತ್ತಿದೆ. ಹೀಗಿದ್ದೂ ಅಭಿವೃದ್ಧಿ ಸ್ಥಾನದಲ್ಲಿ ಕಡೆಯ ಐದನೇ ಸ್ಥಾನದಲ್ಲಿ ಅಸ್ಸಾಂ ಇದೆ. ನಾವು ಅಲ್ಲಿ ಅಧಿಕಾರಕ್ಕೆ ಬಂದರೆ, ಯುವ ಮತ್ತು ಔದ್ಯೋಗಿಕ ಸ್ನೇಹಿ ವಾತಾವರಣ ನಿರ್ಮಿಸುತ್ತೇವೆ' ಎಂದಿದ್ದರು.

ಟಾಟಾ ಟ್ರಸ್ಟ್‌ನ ಬೆಂಗಳೂರು ಕೇಂದ್ರದಲ್ಲಿ ಅಸ್ಸಾಂನ 1,500 ಯುವಕ– ಯುವತಿಯರಿಗೆ ಕೌಶಲ ತರಬೇತಿ ನೀಡಲಾಗುತ್ತಿದೆ ಎಂದು ಹಿಮಂತ ಅವರು ಈ ಹಿಂದೆ ಮಾಡಿದ್ದ 'ಎಕ್ಸ್'ಪೋಸ್ಟ್ ಅನ್ನು ಪ್ರಿಯಾಂಕ್ ಖರ್ಗೆ, ಮಂಗಳವಾರ ಬೆಳಿಗ್ಗೆ ಮರುಪೋಸ್ಟ್ ಮಾಡಿದರು.

ಜತೆಗೆ, 'ಅಸ್ಸಾಂನ ಯುವಜನರಿಗೆ ಬೆಂಗಳೂರಿನಲ್ಲಿ ತರಬೇತಿ ಸಿಗುತ್ತಿರುವ ಬಗ್ಗೆ ನೀವೇ ಮಾಡಿದ್ದ ಪೋಸ್ಟ್ ಅನ್ನು ನೆನಪಿಸಿಕೊಳ್ಳಿ. ಸರಳವಾಗಿ ಒಂದು ಧನ್ಯವಾದ ಹೇಳಿ, ಇದನ್ನು ಮುಗಿಸಬಹುದಿತ್ತು. ಆದರೆ ಯಥಾ ಪ್ರಕಾರ ರಾಜಕೀಯ ಮಾಡಿದಿರಿ. ಅದರ ಸುತ್ತ ಹಲವು ಸುಳ್ಳುಗಳನ್ನು ಹೆಣೆದು ಜನರಿಗೆ ಮೋಸ ಮಾಡುವುದು ನಿಮ್ಮ ಸಹಜ ಗುಣ ಅಲ್ಲವೇ' ಎಂದು ಛೇಡಿಸಿದರು.

ಮಂಗಳವಾರ ಸುದ್ದಿಗಾರರ ಜತೆ ಮಾತನಾಡುತ್ತಾ ಹಿಮಂತ ಅವರು, ಖರ್ಗೆ ಕುಟುಂಬ ಅಸ್ಸಾಂಗೆ ಯಾವಾಗಲೂ ಅವಮಾನ ಮಾಡುತ್ತದೆ ಎಂದರು.

'ಖರ್ಗೆ ಕುಟುಂಬದಿಂದ ಅವಮಾನ'

ಖರ್ಗೆ ಅವರ ಇಡೀ ಕುಟುಂಬ ಅಸ್ಸಾಂಗೆ ಅವಮಾನ ಮಾಡುತ್ತಲೇ ಇದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅವರ ಮಗ ಪ್ರಿಯಾಂಕ್ ಖರ್ಗೆ ನಮ್ಮ ಜನರಿಗೆ ಅವಮಾನ ಮಾಡಿದ್ದಾರೆ. ಅಸ್ಸಾಂನ ಭೂಪೇನ್ ಹಜಾರಿಕಾ ಅವರಿಗೆ ಭಾರತ ರತ್ನ ಬಂದಿದ್ದಾಗ, ಮಲ್ಲಿಕಾರ್ಜುನ ಖರ್ಗೆ ಬಹಳ ತುಚ್ಛವಾಗಿ ಮಾತನಾಡಿದ್ದರು. ಈಗ ಅವರ ಮಗ ಪ್ರಿಯಾಂಕ್ ಖರ್ಗೆ, ಅಸ್ಸಾಂ ಯುವಜನರಲ್ಲಿ ಪ್ರತಿಭೆಯೇ ಇಲ್ಲ ಎಂದಿದ್ದಾರೆ. ಅಸ್ಸಾಂನ ಸಂಸ್ಕೃತಿ ಮತ್ತು ಪ್ರತಿಭೆ ಬಗ್ಗೆ ಈ ಇಬ್ಬರಿಗೂ ಕಾಂಗ್ರೆಸ್ ತಿಳಿವಳಿಕೆ ಹೇಳಬೇಕು.



ಹಿಮಂತ

ಹಿಮಂತ ಬಿಸ್ವ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

'ನಿಮ್ಮ ಮನೆ ಭ್ರಷ್ಟಾಚಾರದ ಬಾಗಿಲು'

ಅಸ್ಸಾಂನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮಗಳು ಆಗಿಲ್ಲ. ಆಡಳಿತದ ಹೆಸರಿನಲ್ಲಿ ಹಿಮಂತ ಬಿಸ್ವ ಶರ್ಮಾ ಅವರ ಭ್ರಷ್ಟಾಚಾರ ನಡೆಸುತ್ತಿದ್ದಾರೆ. ಅಸ್ಸಾಂನಲ್ಲಿ ನಡೆದಿರಬಹುದಾದ ಎಲ್ಲ ಭ್ರಷ್ಟಾಚಾರಗಳ ಮೂಲ ಕೆದಕುತ್ತಾ ಹೋದರೆ, ಅವು ಹಿಮಂತ ಅವರ ಮನೆ ಬಾಗಿಲಿಗೆ ಹೋಗಿ ನಿಲ್ಲುತ್ತವೆ. ಅಲ್ಲಿನ ಯುವಜನರು ಅಸ್ಸಾಂ ತೊರೆದು, ಬೆಂಗಳೂರಿಗೆ ಬರುತ್ತಿದ್ದಾರೆ? ಆ ಯುವಜನರಿಗಾಗಿ ತಾನು ಏನು ಮಾಡಿದ್ದೇನೆ ಎಂದು ಹಿಮಂತ ಅವರು ಆತ್ಮಾವಲೋಕನ ಮಾಡಿಕೊಳ್ಳಲಿ.



ಪ್ರಿಯಾಂಕ್

ಪ್ರಿಯಾಂಕ್ ಖರ್ಗೆ, ಮಾಹಿತಿ ತಂತ್ರಜ್ಞಾನ ಸಚಿವ



ಪದವಿ ಪೂರ್ವ ಶಿಕ್ಷಣ ಇಲಾಖೆಯು ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ವಿವಿಧ ಜಿಲ್ಲೆಗಳಿಂದ ಬಂದಿದ್ದ ವಿದ್ಯಾರ್ಥಿಗಳು ಅಣಕು ಕಲಾಪದಲ್ಲಿ ಭಾಗಿಯಾದರು ಪ್ರಜಾವಾಣಿ ಚಿತ್ರ

ಯುವ ಸಂಸತ್ ಸ್ಪರ್ಧೆ ಪ್ರತಿಮಾಗೆ ಪ್ರಥಮ ಸ್ಥಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣ ಇಲಾಖೆ ಮಂಗಳವಾರ ಆಯೋಜಿಸಿದ್ದ ರಾಜ್ಯಮಟ್ಟದ 'ಯುವ ಸಂಸತ್' ಸ್ಪರ್ಧೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ಪ್ರತಿಮಾ ಪ್ರಥಮ ಸ್ಥಾನ ಪಡೆದರು.

ಚಿಕ್ಕಮಗಳೂರು ಜಿಲ್ಲೆಯ ಇಷಾನಾ ದ್ವಿತೀಯ, ಹಾಸನದ ಶಾನಿಯಾ ತೃತೀಯ ಹಾಗೂ ರಾಮನಗರದ ರವಿಕುಮಾರ್ ನಾಲ್ಕನೇ ಬಹುಮಾನಕ್ಕೆ ಭಾಜನರಾದರು.

ರಾಜ್ಯದ ವಿವಿಧ ಜಿಲ್ಲೆಗಳ 64 ಪಿಯು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಪ್ರಧಾನ ಮಂತ್ರಿ, ಲೋಕಸಭಾಧ್ಯಕ್ಷ, ಆಡಳಿತ–ವಿರೋಧ ಪಕ್ಷದ ಸದಸ್ಯರ ಪಾತ್ರಗಳನ್ನು ಸದನದ ನಿಯಾವಳಿಗಳಂತೆಯೇ ಯಥಾವತ್ತಾಗಿ ನಿಭಾಯಿಸಿದರು. ವಿರೋಧ ಪಕ್ಷಗಳ ಸದಸ್ಯರಂತೂ ಪ್ರಶ್ನೆ, ಉಪ ಪ್ರಶ್ನೆಗಳ ಮೂಲಕ ಆಡಳಿತ ಪಕ್ಷವನ್ನು ತರಾಟೆಗೆ ತೆಗೆದುಕೊಂಡರು. 'ಒಂದು ರಾಷ್ಟ್ರ ಒಂದು ಚುನಾವಣೆ', 'ದೇಶದ ಹಣಕಾಸಿನ ಅಸಮರ್ಪಕ ಹಂಚಿಕೆ', 'ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲೆ ಗೊಳಿಸಿದ ಕೃತ್ಯ', ಹೀಗೆ ಹತ್ತು ಹಲವು ಗಂಭೀರ ವಿಷಯ ಕುರಿತು ಪ್ರಶ್ನೆಗಳನ್ನು ಕೇಳುವ ಮೂಲಕ ಗಮನ ಸೆಳೆದರು.


ಕೆಲವು ಸಮಯ ನೈಜ ಕಲಾಪದಲ್ಲಿ ನಡೆಯುವ ಗದ್ದಲದ ವಾತಾವರಣ ಇಲ್ಲಿಯೂ ಸೃಷ್ಟಿಯಾಗಿತ್ತು. ಹಲವಾರು ಬಾರಿ ಶಾಂತಿ ಕಾಪಾಡುವಂತೆ ಸಭಾಧ್ಯಕ್ಷರು ಹೇಳಿದರೂ, ಸದಸ್ಯರು ಕೇಳದಿದ್ದಾಗ, ತೀರ್ಪುಗಾರರು ಮಧ್ಯ ಪ್ರವೇಶಿಸಿ ನಿಯಮ ಸ್ಪಷ್ಟಪಡಿಸಿದರು. ತಮ್ಮ ಮಕ್ಕಳಿಗೆ ಪ್ರಶ್ನೆ ಕೇಳಲು ಅವಕಾಶ ನೀಡಲಿಲ್ಲ ಎಂದು ಸ್ಪರ್ಧೆ ನೋಡಲು ಬಂದಿದ್ದ ಕೆಲ ಪೋಷಕರು ಮಧ್ಯ ಪ್ರವೇಶಿಸಿ ತಮ್ಮ ಅಸಮಾಧಾನ ವ್ಯಕ್ತಪಡಿಸಿದರು. ಆನಂತರ ಸಮಸ್ಯೆಯನ್ನು ಅಧಿಕಾರಿಗಳು ಬಗೆಹರಿಸಿದರು.

> **ಚುನಾವಣೆಗಳ ಸೋಲು ಒಳ್ಳೆಯ ಪಾಠ ಕಲಿಸುತ್ತದೆ. ಯುವಕರು ರಾಜಕೀಯಕ್ಕೆ ಬರಬೇಕು. ಯುವ ಸಂಸತ್‌ನಂತಹ ಸ್ಪರ್ಧೆಗಳು ವಿದ್ಯಾರ್ಥಿಗಳ ಭವಿಷ್ಯಕ್ಕೆ ಸಹಕಾರಿಯಾಗುತ್ತವೆ**
> **ಮಧು ಬಂಗಾರಪ್ಪ,** ಶಾಲಾ ಶಿಕ್ಷಣ ಸಚಿವ

'ಸಚಿವ ಸ್ಥಾನದಿಂದ ಸಮುದಾಯ ಉದ್ಧಾರ ಆಗದು'

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಸಚಿವ ಸ್ಥಾನ ಸಿಗುವುದರಿಂದ ಸಮುದಾಯ ಉದ್ಧಾರ ಆಗಲ್ಲ. ಮೀಸಲಾತಿ ಮುಖ್ಯ' ಎಂದು ಕೂಡಲಸಂಗಮ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

ಇಲ್ಲಿ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಸಮುದಾಯದವರಿಗೆ ಸಚಿವ ಸ್ಥಾನ ನೀಡಿದ ಬಳಿಕ ಏನೇನು ಆಗಿದೆ ಎಂಬುದು ಎಲ್ಲರಿಗೂ ಗೊತ್ತು. ಸಚಿವ, ಶಾಸಕರಿಂದ ಸಮುದಾಯಕ್ಕೆ ನ್ಯಾಯ ಸಿಗುವುದು ಕಷ್ಟ. ಆದರೆ, ಮೀಸಲಾತಿ ಸೌಲಭ್ಯದಿಂದ ನ್ಯಾಯ ಸಿಗುತ್ತದೆ' ಎಂದು ಹೇಳಿದರು.

'ಸಚಿವ ಸ್ಥಾನ ಯಾರಿಗಾದರೂ ಕೊಡಲಿ. ಮೀಸಲಾತಿಗಾಗಿ ಪ್ರಾಮಾಣಿಕ ಹೋರಾಟ ನಡೆಯಲಿದೆ' ಎಂದರು.

'ವಚನಾನಂದ ಸ್ವಾಮೀಜಿ ತಮ್ಮದೇ ಆದ ರೀತಿ ಕಾನೂನು ಹೋರಾಟ ಮಾಡುತ್ತಾರೆ. ಮೀಸಲಾತಿ ಚಳವಳಿಯಲ್ಲಿ ಕೆಲ ಭಿನ್ನಾಭಿಪ್ರಾಯಗಳಿವೆ' ಎಂದರು.

ಕಾನೂನು ಹೋರಾಟ: ಸ್ವಾಮೀಜಿ

'ಪಂಚಮಸಾಲಿ ಸಮಾಜಕ್ಕೆ 2ಎ ಮೀಸಲಾತಿ ಸೌಲಭ್ಯಕ್ಕಾಗಿ ಬೀದಿ ಹೋರಾಟದ ಬದಲು ಕಾನೂನು ಹೋರಾಟ ಮಾಡುತ್ತೇವೆ' ಎಂದು ಹರಿಹರ ಪೀಠದ ವಚನಾನಂದ ಸ್ವಾಮೀಜಿ ತಿಳಿಸಿದರು.



ವಚನಾನಂದ ಸ್ವಾಮೀಜಿ

ಮೀಸಲಾತಿ ಹೋರಾಟದಲ್ಲಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರಿಗೆ ಬೆಂಬಲಿಸುವಿರಾ ಎಂಬ ಪ್ರಶ್ನೆಗೆ ಅವರು, 'ಆರಂಭಿಕ ಹಂತದಲ್ಲಿ ಜಾಗೃತಿ ಮೂಡಿಸಲು ಬೀದಿ ಹೋರಾಟ ಬೇಕಿತ್ತು. ಯಾರ ವಿರುದ್ಧವೂ ಮಾತನಾಡಲ್ಲ' ಎಂದರು.

ರಾಜಕಾರಣಿಗಳಿಂದ ಸ್ವಾಮೀಜಿಗಳ ಬಳಕೆ ಕುರಿತು ಪ್ರತಿಕ್ರಿಯಿಸಿ, 'ಸ್ವಾಮೀಜಿಗಳು ಜಾಣರಾಗಬೇಕು. ಹಿತ್ತಾಳೆ ಕಿವಿ ಮಾಡಿಕೊಳ್ಳಬಾರದು. ನಮ್ಮನ್ನು ಯಾರೂ ದುರ್ಬಳಕೆ ಮಾಡಿಕೊಂಡಿಲ್ಲ. ಮಾಡಿಕೊಳ್ಳಲು ಆಗುವುದೂ ಇಲ್ಲ' ಎಂದರು.

ಮತ್ತೆರಡು ಪಂಪ್ಡ್ ಸ್ಟೋರೇಜ್ ಯೋಜನೆ ಜಾರಿಗೆ ಪ್ರಸ್ತಾವ

ಪ್ರಜಾವಾಣಿ ವಾರ್ತೆ


ಕಾರವಾರ: 'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಅಲ್ಲದೇ ಬೆಳಗಾವಿ ಜಿಲ್ಲೆ ಸವದತ್ತಿ ಮತ್ತು ಬಳ್ಳಾರಿ ಜಿಲ್ಲೆಯಲ್ಲಿ ಪಂಪ್ಡ್ ಸ್ಟೋರೇಜ್ ಯೋಜನೆ ಕೈಗೆತ್ತಿಕೊಳ್ಳುವ ಪ್ರಸ್ತಾವ ಇದೆ' ಎಂದು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದ (ಕೆಪಿಸಿಎಲ್) ಕಾರ್ಯಪಾಲಕ ಎಂಜಿನಿಯರ್ ವಿ.ಎಂ.ವಿಜಯ ತಿಳಿಸಿದರು.

'ಬೆಳಗಾವಿ ಜಿಲ್ಲೆಯ ಸವದತ್ತಿಯಲ್ಲಿ 1,600 ಮೆಗಾ ವ್ಯಾಟ್ ಸಾಮರ್ಥ್ಯದ ಪಂಪ್ಡ್ ಸ್ಟೋರೇಜ್ ಯೋಜನೆಯ ಪ್ರಸ್ತಾವಕ್ಕೆ ಸಮ್ಮತಿ ಸಿಕ್ಕಿದೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. 'ರಾಜ್ಯದಲ್ಲಿ ವಿದ್ಯುತ್‌ಗೆ ಬೇಡಿಕೆ ಹೆಚ್ಚುವ ಅವಧಿಯಲ್ಲಿ ತಡೆರಹಿತ ವಿದ್ಯುತ್ ಪೂರೈಕೆಗೆ 2 ಸಾವಿರ ಮೆಗಾ ವ್ಯಾಟ್ ಸಾಮರ್ಥ್ಯದ ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ. ಆದರೆ, ಈ ಯೋಜನೆಗೆ ಪರಿಸರ, ವನ್ಯಜೀವಿ ಮತ್ತು ಅರಣ್ಯ ಅನುಮತಿ ಸಿಗುವುದು ಬಾಕಿ ಇದೆ' ಎಂದರು.

ಪ್ರಸನ್ನ ಕಲಾಕೃತಿಗಳ ಪ್ರದರ್ಶನ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್ತಿನ ಗ್ಯಾಲರಿ 4ರಲ್ಲಿ ಇದೇ 30ರಿಂದ ನ.2ರವರೆಗೆ ರಂಗಕರ್ಮಿ ಪ್ರಸನ್ನ ಅವರ ಕಲಾಕೃತಿಗಳ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ.



ಪ್ರಸನ್ನ

'ನಾಟಕವು ಬದುಕಿನೊಳಗೋ ಬದುಕು ನಾಟಕದೊಳಗೋ' ಶೀರ್ಷಿಕೆಯಡಿ ಈ ಪ್ರದರ್ಶನ ನಡೆಯಲಿದೆ. 30ರ ಸಂಜೆ 4 ಗಂಟೆಗೆ ಕಲಾ ವಿಮರ್ಶಕ ರವೀಂದ್ರ ತ್ರಿಪಾಠಿ ಅವರು ಈ ಪ್ರದರ್ಶನ ಉದ್ಘಾಟಿಸಲಿದ್ದಾರೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ಅವರು ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸುತ್ತಾರೆ.

ಲೇಖಕ ಅರುಣ್ ರಾಮನ್, ದೂರದರ್ಶನ ಚಂದನದ ಕಾರ್ಯಕ್ರಮ ವಿಭಾಗದ ಮುಖ್ಯಸ್ಥೆ ಎಚ್.ಎನ್. ಆರತಿ ಮುಖ್ಯ ಅತಿಥಿಗಳಾಗಿ ಭಾಗವಹಿಸುತ್ತಾರೆ. ಪ್ರಸನ್ನ ಅವರು ಉಪಸ್ಥಿತರಿರುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ರಾಜ್ಯೋತ್ಸವ ಪ್ರಶಸ್ತಿ: ಪಟ್ಟಿ ಅಂತಿಮ ಇಂದು

ಬೆಂಗಳೂರು: 2025-26ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಲು ಬುಧವಾರ (ಅ.29) ಮತ್ತೆ ಸಭೆ ನಡೆಯಲಿದೆ.

ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಲು ರಚಿಸಲಾಗಿದ್ದ ಸಮಿತಿಯು ನೀಡಿದ್ದ ಪಟ್ಟಿಯ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಗೃಹ ಕಚೇರಿ ಕೃಷ್ಣಾದಲ್ಲಿ ಉನ್ನತ ಮಟ್ಟದ ಆಯ್ಕೆ ಸಮಿತಿಯ ಸಭೆ ಮಂಗಳವಾರ ನಡೆಯಿತು.

‘ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗೆ 1:2 ಅನುಪಾತದಲ್ಲಿ ಅರ್ಹರ ಹೆಸರನ್ನು ಸಲಹಾ ಸಮಿತಿ ಶಿಫಾರಸು ಮಾಡಿದೆ. ಕೆಲವು ವಿಭಾಗಗಳಲ್ಲಿ 1:3 ಅನುಪಾತದಲ್ಲಿಯೂ ಹೆಸರುಗಳಿವೆ. ಈ ಎಲ್ಲ ಹೆಸರುಗಳ ಬಗ್ಗೆ ಸಭೆಯಲ್ಲಿ ಪ್ರಾಥಮಿಕ ಚರ್ಚೆ ನಡೆಯಿತು. ಪ್ರಶಸ್ತಿಗೆ 70 ಮಂದಿ ಅರ್ಹರನ್ನು ಆಯ್ಕೆ ಮಾಡಬೇಕಿದೆ. ಮುಖ್ಯಮಂತ್ರಿಯ ನೇತೃತ್ವದಲ್ಲಿ ಬುಧವಾರ ಸಂಜೆ ಮತ್ತೊಮ್ಮೆ ಸಭೆ ಸೇರಿ ಪಟ್ಟಿ ಅಂತಿಮಗೊಳಿಸಲು ತೀರ್ಮಾನಿಸಲಾಗಿದೆ’ ಎಂದು ಮೂಲಗಳು ಹೇಳಿವೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಜಿ. ಪರಮೇಶ್ವರ, ಕೆ.ಜೆ. ಜಾರ್ಜ್, ಎಚ್.ಸಿ. ಮಹದೇವಪ್ಪ, ಶಿವರಾಜ ತಂಗಡಗಿ, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಸಭೆಯಲ್ಲಿದ್ದರು.

ಕೆರೆಗೆ ಬಿದ್ದು ಬಾಲಕರ ಸಾವು

ತಾವರಗೇರಾ (ಕೊಪ್ಪಳ ಜಿಲ್ಲೆ): ಕುಷ್ಟಗಿ ತಾಲ್ಲೂಕಿನ ಹೊಮ್ಮಿನಾಳ ಗ್ರಾಮದ ಜಿನುಗು ಕೆರೆಯಲ್ಲಿ ಮಂಗಳವಾರ ಕಾಲು ಜಾರಿ ಬಿದ್ದು ಹೊಮ್ಮಿನಾಳದ ಯಮನೂರಗೌಡ (14), ಹನಮೇಶ ಕಟಗಿಹಳ್ಳಿ (12) ಮೃತಪಟ್ಟಿದ್ದಾರೆ.

ಹೊಲಕ್ಕೆ ಹೋಗಿ ಮರಳುವಾಗ ಅವಘಡ ನಡೆದಿದೆ. ತಾವರಗೇರಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಡ್ರಗ್ಸ್ ಕಡಿವಾಣಕ್ಕೆ ಎಎನ್‌ಟಿಎಫ್’

ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಪೀಕ್- ಕ್ಯಾಪ್ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದಕವಸ್ತು (ಡ್ರಗ್ಸ್) ಪೂರೈಕೆ, ಮಾರಾಟ ದಂಧೆಗೆ ಸಂಪೂರ್ಣ ಕಡಿವಾಣ ಹಾಕಲು ರಾಷ್ಟ್ರೀಯ ಮಾದಕವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಮಾದರಿಯಲ್ಲಿಯೇ ರಾಜ್ಯದಲ್ಲೂ ‘ಮಾದಕ ದ್ರವ್ಯ ವಿರೋಧಿ ಕಾರ್ಯಪಡೆ’ (ಎಎನ್‌ಟಿಎಫ್) ಅಸ್ತಿತ್ವಕ್ಕೆ ಬಂದಿದೆ.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಗೃಹ ಸಚಿವ ಜಿ.ಪರಮೇಶ್ವರ ಅವರು ಕಾರ್ಯಪಡೆಗೆ ಚಾಲನೆ ನೀಡಿದರು. ಇದೇ ವೇಳೆ ಪೊಲೀಸ್ ಸಿಬ್ಬಂದಿಗೆ ‘ಪೀಕ್ ಕ್ಯಾಪ್’ ವಿತರಿಸಿದರು.

ಸಿದ್ದರಾಮಯ್ಯ ಮಾತನಾಡಿ, ‘ಎಡಿಜಿಪಿ ಮಟ್ಟದ ಅಧಿಕಾರಿ ಕಾರ್ಯಪಡೆ ಮುಖ್ಯಸ್ಥರಾಗಿ ಇರಲಿದ್ದು, ಎಸ್‌ಪಿ, ಎಎಸ್‌ಪಿ, ಡಿವೈಎಸ್‌ಪಿ ಸೇರಿ 56 ಸಿಬ್ಬಂದಿ ಕಾರ್ಯನಿರ್ವಹಿಸಲಿದ್ದಾರೆ’ ಎಂದರು.

‘ಐದು ದಶಕಗಳ ಬಳಿಕ ಪೊಲೀಸ್ ಸಿಬ್ಬಂದಿಯ ಕ್ಯಾಪ್‌ನಲ್ಲಿ ಬದಲಾವಣೆ ಆಗಿದೆ. ಕಾರ್ಯಕ್ಷಮತೆಯೂ ಬದಲಾಗಬೇಕು. ದಕ್ಷವಾಗಿ ಕಾರ್ಯ ನಿರ್ವಹಿಸುವ ಮೂಲಕ ಸಮಾಜದಲ್ಲಿ ನಡೆಯುವ ಅಪರಾಧಗಳನ್ನು ಕಡಿಮೆ ಮಾಡಬೇಕು ಮತ್ತು ಸರ್ಕಾರಕ್ಕೂ ಒಳ್ಳೆಯ ಹೆಸರು ತರಬೇಕು’ ಎಂದು ಕಿವಿಮಾತು ಹೇಳಿದರು.

‘ರಾಜ್ಯದ ಪೊಲೀಸ್ ಕಾನ್‌ಸ್ಟೆಬಲ್ ಹಾಗೂ ಹೆಡ್ ಕಾನ್‌ಸ್ಟೆಬಲ್‌ಗಳು ಧರಿಸುತ್ತಿದ್ದ ‘ಸ್ಲೋಚ್ ಹ್ಯಾಟ್’ ಬದಲಿಗೆ ‘ಪೀಕ್ ಕ್ಯಾಪ್’ಗಳನ್ನು ಆಯ್ಕೆ ಮಾಡಿದ್ದು ನಾನೇ. ಇಂಡಿಯಾ ಜಸ್ಟೀಸ್ ವರದಿಯಂತೆ ಅತ್ಯುತ್ತಮ ಪೊಲೀಸ್ ಪಡೆಗಳಲ್ಲಿ ಕರ್ನಾಟಕ ನಂಬರ್ ಒನ್ ಸ್ಥಾನ ಪಡೆದಿರುವುದು ರಾಜ್ಯದ ಘನತೆ ಹೆಚ್ಚಿಸಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮಂಗಳೂರು ಗಲಭೆಪೀಡಿತ ನಗರವಾಗಿತ್ತು. ಪೊಲೀಸ್ ಅಧಿಕಾರಿಗಳನ್ನು ಬದಲಾವಣೆ ಮಾಡಿದ್ದರಿಂದ ನಿಯಂತ್ರಣಕ್ಕೆ ಬಂದಿದೆ. ಕೆಲವು ಪೊಲೀಸರು ರಿಯಲ್ ಎಸ್ಟೇಟ್ ಉದ್ಯಮಿಗಳ ಜತೆ ಶಾಮೀಲಾಗುತ್ತಾರೆ. ಡ್ರಗ್ಸ್ ಪೆಡ್ಲರ್‌ಗಳು, ಯಾರು ರೌಡಿಗಳು ಎಂದು ಗೊತ್ತಿದ್ದರೂ ಅವರನ್ನು ಬಂಧಿಸದೇ ಪೊಲೀಸರು ಬಿಟ್ಟುಬಿಡುತ್ತಾರೆ. ಇವರನ್ನು ಮೊಳಕೆಯಲ್ಲಿ ಚಿವುಟಿ ಹಾಕಬೇಕು. ಇಲ್ಲದಿದ್ದರೆ ದೊಡ್ಡ ಕ್ರಿಮಿನಲ್‌ಗಳಾಗುತ್ತಾರೆ ಎಂದು ಎಚ್ಚರಿಸಿದರು.

‘ಅಪರಾಧಿ ಹಾಗೂ ಕ್ರಿಮಿನಲ್‌ಗಳೊಂದಿಗೆ ಸಂಬಂಧ ಇಟ್ಟುಕೊಳ್ಳಬಾರದು. ದಿನೇ ದಿನೇ ಪೊಲೀಸರೆಂದರೆ ಕ್ರಿಮಿನಲ್‌ಗಳಿಗೆ ಭಯ ಕಡಿಮೆಯಾಗುತ್ತಿದೆ. ಯಾಕೆ ಕಡಿಮೆಯಾಗಿದೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳಿ’ ಎಂದರು.

ಡಿ.ಕೆ.ಶಿವಕುಮಾರ್ ಮಾತನಾಡಿ, ‘ಬೆಂಗಳೂರು ನಗರ ಹಾಗೂ ಇತರೆ ನಗರ ಪ್ರದೇಶಗಳಲ್ಲಿ ಪ್ರತಿ ಮನೆಯಲ್ಲಿ ಮನೆಗೆಲಸದವರು, ಚಾಲಕರು, ಕಾವಲುಗಾರರ ಮಾಹಿತಿ ಸಂಗ್ರಹಿಸಿ ಇಟ್ಟುಕೊಳ್ಳಬೇಕು. ಆಗ ಎಷ್ಟೋ ಮಟ್ಟಿಗೆ ಅಪರಾಧ ನಿಯಂತ್ರಣಕ್ಕೆ ಬರುತ್ತದೆ. ನೆರೆ ಮನೆಯ ಆದಿಕೇಶವಲು ಮನೆಯಲ್ಲಿ ಕಳ್ಳತನವಾಗಿ ಎಷ್ಟೋ ದಿನಗಳಾದರೂ ಅವರಿಗೆ ಗೊತ್ತಾಗಿರಲಿಲ್ಲ. ಆಭರಣ ಮಾರಾಟವಾಗಿ ಬೇರೆಯವರು ಧರಿಸಿದ್ದನ್ನು ನೋಡಿದ ಬಳಿಕ ಮನೆಯಲ್ಲಿ ಬಂದು ಹುಡುಕುತ್ತಾರೆ. ಮೂರು ವರ್ಷಗಳ ಬಳಿಕ ಕಳ್ಳತನವಾಗಿದೆ ಎಂದು ತಿಳಿಯಿತು. ಹೀಗಾಗಿ ನೀವು ಪ್ರತಿ ಮನೆಯಲ್ಲಿ ಕೆಲಸ ಮಾಡುವವರ ದಾಖಲೆ ಇಟ್ಟುಕೊಳ್ಳಿ. ಈ ಬಗ್ಗೆ ಆಲೋಚನೆ ಮಾಡಿ’ ಎಂದು ಸಲಹೆ ನೀಡಿದರು.

‘ಯಾವುದೇ ಸರ್ಕಾರ ಬಂದರೂ ಆತ್ಮವಿಶ್ವಾಸ ಹಾಗೂ ಕರ್ತವ್ಯ ನಿಷ್ಠೆಯಲ್ಲಿ ರಾಜಿಯಾಗಬಾರದು. ಒಂದು ವೇಳೆ ರಾಜಿ ಮಾಡಿಕೊಂಡರೆ ಸಂಪೂರ್ಣವಾಗಿ ವ್ಯವಸ್ಥೆ ಕುಸಿಯಲಿದೆ. ರಾಜಕಾರಣಿಗಳ ಹಿಂಬಾಲಕರಾದರೇ ಆಗ ನಿಮ್ಮನ್ನು ಯಾರು ನಂಬುತ್ತಾರೆ? ಹೀಗಾಗಿ ಇಂತಹ ಪದ್ಧತಿಗೆ ಅವಕಾಶ ಮಾಡಿಕೊಡಬೇಡಿ’ ಎಂದು ಕಿವಿ ಮಾತು ಹೇಳಿದರು.

‘ಬೆಂಗಳೂರಿನಲ್ಲಿ 1.40 ಕೋಟಿ ಜನರಿದ್ದಾರೆ. 1.23 ಕೋಟಿ ವಾಹನಗಳಿವೆ. ಇಂತಹ ಪರಿಸ್ಥಿತಿಯಲ್ಲಿ ರಸ್ತೆ ವಿಸ್ತರಣೆ ಕಷ್ಟವಾಗಿದೆ. ಎಐ ತಂತ್ರಜ್ಞಾನ ಬಳಸಿಕೊಂಡು ಸಂಚಾರ ದಟ್ಟಣೆ ನಿವಾರಣೆಗೆ ಇರುವ ಸಲಹೆಗಳನ್ನು ಸರ್ಕಾರಕ್ಕೆ ಸಲ್ಲಿಸಿ’ ಎಂದು ತಿಳಿಸಿದರು.

ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಮಾತನಾಡಿ, ‘ಪೊಲೀಸ್ ಇಲಾಖೆಯಲ್ಲಿ ಶೇಕಡ 85ರಷ್ಟು ಸಿಬ್ಬಂದಿಯ ಬಹುವರ್ಷಗಳ ಬೇಡಿಕೆಯನ್ನು ಸರ್ಕಾರ ಈಡೇರಿಸಿದೆ. ಇದರಿಂದ ಸಿಬ್ಬಂದಿಯ ಆತ್ಮವಿಶ್ವಾಸ ಹೆಚ್ಚಾಗಲಿದೆ’ ಎಂದರು.

ಶಾಸಕ ರಿಜ್ವಾನ್ ಅರ್ಷದ್, ವಿಧಾನಸಭೆಯಲ್ಲಿ ಸರ್ಕಾರದ ಮುಖ್ಯ ಸಚೇತಕ ಅಶೋಕ್ ಪಟ್ಟಣ, ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹಮದ್, ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್ ಗಿರಿನಾಥ್, ಡಿಜಿಪಿಗಳಾದ ರಾಮಚಂದ್ರರಾವ್, ಪ್ರಣವ್ ಮೊಹಾಂತಿ ಹಾಜರಿದ್ದರು.

‘ಸನ್ಮಿತ್ರ’ ಪರಿಚಯ

ಮಾದಕ ವಸ್ತು ಸೇವನೆ ಪ್ರಕರಣದಲ್ಲಿ ಶಿಕ್ಷೆ ಅನುಭವಿಸಿ ಹೊರ ಬಂದ ವ್ಯಕ್ತಿ ಮತ್ತೆ ವ್ಯಸನಕ್ಕೆ ಒಳಗಾಗದಂತೆ ನಿಗಾವಹಿಸಲು ಪೊಲೀಸ್ ಇಲಾಖೆಯು ‘ಸನ್ಮಿತ್ರ’ ಕಾರ್ಯಕ್ರಮವನ್ನು ಪರಿಚಯಿಸಿದೆ. ಮತ್ತೆ ಡ್ರಗ್ಸ್ ಚಟಕ್ಕೆ ಬೀಳಬಾರದು ಹಾಗೂ ಸಮಾಜದ ಮುಖ್ಯವಾಹಿನಿಗೆ ತರುವ ಸಲುವಾಗಿ ಆ ವ್ಯಕ್ತಿಯ ಮೇಲೆ ನಿಗಾ ಇಡಲು ಪೊಲೀಸ್ ಕಾನ್‌ಸ್ಟೆಬಲ್ ಒಬ್ಬರನ್ನು ನಿಯೋಜಿಸಲಾಗುತ್ತದೆ. ಮೂರು ವರ್ಷದವರೆಗೆ ಈ ವ್ಯಕ್ತಿಯ ಮೇಲೆ ಪೊಲೀಸರು ನಿಗಾವಹಿಸಲಿದ್ದು, ಅವರಿಗೆ ಚಿಕಿತ್ಸೆ, ಪುನರ್ವಸತಿ ಮತ್ತು ಆರೈಕೆಗೆ ನೆರವು ನೀಡಲಿದ್ದಾರೆ.



ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಗೃಹ ಸಚಿವ ಜಿ.ಪರಮೇಶ್ವರ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಪೊಲೀಸ್ ಕಾನ್‌ಸ್ಟೆಬಲ್‌ಗಳಿಗೆ ಪೀಕ್ ಕ್ಯಾಪ್‌ಗಳನ್ನು ತೊಡಿಸಿದರು

ಪ್ರಜಾವಾಣಿ ಚಿತ್ರ–ಪುಷ್ಕರ್ ವಿ.

> **8,500 ಪೊಲೀಸ್ ಕಾನ್‌ಸ್ಟೆಬಲ್‌ಗಳ ನೇಮಕಾತಿಗೆ ಸರ್ಕಾರ ಅನುಮತಿ ನೀಡಿದೆ. ಇನ್ನೊಂದು ವಾರದಲ್ಲಿ ಈ ಕುರಿತು ಅಧಿಸೂಚನೆ ಹೊರಡಿಸಲಾಗುವುದು**
> **ಜಿ.ಪರಮೇಶ್ವರ,** ಗೃಹ ಸಚಿವ

ಸುದ್ದಿ 2 ನಿಮಿಷ


ಜೆಡಿಎಸ್ ಪ್ರಮುಖರ ಸಮಿತಿ: ಜಿ.ಟಿ.ದೇವೇಗೌಡಗೆ ಕೊಕ್?

ಬೆಂಗಳೂರು: ಜೆಡಿಎಸ್ ಪ್ರಮುಖ ನಾಯಕರ ಸಮಿತಿಯ ಅಧ್ಯಕ್ಷರೂ ಆಗಿರುವ, ಶಾಸಕ ಜಿ.ಟಿ.ದೇವೇಗೌಡ ಅವರನ್ನು ಸಮಿತಿಯಿಂದ ಕೈಬಿಡಲು ಅಂತಿಮ ಹಂತದ ಸಿದ್ಧತೆ ನಡೆದಿದೆ.

ಪ್ರಮುಖ ನಾಯಕರ ಸಮಿತಿ ಪುನರ್‌ರಚನೆ ಸಂಬಂಧ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ ಅವರ ನೇತೃತ್ವದಲ್ಲಿ ಪಕ್ಷದ ಶಾಸಕರು ಹಿಂದಿನ ವಾರ ಸಭೆ ನಡೆಸಿದ್ದರು. ಜಿ.ಟಿ.ದೇವೇಗೌಡ ಅವರನ್ನು ಸಮಿತಿಯಿಂದ ಕೈಬಿಡುವಂತೆ ಸಭೆಯಲ್ಲಿ ಬಹುತೇಕ ಶಾಸಕರು ಒತ್ತಾಯಿಸಿದರು ಎಂದು ಮೂಲಗಳು ಹೇಳಿವೆ.

‘ಜಿ.ಟಿ.ದೇವೇಗೌಡ ಅವರು ಪಕ್ಷದ ಕೆಲಸ ಮಾಡುತ್ತಿಲ್ಲ. ಪ್ರಮುಖ ನಾಯಕರ ಸಮಿತಿಯ ಅಧ್ಯಕ್ಷರಾಗಿದ್ದುಕೊಂಡು, ಪಕ್ಷ ವಿರೋಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರನ್ನು ಸಮಿತಿಯ ಅಧ್ಯಕ್ಷ ಸ್ಥಾನದಿಂದ ಮತ್ತು ಸಮಿತಿಯಿಂದ ಕೈಬಿಡಬೇಕು ಎಂದು ಎಲ್ಲ ಶಾಸಕರು ಒತ್ತಾಯಿಸಿದರು’ ಎಂದಿವೆ.

‘ರಾಜ್ಯ ಸರ್ಕಾರದ ಜನ ವಿರೋಧಿ ನೀತಿಯ ವಿರುದ್ಧ ಪಕ್ಷದ ನಾಯಕರು ಹೋರಾಟಗಳನ್ನು ಸಂಘಟಿಸುತ್ತಿದ್ದರೆ, ಜಿ.ಟಿ.ದೇವೇಗೌಡ ಅವರು ಕಾಂಗ್ರೆಸ್ ಸರ್ಕಾರ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹೊಗಳುತ್ತಾರೆ. ಇದರಿಂದ ಪಕ್ಷಕ್ಕೆ ಹಲವು ಬಾರಿ ಮುಜುಗರವಾಗಿದೆ. ಹೀಗಾಗಿ ಅವರನ್ನು ಸಮಿತಿಯಿಂದ ಕೈಬಿಡಲೇಬೇಕು ಎಂದು ಶಾಸಕರು ಪಟ್ಟು ಹಿಡಿದಿದ್ದಾರೆ’ ಎಂದು ವಿವರಿಸಿವೆ.



‘ಜಿ.ಟಿ.ದೇವೇಗೌಡ ಅವರ ವರ್ತನೆ, ಪಕ್ಷ ವಿರೋಧಿ ಚಟುವಟಿಕೆಗಳನ್ನು ಪಕ್ಷದ ನಾಯಕರೂ ಗಮನಿಸಿದ್ದಾರೆ. ಈ ಬಗ್ಗೆ ತಿಳುವಳಿಕೆ ಹೇಳಿದ್ದರೂ, ಅವರು ಸುಧಾರಿಸಿಲ್ಲ. ಹೀಗಾಗಿ ಶಾಸಕರ ಒತ್ತಾಯವನ್ನು ನಾಯಕರು ಪರಿಗಣಿಸಿದ್ದಾರೆ’ ಎಂದು ಮಾಹಿತಿ ನೀಡಿವೆ.

ಸಾಣೇಹಳ್ಳಿ: ರಾಷ್ಟ್ರೀಯ ನಾಟಕೋತ್ಸವ ನ. 2ರಿಂದ

ಹೊಸದುರ್ಗ (ಚಿತ್ರದುರ್ಗ): ‘ಯುಗದ ಉತ್ಸಾಹವ ನೋಡಿರೇ’ ಧ್ಯೇಯ ವಾಕ್ಯದೊಂದಿಗೆ ಸಾಣೇಹಳ್ಳಿಯ ತರಳಬಾಳು ಶಾಖಾ ಮಠದ ಶಿವಕುಮಾರ ಬಯಲು ರಂಗಮಂದಿರದಲ್ಲಿ ನ.2ರಿಂದ 6 ದಿನ ರಾಷ್ಟ್ರೀಯ ನಾಟಕೋತ್ಸವ ನಡೆಯಲಿದೆ.

‘ಇಷ್ಟಲಿಂಗ ದೀಕ್ಷಾ ಕಾರ್ಯಕ್ರಮ, ಚಿಂತನ, ಉಪನ್ಯಾಸ, ವಿಚಾರ ಸಂಕಿರಣವು ನಡೆಯಲಿವೆ. ನಿವೃತ್ತ ನ್ಯಾಯಮೂರ್ತಿ ಎಚ್. ಬಿಲ್ಲಪ್ಪ ನಾಟಕೋತ್ಸವ ಉದ್ಘಾಟಿಸುವರು’ ಎಂದು ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ‘ಈ ಬಾರಿ ಶಿವಸಂಚಾರ- 25 ತಂಡದಿಂದ ನಮ್ಮದೇ ರಚನೆಯ ‘ಜಂಗಮದೆಡೆಗೆ’, ‘ಶಿವಯೋಗಿ ಸಿದ್ಧರಾಮೇಶ್ವರ’, ಕೃಷ್ಣಮೂರ್ತಿ ಮೂಡಬಾಗಿಲು ರಚನೆಯ ‘ಕಳ್ಳರ ಸಂತೆ’, ರವಿಕಿರಣ್ ಆರ್. ಬಳ್ಳಗೆರೆ ಅವರ ‘ಅಳಿದ ಮಾಸ್ವಾಮಿಗಳು’, ಹಂಪನಾ ಅವರ ದೇಶೀ ಕಾವ್ಯ ‘ಚಾರು ವಸಂತ’, ವಿಜಯ ಭಾಸ್ಕರ ರಚನೆಯ ‘ಗಾಂಧಿ ಜಯಂತಿ’ ನಾಟಕಗಳು ಪ್ರದರ್ಶನಗೊಳ್ಳಲಿವೆ ಎಂದು ತಿಳಿಸಿದರು.

ನ. 7ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ನಟಿ, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಅವರಿಗೆ ‘ಶ್ರೀ ಶಿವಕುಮಾರ’ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದರು.

ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ವಿರುದ್ಧ ಭ್ರಷ್ಟಾಚಾರದ ಆರೋಪ

‘ನ್ಯಾಯಾಂಗ ತನಿಖೆಗೆ ಒತ್ತಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಅವರ ಅವಧಿಯಲ್ಲಿನ ವಿವಾದ, ಗೊಂದಲ, ಭ್ರಷ್ಟಾಚಾರದ ಆರೋಪಗಳ ಕುರಿತು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ನಿಕಟಪೂರ್ವ ವಿಧಾನಸಭಾಧ್ಯಕ್ಷರೂ ಆದ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, ‘ವಿಧಾನ ಸಭಾಧ್ಯಕ್ಷರ ಕಾರ್ಯಾಲಯದ ಎಲ್ಲ ಟೆಂಡರ್‌ಗಳು ಮಂಗಳೂರು ಮೂಲದ ಕೆಲವರಿಗೇ ಏಕೆ ಸಿಗುತ್ತಿವೆ? ಈ ಕುರಿತು ವಿಧಾನಸಭಾಧ್ಯಕ್ಷರ ಕಚೇರಿಯ ಅಧಿಕಾರಿಗಳ ಅಭಿಪ್ರಾಯ ಏನು? ತುರ್ತಾಗಿ ಸಾಮಗ್ರಿಗಳನ್ನು ಖರೀದಿಸುವ ಅಗತ್ಯ ಇಲ್ಲದಿದ್ದರೂ ತರಾತುರಿ ಮಾಡಿರುವುದು ಏಕೆ? ನನಗೆ ಬಂದಿರುವ ಮಾಹಿತಿ ಪ್ರಕಾರ, ಹಲವು ಖರೀದಿ ಟೆಂಡರ್‌ಗಳನ್ನು ಆರ್ಥಿಕ ಇಲಾಖೆ ತಿರಸ್ಕರಿಸಿದೆ. ನಂತರ ಆರ್ಥಿಕ ಇಲಾಖೆ ಜವಾಬ್ದಾರಿ ಹೊತ್ತ ಮುಖ್ಯಮಂತ್ರಿಯೇ ಒಪ್ಪಿಗೆ ಕೊಡಿಸಿದ ಆರೋಪವಿದೆ’ ಎಂದು ದೂರಿದರು.

‘ವಿಧಾನಸಭೆಯ ಪ್ರಧಾನ ಬಾಗಿಲಿಗೆ ಬೀಟೆ ಮರದ ಕೆತ್ತನೆಯ ಚೌಕಟ್ಟು ಅಳವಡಿಕೆ, ಸಭಾಂಗಣಕ್ಕೆ ಹೊಸ ಟಿ.ವಿ. ಸೆಟ್ ಅಳವಡಿಸಿದ್ದರೂ ಎಐ ಮಾನಿಟರ್ ಘಟಕ ಹಾಕಲು ದುಬಾರಿ ಮೊತ್ತ ಖರ್ಚು ಮಾಡಲಾಗಿದೆ. ಎಲ್ಲ ಶಾಸಕರಿಗೆ ಗಂಡಭೇರುಂಡ ಚಿತ್ರದ ಗಡಿಯಾರಗಳನ್ನು ಕೊಟ್ಟಿದ್ದಾರೆ. ಮೊಗಸಾಲೆಯಲ್ಲಿ ಯಂತ್ರ ಅಳವಡಿಸಿ ಮಸಾಜ್ ಪಾರ್ಲರ್ ಮಾದರಿಯಲ್ಲಿ ಬದಲಾಯಿಸಿದ್ದಾರೆ. ಅಧಿವೇಶನ ನಡೆಯುವಾಗ ಸರ್ಕಾರದಿಂದ ಶಾಸಕರಿಗೆ ಊಟ, ಉಪಚಾರದ ವ್ಯವಸ್ಥೆ ಮಾಡುವ ಅಗತ್ಯ ಏನಿತ್ತು’ ಎಂದು ಪ್ರಶ್ನಿಸಿದರು.


‘ಶಾಸಕರ ಭವನಕ್ಕೆ ಮಂಚ, ಟೇಬಲ್ ಹಾಕಿಸಿದ್ದಾರೆ. 123 ಸ್ಮಾರ್ಟ್ ಎನರ್ಜಿ ಸೊಲ್ಯೂಷನ್, 224 ಸೇಫ್ ಲಾಕರ್, ಅಷ್ಟೇ ಸಂಖ್ಯೆಯ ಡೋರ್ ಲಾಕರ್ ಖರೀದಿ ಮಾಡಿದ್ದಾರೆ. ಹಾಸು ಹೊದಿಕೆ, ಕಾರ್ಪೆಟ್ ಬದಲಿಸಿ, ಸುಣ್ಣ-ಬಣ್ಣ ಹೊಡೆಸಿದ್ದಾರೆ. ವಿಧಾನಸೌಧದ ಆವರಣದಲ್ಲಿ ನಡೆದ ಪುಸ್ತಕ ಮೇಳಕ್ಕೆ ₹4.5 ಕೋಟಿ ಖರ್ಚು ಮಾಡಿದ್ದಾರೆ. ಸರ್ಕಾರವೇ ಪುಸ್ತಕ ಖರೀದಿಸಿ ಹಂಚಿದ್ದರೂ ಇಷ್ಟಾಗುತ್ತಿತ್ತಾ, ಗೊತ್ತಿಲ್ಲ. ಮಳಿಗೆ, ವಿದ್ಯುತ್ ಅಲಂಕಾರ ಬಿಟ್ಟರೆ ಬೇರೆ ಏನೂ ಮಾಡಿಲ್ಲ. ಅವರು ಯಾವುದೇ ಕೆಲಸಕ್ಕೆ ಕೈ ಹಾಕಿದರೂ ಅದರೊಳಗೆ ಇನ್ನೂ ಏನೋ ಇದೆ ಎಂಬ ಅನುಮಾನಗಳು ಮೂಡುತ್ತಿವೆ’ ಎಂದರು.

‘ಯು.ಟಿ. ಖಾದರ್ ಅವರು ಈಗ ವಿದೇಶದಲ್ಲೇ ಇದ್ದಾರೆ. ಅವರು ಎಷ್ಟು ದೇಶಗಳಿಗೆ ಹೋಗಿದ್ದಾರೆ. ಸರ್ಕಾರದ ಹಣ ಎಷ್ಟು ಖರ್ಚು ಮಾಡಿದ್ದಾರೆ. ಯಾರ್‍ಯಾರ ಜತೆ ಪ್ರವಾಸ ಮಾಡಿದ್ದಾರೆ ಎನ್ನುವ ಎಲ್ಲ ಅಂಶಗಳೂ ಬಹಿರಂಗವಾಗಬೇಕು. ಹುದ್ದೆಯ ಘನತೆ, ಗೌರವಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿಲ್ಲ. ಪಕ್ಷಪಾತಿಯಾಗಿದ್ದಾರೆ. ಪೀಠದ ವಿರುದ್ಧವೇ ಆರೋಪಗಳು ಬರುತ್ತಿವೆ. ಹಾಗಾಗಿ, ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳಿಂದ ಆರೋಪಗಳ ಕುರಿತು ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದರು.



> **ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರಿಗೆ ಇದುವರೆಗೂ ಸರ್ಕಾರಿ ವಸತಿಗೃಹ ಹಂಚಿಕೆ ಮಾಡಿಲ್ಲ. ಇಂತಹ ನಡೆ ವ್ಯವಸ್ಥೆಗೆ ಗೌರವ ತರುವುದಿಲ್ಲ**
> **ವಿಶ್ವೇಶ್ವರ ಹೆಗಡೆ ಕಾಗೇರಿ,** ನಿಕಟಪೂರ್ವ ವಿಧಾನಸಭಾಧ್ಯಕ್ಷ

‘ಯಾವುದೇ ತನಿಖೆ ಎದುರಿಸಲು ಸಿದ್ಧ’



ಮಂಗಳೂರು: ‘ವಿಧಾನಸಭಾಧ್ಯಕ್ಷರ ಕಾರ್ಯಾಲಯದ ವಿರುದ್ಧ ಮಾಡಿರುವ ಆರೋಪ ದುರುದ್ದೇಶದಿಂದ ಕೂಡಿದೆ. ಎಲ್ಲ ಖರೀದಿಗಳನ್ನು ಕ್ರಮಬದ್ಧವಾಗಿಯೇ ಮಾಡಲಾಗಿದೆ. ಈ ಬಗ್ಗೆ ಯಾವುದೇ ತನಿಖೆ ಎದುರಿಸಲು ಸಿದ್ಧ’ ಎಂದು ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದ್ದಾರೆ.

ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ತಮ್ಮ ವಿರುದ್ಧ ಮಾಡಿರುವ ಆರೋಪಗಳ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅವರು, ‘ರಾಜಕೀಯಪ್ರೇರಿತ ಆರೋಪಗಳಿಗೆ ಮಹತ್ವ ಕೊಡುವ ಅಗತ್ಯವಿಲ್ಲ’ ಎಂದರು.

ಸಾಮಗ್ರಿ	ಮಾರುಕಟ್ಟೆ ಗರಿಷ್ಠ ದರ	ಖರೀದಿಸಿದ ದರ (₹ಗಳಲ್ಲಿ)
ಸ್ಮಾರ್ಟ್ ಡೋರ್ ಲಾಕರ್	16,000	49,000
ಸ್ಮಾರ್ಟ್ ಸೇಫ್ ಲಾಕರ್	9,000	35,000
ಸ್ಮಾರ್ಟ್ ಎನರ್ಜಿ ಸೊಲ್ಯೂಷನ್	30,000	90,500
ನೀರು ಶುದ್ಧೀಕರಣ ಘಟಕ	53,000	65,000

ಚುನಾವಣೆ: ಬಿಜೆಪಿ ಸಂಚಾಲಕರ ನೇಮಕ

ಬೆಂಗಳೂರು: ಶಿಕ್ಷಕರ, ಪದವೀಧರರ ಕ್ಷೇತ್ರದ ವಿಧಾನಪರಿಷತ್ ಚುನಾವಣೆಯಲ್ಲಿ ಸಂಘಟನೆಗೆ ಸಂಚಾಲಕರು ಮತ್ತು ಸಹ ಸಂಚಾಲಕರನ್ನು ಬಿಜೆಪಿ ನೇಮಿಸಿದೆ ಈಶಾನ್ಯ ಶಿಕ್ಷಕರ ಕ್ಷೇತ್ರಕ್ಕೆ ಅಮರನಾಥ ಪಾಟೀಲ (ಸಂಚಾಲಕ), ನವೀನ್ ಗುಳ್ಳಣ್ಣನವರ್ (ಸಹ-ಸಂಚಾಲಕ), ಪಶ್ಚಿಮ ಪದವೀಧರರ ಕ್ಷೇತ್ರಕ್ಕೆ ಅರುಣ್ ಶಹಾಪುರ (ಸಂಚಾಲಕ), ಸಂತೋಷ್ ದೇವರೆಡ್ಡಿ (ಸಹ-ಸಂಚಾಲಕ), ಆಗ್ನೇಯ ಪದವೀಧರರ ಕ್ಷೇತ್ರಕ್ಕೆ ವೈ.ಎ.ನಾರಾಯಣ ಸ್ವಾಮಿ (ಸಂಚಾಲಕ), ಚಿದಾನಂದ ಎಂ. ಗೌಡ (ಸಹ-ಸಂಚಾಲಕ), ಬೆಂಗಳೂರು ಶಿಕ್ಷಕರ ಕ್ಷೇತ್ರಕ್ಕೆ ಎಸ್.ಕೇಶವ ಪ್ರಸಾದ್ (ಸಂಚಾಲಕ), ಎಸ್.ಎನ್.ರಾಜಣ್ಣ (ಸಹ-ಸಂಚಾಲಕ) ನೇಮಕಗೊಂಡಿದ್ದಾರೆ.

ದಲಿತ ‘ಶಕ್ತಿ ಪ್ರದರ್ಶನ’ಕ್ಕೆ ತಯಾರಿ

ಒಂದನೇ ಪುಟದಿಂದ...

ಸಿದ್ದರಾಮಯ್ಯ ಅವರ ಹೇಳಿಕೆಯನ್ನು ಸಮರ್ಥಿಸಿಕೊಂಡ ಪರಮೇಶ್ವರ, ‘ಅವರ ಹೇಳಿಕೆಯಲ್ಲಿ ತಪ್ಪೇನಿದೆ? ಹೈಕಮಾಂಡ್ ತೀರ್ಮಾನಕ್ಕೆ ನಾವೆಲ್ಲರೂ ಬದ್ಧ. ಹೈಕಮಾಂಡ್‌ಗೆ ಎಲ್ಲವೂ ಗೊತ್ತಿದೆ. ಸಂದರ್ಭ ಬಂದಾಗ ನಾಯಕತ್ವಕ್ಕೆ ಸಂಬಂಧಿಸಿದ ಎಲ್ಲ ಗೊಂದಲಗಳನ್ನು ಬಗೆಹರಿಸುವಂತೆ ನಾನೂ ಹೈಕಮಾಂಡ್‌ಗೆ ಹೇಳುತ್ತೇನೆ’ ಎಂದೂ ಹೇಳಿದರು.

‘ಯಾರು ಯಾರಿಗೂ ಅನಿವಾರ್ಯವಲ್ಲ’

‘ರಾಜಕೀಯದಲ್ಲಿ ಯಾರೂ ಯಾರಿಗೂ ಅನಿವಾರ್ಯರಲ್ಲ. ಇಂಥವರಿದ್ದರೆ ಮಾತ್ರ ಸಂಸ್ಥೆ ನಡೆಯುತ್ತದೆ ಎನ್ನುವುದು ಅಂಧಾಭಿಮಾನ. ಹೊಗಳು ಭಟ್ಟತನವು ಸರ್ವಾಧಿಕಾರವನ್ನು ಸೃಷ್ಟಿಸುತ್ತದೆ’ ಎಂದು ಎಚ್.ಸಿ.ಮಹದೇವಪ್ಪ ಹೇಳಿದರು.

‘ಕಾಂಗ್ರೆಸ್‌ಗೆ ಸಿದ್ದರಾಮಯ್ಯ ಅನಿವಾರ್ಯ’ ಎಂದು ಶಾಸಕ ಕೆ.ಎನ್.ರಾಜಣ್ಣ ಇತ್ತೀಚೆಗೆ ನೀಡಿದ ಹೇಳಿಕೆಗೆ ಪ್ರತಿಕ್ರಿಯಿಸಿದರು.

ಅಚ್ಚರಿ ಆಯ್ಕೆ: ರಾಜಣ್ಣ ಸುಳಿವು

ತುಮಕೂರು: ‘ಕಾಂಗ್ರೆಸ್ ಹೈಕಮಾಂಡ್ ಸಾಕಷ್ಟು ಸಲ ಅಚ್ಚರಿ ಎನ್ನುವಂತೆ ಮುಖ್ಯಮಂತ್ರಿ ಆಯ್ಕೆ ಮಾಡಿದೆ’ ಎಂದು ಶಾಸಕ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿ ಯಾವ ರೀತಿ ತೀರ್ಮಾನ ಆಗುತ್ತದೆ ಎಂದು ಹೇಳುವುದು ಕಷ್ಟ ಎಂದರು.

‘ವೀರಪ್ಪ ಮೊಯ್ಲಿ ಮುಖ್ಯಮಂತ್ರಿಯಾದ ಸಮಯದಲ್ಲೂ ರಾಜ್ಯದಲ್ಲಿ ಇಂತಹದ್ದೇ ಪರಿಸ್ಥಿತಿ ನಿರ್ಮಾಣವಾಗಿತ್ತು. ಹೈಕಮಾಂಡ್ ತೀರ್ಮಾನದಂತೆ ಮೊಯ್ಲಿ ಮುಖ್ಯಮಂತ್ರಿಯಾದರು’ ಎಂದರು.

‘ಕುರ್ಚಿ ಕಿತ್ತಾಟಕ್ಕೆ ಜನರ ಬೇಸರ’

ಬೆಂಗಳೂರು: ‘ರೈತರ ಸಮಸ್ಯೆಗೆ ಪರಿಹಾರ ಕೊಡಲು ಸಾಧ್ಯವಾಗದ ಸರ್ಕಾರ ಮುಖ್ಯಮಂತ್ರಿ ಬದಲಾವಣೆಯ ಚರ್ಚೆಯಲ್ಲಿ ಮುಳುಗಿದೆ. ಕಾಂಗ್ರೆಸ್ ನಾಯಕರ ಕಿತ್ತಾಟಕ್ಕೆ ಜನರು ಬೇಸತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದರು.


ಸುದ್ದಿಗಾರರ ಜತೆ ಮಾತನಾಡಿದ ಅವರು, ‘ನಾನೇ ಐದು ವರ್ಷ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಅವರು ಹೇಳುವ ಸ್ಥಿತಿ ಬಂದಿದೆ. ಆಡಳಿತ ಪಕ್ಷದಲ್ಲೇ ಮುಖ್ಯಮಂತ್ರಿ ಬಗ್ಗೆ ವಿಶ್ವಾಸ ಹೊರಟು ಹೋಗಿದೆ. ರಾಜ್ಯದಲ್ಲಿ ಆಡಳಿತ ಸಂಪೂರ್ಣ ಕುಸಿದಿದೆ. ಹೇಳಿಕೆಗಳನ್ನು ನಿಲ್ಲಿಸದೆ ಹೋದರೆ ಆಡಳಿತದ ಮೇಲೆ ಪರಿಣಾಮ ಬೀರುತ್ತದೆ ಎಂದು ಗೃಹ ಸಚಿವ ಜಿ.ಪರಮೇಶ್ವರ ಒಪ್ಪಿಕೊಂಡಿದ್ದಾರೆ’ ಎಂದು ಟೀಕಿಸಿದರು.

‘ರಾಜ್ಯದ ಜನರಿಗೆ ಮುಖ್ಯಮಂತ್ರಿ ಯಾರು ಆಗುತ್ತಾರೆ? ಬದಲಾಗುತ್ತಾರಾ ಎಂಬ ಬಗ್ಗೆ ಆಸಕ್ತಿ ಇಲ್ಲ. ಇವರ ಒಳ ಜಗಳದಿಂದ ಕೆಪಿಸಿಸಿ ಕಚೇರಿಗೆ ಬೀಗ ಹಾಕುವುದು ಇರಲಿ, ರಾಜ್ಯದ ಖಜಾನೆಗೆ ಬೀಗ ಹಾಕಿ ಕೂತಿದ್ದಾರೆ. ರಾಜ್ಯವನ್ನು ಆರ್ಥಿಕ ಸಂಕಷ್ಟಕ್ಕೆ ಮುಖ್ಯಮಂತ್ರಿಯೇ ದೂಡುತ್ತಿದ್ದಾರೆ’ ಎಂದು ಆರೋಪಿಸಿದರು.

ಗೋವಿಂದಸ್ವಾಮಿ ನೇಮಕಾತಿ ರದ್ದು

ಬೆಂಗಳೂರು: ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿ ಅಧ್ಯಕ್ಷ ಸ್ಥಾನದಿಂದ ಎ.ಆರ್. ಗೋವಿಂದಸ್ವಾಮಿ ಅವರನ್ನು ವಜಾಗೊಳಿಸಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ.

2024ರ ಮಾರ್ಚ್‌ನಲ್ಲಿ ಅವರು ಅಧ್ಯಕ್ಷರಾಗಿ ನೇಮಕಗೊಂಡಿದ್ದರು.



ಕಾರ್ಯಕಾರಿ ಸಮಿತಿಯಲ್ಲಿ ಪ್ರಾರಂಭಿಕ ದಿನಗಳಿಂದಲೂ ಸಮನ್ವಯದ ಕೊರತೆ ಉಂಟಾಗಿತ್ತು. ಅಧ್ಯಕ್ಷರ ಕಾರ್ಯವೈಖರಿ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ಅಕಾಡೆಮಿ ಸದಸ್ಯರೊಬ್ಬರು ವಿಧಾನಸಭೆಯ ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿ ಅವರಿಗೆ ಪತ್ರ ಬರೆದಿದ್ದರು. ಅಲ್ಲದೆ, ಗೋವಿಂದಸ್ವಾಮಿ ಅವರು ಇಂಧನ ಇಲಾಖೆಯಲ್ಲಿ ನೌಕರರಾಗಿರುವ ಕಾರಣ, ಅವರ ನೇಮಕಾತಿ ಬಗ್ಗೆ ಪತ್ರದಲ್ಲಿ ಪ್ರಶ್ನಿಸಿದ್ದರು.

ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ರುದ್ರಪ್ಪ ಲಮಾಣಿ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ಅವರಿಗೆ ಇತ್ತೀಚೆಗೆ ಪತ್ರ ಬರೆದು ಒತ್ತಾಯಿಸಿದ್ದರು. ಈ ಬಗ್ಗೆ ಪರಿಶೀಲನೆ ನಡೆಸಿದ ಇಲಾಖೆ, ನೇಮಕಾತಿ ರದ್ದುಪಡಿಸಿ ಆದೇಶ ಹೊರಡಿಸಿದೆ.

ಸಿಬಿಐ ಅರ್ಜಿ ಪುರಸ್ಕರಿಸಿದ ಸುಪ್ರೀಂ ಕೋರ್ಟ್

ಸಾಕ್ಷ್ಯ ನಾಶ

ನವದೆಹಲಿ: ಧಾರವಾಡ ಜಿಲ್ಲಾ ಪಂಚಾಯಿತಿ ಸದಸ್ಯ ಯೋಗೀಶಗೌಡ ಗೌಡರ್ ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಿರುವ ಸಂಬಂಧ ಸಿಬಿಐ ಸಲ್ಲಿಸಿರುವ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ಪುರಸ್ಕರಿಸಿದೆ. ಇದರಿಂದಾಗಿ, ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಅವರಿಗೆ ಸಂಕಷ್ಟ ಎದುರಾಗಿದೆ.

ಕೊಲೆ ಪ್ರಕರಣದಲ್ಲಿ ಸಾಕ್ಷ್ಯ ನಾಶ ಮಾಡಿದ ಬಗ್ಗೆ ಕುಲಕರ್ಣಿ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿತ್ತು. ಈ ಪ್ರಕರಣವನ್ನು ಹೈಕೋರ್ಟ್ ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕೇಂದ್ರ ತನಿಖಾ ತಂಡವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

2016ರ ಜೂನ್ 15ರಂದು ಧಾರವಾಡದ ಸಪ್ತಾಪುರದಲ್ಲಿರುವ ಜಿಮ್ ಎದುರು ಯೋಗೀಶಗೌಡ ಕೊಲೆ ನಡೆದಿತ್ತು. 2019ರ ಸೆಪ್ಟೆಂಬರ್ 6ರಂದು ಬಿ.ಎಸ್. ಯಡಿಯೂರಪ್ಪ ನೇತೃತ್ವದ ರಾಜ್ಯ ಸರ್ಕಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿ ಆದೇಶಿಸಿತ್ತು.

ಸಿಬಿಐ ತನಿಖೆಯನ್ನು ಅಮಾನತಿನಲ್ಲಿ ಇರಿಸಿ ರಾಜ್ಯ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ 2020ರ ಫೆಬ್ರುವರಿ 21ರಂದು ತಡೆ ನೀಡಿದ್ದರಿಂದ ತನಿಖೆ ಮುಂದುವರಿಸಿದ್ದ ಸಿಬಿಐ, 2020ರ ನವೆಂಬರ್ 5ರಂದು ವಿನಯ್ ಕುಲಕರ್ಣಿ ಅವರನ್ನು ಬಂಧಿಸಿತ್ತು.

ಆಂಧ್ರಕ್ಕೆ ಅಪ್ಪಳಿಸಿದ ‘ಮೊಂಥಾ’

ಒಂದನೇ ಪುಟದಿಂದ...

ಆಂಧ್ರದ ನೆಲ್ಲೂರು ಜಿಲ್ಲೆಯ ಸುತ್ತಮುತ್ತಲ ಜಿಲ್ಲೆಗಳಲ್ಲಿ ಮಂಗಳವಾರ ಬೆಳಿಗ್ಗೆಯಿಂದಲೇ ಮಳೆ ಸುರಿದಿದೆ. ಒಡಿಶಾದ ಎಂಟು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ.

ಮೊಂಥಾ ಪರಿಣಾಮವು ರಾಜಸ್ಥಾನದವರೆಗೂ ಹಬ್ಬಿಕೊಂಡಿದ್ದು, ಬೂಂದಿ ಜಿಲ್ಲೆಯಲ್ಲಿ 13 ಸೆಂ.ಮೀ ಮಳೆ ಸುರಿದಿದೆ. ಅ.13ರಂದು ಪಶ್ಚಿಮ ಬಂಗಾಳದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಆಂಧ್ರದಲ್ಲಿ ಬೆಳೆ ನಾಶ: ‘ತೀವ್ರ ಮಳೆಯ ಕಾರಣ ಆಂಧ್ರಪ್ರದೇಶದ 38 ಸಾವಿರ ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ನಾಶವಾಗಿದೆ ಮತ್ತು 1.38 ಲಕ್ಷ ಹೆಕ್ಟೇರ್ ನಲ್ಲಿನ ತೋಟಗಾರಿಕಾ ಬೆಳೆ ನಾಶವಾಗಿದೆ’ ಎಂದು ಮುಖ್ಯಮಂತ್ರಿಗಳ ಕಚೇರಿ ತಿಳಿಸಿದೆ.

ಮೈತ್ರಿಕೂಟದ ಪ್ರಣಾಳಿಕೆ: ಉದ್ಯೋಗ, ಆರ್ಥಿಕ ನೆರವಿನ ಅಭಯ

ಮಹಾಮೈತ್ರಿ ಭರವಸೆ ಮಹಾಪೂರ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾಮೈತ್ರಿಕೂಟ ಸರ್ಕಾರ ರಚನೆಯಾದ 20 ದಿನಗಳಲ್ಲೇ, ರಾಜ್ಯದ ಪ್ರತಿ ಕುಟುಂಬದ ಸದಸ್ಯರೊಬ್ಬರಿಗೆ ಸರ್ಕಾರಿ ಉದ್ಯೋಗ ನೀಡಲು ಕಾಯ್ದೆ ಅಂಗೀಕರಿಸಲಾಗುವುದು. ಹಳೆಯ ಪಿಂಚಣಿ ಯೋಜನೆ ಜಾರಿಗೆ ತರಲಾಗುವುದು.

ಬಿಹಾರ ವಿಧಾನಸಭಾ ಚುನಾವಣೆಗೆ ಮಹಾಮೈತ್ರಿಕೂಟ ಮಂಗಳವಾರ ಬಿಡುಗಡೆ ಮಾಡಿರುವ ಪ್ರಣಾಳಿಕೆಯಲ್ಲಿನ (ತೇಜಸ್ವಿ ಅವರ ಬಿಹಾರ ಸಂಕಲ್ಪ) ಪ್ರಮುಖ ಅಂಶಗಳಿವು.

‘ಮಾಯ್-ಬೆಹಿನ್ ಮಾನ್’ ಯೋಜನೆಯಡಿ ಡಿಸೆಂಬರ್ 1ರಿಂದ ಮಹಿಳೆಯರು ತಿಂಗಳಿಗೆ ₹2,500 ಮತ್ತು ಮುಂದಿನ ಐದು ವರ್ಷಗಳವರೆಗೆ ವರ್ಷಕ್ಕೆ ₹30,000 ಆರ್ಥಿಕ ಸಹಾಯ ಪಡೆಯಲಿದ್ದಾರೆ. ಬಡವರ ಪ್ರತಿ ಕುಟುಂಬವು 200 ಯೂನಿಟ್ ಉಚಿತ ವಿದ್ಯುತ್ ಪಡೆಯಲಿದೆ. ₹500ಕ್ಕೆ ಅಡುಗೆ ಅನಿಲ ಒದಗಿಸಲಾಗುವುದು. ಎಂದು ಮೈತ್ರಿಕೂಟವು ಭರವಸೆ ನೀಡಿದೆ.

ಪ್ರಣಾಳಿಕೆಯು ಐಟಿ ಪಾರ್ಕ್, ವಿಶೇಷ ಆರ್ಥಿಕ ವಲಯಗಳು (ಎಸ್‌ಇಜೆಡ್‌ಗಳು), ಡೇರಿ ಆಧಾರಿತ ಕೈಗಾರಿಕೆಗಳು, ಐದು ಎಕ್ಸ್‌ಪ್ರೆಸ್‌ವೇಗಳ ನಿರ್ಮಾಣ ಮತ್ತು ಕೃಷಿ ಆಧಾರಿತ ಕೈಗಾರಿಕೆಗಳ ಸ್ಥಾಪನೆ ಸೇರಿದಂತೆ 25 ಅಂಶಗಳನ್ನು ಒಳಗೊಂಡಿದೆ.

ಸರ್ಕಾರ ರಚನೆಯಾದ 20 ತಿಂಗಳಲ್ಲಿ ರಾಜ್ಯದಾದ್ಯಂತ ಉದ್ಯೋಗ ಖಾತರಿ ಯೋಜನೆ ಜಾರಿಗೊಳಿಸಲಾಗುತ್ತದೆ. ಮೈತ್ರಿಕೂಟ ಅಧಿಕಾರಕ್ಕೆ ಬಂದರೆ ಮದ್ಯ ನಿಷೇಧದ ಪರಿಶೀಲನೆ ಮಾಡಲಾಗುವುದು. ರಾಜ್ಯದ ಸರ್ಕಾರಿ ಇಲಾಖೆಗಳಲ್ಲಿರುವ ಎಲ್ಲ ಗುತ್ತಿಗೆ ಕಾರ್ಮಿಕರನ್ನು ಕಾಯಂಗೊಳಿಸಲಾಗುವುದು ಎಂದು ಮೈತ್ರಿಕೂಟ ವಾಗ್ದಾನ ನೀಡಿದೆ. ಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್, ಎಐಸಿಸಿ ಮಾಧ್ಯಮ ವಿಭಾಗದ ಅಧ್ಯಕ್ಷ ಪವನ್ ಖೇರಾ, ಉಪಮುಖ್ಯಮಂತ್ರಿ ಅಭ್ಯರ್ಥಿ ಮುಕೇಶ್ ಸಹಾನಿ, ಸಿಪಿಐ (ಎಂಎಲ್) (ಎಲ್) ಪ್ರಧಾನ ಕಾರ್ಯದರ್ಶಿ ದೀಪಂಕರ್ ಭಟ್ಟಾಚಾರ್ಯ ಮತ್ತು ಇತರ ನಾಯಕರು ಜಂಟಿಯಾಗಿ ಪ್ರಣಾಳಿಕೆ ಬಿಡುಗಡೆ ಮಾಡಿದರು.

ರಾಹುಲ್ 12, ಪ್ರಿಯಾಂಕಾ 8 ರ‍್ಯಾಲಿ

ನವದೆಹಲಿ: ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಬುಧವಾರದಿಂದ ಸುಮಾರು ಒಂದು ಡಜನ್ ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಎಂಟು ರ‍್ಯಾಲಿಗಳಲ್ಲಿ ಭಾಗಿಯಾಗಲಿದ್ದಾರೆ.

ಕೆಲವು ರ‍್ಯಾಲಿಗಳಲ್ಲಿ ಮಹಾಮೈತ್ರಿಕೂಟದ ಮುಖ್ಯಮಂತ್ರಿ ಅಭ್ಯರ್ಥಿ ತೇಜಸ್ವಿ ಯಾದವ್ ಅವರೊಂದಿಗೆ ರಾಹುಲ್ ಜಂಟಿ ಪ್ರಚಾರ ನಡೆಸಲಿದ್ದಾರೆ. ಪ್ರಿಯಾಂಕಾ ಅವರು ನವೆಂಬರ್ 1ರಂದು ಬಚ್ವಾರದಿಂದ ತಮ್ಮ ಪ್ರಚಾರ ಆರಂಭಿಸುವ ಸಾಧ್ಯತೆ ಇದೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಸಿಪಿಐ ಪರಸ್ಪರ ಸ್ಪರ್ಧಿಸುತ್ತಿವೆ.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಅಕ್ಟೋಬರ್ 31ರಿಂದ ನವೆಂಬರ್ 5ರ ನಡುವೆ ಮೂರು ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ರಾಜೇಶ್ ರಾಮ್ ಕಣಕ್ಕಿಳಿದಿರುವ ಕುಟುಂಬ (ಮೀಸಲು) ಕ್ಷೇತ್ರ, ಕುಚೈಕೋಟ್ ಮತ್ತು ಅಮರ್‌ಪುರದಲ್ಲಿ ಚುನಾವಣಾ ಪ್ರಚಾರ ಮಾಡಲಿದ್ದಾರೆ.

ರಾಹುಲ್ ಅವರು ಮುಜಫರ್‌ಪುರದ ಸಕ್ರಾ ಕ್ಷೇತ್ರದಿಂದ ತೇಜಸ್ವಿ ಅವರೊಂದಿಗೆ ತಮ್ಮ ಪ್ರಚಾರ ಪ್ರಾರಂಭಿಸಲಿದ್ದಾರೆ. ನಂತರ ದರ್ಭಂಗಾದಲ್ಲಿ ಮತ್ತೊಂದು ರ‍್ಯಾಲಿ ನಡೆಸಲಿದ್ದಾರೆ. ನವೆಂಬರ್ 7ರವರೆಗೆ 10 ರ‍್ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಬಿಹಾರ ಪ್ರಜಾಮತ ಜನತಂತ್ರದ ಹಬ್ಬ
ವಿಧಾನಸಭಾ ಚುನಾವಣೆ - 2025

‘ಮುಸ್ಲಿಂ ಸಿ.ಎಂ ಯಾಕಾಗಬಾರದು?’

ಗೋಪಾಲಗಂಜ್ (ಪಿಟಿಐ): ಕೇವಲ ಶೇ 3ರಷ್ಟು ಜನಸಂಖ್ಯೆಯಿರುವ ಸಮುದಾಯಕ್ಕೆ ಉಪ ಮುಖ್ಯಮಂತ್ರಿ ಸ್ಥಾನದ ಭರವಸೆ ನೀಡುವುದಾದರೆ, ಶೇ 17ರಷ್ಟು ಜನಸಂಖ್ಯೆಯಿರುವ ಮುಸ್ಲಿಮರ ಪ್ರತಿನಿಧಿ ರಾಜ್ಯದ ಮುಖ್ಯಮಂತ್ರಿ ಯಾಕಾಗಬಾರದು ಎಂದು ಎಐಎಂಐಎಂ ಅಧ್ಯಕ್ಷ ಅಸಾದುದ್ದೀನ್ ಒವೈಸಿ ಮಂಗಳವಾರ ಪ್ರಶ್ನಿಸಿದ್ದಾರೆ.

ಪ್ರಶಾಂತ್ ಕಿಶೋರ್‌ಗೆ ನೋಟಿಸ್

ಪಟ್ನಾ/ಕೋಲ್ಕತ್ತ (ಪಿಟಿಐ): ಬಿಹಾರ ಮತ್ತು ಪಶ್ಚಿಮಬಂಗಾಳದ ಮತದಾರರ ಪಟ್ಟಿಗಳಲ್ಲಿ ಹೆಸರು ಹೊಂದಿರುವ ಕಾರಣಕ್ಕೆ ಜನ ಸುರಾಜ್ ಪಕ್ಷದ ಸಂಸ್ಥಾಪಕ ಪ್ರಶಾಂತ್ ಕಿಶೋರ್ ಅವರಿಗೆ ಮಂಗಳವಾರ ನೋಟಿಸ್ ನೀಡಲಾಗಿದೆ.

‘ಈ ಬಗ್ಗೆ ಮೂರು ದಿನಗಳೊಳಗಾಗಿ ಪ್ರತಿಕ್ರಿಯೆ ನೀಡುವಂತೆ’ ಬಿಹಾರದ ರೊಹ್ತಸ್ ಜಿಲ್ಲಾ ಚುನಾವಣಾ ಕಚೇರಿಯು ನೋಟಿಸ್‌ನಲ್ಲಿ ಸೂಚಿಸಿದೆ. ಪ್ರಶಾಂತ್ ಅವರು ಇದೇ ಜಿಲ್ಲೆಯ ಕರ್‌ಗಹರ್ ವಿಧಾನಸಭಾ ಕ್ಷೇತ್ರದ ಮತದಾರರಾಗಿದ್ದಾರೆ.

ಅಧಿಕೃತ ದಾಖಲೆಗಳ ಪ್ರಕಾರ ಪ್ರಶಾಂತ್ ಕಿಶೋರ್ ಅವರು ಪಶ್ಚಿಮ ಬಂಗಾಳದ ಭವಾನಿಪುರ ವಿಧಾನಸಭಾ ಕ್ಷೇತ್ರದಲ್ಲಿಯೂ ಮತದಾರರಾಗಿ ನೋಂದಣಿ ಮಾಡಿಕೊಂಡಿದ್ದಾರೆ. ‘ಪಶ್ಚಿಮಬಂಗಾಳದ ಮತದಾರರ ಪಟ್ಟಿಯಿಂದ ನನ್ನ ಹೆಸರನ್ನು ಕೈಬಿಡುವಂತೆ ಮನವಿ ಮಾಡಿದ ಬಳಿಕವೂ ಎರಡು ಸ್ಥಳಗಳ ಮತದಾರರ ಪಟ್ಟಿಯಲ್ಲಿ ಹೆಸರಿರುವುದಕ್ಕೆ ಚುನಾವಣಾ ಆಯೋಗವೇ ಹೊಣೆ’ ಎಂದು ಪ್ರಶಾಂತ್ ಕಿಶೋರ್ ಹೇಳಿದ್ದಾರೆ.

‘ರೋಸ್ಟರ್ ಬಿಂದು’ ಅನ್ಯಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿವಿಧ ಪ್ರವರ್ಗಗಳಿಗೆ ‘ರೋಸ್ಟರ್ ಬಿಂದು’ ನಿಗದಿಪಡಿಸಿ 2022ರ ಡಿ. 28ರಂದು ಹೊರಡಿಸಿರುವ ಆದೇಶ ಅವೈಜ್ಞಾನಿಕವಾಗಿದ್ದು, ಇದರಿಂದ ಪ್ರವರ್ಗ 3ಎ, ಪ್ರವರ್ಗ 3ಬಿ ಹಾಗೂ ಸಾಮಾನ್ಯ ವರ್ಗಕ್ಕೆ ಸೇರಿದವರಿಗೆ ಅನ್ಯಾಯವಾಗುತ್ತಿದೆ. ಈ ಅನ್ಯಾಯವನ್ನು ಸರಿಪಡಿಸಬೇಕು’ ಎಂದು ಆಗ್ರಹಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಒಕ್ಕಲಿಗರ ಸಂಘ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ ಮನವಿ ಸಲ್ಲಿಸಿವೆ.

ಈ ಆದೇಶ ಅನುಸರಿಸಿ ಸರ್ಕಾರಿ ಹುದ್ದೆಗಳಿಗೆ ನೇಮಕಾತಿ ಮತ್ತು ಬಡ್ತಿ ನೀಡುವುದರಿಂದ ಆಗುತ್ತಿರುವ ಅನ್ಯಾಯವನ್ನು ಸರಿಪಡಿಸಲು ಪರಿಣತ ಅಧಿಕಾರಿಗಳನ್ನು ಒಳಗೊಂಡ ಉನ್ನತ ಸಮಿತಿ ರಚಿಸಬೇಕು ಎಂದೂ ಮನವಿಯಲ್ಲಿ ಆಗ್ರಹಿಸಲಾಗಿದೆ.

ಕೇಂದ್ರ ಸರ್ಕಾರ 1997 ಮತ್ತು 2019 ರಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ನೀಡಿರುವ ಮೀಸಲಾತಿಯ ಆಧಾರದಲ್ಲಿ ವೈಜ್ಞಾನಿಕವಾಗಿ ಲೆಕ್ಕ ಹಾಕಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿದೆ. ಆದರೆ, ರಾಜ್ಯ ಸರ್ಕಾರ ಯಾವುದೇ ಆಧಾರ ಇಲ್ಲದೆ ರೋಸ್ಟರ್ ಬಿಂದುಗಳನ್ನು ಅವೈಜ್ಞಾನಿಕವಾಗಿ ನಿಗದಿಪಡಿಸಿದೆ. ಇದರಿಂದಾಗಿ ಪ್ರವರ್ಗ 3ಎ, ಪ್ರವರ್ಗ 3ಬಿ ಹಾಗೂ ಸಾಮಾನ್ಯ ವರ್ಗಕ್ಕೆ ಸೇರಿದವರಿಗೆ ಹಲವು ವರ್ಷಗಳಿಂದ ಅನ್ಯಾಯವಾಗುತ್ತಲೇ ಬಂದಿದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಕಡಿಮೆ ಹುದ್ದೆಗಳು ಮಂಜೂರಾಗಿರುವ ಇಲಾಖೆಗಳಲ್ಲಿ ನೇಮಕಾತಿಗಳಲ್ಲಿಯೂ 100 ಬಿಂದುಗಳ ರೋಸ್ಟರ್ ಬಿಂದುಗಳನ್ನೇ ಅಳವಡಿಸುವುದರಿಂದ ಪ್ರವರ್ಗ 3ಎ ಮತ್ತು ಪ್ರವರ್ಗ 3ಬಿಗೆ ಸೇರಿದವರು ಶಾಶ್ವತವಾಗಿ ವಂಚನೆಗೆ ಒಳಗಾಗುತ್ತಿದ್ದಾರೆ. ಹೀಗಾಗಿ, ಕೇಂದ್ರ ಸರ್ಕಾರ ಅಳವಡಿಸುತ್ತಿರುವ ರೋಸ್ಟರ್ ಬಿಂದುಗಳ ಮಾದರಿಯನ್ನು ಪರಿಶೀಲಿಸಿ ನ್ಯಾಯ ಒದಗಿಸಬೇಕು ಎಂದೂ ಕೋರಲಾಗಿದೆ.

ಒಕ್ಕಲಿಗರ ಸಂಘದ ವತಿಯಿಂದ ಅಧ್ಯಕ್ಷ ಬಿ.ಕೆಂಚಪ್ಪಗೌಡ, ಪ್ರಧಾನ ಕಾರ್ಯದರ್ಶಿ ಟಿ.ಕೋನಪ್ಪ ರೆಡ್ಡಿ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾದಿಂದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ಅವರು ಪ್ರತ್ಯೇಕವಾಗಿ ಈ ಮನವಿ ಸಲ್ಲಿಸಿದ್ದಾರೆ.

ನವೆಂಬರ್‌ನಲ್ಲಿ ಸಣ್ಣ ಬಜೆಟ್ ಚಿತ್ರಗಳ ಹಬ್ಬ

• ಅಭಿಲಾಷ್ ಪಿ.ಎಸ್.

ಚಂದನವನದಲ್ಲಿ ಡಿಸೆಂಬರ್‌ನಲ್ಲಿ ತೆರೆಕಾಣುವ ಸಿನಿಮಾಗಳು ಹಿಟ್ ಆಗುತ್ತವೆ ಎನ್ನುವ ನಂಬಿಕೆ ಹಿಂದಿನಿಂದಲೂ ಇದೆ. ಇದಕ್ಕೆ ಸಾಕ್ಷಿಯಾಗಿ 'ಮುಂಗಾರು ಮಳೆ', 'ಕಿರಿಕ್ ಪಾರ್ಟಿ', 'ಕೆಜಿಎಫ್-ಚಾಪ್ಟರ್ 1', 'ಕಾಟೇರ' ಹಾಗೂ 'ಮ್ಯಾಕ್ಸ್' ಸಿನಿಮಾಗಳು ಗೆದ್ದ ಉದಾಹರಣೆಗಳಿವೆ. ಈ ವರ್ಷದ ಡಿಸೆಂಬರ್‌ನ ಶುಕ್ರವಾರಗಳನ್ನು ಈಗಾಗಲೇ ಕನ್ನಡದ ಬಿಗ್‌ಸ್ಟಾರ್‌ಗಳ ಸಿನಿಮಾಗಳು ಕಾಯ್ದಿರಿಸಿವೆ.

ಪ್ರಕಾಶ್ ವೀರ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ, ದರ್ಶನ್ ನಟನೆಯ 'ಡೆವಿಲ್-ದಿ ಹೀರೊ' ಚಿತ್ರವು ಡಿ.12ರಂದು, ಡಿ.25ಕ್ಕೆ ಸಂಗೀತ ನಿರ್ದೇಶಕ ಅರ್ಜುನ್ ಜನ್ಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಶಿವರಾಜ್‌ಕುಮಾರ್, ಉಪೇಂದ್ರ ಹಾಗೂ ರಾಜ್ ಬಿ.ಶೆಟ್ಟಿ ಜೊತೆಯಾಗಿ ಕಾಣಿಸಿಕೊಳ್ಳಲಿರುವ '45' ಹಾಗೂ ವಿಜಯ್ ಕಾರ್ತಿಕೇಯ ಆ್ಯಕ್ಷನ್ ಕಟ್ ಹೇಳುತ್ತಿರುವ, ಸುದೀಪ್ ನಟನೆಯ 47ನೇ ಸಿನಿಮಾ 'ಮಾರ್ಕ್' ತೆರೆಕಾಣಲಿವೆ. ತೆಲುಗಿನಲ್ಲಿ ಅಖಂಡ-2 ಡಿ.5ರಂದು, ಹಿಂದಿಯ 'ಉರಿ' ಸಿನಿಮಾ ನಿರ್ದೇಶಿಸಿದ್ದ ಆದಿತ್ಯ ಧಾರ್ ನಿರ್ದೇಶನದ 'ಧುರಂಧರ್' ಡಿ.5ಕ್ಕೆ ತೆರೆಕಾಣುತ್ತವೆ. ಇದರಲ್ಲಿ ಸಂಜಯ್ ದತ್, ರಣ್‌ವೀರ್ ಸಿಂಗ್, ಅರ್ಜುನ್ ರಾಮ್‌ಪಾಲ್, ಮಾಧವನ್ ಹಾಗೂ ಅಕ್ಷಯ್ ಖನ್ನಾ ಹೀಗೆ ಖ್ಯಾತ ನಾಮರೇ ಇದ್ದಾರೆ. ಹಾಲಿವುಡ್‌ನ 'ಅವತಾರ್-ಫೈರ್ ಆ್ಯಂಡ್ ಆ್ಯಶ್' ಸಿನಿಮಾ ಡಿ.19ರಂದು ರಿಲೀಸ್ ಆಗಲಿದೆ. ಹೀಗೆ ಡಿಸೆಂಬರ್‌ನಲ್ಲಿ ಬಿಗ್ ಬಜೆಟ್ ಸಿನಿಮಾಗಳೇ ಚಿತ್ರಮಂದಿರಗಳಲ್ಲಿ ತುಂಬಿರಲಿವೆ.

ಅಕ್ಟೋಬರ್‌ನಲ್ಲಿ ರಿಷಬ್ ಶೆಟ್ಟಿ ನಿರ್ದೇಶನದ 'ಕಾಂತಾರ-ಚಾಪ್ಟರ್ 1' ರಾಜ್ಯದ ಬಹುತೇಕ ಚಿತ್ರಮಂದಿರಗಳನ್ನು ಆವರಿಸಿಕೊಂಡಿದೆ. ಹೀಗಾಗಿ ಈ ತಿಂಗಳಲ್ಲಿ ಬೆರಳೆಣಿಕೆಯ ಕನ್ನಡ ಸಿನಿಮಾಗಳು ತೆರೆಕಂಡಿವೆ. ಅ.31ಕ್ಕೆ 'ಕಾಂತಾರ' ಸಿನಿಮಾ ಒಟಿಟಿಯಲ್ಲಿ ಸ್ಟ್ರೀಮ್ ಆಗಲಿದ್ದು, ಸಿನಿಮಾಗಳಿಗೆ ಮತ್ತೆ ಚಿತ್ರಮಂದಿರಗಳು ದೊರೆಯಲಿವೆ. ಹೀಗಾಗಿ ಡಿಸೆಂಬರ್ ಸಿನಿಮಾ ದಟ್ಟಣೆಗೂ ಮುನ್ನವೇ ತಮ್ಮ ಚಿತ್ರಗಳನ್ನು ತೆರೆಗೆ ತರುವ ಗಡಿಬಿಡಿಯಲ್ಲಿದ್ದಾರೆ ನಿರ್ಮಾಪಕರು. ಹೀಗಾಗಿ ಈ ನವೆಂಬರ್‌ನಲ್ಲಿ ಕನ್ನಡದ ಸಣ್ಣ ಬಜೆಟ್ ಸಿನಿಮಾಗಳು ಸಾಲು ಸಾಲಾಗಿ ಚಿತ್ರಮಂದಿರಗಳಿಗೆ ಲಗ್ಗೆ ಇಡಲಿವೆ.



15ಕ್ಕೂ ಅಧಿಕ ಕನ್ನಡ ಸಿನಿಮಾ

ನವೆಂಬರ್‌ನಲ್ಲಿ ದೀಕ್ಷಿತ್ ಶೆಟ್ಟಿ-ಬೃಂದಾ ಆಚಾರ್ಯ ನಟನೆಯ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮಿ', ವಿಜಯ ರಾಘವೇಂದ್ರ ನಟನೆಯ 'ಸೆಕೆಂಡ್ ಕೇಸ್ ಆಫ್ ಸೀತಾರಾಮ್'('ಸೀತಾರಾಮ್ ಬಿನೋಯ್' ಸೀಕ್ವೆಲ್), ದುಷ್ಯಂತ್-ಆಶಿಕಾ ರಂಗನಾಥ್ ನಟನೆಯ 'ಗತವೈಭವ', ರಿತ್ವಿಕ್ ಮಠದ್-ಚೈತ್ರಾ ಜೆ. ಆಚಾರ್ ನಟನೆಯ 'ಮಾರ್ನಮಿ', ಎಸ್.ನಾರಾಯಣ್ ನಿರ್ದೇಶನದ 'ಮಾರುತ', ಲಿಖಿತ್ ಶೆಟ್ಟಿ, ನಟಿ ತೇಜಸ್ವಿನಿ ಶರ್ಮಾ ಹಾಗೂ ಖುಷಿ ರವಿ ನಟಿಸಿರುವ 'ಫುಲ್ ಮೀಲ್ಸ್', 'ಬಿಗ್‌ಬಾಸ್' ಖ್ಯಾತಿಯ ನಟ ರೂಪೇಶ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಜೈ' ಸೇರಿದಂತೆ 'ದಿ ಟಾಸ್ಕ್', 'ಐ ಆ್ಯಮ್ ಗಾಡ್', 'ಲವ್ ಯು ಮುದ್ದು', 'ಲವ್ ಒಟಿಪಿ', 'ಫ್ಲರ್ಟ್', 'ಕಂಗ್ರಾಚುಲೇಷನ್ಸ್ ಬ್ರದರ್', 'ಕೈಟ್ ಬ್ರದರ್ಸ್' ಸಿನಿಮಾಗಳು ತೆರೆಕಾಣಲಿವೆ.

ಇದರ ಜೊತೆಗೆ ಕನ್ನಡದವರೇ ಆದ ದೀಕ್ಷಿತ್ ಶೆಟ್ಟಿ ಹಾಗೂ ರಶ್ಮಿಕಾ ಮಂದಣ್ಣ ಅಭಿನಯದ ತೆಲುಗು ಸಿನಿಮಾ 'ದಿ ಗರ್ಲ್‌ಫ್ರೆಂಡ್' ಸಿನಿಮಾ ನ.7ಕ್ಕೆ ತೆರೆಕಾಣಲಿದೆ. ಕನ್ನಡದಲ್ಲೂ ಇದು ಡಬ್ ಆಗಿ ಬರಲಿದೆ. ನಂದಕಿಶೋರ್ ನಿರ್ದೇಶನದ ಮೋಹನ್ ಲಾಲ್ ನಟನೆಯ 'ವೃಷಭ' ನ.6ಕ್ಕೆ ರಿಲೀಸ್ ಆಗಲಿದೆ. ಇದರಲ್ಲಿ ಇಂದ್ರಜಿತ್ ಲಂಕೇಶ್ ಪುತ್ರ ಸಮರ್ಜಿತ್, ನಟಿ ರಾಗಿಣಿ ದ್ವಿವೇದಿ ನಟಿಸಿದ್ದಾರೆ. ಮಲಯಾಳದಲ್ಲಿ ನಿರ್ಮಾಣವಾಗಿರುವ ಈ ಸಿನಿಮಾ ಕನ್ನಡದಲ್ಲಿ ಡಬ್ ಆಗಿ ರಿಲೀಸ್ ಆಗಲಿದೆ.

ಹೀಗೆ ರಾಜ್ಯೋತ್ಸವದ ತಿಂಗಳಲ್ಲಿ ಚಿತ್ರಮಂದಿರಗಳಲ್ಲಿ ಕನ್ನಡ ಸಿನಿಮಾಗಳ ಭರಾಟೆ ಜೋರಾಗಿರಲಿದೆ.

ರಕ್ಕಿ ಚಿತ್ರಕ್ಕೆ ಅಶ್ವಿನಿ ಸಾಥ್



ವೆಂಕಟ್ ಭಾರಧ್ವಾಜ್ ನಿರ್ದೇಶನದ 'ರಕ್ಕಿ' ಸಿನಿಮಾದ ಮುಹೂರ್ತ ಇತ್ತೀಚೆಗೆ ನಡೆದಿದ್ದು, ನಿರ್ಮಾಪಕಿ ಅಶ್ವಿನಿ ಪುನೀತ್ ರಾಜ್‌ಕುಮಾರ್ ಕ್ಲ್ಯಾಪ್ ಮಾಡುವ ಮೂಲಕ ಚಿತ್ರೀಕರಣಕ್ಕೆ ಚಾಲನೆ ನೀಡಿದರು.

ಸಾಲಿಗ್ರಾಮದ ಸುರೇಶ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದು, ಸುರೇಶ್ ಅವರ ಪುತ್ರ ರಕ್ಕಿ ಈ ಚಿತ್ರದ ನಾಯಕನಾಗಿ ನಟಿಸುತ್ತಿದ್ದಾರೆ. ಆ್ಯಕ್ಷನ್ ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಈ ಚಿತ್ರದ ಚಿತ್ರೀಕರಣ ಬೆಂಗಳೂರಿನಲ್ಲಿ ನಿರ್ಮಿಸಿರುವ ಸೆಟ್‌ನಲ್ಲೇ ನಡೆಯಲಿದೆ. 'ರಕ್ಕಿ' ಪಟಾಕಿಯ ಹಾಗೆ. ನಾಯಕನ ವ್ಯಕ್ತಿತ್ವ ಈ ರೀತಿ ಇದೆ ಎಂದಿದೆ ಚಿತ್ರತಂಡ. ಆಶಿಕಾ ಸೋಮಶೇಖರ್, ಪಲ್ಲವಿ ಮಂಜುನಾಥ್ ನಾಯಕಿಯರಾಗಿ ನಟಿಸುತ್ತಿದ್ದಾರೆ. ಬಿ.ಸುರೇಶ್, ಹರಿಣಿ ಶ್ರೀಕಾಂತ್, ಸುಂದರ್ ರಾಜ್, ರಮೇಶ್ ಪಂಡಿತ್, ಸಂಪತ್ ಮೈತ್ರೇಯ, ಗಂಟೆ ಗೋವಿಂದ ಮುಂತಾದವರು ತಾರಾಬಳಗದಲ್ಲಿರಲಿದ್ದಾರೆ. ಲೋಕಿ ತವಸ್ಯ ಸಂಗೀತ ನಿರ್ದೇಶನ, ಐಸ್ಸಾಕ್ ಪ್ರಭಾಕರ್ ಛಾಯಾಚಿತ್ರಗ್ರಹಣ, ದೀಪು ಎಸ್. ಕುಮಾರ್ ಸಂಕಲನ ಚಿತ್ರಕ್ಕಿರಲಿದೆ.

'ನಾನು ಐಟಿ ಉದ್ಯೋಗಿ. ಇಪ್ಪತ್ತು ವರ್ಷಗಳಿಂದ ಜರ್ಮನ್‌ನಲ್ಲೇ ವಾಸಿಸುತ್ತಿದ್ದೇನೆ. ನನ್ನ ತಂದೆ ರಾಜಶೇಖರ್ ಅವರು ರಾಜ್‌ಕುಮಾರ್ ಅವರು ಅಭಿನಯಿಸಿದ್ದ 'ಹೊಸಬೆಳಕು' ಚಿತ್ರ ನಿರ್ಮಾಣ ಮಾಡಿದ್ದರು. ನಿರ್ದೇಶಕ ವೆಂಕಟ್ ಭಾರದ್ವಾಜ್ ಎರಡು ಕಥೆ ಸಿದ್ಧಮಾಡಿಕೊಂಡಿದ್ದರು. ನಮ್ಮ ಕುಟುಂಬದ ಸ್ನೇಹಿತರಾದ ಅಶ್ವಿನಿ ಪುನೀತ್ ರಾಜಕುಮಾರ್ ಅವರು ಒಪ್ಪಿದ ಕಥೆ ಈಗ ಸಿನಿಮಾವಾಗುತ್ತಿದೆ' ಎಂದರು ಸುರೇಶ್. ಚಿತ್ರದಲ್ಲಿ 'ಡ್ಯಾನಿ' ಎಂಬ ಹೆಸರಿನ ಭೂಗತಲೋಕದ ದೊರೆಯಾಗಿ ಬಿ.ಸುರೇಶ್ ಕಾಣಿಸಿಕೊಳ್ಳಲಿದ್ದಾರೆ.

'ವರ್ಣ' ಸಿನಿಮಾಗೆ ಭಗವದ್ಗೀತೆಯೇ ಸ್ಫೂರ್ತಿ

ನಾಲ್ಕು ಸಿನಿಮಾಗಳಲ್ಲಿ ನಾಯಕನಾಗಿ ಹಾಗೂ ಧಾರಾವಾಹಿಗಳಲ್ಲಿ ನಟಿಸಿರುವ ಅರ್ಜುನ್ ಯೋಗಿ ನಟನೆಯ 'ವರ್ಣ' ಸಿನಿಮಾದ ಟೀಸರ್ ಇತ್ತೀಚೆಗೆ ಬಿಡುಗಡೆಗೊಂಡಿತು.

ದೇವ ಶರ್ಮಾ ನಿರ್ದೇಶಿಸಿರುವ ಈ ಸಿನಿಮಾವನ್ನು ಮಲ್ಲಿನೇನಿ ನವೀನ್ ಚೌಧರಿ ನಿರ್ಮಿಸಿದ್ದಾರೆ. 'ಭಗವದ್ಗೀತೆಯಲ್ಲಿ ಹೇಳಿರುವ 'ಕರ್ಮಣ್ಯೇವಾಧಿಕಾರಸ್ತೇ ಮಾಫಲೇಷು ಕದಾಚನ' ಎಂಬ ಮಾತೇ ಈ ಚಿತ್ರದ ಕಥೆಗೆ ಸ್ಫೂರ್ತಿ' ಎಂದು ಮಾತು ಆರಂಭಿಸಿದ ದೇವ ಶರ್ಮಾ, 'ಮೊದಲು ಇದನ್ನು ಕಿರುಚಿತ್ರ ಮಾಡಲು ಹೊರಟಿದ್ದೆವು. ಆದರೆ ಕಥೆ ಕೇಳಿದ ನಿರ್ಮಾಪಕರು ಕಥೆ ಚೆನ್ನಾಗಿದೆ, ಕಿರುಚಿತ್ರ ಬೇಡ. ಸಿನಿಮಾದಂತೆಯೇ ಯಾವುದೇ ಕೊರತೆ ಇಲ್ಲದ ರೀತಿ ನಿರ್ಮಾಣ ಮಾಡಲು ನಿರ್ಧರಿಸಿದರು. ಚಿತ್ರದಲ್ಲಿ ನಾಯಕಿಯಾಗಿ ಭವ್ಯ ಗೌಡ ನಟಿಸಿದ್ದು, ವಿಲನ್ ಪಾತ್ರದಲ್ಲಿ ಲಂಕೇಶ್ ರಾವಣ ನಟಿಸಿದ್ದಾರೆ.


ಭವ್ಯಾ


ಅರ್ಜುನ್ ಯೋಗಿ

ರಮೇಶ್ ಕೃಷ್ಣ ಸಂಗೀತ ನಿರ್ದೇಶನ, ಗೌರಿ ವೆಂಕಟೇಶ್ ಛಾಯಾಚಿತ್ರಗ್ರಹಣ, ಸುಜಿತ್ ನಾಯಕ್ ಸಂಕಲನ ಚಿತ್ರಕ್ಕಿದೆ. ಚಿತ್ರದ ಚಿತ್ರೀಕರಣ ಬಹುತೇಕ ಮುಕ್ತಾಯವಾಗಿದ್ದು, ಪೋಸ್ಟ್ ಪ್ರೊಡಕ್ಷನ್ ಕೆಲಸ ಬಿರುಸಿನಿಂದ ಸಾಗಿದೆ. ಸದ್ಯದಲ್ಲೇ ಹಾಡುಗಳು ಹಾಗೂ ಟ್ರೇಲರ್ ಬಿಡುಗಡೆಯಾಗಲಿದೆ' ಎಂದರು.

'ಹತ್ತು ವರ್ಷಗಳ ಹಿಂದೆ ತೆರೆಕಂಡ 'ಸಂಜೆಯಲ್ಲಿ ಅರಳಿದ ಹೂವು' ನಾನು ನಾಯಕನಾಗಿ ನಟಿಸಿದ ಮೊದಲ ಚಿತ್ರ. ಇದು ಐದನೇ ಚಿತ್ರ. ಚಿತ್ರದಲ್ಲಿ ನನ್ನ ಪಾತ್ರದ ಹೆಸರು 'ವರ್ಣ'. ತಪ್ಪನ್ನು ಸಹಿಸದ, ತಪ್ಪು ಮಾಡಿದವರನ್ನು ಬಿಡದ ಹಳ್ಳಿ ಹುಡುಗನಾಗಿ ಅಭಿನಯಿಸಿದ್ದೇನೆ. ಇದೊಂದು ಹಳ್ಳಿ ಸೊಗಡಿನ ಕಥೆ' ಎನ್ನುತ್ತಾರೆ ಅರ್ಜುನ್ ಯೋಗಿ.

ಬಸ್‌ಗೆ ಬೆಂಕಿ: ಇಬ್ಬರು ಸಾವು

ಜೈಪುರ (ಪಿಟಿಐ): ವಿದ್ಯುತ್ ತಂತಿ ತಗುಲಿ ಖಾಸಗಿ ಬಸ್‌ಗೆ ಬೆಂಕಿ ಹತ್ತಿಕೊಂಡ ಪರಿಣಾಮ ಬಸ್‌ನಲ್ಲಿದ್ದ ಇಬ್ಬರು ಪ್ರಯಾಣಿಕರು ಮೃತಪಟ್ಟು, 10 ಮಂದಿ ಗಾಯಗೊಂಡಿರುವ ಘಟನೆ ರಾಜಸ್ಥಾನದ ಮನೋಹರಪುರದಲ್ಲಿ ಮಂಗಳವಾರ ನಡೆದಿದೆ.

ಬೆಂಕಿ ಅವಘಡಕ್ಕೀಡಾದ ಡಬ್ಬಲ್ ಡೆಕ್ಕರ್ ಸ್ಲೀಪರ್ ಬಸ್ ಉತ್ತರ ಪ್ರದೇಶದ ಫಿಲಿಬಿತ್‌ನಿಂದ ತೆರಳುತ್ತಿತ್ತು. ಅದರಲ್ಲಿ ಇಟ್ಟಿಗೆ ಕಾರ್ಖಾನೆಯ ಸುಮಾರು 50 ಕಾರ್ಮಿಕರಿದ್ದರು ಎಂದು ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ತೇಜ್‌ಪಾಲ್ ಸಿಂಗ್ ಮಾಹಿತಿ ನೀಡಿದ್ದಾರೆ.

ಬಸ್‌ನ ಮೇಲ್ಭಾಗದಲ್ಲಿ ಮೋಟಾರ್ ಸೈಕಲ್, ಸೈಕಲ್ ಸೇರಿದಂತೆ ಮನೆಯ ಹಲವು ವಸ್ತುಗಳನ್ನು ಇರಿಸಲಾಗಿತ್ತು.

ಬಸ್ ಮನೋಹರಪುರ ಸಮೀಪಿಸಿದಾಗ ವಿದ್ಯುತ್ ತಂತಿ ಬಸ್‌ಗೆ ತಾಗಿದೆ. ಮೇಲಿದ್ದ ವಸ್ತುಗಳಿಗೆ ತಂತಿ ತಾಗಿದ್ದರಿಂದ ತಕ್ಷಣ ವಿದ್ಯುತ್ ಪ್ರವಹಿಸಿ ಬೆಂಕಿ ಹತ್ತಿಕೊಂಡಿದೆ ಎಂದೂ ಸಿಂಗ್ ಹೇಳಿದ್ದಾರೆ. ಬಸ್‌ನಲ್ಲಿ ಕೆಲವು ಗ್ಯಾಸ್ ಸಿಲಿಂಡರ್‌ಗಳನ್ನೂ ಇರಿಸಲಾಗಿತ್ತು. ಆ ಪೈಕಿ ಎರಡು ಸಿಲಿಂಡರ್‌ಗಳಿಗೆ ಬೆಂಕಿ ಹತ್ತಿಕೊಂಡಿದೆ. ತಕ್ಷಣವೇ ಹಲವು ಪ್ರಯಾಣಿಕರು ಬಸ್‌ನಿಂದ ಹೊರಗೆ ಜಿಗಿದು ಪಾರಾಗಿದ್ದಾರೆ ಎಂದು ಜೈಪುರ ಜಿಲ್ಲಾಧಿಕಾರಿ ಜಿತೇಂದ್ರ ಸೋನಿ ಹೇಳಿದ್ದಾರೆ.

ಘಟನೆ ಕುರಿತು ತನಿಖೆ ನಡೆಯುತ್ತಿದೆ ಎಂದು ಜೈಪುರ ಉಪ ವಿಭಾಗಾಧಿಕಾರಿ ಪೂನಂ ತಿಳಿಸಿದ್ದಾರೆ.


ಜೈಪುರದ ಮನೋಹರಪುರದಲ್ಲಿ ಮಂಗಳವಾರ ವಿದ್ಯುತ್ ತಂತಿ ತಗುಲಿ ಬಸ್ ಸುಟ್ಟು ಕರಕಲಾಗಿದೆ — ಪಿಟಿಐ ಚಿತ್ರ

ದೆಹಲಿ ವಿಮಾನ ನಿಲ್ದಾಣದಲ್ಲಿ ಬಸ್‌ಗೆ ಬೆಂಕಿ

ನವದೆಹಲಿ (ಪಿಟಿಐ): ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಟರ್ಮಿನಲ್ 3ರಲ್ಲಿ ನಿಂತಿದ್ದ ಬಸ್‌ಗೆ ಬೆಂಕಿ ಹತ್ತಿಕೊಂಡ ಘಟನೆ ಮಂಗಳವಾರ ಮಧ್ಯಾಹ್ನ ನಡೆದಿದೆ. ಟರ್ಮಿನಲ್‌ನಲ್ಲಿ ಬಸ್ ನಿಂತಿರುವಾಗಲೇ ಬೆಂಕಿ ಹತ್ತಿಕೊಂಡಿದೆ. ಆದರೆ, ಘಟನೆ ನಡೆದ ಸಂದರ್ಭದಲ್ಲಿ ಬಸ್‌ನಲ್ಲಿ ಪ್ರಯಾಣಿಕರಾಗಲಿ, ಸರಕು-ಸರಂಜಾಮುಗಳಾಗಲಿ ಇರಲಿಲ್ಲ ಎಂದು ಉಪ ಪೊಲೀಸ್ ಆಯುಕ್ತರಾದ ವಿಚಿತ್ರ ವೀರ್ ಹೇಳಿದ್ದಾರೆ.

ಬೆಂಕಿ ಹತ್ತಿಕೊಂಡ ಕೆಲವೇ ನಿಮಿಷಗಳಲ್ಲಿ ವಿಮಾನ ನಿಲ್ದಾಣದ ಸಿಬ್ಬಂದಿ ಅದನ್ನು ನಂದಿಸಿದ್ದಾರೆ. ಬೆಂಕಿ ಹತ್ತಿಕೊಂಡಿದ್ದಕ್ಕೆ ಕಾರಣವೇನು ಎಂದು ತಿಳಿಯಲು ತನಿಖೆಗೆ ಆದೇಶಿಸಲಾಗಿದೆ ಎಂದೂ ವೀರ್ ಮಾಹಿತಿ ನೀಡಿದ್ದಾರೆ.

ಆರ್‌ಎಸ್‌ಎಸ್ ಶತಮಾನೋತ್ಸವ ಒಂದು ಲಕ್ಷ ಹಿಂದೂ ಸಮ್ಮೇಳನ

ಜಬಲ್ಪುರ (ಪಿಟಿಐ): 'ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶತಮಾನೋತ್ಸವ ಆಚರಣೆ ಪ್ರಯುಕ್ತ ದೇಶದಾದ್ಯಂತ ಒಂದು ಲಕ್ಷ ಹಿಂದೂ ಸಮ್ಮೇಳನ ಆಯೋಜಿಸಲಾಗುವುದು' ಎಂದು ಸಂಘದ ಅಖಿಲ ಭಾರತ ಪ್ರಚಾರ ಪ್ರಮುಖ್ ಸುನೀಲ್ ಅಂಬೇಕರ್ ಮಂಗಳವಾರ ತಿಳಿಸಿದರು.

ಇಲ್ಲಿ ಅ.30ರಿಂದ ಆರಂಭವಾಗಲಿರುವ ಸಂಘದ ಅಖಿಲ ಭಾರತ ಕಾರ್ಯಕಾರಿ ಸಮಿತಿಯ ಮೂರು ದಿನಗಳ ವಾರ್ಷಿಕ ಸಭೆಗೂ ಮುನ್ನ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.


ಸುನೀಲ್ ಅಂಬೇಕರ್

'ಪಂಚ ಪರಿವರ್ತನೆ, ಹಿಂದುತ್ವದ ವಿಸ್ತರಣೆ, ಕುಟುಂಬ ಪ್ರಬೋಧನ, ಸಾಮಾಜಿಕ ಸಾಮರಸ್ಯವನ್ನು ಪ್ರೋತ್ಸಾಹಿಸುವುದು ಹಾಗೂ ಸಾಮಾಜಿಕ ಸಮಸ್ಯೆಗಳ ಕುರಿತು ಚರ್ಚಿಸುವುದು ಈ ಸಮ್ಮೇಳನಗಳ ಮುಖ್ಯ ಉದ್ದೇಶವಾಗಿದೆ' ಎಂದರು.

'ಪಂಚ ಪರಿವರ್ತನೆ ಎಂಬುದು ಆರ್‌ಎಸ್‌ಎಸ್‌ನ ಪ್ರಮುಖ ಕಾರ್ಯಕ್ರಮವಾಗಿದೆ. ಸಾಮಾಜಿಕ ಸಾಮರಸ್ಯ, ಕುಟುಂಬ ಪ್ರಜ್ಞೆ, ನಾಗರಿಕ ಕರ್ತವ್ಯ, ಪರಿಸರ ಜಾಗೃತಿ ಹಾಗೂ ಸ್ವಾವಲಂಬನೆ ಮೂಲಕ ರಾಷ್ಟ್ರೀಯ ಪರಿವರ್ತನೆಯ ಮೇಲೆ ಕೇಂದ್ರೀಕರಿಸಲಾಗುತ್ತದೆ' ಎಂದು ಹೇಳಿದರು.

ನಟಿ ಕಂಗನಾಗೆ ಜಾಮೀನು

ಬಂಠಿಂಡಾ/ಚಂಡೀಗಢ (ಪಿಟಿಐ): ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದೆ, ನಟಿ ಕಂಗನಾ ರನೌತ್‌ಗೆ ಪಂಜಾಬ್‌ನ ಬಂಠಿಂಡಾ ನ್ಯಾಯಾಲಯವು ಜಾಮೀನು ನೀಡಿದೆ.


ಕಂಗನಾ

ಸಾಮಾಜಿಕ ಮಾಧ್ಯಮದಲ್ಲಿ ಹಾಕಿದ ಪೋಸ್ಟ್ ಕುರಿತಂತೆ ವಿಷಾದ ವ್ಯಕ್ತಪಡಿಸಿದರು. ಅಲ್ಲದೇ, ಪ್ರತಿಯೊಬ್ಬರ ತಾಯಿ ಕುರಿತು ಗೌರವ ಹೊಂದಿದ್ದೇನೆ ಎಂದು ನ್ಯಾಯಾಲಯಕ್ಕೆ ತಿಳಿಸಿದರು.

ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಸಂಸದೆಯಾಗಿರುವ ಕಂಗನಾ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಹಾಜರಾಗಲು ಅವಕಾಶ ನೀಡಬೇಕು ಎಂದು ಕಳೆದ ಸೆಪ್ಟೆಂಬರ್‌ನಲ್ಲಿ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು. ಆದರೆ, ಇದಕ್ಕೆ ನ್ಯಾಯಾಲಯ ಅವಕಾಶ ನೀಡಿರಲಿಲ್ಲ.

ಮಂಗಳವಾರ ನ್ಯಾಯಾಲಯದ ಖುದ್ದು ಹಾಜರಾದ ಹಿನ್ನೆಲೆಯಲ್ಲಿ ನ್ಯಾಯಾಲಯದ ಸುತ್ತಲೂ ಭದ್ರತೆ ಕೈಗೊಳ್ಳಲಾಗಿತ್ತು.

2020-21ರ ರೈತ ಹೋರಾಟದ ವೇಳೆ ಮಹಿಳಾ ಹೋರಾಟಗಾರರ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಆರೋಪದಲ್ಲಿ ಅವರ ವಿರುದ್ಧ ಪ್ರಕರಣ ದಾಖಲಾಗಿತ್ತು.

ಕಾಲ್ತುಳಿತ: ₹20 ಲಕ್ಷ ಪರಿಹಾರ ಹಣ ವಿಜಯ್‌ಗೆ ವಾಪಸ್

ಪ್ರಜಾವಾಣಿ ವಾರ್ತೆ

ಚೆನ್ನೈ: ಕರೂರಿನಲ್ಲಿ ತಮಿಳಗ ವೆಟ್ರಿ ಕಳಗಂ (ಟಿವಿಕೆ) ಪಕ್ಷದ ರ್‍ಯಾಲಿಯಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ ಮೃತಪಟ್ಟಿದ್ದ ವ್ಯಕ್ತಿಗೆ ಪಕ್ಷದ ಮುಖ್ಯಸ್ಥ ವಿಜಯ್ ಅವರು ನೀಡಿದ್ದ ₹20 ಲಕ್ಷ ಪರಿಹಾರ ಹಣವನ್ನು ಸಂತ್ರಸ್ತ ವ್ಯಕ್ತಿಯ ಪತ್ನಿ ಹಿಂದಿರುಗಿಸಿದ್ದಾರೆ.

'ಮೃತರ ಕುಟುಂಬಸ್ಥರನ್ನು ಕರೂರಿನಲ್ಲಿ ಭೇಟಿ ಮಾಡುವುದಾಗಿ ವಿಜಯ್ ಅವರು ಹೇಳಿದ್ದರು. ಆದರೆ ಅವರು ತಮ್ಮ ಮಾತನ್ನು ಉಳಿಸಿಕೊಳ್ಳಲು ಸಾಧ್ಯವಾಗಲಿಲ್ಲ' ಎಂದು ಮೃತ ರಮೇಶ್ ಅವರ ಪತ್ನಿ ಎಂ.ಸಂಗವಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ಮಾಮಲ್ಲಪುರದಲ್ಲಿ ವಿಜಯ್ ಅವರನ್ನು ಭೇಟಿ ಮಾಡಲು ನಿರಾಕರಿಸಿದ ನಂತರ ಟಿವಿಕೆ ಪದಾಧಿಕಾರಿಗಳು ನಮ್ಮ ಪ್ರತಿನಿಧಿಯಾಗಿ ಸಂಬಂಧಿಗಳನ್ನು ಕರೆದೊಯ್ದಿದ್ದಾರೆ' ಎಂದು ಆರೋಪಿಸಿದರು. 38 ಸಂತ್ರಸ್ತ ಕುಟುಂಬಗಳ ಪೈಕಿ ಕೆಲವರು ಮಾಮಲ್ಲಪುರಕ್ಕೆ ಹೋಗಲು ನಿರಾಕರಿಸಿದ್ದಾರೆ. ವಿಜಯ್ ಅವರೇ ಸಂತ್ರಸ್ತರ ನಿವಾಸಕ್ಕೆ ಬರಬೇಕು ಎಂದು ಆಗ್ರಹಿಸಿದ್ದಾರೆ.

'2 ವಾರಗಳ ಹಿಂದೆ ವಿಡಿಯೊ ಕಾಲ್ ಮೂಲಕ ಮಾತನಾಡಿ, ಕರೂರಿನಲ್ಲಿ ನಮ್ಮನ್ನು ಭೇಟಿ ಮಾಡುವುದಾಗಿ ತಿಳಿಸಿದ್ದರು. ಬಳಿಕ ಚೆನ್ನೈಗೆ ಬರಲು ಹೇಳಿದಾಗ ನಾವು ನಿರಾಕರಿಸಿದೆವು. 'ಸಂಬಂಧಿಕರನ್ನು ಕರೆದೊಯ್ಯುವ ಮುನ್ನ ನಮ್ಮ ಅಭಿಪ್ರಾಯ ಕೇಳಿಲ್ಲ. ಹೀಗಾಗಿ ವಿಜಯ್ ಅವರು ನನ್ನ ಖಾತೆಗೆ ವರ್ಗಾಯಿಸಿದ್ದ ಹಣವನ್ನು ಹಿಂದಿರುಗಿಸಲು ನಿರ್ಧರಿಸಿದೆವು' ಎಂದರು.

ಈ ಮಧ್ಯೆ, 'ಕರೂರಿನಲ್ಲಿ ಭೇಟಿ ಮಾಡಲು ಸಾಧ್ಯವಾಗಿಲ್ಲ' ಎಂದು ನಟ ವಿಜಯ್ ಅವರು ಸಂತ್ರಸ್ತ ಕುಟುಂಬಸ್ಥರ ಕ್ಷಮೆ ಕೋರಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಅನ್ಯಾಯದ ಸ್ಥಾನವು ಅಭದ್ರವಾದುದು. ಅದರಿಂದ ಏಳಿಗೆ ಸಾಧ್ಯವಿಲ್ಲ.

–ಸ್ವಾಮಿ ವಿವೇಕಾನಂದ

ಸಂಪಾದಕೀಯ

‘ಸಹಕಾರ ಕಾಯ್ದೆ’ಗೆ ಬಲ ತುಂಬಿ ಹೈಕೋರ್ಟ್‌ನ ಆದೇಶ ಪಾಲಿಸಿ

ಕರ್ನಾಟಕ ಸಹಕಾರ ಸಂಘಗಳ (ಕೆಸಿಎಸ್) ಕಾಯ್ದೆ–1959 ಮತ್ತು ಸಹಕಾರ ಸಂಘಗಳ ನಿಯಮಗಳು–1960ರಲ್ಲಿರುವ ಹಲವು ನ್ಯೂನತೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ‘ಕಾಯ್ದೆಯನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿ ತುರ್ತಾಗಿ ಸಮಗ್ರ ತಿದ್ದುಪಡಿಯನ್ನು ತರುವ ಅಗತ್ಯವಿದೆ’ ಎಂದು ಹೇಳಿರುವುದು ಸ್ವಾಗತಾರ್ಹ ಹಾಗೂ ಸಕಾಲಿಕ. ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ರಿಟ್ ಅರ್ಜಿಯೊಂದರ ವಿಚಾರಣೆ ಕಾಲಕ್ಕೆ ಕೆಸಿಎಸ್ ಕಾಯ್ದೆಯಲ್ಲಿನ ದೋಷಗಳನ್ನು ನಿಕಷಕ್ಕೆ ಒಳಪಡಿಸಿದೆ. ಒಬಿರಾಯನ ಕಾಲದ ಈ ಕಾಯ್ದೆಗೆ ಇದುವರೆಗೆ ಆಡಳಿತ ನಡೆಸಿದ ಸರ್ಕಾರಗಳು ಹಲವು ತಿದ್ದುಪಡಿಗಳನ್ನು ತಂದಿದ್ದರೂ ಅಸ್ಪಷ್ಟತೆಗಳು ಇನ್ನೂ ಉಳಿದಿರುವುದನ್ನು ಪೀಠ ಗಮನಿಸಿದೆ. ‘ಕಾಯ್ದೆಯ ಅಡಿಯಲ್ಲಿ ಬರುವ ಸದಸ್ಯತ್ವದ ಹಕ್ಕುಗಳು, ಅನರ್ಹತೆ, ಮತದಾರರ ಪಟ್ಟಿ ಸಿದ್ಧಪಡಿಸುವುದು, ಕಾಲಕಾಲಕ್ಕೆ ಚುನಾವಣೆ ನಡೆಸುವುದು, ಲೆಕ್ಕ ಪರಿಶೋಧನೆ ಮತ್ತು ಆಡಳಿತಾಧಿಕಾರಿ ನೇಮಕಾತಿಗೆ ಸಂಬಂಧಿಸಿದ ಹಲವು ನಿಯಮಗಳಲ್ಲಿ ಸಂಘರ್ಷದ ಅಂಶಗಳಿವೆ. ಎಲ್ಲ ಗೊಂದಲಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೆಸಿಎಸ್ ಕಾಯ್ದೆಗೆ ತಾರ್ಕಿಕವಾಗಿ ಸಮಗ್ರ ತಿದ್ದುಪಡಿಯನ್ನು ಮಾಡಬೇಕಿದೆ’ ಎಂಬುದಾಗಿ ಕೋರ್ಟ್ ಒತ್ತಿ ಹೇಳಿದೆ. ಹಣಕಾಸು, ವಸತಿ, ಕೃಷಿ, ಹೈನುಗಾರಿಕೆ, ಸಕ್ಕರೆ ವಲಯಗಳಲ್ಲಿನ ಸಹಕಾರ ಸಂಘಗಳು ಸಮಾಜದಲ್ಲಿ ಹಾಸುಹೊಕ್ಕಾಗಿ, ಅವುಗಳು ಬೀರುತ್ತಿರುವ ಪರಿಣಾಮವನ್ನು ಗಮನಿಸಿದಾಗ ಕೋರ್ಟ್‌ನ ಕಳಕಳಿ ಅರ್ಥವಾಗುತ್ತದೆ. ಯಾವುದೇ ಕಾಯ್ದೆ ಇರಲಿ, ಕಾಲದ ಅಗತ್ಯಗಳಿಗೆ ಸ್ಪಂದಿಸದೆ ಹೋದರೆ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ ಮತ್ತು ಆ ಕಾಯ್ದೆಯನ್ನು ರೂಪಿಸಿದ ಉದ್ದೇಶ ವ್ಯರ್ಥವಾಗುತ್ತದೆ. ಹೀಗಾಗಿ ಸಮಕಾಲೀನ ಅಗತ್ಯಗಳಿಗೆ ತಕ್ಕಂತೆ ಕಾಯ್ದೆಗೆ ಮಾರ್ಪಾಡು ತರುವುದು ಅತ್ಯಗತ್ಯ. ಕೆಸಿಎಸ್ ಕಾಯ್ದೆ ಮತ್ತು ಸಂಬಂಧಿತ ನಿಯಮಗಳು ರಚನೆಯಾದ ಸಮಯದಿಂದಲೂ ಅವುಗಳಲ್ಲಿ ಹಲವು ಸಮಸ್ಯೆಗಳಿವೆ ಎನ್ನುವುದು ತಜ್ಞರ ಅಭಿಮತ. ಈ ಕಾಯ್ದೆಯನ್ನು ರಾಜ್ಯಗಳ ಪುನರ್‌ರಚನೆಯ ಹೊಸತರಲ್ಲಿ ತುರ್ತಾಗಿ ರೂಪಿಸಲಾಗಿತ್ತು. ಕಾಯ್ದೆಯೊಂದಿಗೆ ಅಡಕವಾಗಿರುವ ಅಂಶಗಳು ಸಮಗ್ರ ಮತ್ತು ಸಾವಧಾನದ ಪರಿಶೀಲನೆಗೆ ಒಳಪಡದ ಕಾರಣ, ತಪ್ಪಿತಸ್ಥರು ಶಿಕ್ಷೆಯಿಂದ ಸುಲಭವಾಗಿ ತಪ್ಪಿಸಿಕೊಳ್ಳಲು ಅನುವಾಗುವಂತೆ ನಿಯಮಾವಳಿಗಳು ಸಡಿಲವಾಗಿದ್ದವು. ಶಿಕ್ಷೆ ಮತ್ತು ದಂಡದ ಪ್ರಮಾಣ ಸಹ ದುರ್ಬಲವಾಗಿದ್ದರಿಂದ ಸಹಕಾರ ಸಂಘಗಳಲ್ಲಿ ಅಪನಂಬಿಕೆ ಮತ್ತು ಅಕ್ರಮಗಳು ಹೆಚ್ಚಾದವು. ಸಹಕಾರ ಸಂಘಗಳಲ್ಲಿ ಅವ್ಯವಹಾರಗಳು, ಅಕ್ರಮಗಳು, ಹಗರಣಗಳು ಹೆಚ್ಚಾಗುತ್ತಾ ಬರಲು ಕಾಯ್ದೆಯಲ್ಲಿನ ಇಂತಹ ಲೋಪ ದೋಷಗಳೇ ಕಾರಣವಾಗಿವೆ ಎಂದೂ ವಿಶ್ಲೇಷಿಸಲಾಗುತ್ತದೆ. ಕೋರ್ಟ್ ಕೂಡ ಈ ಕಾಯ್ದೆಯು ಹಳೆಯದು ಮತ್ತು ಆಧುನಿಕ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗೆ ಸರಿಹೊಂದದು ಎಂದು ಸ್ಪಷ್ಟವಾಗಿಯೇ ಹೇಳಿದೆ.



ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ವರ್ತಮಾನದ ಅಗತ್ಯಕ್ಕೆ ತಕ್ಕಂತಿಲ್ಲ. ಈ ಕಾಯ್ದೆಯನ್ನು ಇಂದಿನ ಅಗತ್ಯಕ್ಕೆ ತಕ್ಕಂತೆ ಪರಿಷ್ಕರಿಸುವುದು ಅಗತ್ಯ.

1959ರ ಕೆಸಿಎಸ್ ಕಾಯ್ದೆ ಮತ್ತು 1960ರ ಕೆಸಿಎಸ್ ನಿಯಮಗಳನ್ನು ದಶಕಗಳಿಂದಲೂ ಹಲವು ತಿದ್ದುಪಡಿಗಳಿಗೆ ಒಳಪಡಿಸಲಾಗಿದೆ. ದುರದೃಷ್ಟವಶಾತ್, ಅಂತಹ ತಿದ್ದುಪಡಿಗಳನ್ನು ಮಾಡುವಾಗ, ಅಸ್ತಿತ್ವದಲ್ಲಿರುವ ನಿಬಂಧನೆಗಳ ಮೇಲಿನ ಪರಸ್ಪರ ಕ್ರಿಯೆ ಮತ್ತು ಅದರಿಂದಾಗುವ ಅಡ್ಡ ಪರಿಣಾಮಗಳನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಇಂತಹ ತಿದ್ದುಪಡಿಗಳನ್ನು ‘ಆಧುನಿಕ, ಸಾಮಾಜಿಕ, ಆರ್ಥಿಕ ಪರಿಸರಕ್ಕೆ ಹೊಂದಿಕೆಯಾಗದಿರುವ ಸಂಘರ್ಷಯುಕ್ತ ನಿಬಂಧನೆಗಳನ್ನು ಜೋಡಿಸುವ ತೇಪೆ ಕೆಲಸ’ ಎಂದು ಕೋರ್ಟ್ ಹೇಳಿರುವುದು ಸರಿಯಾಗಿಯೇ ಇದೆ. ಆದಾಯ ತೆರಿಗೆ ಕಾಯ್ದೆ–1961ಅನ್ನು ಆಮೂಲಾಗ್ರವಾಗಿ ಬದಲಾಯಿಸಿ ಹೊಸ ಕಾಯ್ದೆ ಜಾರಿಗೆ ತಂದಿರುವುದನ್ನೂ ಕೋರ್ಟ್ ಉದಾಹರಿಸಿದೆ. ಸಹಕಾರಿ ಸಂಸ್ಥೆಗಳ ಸ್ವಾಯತ್ತತೆಯನ್ನು ಹಾಗೂ ಆ ಸಂಸ್ಥೆಗಳಲ್ಲಿ ಸಾಂವಿಧಾನಿಕ ತತ್ವಗಳೊಂದಿಗೆ ದಕ್ಷತೆ, ಪಾರದರ್ಶಕತೆ ಮತ್ತು ಹೊಂದಾಣಿಕೆಯನ್ನು ಖಾತರಿಪಡಿಸಿಕೊಳ್ಳಲು ಅನುವಾಗುವಂತೆ ಕಾಯ್ದೆಗೆ ತಿದ್ದುಪಡಿ ತರಬೇಕಿದೆ. ಇಡೀ ದೇಶದಲ್ಲಿ ಮೊತ್ತಮೊದಲ ಸಹಕಾರ ಸಂಘವನ್ನು ಸ್ಥಾಪಿಸಿದ ಹೆಮ್ಮೆಯ ಪರಂಪರೆ ನಮ್ಮದು. ಸ್ವಾತಂತ್ರ್ಯಪೂರ್ವದ ಕಾಲಘಟ್ಟದಲ್ಲಿ ಹಲವು ಏರಿಳಿತ ಕಂಡಿದ್ದ ಸಹಕಾರಿ ಸಂಘಗಳು, ನಂತರದ ದಿನಗಳಲ್ಲಿ ಚೇತರಿಕೆಯ ಹಾದಿಯಲ್ಲಿದ್ದವು. ಆದರೆ, ಕಾಯ್ದೆಯ ಲಗಾಮು ಬಿಗಿಗೊಳ್ಳದ ಕಾರಣ ಅವ್ಯವಹಾರಗಳು ಹೆಚ್ಚಾದವು ಎನ್ನುವುದು ವ್ಯಥೆಯ ಸಂಗತಿ. ಹೈಕೋರ್ಟ್‌ನ ಅಭಿಪ್ರಾಯ ಹೊರಬೀಳುವ ಮೊದಲೇ ರಾಜ್ಯ ಸರ್ಕಾರವು ಇದೇ ವರ್ಷ ‘ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆ–2025’ಯನ್ನು ರೂಪಿಸಿ, ಅದಕ್ಕೆ ಎರಡೂ ಸದನಗಳಿಂದ ಅಂಗೀಕಾರವನ್ನೂ ಪಡೆದಿದೆ. ಆದರೆ, ಆ ಮಸೂದೆಯಲ್ಲಿ ಮಾಡಿರುವ ತಿದ್ದುಪಡಿಗಳು ಕೆಲವೇ ಕೆಲವು ಅಂಶಗಳಿಗೆ ಸೀಮಿತವಾಗಿವೆಯೇ ಹೊರತು ಕೋರ್ಟ್ ಹೇಳಿರುವಂತೆ, ಕಾಯ್ದೆಯನ್ನು ಕೂಲಂಕಷವಾಗಿ ಪರಿಶೀಲನೆಗೆ ಒಳಪಡಿಸಿ ಸಮಗ್ರ ತಿದ್ದುಪಡಿ ತರುವ ಉದ್ದೇಶವನ್ನು ಹೊಂದಿರಲಿಲ್ಲ. ಈಗಲೂ ಕಾಲ ಮಿಂಚಿಲ್ಲ. ಹೈಕೋರ್ಟ್‌ನ ಶಿಫಾರಸುಗಳನ್ನು ಕಾನೂನು ಇಲಾಖೆಯು ಮುಕ್ತ ಮನಸ್ಸಿನಿಂದ ಪರಾಮರ್ಶಿಸಬೇಕು. ಕಾಯ್ದೆಯ ಸಮಗ್ರ ಪರಿಷ್ಕರಣೆಗೆ ತಜ್ಞರ ಸಮಿತಿ ನೇಮಕ ಮಾಡಬೇಕು. ಸಹಕಾರ ತತ್ವವನ್ನು ಬಲಪಡಿಸುವಂತಹ ಸಶಕ್ತ ಮತ್ತು ಸಮಗ್ರವಾದ ಕಾಯ್ದೆಯನ್ನು ರೂಪಿಸಬೇಕು. ಕೊಳೆತು ನಾರುವ ವ್ಯವಸ್ಥೆಯಿಂದ ಸಹಕಾರಿ ಕ್ಷೇತ್ರವನ್ನು ಹೊರತರಬೇಕು. ಸಹಕಾರ ಚಳವಳಿಗೆ ಕಾರಣವಾದ ನಾಡಿನಲ್ಲಿ ಸಹಕಾರ ಸಂಘಗಳು ಗತವೈಭವವನ್ನು ಮರಳಿ ಪಡೆಯುವಂತೆ ನೋಡಿಕೊಳ್ಳಬೇಕು.

ಹಿಂದೂ ನಾವೆಲ್ಲ ಒಂದು! ಎಂದು?



ಪಡಸಾಲೆ

ರಘುನಾಥ ಚ.ಹ.

> ‘ನಾವೆಲ್ಲ ಒಂದು’ ಘೋಷಣೆಯ ಹಿಂದಿನ ವಸ್ತುಸ್ಥಿತಿಯ ಚಿತ್ರಣ ‘ಹೆಬ್ಬುಲಿ ಕಟ್’ ಸಿನಿಮಾದಲ್ಲಿದೆ. ದಲಿತ ಹಾಗೂ ಮುಸ್ಲಿಂ ಸಮುದಾಯಗಳು ಎದುರಿಸುತ್ತಿರುವ ತಲ್ಲಣಗಳ ಬಹು ಸೂಕ್ಷ್ಮ ಗ್ರಹಿಕೆಯ ಹಾಗೂ ಅಬ್ಬರವಿಲ್ಲದ ನಿರೂಪಣೆಯ ಸಿನಿಮಾ ಸಮಕಾಲೀನ ರಾಜಕಾರಣಕ್ಕೆ ಹಿಡಿದಿರುವ ಕನ್ನಡಿಯೂ ಹೌದು.

ಹಿಂದುತ್ವದ ಸಂಘಟನೆಗಳ ನೆಚ್ಚಿನ ಘೋಷಣೆ: ‘ಹಿಂದೂ ನಾವೆಲ್ಲ ಒಂದು.’ ‘ಸಂಘದ ಜಾತಿ ಒಂದೇ– ಹಿಂದೂ ಹಿಂದೂ ಹಿಂದೂ’ ಎನ್ನುವುದು ದಾಳಿಂಬೆಪ್ರಿಯ ಸಂಸದರೊಬ್ಬರ ಹೇಳಿಕೆ. ‘ನಾವೆಲ್ಲ ಒಂದು’ ಎಂದು ಮತ್ತೆ ಮತ್ತೆ ಹೇಳುತ್ತಿರುವುದೇ ಆ ಮಾತನ್ನು ಅನುಮಾನದಿಂದ ನೋಡುವುದಕ್ಕೆ, ಹೇಳಿಕೆಯಲ್ಲಿನ ಹುಸಿತನ ಎದ್ದುಕಾಣಲಿಕ್ಕೆ ಕಾರಣವಾಗಿದೆ. ಸಮಾಜದಲ್ಲಿನ ಒಡಕಲು ಬಿಂಬಗಳನ್ನು ಮಾತಿನ ಮರೆಯಲ್ಲಿ ಅಡಗಿಸಿಡಲು ‘ಹಿಂದೂ ನಾವೆಲ್ಲ ಒಂದು’ ಘೋಷಣೆ ಎಷ್ಟೇ ಪ್ರಯತ್ನಿಸಿದರೂ, ಆ ಕೂಗು ಒಡಲಾಳದಿಂದ ಹುಟ್ಟದೆ ಬಾಯಿಬೊಬ್ಬೆಯಾಗಿಯಷ್ಟೇ ಉಳಿದಿದೆ. ಸುಮಾರು ನೂರು ವರ್ಷಗಳ ಇತಿಹಾಸ ಹೊಂದಿರುವ ಈ ಮಾತಿನ ಅಸಲಿಯತ್ತನ್ನು ಉಜ್ಜಿನೋಡುವ ಸೃಜನಶೀಲ ಪ್ರಯತ್ನ ‘ಹೆಬ್ಬುಲಿ ಕಟ್’ ಸಿನಿಮಾ.

ಭೀಮರಾವ್ ನಿರ್ದೇಶನದ ‘ಹೆಬ್ಬುಲಿ ಕಟ್’ ಸಿನಿಮಾ ಕೊನೆಗೊಳ್ಳುವುದು ‘ಹಿಂದೂ ನಾವೆಲ್ಲ ಒಂದು’ ಎನ್ನುವ ಗೋಡೆಯ ಮೇಲಿನ ಮಸುಕು ಬರಹದೊಂದಿಗೆ. ಗೋಡೆಬರಹ ‘ಎದೆಯ ಬರಹ’ ಆಗದಿರುವ ವಿರೋಧಾಭಾಸವನ್ನು ಸಿನಿಮಾ ಪರಿಣಾಮಕಾರಿಯಾಗಿ ಚಿತ್ರಿಸಿದೆ. ‘ಹಿಂದೂ ಒಂದು’ ಎನ್ನುವ ಮಾತು ಮುಸ್ಲಿಮರನ್ನು ಅನ್ಯರನ್ನಾಗಿಸುವ ಹುನ್ನಾರಕ್ಕೆ ಸಂಬಂಧಿಸಿದಂತೆ ಇತಿಹಾಸ ಹಾಗೂ ವರ್ತಮಾನದಲ್ಲಿ ನಿಜವಾಗಿರುವುದು ಹೌದು. ಆದರೆ, ಹಿಂದೂಗಳ ವಿಷಯದಲ್ಲಿ ಈ ಮಾತು ಘೋಷಣೆಯಾಗಿಯಷ್ಟೇ ಉಳಿದಿದೆ; ಆ ಕಾರಣದಿಂದಲೇ, ಹಿಂದೂ ಸಮಾಜದ ಪಾಲಿಗೆ ದಲಿತರು ಅನ್ಯರೂ ಅಸ್ಪೃಶ್ಯರೂ ಆಗಿರುವುದು.

ದಲಿತಪರ ಸಿನಿಮಾ ಎಂದಷ್ಟೇ ಹೇಳುವುದು ‘ಹೆಬ್ಬುಲಿ ಕಟ್’ ಸಿನಿಮಾದ ಸಾಧ್ಯತೆಗೆ ಚೌಕಟ್ಟು ಹಾಕಿದಂತೆ. ಅದು ಮನುಷ್ಯಪರ ಸಿನಿಮಾ. ಭಾರತದ ವರ್ತಮಾನಕ್ಕೆ ಕನ್ನಡಿ ಹಿಡಿದಿರುವ ಕಲಾಕೃತಿ. ಒಂದೆಡೆ, ದಲಿತರ ಮೇಲೆ ದೌರ್ಜನ್ಯ; ಇನ್ನೊಂದೆಡೆ ಮುಸ್ಲಿಂ ಅಲ್ಪಸಂಖ್ಯಾತರನ್ನು ಈ ದೇಶದ ಮುಖ್ಯವಾಹಿನಿಯಿಂದ ಹೊರಗಿಡುವುದನ್ನೇ ಅಧಿಕಾರ ಗಳಿಕೆಯ ತಂತ್ರವನ್ನಾಗಿಸಿಕೊಂಡಿರುವ ರಾಜಕಾರಣ. ಇವೆರಡನ್ನೂ ‘ಹೆಬ್ಬುಲಿ ಕಟ್’ ಬಹು ಸೂಕ್ಷ್ಮವಾಗಿ ಹಾಗೂ ಅಬ್ಬರವಿಲ್ಲದೆ ಕಟ್ಟಿಕೊಡುತ್ತದೆ. ದಲಿತರು ಮತ್ತು ಮುಸ್ಲಿಮರ ವಿರುದ್ಧ ನಡೆಯುತ್ತಿರುವ ದೌರ್ಜನ್ಯವನ್ನು ಒಟ್ಟಿಗೆ ಗ್ರಹಿಸಲು ಪ್ರಯತ್ನಿಸುವ ಇಂಥ ಸಿನಿಮಾ ಮಾದರಿಗಳು ಕನ್ನಡ ಮಾತ್ರವಲ್ಲ, ಎಲ್ಲ ಭಾಷೆಯಲ್ಲೂ ವಿರಳ. ಭೀಮಮಾರ್ಗ– ಬಾಪುಮಾರ್ಗ, ಎರಡನ್ನೂ ಭೀಮರಾವ್ ಸಿನಿಮಾ ನೆನಪಿಸುತ್ತದೆ.

ಊರಿನಲ್ಲಿ ತೂಕದ ಗುಂಡು ಎತ್ತುವ ಸ್ಪರ್ಧೆಯ ಸನ್ನಿವೇಶದೊಂದಿಗೆ ಸಿನಿಮಾ ಶುರುವಾಗುತ್ತದೆ. ಸ್ಪರ್ಧೆ ಗೆಲ್ಲುವ ಗಂಡಿಗೆ ಬಹುಮಾನ ನೀಡುವುದಾಗಿ ಊರಿನ ಗೌಡ ಸ್ಪರ್ಧಾಳುಗಳನ್ನು ಹುರಿದುಂಬಿಸುತ್ತಾನೆ. ಆ ಸ್ಪರ್ಧೆಯಲ್ಲಿ ಗೆಲ್ಲುವುದು ಓರ್ವ ಮುಸ್ಲಿಂ ಯುವಕ. ಕೊಟ್ಟ ಮಾತಿನಂತೆ ಗೌಡ ಬಹುಮಾನದ ಹಣ ನೀಡಿದರೂ, ತಕ್ಷಣವೇ ಆ ಸ್ಥಳದಿಂದ ನಿರ್ಗಮಿಸುತ್ತಾನೆ. ಗೌಡನ ಮನಃಸ್ಥಿತಿಯನ್ನು ಬಹು ಸೂಚ್ಯವಾಗಿ ಕಟ್ಟಿಕೊಡುವ ದೃಶ್ಯ, ಸಿನಿಮಾದ ಕೊನೆಯಲ್ಲಿ ಮತ್ತೆ ಕಾಣಿಸಿಕೊಳ್ಳುತ್ತದೆ; ಅಸಹನೆ ಮತ್ತಷ್ಟು ತೀವ್ರವಾಗಿ ಅಭಿವ್ಯಕ್ತಗೊಳ್ಳುತ್ತದೆ.

ವಿನ್ಯಾ ಎನ್ನುವ ಹುಡುಗ ಕಾಣೆಯಾದಾಗ, ಆ ಕಣ್ಮರೆಯ ಹಿಂದೆ ರಫೀಕ್‌ನ ಕೈವಾಡ ಇರುವುದಾಗಿ ಶಂಕಿಸುವ ಗುಂಪು, ಅವನ ಮನೆಯ ಮೇಲೆ ದಾಳಿ ನಡೆಸುತ್ತದೆ. ಅದೊಂದು ಆಕಸ್ಮಿಕ ಘಟನೆಯಾಗಿರದೆ, ದೇಶದ ವಿವಿಧ ಭಾಗಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ ಮೇಲೆ ಇತ್ತೀಚಿನ ವರ್ಷಗಳಲ್ಲಿ ವಿವಿಧ ಕಾರಣಗಳಿಗಾಗಿ ನಡೆಯುತ್ತಿರುವ ದಾಳಿಗಳನ್ನು ಸಂಕೇತಿಸುವ ಬಿಂಬವಾಗಿದೆ. ಗಿರೀಶ ಕಾಸರವಳ್ಳಿಯವರ ‘ಗುಲಾಬಿ ಟಾಕೀಸ್’ ಸಿನಿಮಾದಲ್ಲಿ ಊರಿನ ಎಲ್ಲರಿಗೂ ಬೇಕಾದ ಗುಲಾಬಿ, ಬದಲಾದ ಸಂದರ್ಭದಲ್ಲಿ ಟ್ರಂಕಿನ ಮೇಲೆ ಕುಳಿತು ಅನುಭವಿಸುವ ಒಂಟಿತನ, ಅಸಹಾಯಕತೆಯನ್ನು ‘ಹೆಬ್ಬುಲಿ ಕಟ್’ನಲ್ಲಿ ರಫೀಕನ ಅಮ್ಮ ಅನುಭವಿಸುತ್ತಾಳೆ.

ವಿನ್ಯಾ ಎನ್ನುವ ಹದಿಹರೆಯದ ಹುಡುಗನೊಬ್ಬನ ಕೇಶವಿನ್ಯಾಸ ಮಾಡಿಸಿಕೊಳ್ಳುವ ಆಸೆ, ಅವನಿಗೆ ಹಾಗೂ ಅವನ ಕುಟುಂಬಕ್ಕೆ ಎಷ್ಟು ದುಬಾರಿಯಾಗುತ್ತದೆ ಎನ್ನುವುದನ್ನು ನಿರೂಪಿಸುವ ‘ಹೆಬ್ಬುಲಿ ಕಟ್’, ಜಾತ್ಯತೀತ ಭಾರತದಲ್ಲಿನ ಜಾತೀಯತೆಯ ರಾಡಿಯನ್ನು ಕಾಣಿಸುವ ಪ್ರಯತ್ನ. ವಿನ್ಯಾ ಚಮ್ಮಾರ ಕುಟುಂಬಕ್ಕೆ ಸೇರಿದವನು. ತನ್ನ ಸಹಪಾಠಿ ಹುಡುಗಿಯ ಅಭಿಮಾನದ ನಟನ ‘ಹೆಬ್ಬುಲಿ ಕಟ್’ ಕೇಶವಿನ್ಯಾಸವನ್ನು ಮಾಡಿಸಿಕೊಳ್ಳುವ ಮೂಲಕ ಅವಳ ಮೆಚ್ಚುಗೆ ಪಡೆಯುವ ಆಸೆ ಅವನದು. ಆದರೆ, ವಿನ್ಯಾ ಮತ್ತು ಅವನ ಸಮುದಾಯದ ಕೂದಲನ್ನು ಕತ್ತರಿಸುವ ಮುಸ್ಲಿಂ ವ್ಯಕ್ತಿಗೆ ಆಧುನಿಕ ಕೇಶವಿನ್ಯಾಸದ ಪರಿಣತಿಯಿಲ್ಲ. ಊರಿನ ಮಧ್ಯದಲ್ಲಿರುವ ಸಲೂನಿಗೆ ವಿನ್ಯಾನಿಗೆ ಪ್ರವೇಶವಿಲ್ಲ. ಆ ಸಲೂನಿನ ಒಡೆಯ ಚೆನ್ನನಿಗೆ ವಿನ್ಯಾನ ಆಸೆಯನ್ನು ಈಡೇರಿಸಲು ಮನಸ್ಸಿದ್ದರೂ, ಊರಿನ ಜಾತಿಗೋಡೆಗಳ ಬಗ್ಗೆ ಅವನಿಗೆ ಅರಿವಿದೆ. ಬಾಲಕನನ್ನು ನಿರಾಶೆಪಡಿಸಲು ಇಷ್ಟವಿಲ್ಲದೆ, ಐದುನೂರು ರೂಪಾಯಿ ಕೊಟ್ಟರೆ ಹೆಬ್ಬುಲಿ ಕಟ್ ಮಾಡುವುದಾಗಿ ಹೇಳುತ್ತಾನೆ. ಹೊಟ್ಟೆಬಟ್ಟೆಗೆ ತತ್ವಾರವಿರುವ ಚಮ್ಮಾರನ ಮಗ ಐದುನೂರು ರೂಪಾಯಿ ಹೊಂದಿಸುವುದು ಸಾಧ್ಯವೇ ಇಲ್ಲ ಎನ್ನುವುದು ಚೆನ್ನನ ಲೆಕ್ಕಾಚಾರ. ಆದರೆ, ಸ್ಕೂಲಿಗೆ ಚಕ್ಕರ್ ಹೊಡೆದು ಚಿಂದಿ ಆಯುವ ವಿನ್ಯಾ ರೂಪಾಯಿಗೆ ರೂಪಾಯಿ ಜೋಡಿಸಿ, ಐದುನೂರು ರೂಪಾಯಿ ಸಂಪಾದಿಸುತ್ತಾನೆ.

ಬೆಳಗಾದರೆ ಕಸುಬುದಾರನಲ್ಲದ ವ್ಯಕ್ತಿಯ ಕತ್ತರಿಗೆ ಕೂದಲು ಒಪ್ಪಿಸುವುದರಿಂದ ಪಾರಾಗಲಿಕ್ಕಾಗಿ ವಿನ್ಯಾ ಮನೆಯಿಂದ ಕಾಣೆಯಾಗುತ್ತಾನೆ. ಮರುದಿನ ನಸುಕಿನಲ್ಲಿ ಸಲೂನಿನ ಮುಚ್ಚಿದ ಬಾಗಿಲೊಳಗೆ ವಿನ್ಯಾನ ಹೆಬ್ಬುಲಿ ಕಟ್‌ಗೆ ತಯಾರಿ ನಡೆಯುತ್ತದೆ. ಒಂದೆಡೆ, ವಿನ್ಯಾನ ಕಣ್ಮರೆಯ ಕಾರಣದಿಂದಾಗಿ ರಫೀಕ್ ಮನೆಯ ಮೇಲೆ ದಾಳಿ ನಡೆಯುತ್ತದೆ; ಅದೇ ಸಂದರ್ಭದಲ್ಲಿ ವಿನ್ಯಾನ ‘ಪಟ್ಟಾಭಿಷೇಕ’ದ ವಿಷಯ ಹೇಗೋ ತಿಳಿದು, ಸಲೂನಿನ ಮೇಲೆ ಗೌಡ ದಾಳಿ ಮಾಡುತ್ತಾನೆ. ವಿನ್ಯಾನಿಗೆ ಹೆಬ್ಬುಲಿ ಕಟ್ ಮಾಡಬೇಕಾದ ಚೆನ್ನ ತಲೆಬೋಳಿಸುತ್ತಾನೆ. ವಿನ್ಯಾನ ತಂದೆ–ತಾಯಿಯ ಕಾರಣದಿಂದಾಗಿ ರಫೀಕ್‌ನ ಮನೆಯವರು ದೈಹಿಕ ಹಲ್ಲೆಯಿಂದ ಪಾರಾಗುತ್ತಾರೆ. ಆತ್ಮವಿಶ್ವಾಸಕ್ಕೆ ಕಾರಣವಾಗಬೇಕಾಗಿದ್ದ ಕೇಶವಿನ್ಯಾಸದ ಬದಲು, ತಲೆ ಬೋಳಿಸಿಕೊಂಡ ಅವಮಾನದಿಂದ ವಿನ್ಯಾ ತಲೆತಗ್ಗಿಸುತ್ತಾನೆ. ಮಗನ ಪರಿಸ್ಥಿತಿ ನೋಡಿ ಸಂಕಟಪಡುವ ತಂದೆ–ತಾಯಿ ಅಸಹಾಯಕತೆಯಿಂದ ಮಾತು ಕಳೆದುಕೊಳ್ಳುತ್ತಾರೆ. ಸಿನಿಮಾ ಮುಗಿಯುವ ಆ ಕ್ಷಣಕ್ಕೆ, ತೆರೆಯ ಮೇಲೆ ‘ಹಿಂದೂ ನಾವೆಲ್ಲ ಒಂದು’ ಎನ್ನುವ ಗೋಡೆಬರಹ!

ಮಾಹಿತಿ ತಂತ್ರಜ್ಞಾನದ ಉತ್ಕರ್ಷದ ದಿನಗಳ ಭಾರತದಲ್ಲಿ ಎರಡು ಸಮುದಾಯಗಳು ಎದುರಿಸುತ್ತಿರುವ ಭಿನ್ನವಾದ ತಲ್ಲಣಗಳನ್ನು ‘ಹೆಬ್ಬುಲಿ ಕಟ್’ ಮಾರ್ಮಿಕವಾಗಿ ಚಿತ್ರಿಸಿದೆ. ಸಹಜ ರೂಪಕಗಳು ಸಿನಿಮಾದ ಹೊಳಪು ಹೆಚ್ಚಿಸಿವೆ. ಬಿಡಿ, ಬಿಳಿ ಹೂವೊಂದು ತಿಳಿ ನೀರಿನಲ್ಲಿ ತೇಲುತ್ತ ಪಯಣಿಸುವ ದೃಶ್ಯ ವಿನ್ಯಾನಂಥವರ ಜೀವನಯಾನವೂ ಆಗಿದೆ. ತಿಳಿನೀರ ಹರಿವು ಬಗ್ಗಡವಾಗುತ್ತದೆ, ಕೊಳೆಯಾಗುತ್ತದೆ. ಹೂವಿನ ಸರಾಗ ಚಲನೆಗೂ ಎಡರುತೊಡರು. ಬಿಡಿಸಿಹೇಳುವುದೇನು: ತಿಳಿನೀರು, ಬಗ್ಗಡ, ಹೂವಿನ ಪಯಣ – ಎಲ್ಲವೂ ಈ ಮಣ್ಣಿನಲ್ಲಿ ಮೂಡುವ ಅನುದಿನದ ಬಿಂಬಗಳೇ. ತಮಟೆಯ ನಾದಕ್ಕೆ ತಕ್ಕಂತೆ ಕುಣಿಯುವ ಮೂಲಕ ವಿನ್ಯಾನ ಕುಟುಂಬ ಹತಾಶೆ–ಸಂಕಟವನ್ನು ಮೀರುವ ಕ್ಷಣ ಕಥನದ ಚೌಕಟ್ಟನ್ನು ದಾಟಿ, ತಳವರ್ಗದ ಬದುಕಿನ ಸಂಕೀರ್ಣತೆ ಹಾಗೂ ಚೆಲುವು ಹಿಡಿದಿಡುವ ರೂಪಕವಾಗಿದೆ.

‘ಹೆಬ್ಬುಲಿ ಕಟ್’ ಸಿನಿಮಾ, ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ ಸಂದರ್ಭದ ವಿದ್ಯಮಾನಗಳನ್ನು ನೆನಪಿಸುತ್ತದೆ. ‘ಈ ಸಮೀಕ್ಷೆ ಜಾತಿಗಣತಿ ಅಲ್ಲ’ ಎಂದು ಸರ್ಕಾರ ಸ್ಪಷ್ಟವಾಗಿ ಹೇಳಿದ್ದರೂ, ಕೆಲವರ ಪಾಲಿಗಿದು ಜಾತಿಗಣತಿಯೇ. ಸಮೀಕ್ಷೆಯಲ್ಲಿ ಭಾಗಿಯಾಗಲು ನಿರಾಕರಿಸಿದ ಉದ್ಯಮಿಯೊಬ್ಬರು, ತಾವು ಮುಂದುವರಿದ ಜಾತಿಗೆ ಸೇರಿರುವುದಾಗಿ ಟಿಪ್ಪಣಿ ಬರೆದರು. ಈ ಘಟನೆ, ವ್ಯಕ್ತಿಯೊಬ್ಬ ತನ್ನನ್ನು ತಾನು ಮುಂದುವರಿದ ಜಾತಿಗೆ ಸೇರಿದ್ದೇನೆಂದು ಹೇಳಿಕೊಳ್ಳುವುದಕ್ಕೆ ಕೊಂಚವೂ ಲಜ್ಜೆಪಡದ ಮನಃಸ್ಥಿತಿಯನ್ನು ಸೂಚಿಸುವಂತಿದೆ. ಊರಿನ ಗೌಡನ ಅಸಹನೆಗೂ, ಜಾತಿವ್ಯಸನದ ಉದ್ಯಮಿ ದಂಪತಿಯ ಮನೋಧರ್ಮಕ್ಕೂ ವ್ಯತ್ಯಾಸವೇನಿಲ್ಲ. ಹಣ, ಅಧಿಕಾರ ಹಾಗೂ ಜಾತಿಗರ್ವ ಒಟ್ಟಿಗೆ ಸೇರಿದರೆ, ಮಾನವೀಯತೆ ಅಪ್ರಸ್ತುತವಾಗುವುದರಲ್ಲಿ ಅಚ್ಚರಿಯೇನಿಲ್ಲ.

ಆಶಯಪ್ರಧಾನ ಪ್ರಯೋಗಗಳು ಸಿನಿಮಾ ವ್ಯಾಕರಣದ ದೃಷ್ಟಿಯಿಂದ ಬಡವಾಗಿರುವುದು ಕನ್ನಡ ಸಿನಿಮಾ ಸಂದರ್ಭದಲ್ಲಿ ಒಪ್ಪಿತ ಎನ್ನುವಂತಾಗಿದೆ. ಆದರೆ, ‘ಹೆಬ್ಬುಲಿ ಕಟ್’ ವ್ಯಾಕರಣದ ದೃಷ್ಟಿಯಿಂದಲೂ, ಮೌನೇಶ್ ನಟರಂಗ, ಮಹದೇವ ಹಡಪದ ಹಾಗೂ ವೈ.ಜಿ. ಉಮಾ ಅವರ ನಟನೆಯ ಕಸುವಿನಿಂದಲೂ ಗಮನಸೆಳೆಯುವ ಸಿನಿಮಾ.

‘ಹೆಬ್ಬುಲಿ ಕಟ್’ ತೆರೆಕಂಡ ಸುಮಾರು ಮೂರು ತಿಂಗಳ ನಂತರ ಬಿಡುಗಡೆಯಾದ ‘ಕಾಂತಾರ ಅಧ್ಯಾಯ–1’ ಈ ವರ್ಷ ದೇಶದಲ್ಲೇ ಹೆಚ್ಚಿನ ಗಳಿಕೆಯ ದಾಖಲೆಗೆ ಪಾತ್ರವಾಗಿರುವ ಸಿನಿಮಾ. ಎರಡೂ ಸಿನಿಮಾಗಳು ‘ನೆಲದ ಕಥೆ’ಗಳೇ ಆಗಿವೆ. ಕಾಂತಾರವನ್ನು ಕನ್ನಡದ ಹೆಮ್ಮೆಯ ಸಿನಿಮಾ ರೂಪದಲ್ಲಿ ಬಿಂಬಿಸಲಾಗುತ್ತಿದೆ. ‘ಹೆಬ್ಬುಲಿ ಕಟ್’ ತೆರೆಕಂಡಷ್ಟೇ ವೇಗದಲ್ಲಿ ನೇಪಥ್ಯಕ್ಕೆ ಸರಿದು, ಕಿರುತೆರೆಯ ಒಟಿಟಿ ಚಿತ್ರರಾಶಿಯಲ್ಲಿ ಹುದುಗಿರುವ ಕಥನ. ಮಾತು ಹಾಗೂ ವಾಸ್ತವ ಒಟ್ಟಾಗದ ‘ಹಿಂದೂ ನಾವೆಲ್ಲ ಒಂದು’ ಹೇಳಿಕೆ, ‘ಕಾಂತಾರ’ ಹಾಗೂ ‘ಹೆಬ್ಬುಲಿ ಕಟ್’ ಸಿನಿಮಾಗಳ ಪ್ರತಿನಿಧೀಕರಣಕ್ಕೂ ಅನ್ವಯಿಸುವಂತಹದ್ದು.



ವಾಚಕರ ವಾಣಿ

ಹುಲಿ ದಾಳಿ: ಸಂತ್ರಸ್ತರ ಅರಣ್ಯರೋದನ

ಹುಲಿಯನ್ನು ಕೊಂದ ಮನುಷ್ಯರ ಹೆಡೆಮುರಿ ಕಟ್ಟಿ ಜೈಲಿಗಟ್ಟಲಾಗುತ್ತದೆ. ಹುಲಿಯು ಮನುಷ್ಯರನ್ನು ಕೊಂದಾಗ ಯಾರನ್ನು ಜೈಲಿಗಟ್ಟುವುದು? ವನ್ಯಜೀವಿಗಳನ್ನು ಮನುಷ್ಯರಿಂದ ರಕ್ಷಿಸಲು ವನ್ಯಜೀವಿ ಸಂರಕ್ಷಣಾ ಕಾಯ್ದೆಯಿದೆ. ವನ್ಯಜೀವಿ ಸಂರಕ್ಷಕರು, ಅರಣ್ಯಾಧಿಕಾರಿಗಳು, ಅರಣ್ಯ ಸಚಿವರಿದ್ದಾರೆ. ನ್ಯಾಯಾಲಯವೂ ಇದೆ! ವಿಪರ್ಯಾಸವೆಂದರೆ, ವನ್ಯಜೀವಿಗಳಿಂದ ಮನುಷ್ಯರನ್ನು ರಕ್ಷಿಸಲು ಯಾವುದೇ ಕಾಯ್ದೆಯಿಲ್ಲ! ಯಾವುದೇ ಅಧಿಕಾರಿಯಿಲ್ಲ, ಸಚಿವರಿಲ್ಲ, ನ್ಯಾಯಾಲಯವೂ ಇಲ್ಲ. ಹುಲಿ ದಾಳಿಗೆ ಬಲಿಯಾದ ನಿರಪರಾಧಿಯ ಕುಟುಂಬದವರದು ಬರೀ ಅರಣ್ಯರೋದನ ಅಷ್ಟೇ.

ಪಿ.ಜೆ. ರಾಘವೇಂದ್ರ, ಮೈಸೂರು

ಕೀಳುಮಟ್ಟದ ಟೀಕೆ–ಟಿಪ್ಪಣಿ ಅಸಹ್ಯಕರ

ರಾಜಕಾರಣದಲ್ಲಿ ರಾಜಕೀಯ ವಿರೋಧಿಗಳು ಪರಸ್ಪರ ಟೀಕೆ–ಟಿಪ್ಪಣಿ ಮಾಡುವುದು ಸಹಜ. ಇಷ್ಟಕ್ಕೆ ಸೀಮಿತವಾಗದೆ ಕುಟುಂಬದ ಸದಸ್ಯರ ವೈಯಕ್ತಿಕ ವಿಷಯಗಳೂ ಈ ಟೀಕೆಗಳಲ್ಲಿ ನುಸುಳುತ್ತಿರುವುದು ದುರದೃಷ್ಟಕರ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಕೇಂದ್ರ ಬೃಹತ್ ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ತಮ್ಮ ಸ್ಥಾನಮಾನ ಮರೆತು ಪರಸ್ಪರ ಏಕವಚನದಲ್ಲಿ ನಿಂದಿಸಿಕೊಳ್ಳುವುದು, ಮತದಾರರಿಗೆ ಮಾಡಿದ ಅಗೌರವ. ಇನ್ನೂ ಕೆಲವು ನಾಯಕರು, ಶಾಸಕರು, ಮಾಜಿ ಸಂಸದರು, ತಮ್ಮ ಮನೆಯ ಹೆಣ್ಣುಮಕ್ಕಳು ಮತ್ತು ತಂದೆ–ತಾಯಿಯ ಹೆಸರನ್ನು ಟೀಕೆಯ ಮಧ್ಯೆ ತರುತ್ತಿರುವುದು ಇಡೀ ನಾಗರಿಕ ಸಮಾಜವೇ ತಲೆ ತಗ್ಗಿಸುವಂತಹದ್ದು.

ಚಂದ್ರಕುಮಾರ್ ಡಿ., ಬೆಂಗಳೂರು

ಮಾತಿನ ಸದಾಶಯ ಕೃತಿಯಲ್ಲಿ ಕಣ್ಮರೆ

‘ಕಡುಬಿನ ರುಚಿಗೆ ತಿಂದದ್ದೇ ಆಧಾರ ಅಲ್ಲವೇ?’ ಲೇಖನದಲ್ಲಿ (ಲೇ: ಕೋಟ ಶ್ರೀನಿವಾಸ ಪೂಜಾರಿ, ಪ್ರ.ವಾ., ಅ. 28) ‘ಸಂಘದ ಜಾತಿ ಒಂದೇ: ಅದು ಹಿಂದೂ, ಹಿಂದೂ, ಹಿಂದೂ’ ಎಂದು ಹೇಳಲಾಗಿದೆ. ಸಾಮಾನ್ಯವಾಗಿ ಆರ್‌ಎಸ್‌ಎಸ್‌ನ ಎಲ್ಲಾ ಪದಾಧಿಕಾರಿಗಳು, ಕಾರ್ಯಕರ್ತರು ಇದನ್ನು ಹೇಳುತ್ತಾರೆ. ಬಹಿರಂಗದಲ್ಲಿ ಅಂತರ್ಜಾತೀಯ ವಿವಾಹ ಆಗಬೇಕೆನ್ನುತ್ತಾರೆ. ಆದರೆ, ಜಾತಿವಿನಾಶಕ್ಕೆ ಆರ್‌ಎಸ್‌ಎಸ್ ಎಷ್ಟು ಅಂತರ್ಜಾತೀಯ ವಿವಾಹ ಕಾರ್ಯಕ್ರಮಗಳನ್ನು ನಡೆಸಿದೆ? ದಲಿತರ ದೇವಾಲಯ ಪ್ರವೇಶಕ್ಕೆ, ದೇವಾಲಯಗಳಲ್ಲಿ ಸಹಪಂಕ್ತಿ ಭೋಜನಕ್ಕೆ ಏನೆಲ್ಲಾ ಪ್ರಯತ್ನಗಳನ್ನು ಮಾಡಿದೆ? ಈ ಬಗ್ಗೆ ಪೂಜಾರಿ ಅವರು ತಿಳಿಸುವರೇ? ಬಹಿರಂಗದಲ್ಲಿ ಅಂತರ್ಜಾತೀಯ ವಿವಾಹ ಆಗಬೇಕೆನ್ನುವವರು, ‘ಅಂತರಂಗದಲ್ಲಿ ಮದುವೆ ವ್ಯಕ್ತಿಗತ ವಿಷಯ; ಅದರಲ್ಲಿ ಆರ್‌ಎಸ್‌ಎಸ್ ತಲೆ ಹಾಕುವುದಿಲ್ಲ’ ಎನ್ನುತ್ತಾರೆ. ಅಂತೆಯೇ ದಲಿತರಿಗೆ ದೇವಾಲಯ ಪ್ರವೇಶ ನಿರಾಕರಿಸಿದ ಸಂದರ್ಭಗಳಲ್ಲಿ ಆರ್‌ಎಸ್‌ಎಸ್ ಸಕ್ರಿಯವಾಗಿ ದಲಿತರ ಪರ ನಿಂತು ದೇಗುಲದೊಳಗೆ ಪ್ರವೇಶ ಕೊಡಿಸಿದ ನಿದರ್ಶನ ಉಂಟೇ? ಸಂಘದ ಈ ನಡವಳಿಕೆಯು ‘ಹಿಂದೂ ಒಂದು’ ಎಂದು ಘೋಷಿಸುವ ಅವರ ಮಾತಿಗೂ, ಕೃತಿಗೂ ಇರುವ ಅಜಗಜಾಂತರ ವ್ಯತ್ಯಾಸಕ್ಕೆ ಕನ್ನಡಿ ಹಿಡಿಯುತ್ತದೆ.

ಎಚ್.ಎಸ್. ನಂದಕುಮಾರ್, ಮಂಗಳೂರು

> **ಕನ್ನಡ**
>
> ಭಾವನೆಗಳು ಉಕ್ಕಿ
> ಬಂದಾಗ ಬೇರೆ
> ಭಾಷೆಗಳು ಕೈ
> ಕೊಡುವುದೇ ತಡ...
> ಸರಾಗವಾಗಿ ಬಂದು
> ಕೈ ಹಿಡಿದು
> ಬಿಡುತ್ತೆ ಸವಿನುಡಿಯ
> ಕನ್ನಡ...
>
> **ವಿಜಯಮಹಾಂತೇಶ್,** ಬಾಗಲಕೋಟೆ

ಬೀದಿನಾಯಿ ನಿಯಂತ್ರಣ ಆದ್ಯತೆಯಾಗಲಿ

ಬೀದಿನಾಯಿಗಳ ಹಾವಳಿ ತಡೆಗಟ್ಟಲು ಯಾವ ರೀತಿಯ ಕ್ರಮ ಕೈಗೊಳ್ಳಲಾಗಿದೆ ಎಂಬ ಬಗ್ಗೆ ಇದುವರೆಗೂ ಪ್ರಮಾಣಪತ್ರ ಸಲ್ಲಿಸದ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿರುವುದು ಸರಿಯಾಗಿದೆ. ದೇಶದ ಬಹುತೇಕ ಕಡೆ ಬೀದಿನಾಯಿಗಳಿಂದ ಮಕ್ಕಳು ಮತ್ತು ವೃದ್ಧರು ಪ್ರಾಣ ಕಳೆದುಕೊಂಡಿದ್ದಾರೆ. ಆದ್ದರಿಂದ ಬೀದಿನಾಯಿಗಳ ಹಾವಳಿ ತಡೆಗಟ್ಟುವುದು ಸರ್ಕಾರದ ಜವಾಬ್ದಾರಿಯಾಗಿದೆ.

ಯಲ್ಲಪ್ಪ ಟಿ. ಗಲಗ್ಕರ್, ದೇವದುರ್ಗ

ಮಸೂದೆ: ವಿಸ್ತೃತವಾಗಿ ಚರ್ಚೆ ನಡೆಸಲಿ

ಮನೆ ಕೆಲಸದವರ ಕಲ್ಯಾಣ ಮಸೂದೆ ಮಂಡನೆಗೆ ಸರ್ಕಾರ ಸಿದ್ಧತೆ ನಡೆಸಿದೆ. ಆದರೆ, ಇದು ಕಾಯ್ದೆಯಾದ ಮೇಲೆ ಎಷ್ಟರಮಟ್ಟಿಗೆ ಕಾರ್ಯರೂಪಕ್ಕೆ ಬರಲಿದೆ ಎನ್ನುವುದು ಯಕ್ಷಪ್ರಶ್ನೆ. ಕಟ್ಟಡ ಕಾರ್ಮಿಕರ ಕಲ್ಯಾಣ ಕಾಯ್ದೆ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಕಟ್ಟಡ ನಿರ್ಮಾಣ ವೆಚ್ಚದಡಿ ಸಂಗ್ರಹಿಸುವ ಶೇ 1ರಷ್ಟು ಸೆಸ್ ಅನ್ನು ಸಮರ್ಪಕವಾಗಿ ಬಳಕೆ ಮಾಡುತ್ತಿಲ್ಲ. ಹೀಗಿರುವಾಗ ಅಸಂಘಟಿತ ವಲಯದಲ್ಲಿ ಇರುವ ಮನೆ ಕೆಲಸದವರ ಕಲ್ಯಾಣಕ್ಕೆ ಸರ್ಕಾರ ಯಾವ ರೀತಿಯ ಕಾರ್ಯಕ್ರಮ ಹಮ್ಮಿಕೊಳ್ಳುತ್ತದೆ ಎಂಬ ಬಗ್ಗೆ ಕಾದುನೋಡಬೇಕಿದೆ. ಮಸೂದೆ ಮಂಡನೆಗೂ ಮೊದಲು ಇದರ ಸಾಧಕ–ಬಾಧಕದ ಬಗ್ಗೆ ಚರ್ಚೆ ಅಗತ್ಯ.

ಕಡೂರು ಫಣಿಶಂಕರ್, ಬೆಂಗಳೂರು

ತಲೆಗಿಂತ ಮುಂಡಾಸು ಭಾರ ಆದಂತಿದೆ!

ಬೆಂಗಳೂರು ಹೊರವಲಯದ ವರ್ತುಲ ರೈಲು ಮಾರ್ಗ ನಿರ್ಮಾಣದ ಅಂದಾಜು ವೆಚ್ಚ ₹20 ಸಾವಿರ ಕೋಟಿ. ಭೂಸ್ವಾಧೀನಕ್ಕೆ ₹60 ಸಾವಿರ ಕೋಟಿ ಬೇಕಿದೆ. ಇದು ತಲೆಗಿಂತ ಪೇಟ ಭಾರ ಆದಂತಿದೆ. ರೈತರ ಭೂಮಿಗೆ ಬಂಗಾರದ ಬೆಲೆ ಬಂದಾಗಿದೆ. ಇನ್ನು ಯಾವ ಯೋಜನೆಗೂ ರೈತರು ಭೂಮಿ ನೀಡುವುದಿಲ್ಲ. ಅವರ ಆಯ್ಕೆ ಸರಿಯಾಗಿದೆ. ಸ್ವಾಧೀನಕ್ಕೆ ಒಳಪಡುವ ರೈತರ ಜಮೀನುಗಳನ್ನು ಐವತ್ತು ವರ್ಷಗಳ ಕಾಲ ಹಸಿರು ವಲಯದಲ್ಲಿ ಉಳಿಸಬೇಕು. ಈ ಬಗ್ಗೆ ಕಾನೂನು ರೂಪಿಸಬೇಕು.

ಮಲ್ಲಿಕಾರ್ಜುನ, ಸುರಧೇನುಪುರ

ಆಡಬೇಕಾದ ಮಾತು ಯಾವುದು?



ಪ್ರತಿದಿನ ಯಾರಾದರೊಬ್ಬರು ಮುಖ್ಯಮಂತ್ರಿ ಬದಲಾವಣೆ ಬಗ್ಗೆ, ಆರ್‌ಎಸ್‌ಎಸ್ ಪಥಸಂಚಲನದ ಬಗ್ಗೆ, ಹಿಂದೂ– ಮುಸ್ಲಿಂ ಬಗ್ಗೆ ಚರ್ಚಿಸುತ್ತಿರುವುದು ಒಳ್ಳೆಯದು. ಆಗ, ಬ್ಯಾಂಕ್ ಖಾಸಗೀಕರಣದ ಬಗ್ಗೆ, ಹೆಣ್ಣುಮಕ್ಕಳ ನಾಪತ್ತೆ ಪ್ರಕರಣಗಳ ಬಗ್ಗೆ, ರಸ್ತೆ ಗುಂಡಿಗಳಿಂದಾಗಿ ಸತ್ತವರ ಬಗ್ಗೆ, ಮಹಿಳೆಯರ ಕೊಲೆ– ಅತ್ಯಾಚಾರದ ಬಗ್ಗೆ, ಭ್ರಷ್ಟಾಚಾರದ ಬಗ್ಗೆ, ಬೀಳುತ್ತಿರುವ ಶಾಲಾ ಕಟ್ಟಡಗಳ ಬಗ್ಗೆ ಯಾರೂ ಮಾತನಾಡುವುದಿಲ್ಲ!

ಈ. ಬಸವರಾಜು, ಸಾಮಾಜಿಕ ಕಾರ್ಯಕರ್ತ, ‘ಫೇಸ್‌ಬುಕ್’ನಿಂದ


ಕಿಡಿನುಡಿ



ಆರ್‌ಎಸ್‌ಎಸ್ ಚಟುವಟಿಕೆಗಳನ್ನು ಗುರಿಯಾಗಿಸಿಕೊಂಡು ಹೊರಡಿಸಿದ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್‌ನ ಧಾರವಾಡ ಪೀಠ ತಡೆ ನೀಡಿದೆ. ಸಂವಿಧಾನ ವಿರೋಧಿ ನೀತಿ ಪಾಲಿಸುವ ಕಾಂಗ್ರೆಸ್ ಸರ್ಕಾರಕ್ಕೆ ಇದು ಎಚ್ಚರಿಕೆಯ ಪಾಠ. ಸಂವಿಧಾನದ ಮೂಲ ಆಶಯಗಳನ್ನು ಗೌರವಿಸುವುದನ್ನು ಕಾಂಗ್ರೆಸ್ ಸರ್ಕಾರ ಪಾಲಿಸಲಿ.

ಪ್ರಲ್ಹಾದ ಜೋಶಿ, ಕೇಂದ್ರ ಸಚಿವ

ಚುರುಮುರಿ: ದೆಹಲಿ ದೇವರು



• ಮಣ್ಣೆ ರಾಜು

‘ನಿಮಗೆ ಮಂತ್ರಿ ಸ್ಥಾನ ಸಿಗಲೆಂದು ದೇವಸ್ಥಾನದಲ್ಲಿ ಉರುಳುಸೇವೆ ಮಾಡಿ, ಪೂಜೆ ಮಾಡಿಸಿದೆವು’ ಎಂದು ಬೆಂಬಲಿಗರು ಬಂದು ಶಾಸಕರಿಗೆ ಪ್ರಸಾದ ಕೊಟ್ಟರು.

‘ನೀವು ಮಂತ್ರಿಯಾದರೆ ಮುಡಿ ಕೊಡ್ತೀವಿ ಅಂತ ನಾವೆಲ್ಲಾ ದೇವರಲ್ಲಿ ಹರಕೆ ಮಾಡಿಕೊಂಡಿದ್ದೀವಿ ಸಾರ್’ ಎಂದ ಒಬ್ಬ.

ಶಾಸಕರು ನಿಟ್ಟುಸಿರುಬಿಟ್ಟರು. ‘ನಿಮ್ಮ ದೇವರು ಒಪ್ಪಿದರೆ ಸಾಕಾಗುವುದಿಲ್ಲ, ನಮ್ಮ ದೇವರು ಒಲಿದು ವರ ಕೊಡಬೇಕು ಕಣ್ರೋ’ ಅಂದರು.

‘ನಿಮ್ಮ ಕುಲದೇವರು ಯಾವುದು ಸಾರ್?’

‘ಹೈಕಮಾಂಡ್, ದೆಹಲಿ ದೇವರು!’

‘ಮತದಾರರೇ ದೇವರು ಎಂದು ಎಲೆಕ್ಷನ್ ಟೈಮಿನಲ್ಲಿ ಹೇಳಿದ್ರಲ್ಲಾ ಸಾರ್, ಪಕ್ಷ ಬದಲಾಯಿಸುವಂತೆ ಈಗ ದೇವರನ್ನೂ ಬದಲಾಯಿಸಿಬಿಟ್ಟರಾ?’

‘ಹಾಗಲ್ರೋ, ಶಾಸಕರಾಗಲು ಮತದಾರ ದೇವರು ಬೇಕು, ಮಂತ್ರಿ–ಮುಖ್ಯಮಂತ್ರಿ ಪದವಿ ಕೊಡೋದು ದೆಹಲಿ ದೇವರು ಕಣ್ರೋ’.

‘ದೆಹಲಿ ದೇವರಿಗೂ ಕಾಯಿ ಒಡೆದು, ಕರ್ಪೂರ ಹಚ್ಚಿ ಮಂಗಳಾರತಿ ಮಾಡಿ ಸಾರ್, ದೇವರು ವರ ಕೊಡ್ತಾರೆ’ ಎಂದ ಇನ್ನೊಬ್ಬ.

‘ದೆಹಲಿ ದೇವರನ್ನು ಕ್ಷೇತ್ರಕ್ಕೆ ಆಹ್ವಾನಿಸಿ ಔತಣ, ಅಭಿಷೇಕ, ಅದ್ದೂರಿ ಉತ್ಸವ ಮಾಡೋಣ’ ಮತ್ತೊಬ್ಬ ಹೇಳಿದ.

‘ಪೂಜೆ, ಉತ್ಸವಕ್ಕೆ ದೆಹಲಿ ದೇವರು ಒಲಿಯುವುದಿಲ್ಲ’ ಶಾಸಕರು ತಲೆ ಅಲ್ಲಾಡಿಸಿದರು.

‘ಹುಂಡಿಗೆ ದುಡ್ಡು ಹಾಕಿ ನಮ್ಮಿಂದ ತಪ್ಪುಗಳಾಗಿದ್ದರೆ ಕ್ಷಮಿಸು ಪರಮಾತ್ಮ ಎಂದು ನಾವು ನಮ್ಮ ದೇವರಿಗೆ ಕೋರಿಕೊಳ್ತೀವಿ. ನೀವೂ ಏನಾದರೂ ಲೋಪ–ಪಾಪ ಮಾಡಿದ್ದರೆ ತಪ್ಪುಕಾಣಿಕೆ, ಕಪ್ಪಕಾಣಿಕೆ ಕೊಟ್ಟು ಪರಿಹಾರ ಮಾಡಿಕೊಳ್ಳಿ ಸಾರ್’.

‘ಸದ್ಯಕ್ಕೆ ನಿತ್ಯ ನಿಷ್ಠೆಯಿಂದ ದೆಹಲಿ ದೇವರ ಧ್ಯಾನ, ಭಜನೆ ಮಾಡುತ್ತಿದ್ದೇನೆ...’

‘ದೆಹಲಿ ದೇವರು ನಿಮಗೆ ಮಂತ್ರಿ ಪದವಿ ಕೊಡದಿದ್ದರೆ ಏನು ಮಾಡ್ತೀರಿ?’

‘ತೆಪ್ಪಗಿರ್ತೀನಿ. ದೆಹಲಿ ದೇವರ ಎದುರು ಹಾಕಿಕೊಂಡು ಬಾಳಲಾಗುತ್ತೇನ್ರೋ... ಕೋಪ ಬಂದರೆ ಶಾಪ ಕೊಟ್ಟು ಬಿಡುತ್ತೆ!’ ಎಂದರು ಶಾಸಕರು.

25 ವರ್ಷಗಳ ಹಿಂದೆ

ಭಾನುವಾರ, 29-10-2000

• ರೌಡಿ ತಂಗಂ ಸಹೋದರರ ದಾಂಧಲೆ: ವ್ಯಕ್ತಿಯ ಸಾವು

ಕೆಜಿಎಫ್, ಅ. 28– ಕುಖ್ಯಾತ ರೌಡಿ ತಂಗಂನ ಸಹೋದರರು ನಿನ್ನೆ ರಾತ್ರಿಯಿಂದ ಇಂದು ಮಧ್ಯಾಹ್ನದವರೆವಿಗೆ ನಡೆಸಿದ ಹಲ್ಲೆ ಹಾಗೂ ದಾಂಧಲೆಗಳಿಂದ ವ್ಯಕ್ತಿಯೊಬ್ಬ ಮೃತಪಟ್ಟಿದ್ದಾನೆ. ಈ ಸಂಬಂಧ ಇಂದು ಇಲ್ಲಿ ಉದ್ರಿಕ್ತ ಪರಿಸ್ಥಿತಿ ಉಂಟಾಗಿದೆ. ಇತ್ತೀಚೆಗೆ ಪೊಲೀಸರ ಗುಂಡಿಗೆ ಬಲಿಯಾದ ಕುಖ್ಯಾತ ರೌಡಿ ತಂಗಂನ ತಾಯಿ ಪವಳಿ ಮೇಲೆ ವಿರೋಧಿ ಗುಂಪೊಂದು ಹಲ್ಲೆ ಮಾಡಿ ತೀವ್ರವಾಗಿ ಗಾಯಗೊಳಿಸಿತ್ತು. ತಾಯಿ ಮೇಲೆ ನಡೆದ ಹಲ್ಲೆಗೆ ಪ್ರತೀಕಾರವಾಗಿ ದಾಂಧಲೆ ನಡೆಸಿದ್ದಾರೆ.

75 ವರ್ಷಗಳ ಹಿಂದೆ

ಭಾನುವಾರ, 29-10-1950

• ಮಹಾಚುನಾವಣೆಯಲ್ಲಿ ಆರ್‌ಎಸ್‌ಎಸ್ ಭಾಗವಹಿಸದು

ಮುಂಬೈ, ಅ. 28– ಮುಂಬರುವ ಮಹಾಚುನಾವಣೆಗಳಲ್ಲಿ ಆರ್‌ಎಸ್‌ಎಸ್ ಸಂಸ್ಥೆ ನೇರವಾಗಿ ಭಾಗವಹಿಸುವುದಿಲ್ಲ ಎಂದು ಸಂಸ್ಥೆಯ ನಾಯಕರಾದ ಎಸ್. ಗೋಳ್ವಾಳಕರರು ತಿಳಿಸಿದರು.

• ಪ್ರಾಂತೀಯ ಕಾಂಗ್ರೆಸ್ ಸಭೆ

ಬೆಂಗಳೂರು, ಅ. 28– ಮೈಸೂರು ಪ್ರಾಂತೀಯ ಕಾಂಗ್ರೆಸ್ಸಿನ ಅಂಗರಚನೆ ಮತ್ತು ನಿಯಮಾವಳಿಗಳನ್ನು ನಿರೂಪಿಸಲು ಪ್ರಾಂತೀಯ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಎರಡನೆ ಅಧಿವೇಶನವು ಬನುಮಯ್ಯ ಹೈಸ್ಕೂಲ್ ಕಟ್ಟಡದಲ್ಲಿ ನಡೆಯಿತು.

ಸಂಗತ

‘ಅನ್ನದ ತಟ್ಟೆ’ಗೆ ಸರ್ಕಾರ ಕೊಡದಿರಲಿ ವಿಷ

ಅಕ್ಕಿ ಕಡಿತಗೊಳಿಸಿ, ‘ಆಹಾರ ಕಿಟ್’ ನೀಡುವ ಯೋಜನೆಯನ್ನು ಮಹಿಳೆಯರು ಮತ್ತು ರೈತರ ಸಬಲೀಕರಣಕ್ಕೆ, ಉದ್ಯೋಗ ಸೃಷ್ಟಿಗೆ ಸರ್ಕಾರ ಬಳಸಿಕೊಳ್ಳಬಹುದು.

• ಜಿ. ಕೃಷ್ಣಪ್ರಸಾದ್

ಬಿಪಿಎಲ್ ಹಾಗೂ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿ ಹೊಂದಿರುವ ಕುಟುಂಬಗಳ ಪ್ರತಿಯೊಬ್ಬ ಸದಸ್ಯರಿಗೆ ನೀಡುತ್ತಿದ್ದ 10 ಕೆ.ಜಿ. ಅಕ್ಕಿಯ ಬದಲು, 5 ಕೆ.ಜಿ. ಅಕ್ಕಿ ಮತ್ತು ಪ್ರತಿ ಕುಟುಂಬಕ್ಕೆ ತೊಗರಿಬೇಳೆ, ಹೆಸರುಬೇಳೆ, ಎಣ್ಣೆ, ಸಕ್ಕರೆ ಮತ್ತು ಉಪ್ಪು ನೀಡಲು ಇತ್ತೀಚೆಗೆ ರಾಜ್ಯ ಸರ್ಕಾರ ತೆಗೆದುಕೊಂಡಿರುವ ಮಹತ್ವದ ತೀರ್ಮಾನ ಸ್ವಾಗತಾರ್ಹವಾಗಿದೆ.

ಪಿಷ್ಟ ಹೊರತುಪಡಿಸಿ, ಪೋಷಕಾಂಶಗಳು ವಿರಳವಾದ ಪಾಲಿಷ್ ಅಕ್ಕಿಯನ್ನು ಮೂರೂ ಹೊತ್ತು ಸೇವಿಸುವುದರಿಂದ ಮಧುಮೇಹ ಸೇರಿದಂತೆ ಹಲವಾರು ಕಾಯಿಲೆಗಳಿಗೆ ಆಹ್ವಾನ ನೀಡುವಂತಾಗಿದೆ. ಹಳ್ಳಿಗಳಲ್ಲೂ ಮಧುಮೇಹಿಗಳು ಹೆಚ್ಚುತ್ತಿರುವುದು ಇದೇ ಕಾರಣಕ್ಕೆ. ಆದ್ದರಿಂದ, ಅಕ್ಕಿಯನ್ನು ಕಡಿತಗೊಳಿಸಿ ಬೇಳೆ, ಎಣ್ಣೆ, ಸಕ್ಕರೆ, ಉಪ್ಪು ನೀಡುವ ಸರ್ಕಾರದ ನಿರ್ಧಾರ ಸಮಂಜಸವಾಗಿದೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಪೌಷ್ಟಿಕ ಮತ್ತು ಸಮತೋಲಿತ ಆಹಾರ ಪಡೆಯಬೇಕೆಂಬ ಸರ್ಕಾರದ ಕಾಳಜಿ ಶ್ಲಾಘನೀಯ. ಆದರೆ, ವಿಷಮಯ ತೊಗರಿ, ಕಲಬೆರಕೆ ಖಾದ್ಯ ಎಣ್ಣೆ ಹಾಗೂ ‘ಬಿಳಿ ವಿಷ’ ಎನಿಸಿರುವ ಸಕ್ಕರೆಯನ್ನು ಸರ್ಕಾರವೇ ಉಚಿತವಾಗಿ ನೀಡುತ್ತಿರುವುದು ಕಳವಳಕಾರಿ. ಉಚಿತ ಆಹಾರ ಕಿಟ್ ಹೆಸರಿನಲ್ಲಿ ನಿಧಾನ ವಿಷಗಳು ಅನ್ನದ ತಟ್ಟೆಗೆ ಬರುತ್ತವೆ. ಬುಡಕಟ್ಟು ಸಮುದಾಯಗಳಿಗೆ ಪೌಷ್ಟಿಕ ಆಹಾರ ಪೂರೈಕೆ ಮಾಡುವ ಯೋಜನೆಯಲ್ಲಿ ಗುತ್ತಿಗೆ ಪಡೆದ ಕಂಪನಿಗಳು ಕಳಪೆ ಆಹಾರ ವಿತರಿಸುತ್ತಿರುವುದು ಬಯಲಾಗಿದೆ (ಪ್ರ.ವಾ., ಅ.26). ಇದೇ ರೀತಿಯಾಗಿ, ಉಚಿತ ಆಹಾರ ಕಿಟ್ ಯೋಜನೆಯ ಗುತ್ತಿಗೆ ಪಡೆಯುವ ಖಾಸಗಿ ಕಂಪನಿಗಳು, ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯನ್ನು ಮಣ್ಣುಪಾಲು ಮಾಡುವ ಸಾಧ್ಯತೆಗಳಿವೆ.



ಉಚಿತ ಆಹಾರ ಕಿಟ್ ಯೋಜನೆಯನ್ನು, ನಿಜವಾದ ಜನಪರ ಹಾಗೂ ಆರೋಗ್ಯಪೂರ್ಣ ಕಾರ್ಯಕ್ರಮವಾಗಿ ರೂಪಿಸುವ ಅವಕಾಶ ಸರ್ಕಾರಕ್ಕಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಕ್ರಿಯವಾಗಿರುವ ಮಹಿಳಾ ಸಂಘಗಳು ಮತ್ತು ರೈತ ಉತ್ಪಾದಕರ ಕಂಪನಿಗಳಿಗೆ ಆರ್ಥಿಕ ನೆರವು ನೀಡಿ, ಸ್ಥಳೀಯವಾಗಿ ಉತ್ಪಾದಿಸಿದ ಗುಣಮಟ್ಟದ ಬೇಳೆ, ಎಣ್ಣೆ ಮತ್ತು ಬೆಲ್ಲವನ್ನು ಪಡಿತರದ ಮೂಲಕ ವಿತರಿಸಿದರೆ ಬಡವರ ಆರೋಗ್ಯ ಕಾಪಾಡಬಹುದು ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಉದ್ಯೋಗಗಳೂ ಸೃಷ್ಟಿಯಾಗುತ್ತವೆ.

ತೊಗರಿಬೇಳೆ ಉತ್ಪಾದಿಸುವ ದೊಡ್ಡ ಮಿಲ್‌ಗಳನ್ನು ಒಮ್ಮೆ ಸಂದರ್ಶಿಸಿದರೆ, ಎಷ್ಟು ವಿಷ ನಮ್ಮ ಹೊಟ್ಟೆಗೆ ಸೇರುತ್ತಿದೆ ಎನ್ನುವುದು ಅರಿವಾಗುತ್ತದೆ. ಬಿತ್ತನೆಯಿಂದ ಸಂಸ್ಕರಣೆಯವರೆಗೂ ತೊಗರಿ ವಿಷಮಯ. ತೊಗರಿಗೆ ಕಲಬೆರಕೆಯಾಗುವ ನಿಷೇಧಿತ ಕೇಸರಿಬೇಳೆಯಿಂದ ನರದೌರ್ಬಲ್ಯ, ಲಕ್ವಾ ಮತ್ತು ಕ್ಯಾನ್ಸರ್‌ನಂತಹ ಕಾಯಿಲೆಗಳ ಅಪಾಯ ಇದೆ. ತೊಗರಿಗೆ ಹೊಳಪು ಕೊಡಲು ಬಳಸುವ ಮಿನರಲ್ ಆಯಿಲ್ ದೀರ್ಘಾವಧಿಯಲ್ಲಿ ಹೃದಯ ಮತ್ತು ಯಕೃತ್ ಹಾನಿಗೆ ಕಾರಣವಾಗುತ್ತದೆ. ಮೆಟಾನಿಲ್ ಹಳದಿ ಬಣ್ಣವನ್ನೂ ತೊಗರಿಗೆ ಬಳಕೆ ಮಾಡಲಾಗುತ್ತಿದ್ದು, ಅದು ಕಿಡ್ನಿ ಮತ್ತು ಯಕೃತ್ ಹಾನಿಗೆ ಕಾರಣ.

ಇದಕ್ಕೆ ಪರ್ಯಾಯವಾಗಿ, ಗ್ರಾಮೀಣ ಮಟ್ಟದಲ್ಲಿ ಬೇಳೆ ಮಿಲ್‌ಗಳನ್ನು ಮಹಿಳಾ ಸಂಘಗಳ ಮೂಲಕ ಸ್ಥಾಪಿಸಿ ಸ್ಥಳೀಯವಾಗಿ ಬೆಳೆದ ಕಾಳುಗಳನ್ನು ಸಂಸ್ಕರಿಸಿ ಪಡಿತರದ ಮೂಲಕ ವಿತರಿಸಬಹುದು. ರೈತ ಉತ್ಪಾದಕರ ಕಂಪನಿಗಳು ಮತ್ತು ಮಹಿಳಾ ಸಂಘಗಳ ಸಹಯೋಗದಲ್ಲಿ ದೊಡ್ಡ ಪ್ರಮಾಣದ ಬೇಳೆ ಮಿಲ್‌ಗಳನ್ನು ಸ್ಥಾಪಿಸಲು ಸಂಜೀವಿನಿ– ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆಯನ್ನು ಬಳಸಿಕೊಳ್ಳಬಹುದು. ಇದು ಮಹಿಳೆಯರನ್ನು ಉದ್ಯಮಿಗಳನ್ನಾಗಿಸಲು ಇರುವ ಅತ್ಯುತ್ತಮ ಅವಕಾಶ.

ಪಡಿತರ ವ್ಯವಸ್ಥೆಯ ಎಣ್ಣೆ ಪೂರೈಕೆ ಟೆಂಡರ್‌ಗಳನ್ನು ಪಡೆದ ಕಂಪನಿಗಳು ಅಗ್ಗದ ಮತ್ತು ಕಳಪೆ ಗುಣಮಟ್ಟದ ಎಣ್ಣೆಯನ್ನು ಪೂರೈಸುವ ಸಂಭವ ಹೆಚ್ಚು. ಇಂಥ ಎಣ್ಣೆಗಳಲ್ಲಿ ಲಿಕ್ವಿಡ್ ಪ್ಯಾರಾಫಿನ್‌ನಂತಹ ಪೆಟ್ರೋಲಿಯಂ ತ್ಯಾಜ್ಯಗಳಿರುತ್ತವೆ. ಇವು ಹೃದಯಾಘಾತ, ಕ್ಯಾನ್ಸರ್, ಸ್ಥೂಲಕಾಯ, ರಕ್ತದೊತ್ತಡ ಮುಂತಾದ ರೋಗಗಳಿಗೆ ಕಾರಣವಾಗುತ್ತವೆ.

ಕರ್ನಾಟಕದಲ್ಲಿ ಈಗಾಗಲೇ ಸಾಕಷ್ಟು ಗಾಣದ ಎಣ್ಣೆ ಉತ್ಪಾದನಾ ಘಟಕಗಳು ಸಕ್ರಿಯವಾಗಿವೆ. ಅವುಗಳನ್ನು ಒಕ್ಕೂಟದ ಅಡಿ ತಂದು, ಗುಣಮಟ್ಟದ ಮಾನದಂಡ ರೂಪಿಸಿ, ಸ್ಥಳೀಯವಾಗಿ ಉತ್ಪಾದಿಸಲಾದ ಎಣ್ಣೆಗಳನ್ನು ಪಡಿತರದ ಮೂಲಕ ನೀಡುವುದು ಜನರ ಆರೋಗ್ಯ ಸುಧಾರಿಸಲು ಮಹತ್ವದ ಹೆಜ್ಜೆಯಾಗುತ್ತದೆ.

ಸಕ್ಕರೆ ಉತ್ಪಾದನೆಗೆ ಬಳಸುವ ರಾಸಾಯನಿಕಗಳು ಮಧುಮೇಹ, ಸ್ಥೂಲಕಾಯ ಮತ್ತು ಹೃದಯರೋಗಗಳ ಅಪಾಯವನ್ನು ಹೆಚ್ಚಿಸುತ್ತವೆ. ಸಕ್ಕರೆಯ ಬದಲು ಬೆಲ್ಲ ಅಥವಾ ಬೆಲ್ಲದ ಪುಡಿಯನ್ನು ಪಡಿತರದ ಮೂಲಕ ನೀಡಿದರೆ, ಅದು ಕ್ರಾಂತಿಕಾರಕ ಕ್ರಮ.

ಬೆಲೆ ಕುಸಿತ ಮತ್ತು ಕಾರ್ಖಾನೆಗಳ ವಿಳಂಬ ಹಣ ಪಾವತಿಯಿಂದ ಹೈರಾಣಾಗಿರುವ ಕಬ್ಬು ಬೆಳೆಗಾರರು ರೈತ ಉತ್ಪಾದಕರ ಕಂಪನಿಗಳ ಮೂಲಕ ಆಲೆಮನೆಗಳನ್ನು ಸ್ಥಾಪಿಸಿ ಬೆಲ್ಲ ಪೂರೈಕೆ ಮಾಡಿದರೆ, ಹಳ್ಳಿಗಾಡಿನ ಆಲೆಮನೆಗಳಿಗೂ ಪುನರ್ಜೀವ ಸಿಗುತ್ತದೆ. ಮಂಡ್ಯ ಜಿಲ್ಲೆಯಲ್ಲಿ ಈ ಪ್ರಯತ್ನ ಯಶಸ್ವಿಯಾಗಿ ನಡೆದಿದ್ದು, ಅದನ್ನು ಇತರ ಜಿಲ್ಲೆಗಳಿಗೂ ವಿಸ್ತರಿಸಬಹುದು. ಗ್ಯಾರಂಟಿ ಯೋಜನೆಗಳ ಮೂಲಕ ಬಡವರ ಕಲ್ಯಾಣಕ್ಕೆ ಮುಂದಾಗಿರುವ ಸರ್ಕಾರ, ಪಡಿತರದ ಮೂಲಕ ಗಾಣದ ಎಣ್ಣೆ, ಸ್ಥಳೀಯ ಬೇಳೆ ಮತ್ತು ಬೆಲ್ಲ ನೀಡುವ ಯೋಜನೆ ಕೈಗೊಂಡರೆ, ಅದು ರೈತರ ಕಲ್ಯಾಣಕ್ಕೆ ಹೊಸ ಅಧ್ಯಾಯವನ್ನು ಬರೆಯುವ ಹೆಮ್ಮೆಯ ಹೆಜ್ಜೆಯಾಗುತ್ತದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಆಂಧ್ರ, ಒಡಿಶಾ ಮೊಂಥಾ ಮೊರೆತ

ಮಳೆಯ ಋತು ಸರಿದ ಮೇಲೆ ಬಂಗಾಳ ಕೊಲ್ಲಿಯಲ್ಲಿ ಉಂಟಾಗಿರುವ 'ಮೊಂಥಾ' ಚಂಡಮಾರುತವು, ಪೂರ್ವ ಕರಾವಳಿಯ ಹಲವು ರಾಜ್ಯಗಳಲ್ಲಿ ಭಾರಿ ಮಳೆಗೆ ಕಾರಣವಾಗಿದೆ. ಚಂಡಮಾರುತವು ಆಂಧ್ರ ಪ್ರದೇಶದ ಕರಾವಳಿಗೆ ಅಪ್ಪಳಿಸಿದ್ದು, ನೆರೆಯ ಒಡಿಶಾದಲ್ಲಿ ಹೆಚ್ಚಿನ ಪರಿಣಾಮ ಬೀರುವ ಅಂದಾಜು ಇದೆ. ತಮಿಳುನಾಡು ಮತ್ತು ಜಾರ್ಖಂಡ್ ರಾಜ್ಯಗಳೂ ಇದರ ಪರಿಣಾಮಕ್ಕೆ ಒಳಪಟ್ಟಿವೆ. ಹವಾಮಾನ ಇಲಾಖೆಯ ಮುನ್ಸೂಚನೆಯ ಆಧಾರದಲ್ಲಿ ರಾಜ್ಯ ಸರ್ಕಾರಗಳು ಚಂಡಮಾರುತದ ಪರಿಣಾಮಗಳನ್ನು ಎದುರಿಸಲು ವ್ಯಾಪಕ ಸಿದ್ಧತೆ ಮಾಡಿಕೊಂಡಿವೆ


ಪ್ರಜಾವಾಣಿ ವಾರ್ತೆ

ಮೊಂಥಾ ಚಂಡಮಾರುತವು ಅಬ್ಬರಿಸಲು ಶುರುವಿಟ್ಟಿದೆ. ರಸ್ತೆಗಳ ಇಕ್ಕೆಲಗಳಲ್ಲಿ ಬುಡ ಮೇಲಾಗಿ ಬಿದ್ದ ಮರಗಳು. ಸಮುದ್ರ ತೀರದಲ್ಲಿ ಕಟ್ಟೆಚ್ಚರ. ಎತ್ತರದ ಅಲೆಗಳಿಗೆ ಮುಖ ಮಾಡಿ ಓಡುವ ಜನರನ್ನು ಕೂಗಿ ಕರೆದು, ಮನೆಗೆ ಕಳುಹಿಸುತ್ತಿರುವ ಪೊಲೀಸರು. ಸಮುದ್ರ ತೀರದ ರಸ್ತೆಗಳ ಮೇಲೆ ಹರಿದು ಸಾಗುತ್ತಿರುವ ಸಮುದ್ರದ ಅಲೆಗಳು. ಹೀಗೆ ಹರಿಯುವಾಗ ರಸ್ತೆಗಳ ಮೇಲೆಲ್ಲಾ ಕಲ್ಲುಗಳನ್ನು ಹೊತ್ತು ತರುತ್ತಿರುವ ಅಲೆಗಳು. ತೀರದಲ್ಲಿ ವಿರಮಿಸುತ್ತಿರುವ ಮೀನುಗಾರಿಕೆ ದೋಣಿಗಳು... 'ಮೊಂಥಾ'ದಿಂದಾಗಿ ಆಂಧ್ರ ಪ್ರದೇಶ ಮತ್ತು ಒಡಿಶಾ ರಾಜ್ಯಗಳ ಕರಾವಳಿ ಜಿಲ್ಲೆಗಳಲ್ಲಿ ಕಂಡುಬಂದ ಚಿತ್ರಣವಿದು.

ಈ ರಾಜ್ಯಗಳು 'ಮೊಂಥಾ'ವನ್ನು ಎದುರಿಸಲು ಸಜ್ಜುಗೊಂಡಿವೆ. ಆಂಧ್ರ ಪ್ರದೇಶದ 19 ಜಿಲ್ಲೆಗಳಲ್ಲಿ ಭಾರತೀಯ ಹವಾಮಾನ ಇಲಾಖೆಯು ರೆಡ್ ಅಲರ್ಟ್ ಘೋಷಿಸಿದೆ. ಚಂಡಮಾರುತದ ಕಾರಣ ಕರಾವಳಿ ಜಿಲ್ಲೆಗಳಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಭಾರಿ ವಾಹನ ಸಂಚಾರವನ್ನು ಆಂಧ್ರ ಪ್ರದೇಶದಲ್ಲಿ ರದ್ದು ಮಾಡಲಾಗಿದೆ. ಒಡಿಶಾಕ್ಕೆ ಚಂಡಮಾರುತವು ಹೊಸ ವಿಚಾರವೇನೂ ಅಲ್ಲ. ಭಾರಿ ಚಂಡಮಾರುತಗಳನ್ನು ಎದುರಿಸಿರುವ ಅನುಭವಿಯಾದ ಒಡಿಶಾವು 'ಮೊಂಥಾ'ಕ್ಕೂ ಸಕಲ ತಯಾರಿ ನಡೆಸಿದೆ. ಎರಡೂ ರಾಜ್ಯಗಳಲ್ಲಿ 'ಮೊಂಥಾ' ಪರಿಣಾಮದ ಜಿಲ್ಲೆಗಳಲ್ಲಿನ ಪ್ರವಾಸಿತಾಣಗಳಿಗೆ ಪ್ರವಾಸಿಗರನ್ನು ನಿಷೇಧಿಸಲಾಗಿದೆ.

ಚಂಡಮಾರುತದ ಹಾದಿ...

ಬಂಗಾಳ ಕೊಲ್ಲಿಯ ಪಶ್ಚಿಮ–ಕೇಂದ್ರ ಪ್ರದೇಶದಲ್ಲಿ ಉಂಟಾದ ವಾಯುಭಾರ ಕುಸಿತವು ಚಂಡಮಾರುತವಾಗಿ ಪರಿವರ್ತನೆಗೊಂಡು ಉತ್ತರ–ವಾಯವ್ಯ ದಿಕ್ಕಿನತ್ತ ಸಾಗುತ್ತಿದೆ. ಮಂಗಳವಾರ ಗಾಳಿಯ ವೇಗದ ತೀವ್ರತೆ ಹೆಚ್ಚಾಗಿತ್ತು. ಬುಧವಾರ (ಅ.29) ವೇಗ ಕಡಿಮೆಯಾಗಲಿದ್ದು, ಗುರುವಾರ (ಅ.30) ದುರ್ಬಲಗೊಳ್ಳಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ



ಹೇಗಿದೆ ತಯಾರಿ?

- ಚಂಡಮಾರುತಕ್ಕೆ ಆಂಧ್ರಪ್ರದೇಶ, ಒಡಿಶಾ ಮತ್ತು ತೆಲಂಗಾಣದಲ್ಲಿನ ಇಲಾಖೆಯ ಸಿದ್ಧತೆಯನ್ನು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರು ಮಂಗಳವಾರ ಪರಿಶೀಲನೆ ನಡೆಸಿದರು. ಪೂರ್ವ ಕರಾವಳಿ ರೈಲ್ವೆ ವಲಯದ ಹಲವು ರೈಲುಗಳ ಸಂಚಾರವನ್ನು ಮಂಗಳವಾರ ರದ್ದು ಮಾಡಲಾಗಿತ್ತು
- ವಿಶಾಖಪಟ್ಟಣ ವಿಮಾನ ನಿಲ್ದಾಣದಿಂದ ಹೊರಡಬೇಕಿದ್ದ 32 ವಿಮಾನಗಳ (ದೇಶೀಯ ಹಾಗೂ ಅಂತರರಾಷ್ಟ್ರೀಯ) ಹಾರಾಟವನ್ನು ಮಂಗಳವಾರ ರದ್ದು ಮಾಡಲಾಯಿತು
- ಆಂಧ್ರಪ್ರದೇಶ ಮತ್ತು ಒಡಿಶಾ ಸೇರಿದಂತೆ ಚಂಡಮಾರುತ ಬಾಧಿತ ರಾಜ್ಯಗಳಲ್ಲಿ ಒಟ್ಟು 45 ತಂಡಗಳನ್ನು ಎನ್‌ಡಿಆರ್‌ಎಫ್ ನಿಯೋಜಿಸಲಾಗಿದೆ
- ಆಂಧ್ರ ಪ್ರದೇಶದಲ್ಲಿ ಸಮುದ್ರದ ಅಲೆಗಳು 4.7 ಮೀ. ಎತ್ತರಕ್ಕೆ ಏಳಲಿವೆ ಎಂದು ಸಾಗರ ಮಾಹಿತಿ ಸೇವೆಗಳ ರಾಷ್ಟ್ರೀಯ ಕೇಂದ್ರ ಹೇಳಿದೆ

ಆಂಧ್ರ ಪ್ರದೇಶ

22 ಬಾಧಿತ ಜಿಲ್ಲೆಗಳು	**3,778** ಭಾರಿ ಮಳೆಯಾಗುವ ನಿರೀಕ್ಷೆ ಇರುವ ಗ್ರಾಮಗಳ ಸಂಖ್ಯೆ	**3,174** 22 ಜಿಲ್ಲೆಗಳಲ್ಲಿ ಸ್ಥಾಪಿಸಿರುವ ಪುನರ್‌ವಸತಿ ಕೇಂದ್ರಗಳು	**787** ಹತ್ತಿರದ ಆಸ್ಪತ್ರೆಗೆ ದಾಖಲಿಸಲಾದ ಹೆರಿಗೆ ದಿನಾಂಕವು ಹತ್ತಿರದಲ್ಲಿ ಇರುವ ಗರ್ಭಿಣಿಯರ ಸಂಖ್ಯೆ
₹3,000 ನಿರಾಶ್ರಿತ ಶಿಬಿರಗಳಲ್ಲಿ ಇರುವ ಕುಟುಂಬಗಳಿಗೆ ಸರ್ಕಾರದಿಂದ ಧನಸಹಾಯ. ಈ ಕುಟುಂಬಗಳಿಗೆ 25 ಕೆ.ಜಿ ಅಕ್ಕಿಯನ್ನೂ ನೀಡಲಾಗುತ್ತದೆ	**24** ಚಂಡಮಾರುತ ಬಾಧಿತ ಜಿಲ್ಲೆಗಳಲ್ಲಿನ ಸ್ಥಿತಿಗತಿ ಅರಿಯಲು ಬಳಕೆ ಮಾಡಲಾಗುತ್ತಿರುವ ಡ್ರೋನ್‌ಗಳ ಸಂಖ್ಯೆ	**69** ಲಕ್ಷ ಮಳೆಯಾಗುವ ಜಿಲ್ಲೆಗಳ ರೈತರಿಗೆ ಬೆಳೆಗಳನ್ನು ರಕ್ಷಿಸಿಕೊಳ್ಳುವ ಸಂಬಂಧ ಕಳುಹಿಸಲಾಗಿರುವ ಎಚ್ಚರಿಕೆ ಸಂದೇಶಗಳ ಸಂಖ್ಯೆ	

ಒಡಿಶಾ

15 ಬಾಧಿತ ಜಿಲ್ಲೆಗಳು	**2,000** ನಿರಾಶ್ರಿತ ಕೇಂದ್ರಗಳ ಸ್ಥಾಪನೆ	**11,396** ನಿರಾಶ್ರಿತ ಕೇಂದ್ರಗಳಲ್ಲಿ ಇರುವ ಜನರ ಸಂಖ್ಯೆ	**2,693** ಹತ್ತಿರದ ಆಸ್ಪತ್ರೆಗೆ ದಾಖಲಿಸಲಾದ ಹೆರಿಗೆ ದಿನಾಂಕವು ಹತ್ತಿರದಲ್ಲಿ ಇರುವ ಗರ್ಭಿಣಿಯರ ಸಂಖ್ಯೆ


ಮೊಂಥಾ ಚಂಡಮಾರುತದ ಕಾರಣಕ್ಕೆ ಆಂಧ್ರ ಪ್ರದೇಶದ ವಿಶಾಖಪಟ್ಟಣದಲ್ಲಿ ಸಮುದ್ರ ಪ್ರಕ್ಷುಬ್ಧಗೊಂಡಿದೆ —ಪಿಟಿಐ ಚಿತ್ರ

ಎರಡನೇ ಚಂಡಮಾರುತ

ಈ ವರ್ಷ ದೇಶದ ಪಶ್ಚಿಮ ಹಾಗೂ ಪೂರ್ವ ಕರಾವಳಿಯಲ್ಲಿ ಹಲವು ಬಾರಿ ವಾಯುಭಾರ ಕುಸಿತ ಉಂಟಾಗಿದ್ದರೂ ಅದು ಚಂಡಮಾರುತವಾಗಿ ಪರಿವರ್ತನೆಯಾಗಿದ್ದು ಎರಡು ಬಾರಿ ಮಾತ್ರ. ಈ ತಿಂಗಳ ಮೊದಲ ವಾರದಲ್ಲಿ ಅರಬ್ಬೀ ಸಮುದ್ರದಲ್ಲಿ ಉಂಟಾದ 'ಶಕ್ತಿ' ಮೊದಲನೆಯದ್ದಾದರೆ, ಈಗಿನ 'ಮೊಂಥಾ' ಎರಡನೆಯದ್ದು. 'ಶಕ್ತಿ' ಚಂಡಮಾರುತವು ಪ್ರತಿ ಗಂಟೆಗೆ 100 ಕಿ.ಮೀಗಿಂತಲೂ ಹೆಚ್ಚು ವೇಗದಲ್ಲಿ ಮಹಾರಾಷ್ಟ್ರ, ಗುಜರಾತ್, ಗೋವಾ ಕರಾವಳಿಗೆ ಅಪ್ಪಳಿಸಿತ್ತು. ಗುಜರಾತ್ ಕರಾವಳಿ ಪ್ರದೇಶದಲ್ಲಿ ಇದರ ತೀವ್ರತೆ ಹೆಚ್ಚಾಗಿತ್ತು. ರಾಜ್ಯಗಳು ಮುನ್ನೆಚ್ಚರಿಕೆ ವಹಿಸಿದ್ದರಿಂದ ಹೆಚ್ಚಿನ ಹಾನಿಯಾಗಿರಲಿಲ್ಲ.


ಮೀನುಗಾರಿಕೆಗೆ ನಿಷೇಧ ಹೇರಿರುವುದರಿಂದ ಚೆನ್ನೈನಲ್ಲಿ ಲಂಗರು ಹಾಕಿದ ಮೀನುಗಾರಿಕಾ ದೋಣಿಗಳು

ಅರಬ್ಬೀ ಸಮುದ್ರದಲ್ಲೂ ವಾಯುಭಾರ ಕುಸಿತ

ಬಂಗಾಳ ಕೊಲ್ಲಿಯಲ್ಲಿ 'ಮೊಂಥಾ' ಚಂಡಮಾರುತದ ವೇಗ ತೀವ್ರಗೊಳ್ಳುವ ಹೊತ್ತಿನಲ್ಲೇ ಪಶ್ಚಿಮದ ಅರಬ್ಬೀ ಸಮುದ್ರದಲ್ಲೂ ವಾಯುಭಾರ ಕುಸಿತ ಕಂಡುಬಂದಿದೆ. ಇದರ ಪರಿಣಾಮದಿಂದಾಗಿ ಕರ್ನಾಟಕದ ಕರಾವಳಿ ಭಾಗದಲ್ಲಿ ಮಳೆಯಾಗುತ್ತಿದೆ. ಆದರೆ, ಗಾಳಿಯ ತೀವ್ರತೆ ಹೆಚ್ಚಿಲ್ಲ. ಮಂಗಳವಾರ ಬೆಳಿಗ್ಗೆ ಸಮುದ್ರದ ಪೂರ್ವ–ಕೇಂದ್ರ ಪ್ರದೇಶದಲ್ಲಿ ಕಂಡು ಬಂದಿದ್ದ ವಾಯುಭಾರ ಕುಸಿತವು ಪ್ರತಿ ಗಂಟೆಗೆ 7 ಕಿ.ಮೀ ವೇಗದಲ್ಲಿ ಈಶಾನ್ಯದತ್ತ ಸಾಗಿದೆ. ಮುಂದಿನ 24 ಗಂಟೆಗಳಲ್ಲಿ ಅದೇ ದಿಕ್ಕಿನಲ್ಲಿ ಸಾಗುವ ಅಂದಾಜು ಇದೆ. ಪ್ರತಿ ಗಂಟೆಗೆ 46ರಿಂದ 65 ಕಿ.ಮೀವರೆಗೆ ವೇಗದಲ್ಲಿ ಗಾಳಿ ಬೀಸಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಚಂಡಮಾರುತಗಳಿಗೆ ಹೇಗೆ ಹೆಸರಿಡಲಾಗುತ್ತದೆ?

ನವದೆಹಲಿಯ ಪ್ರಾದೇಶಿಕ ವಿಶೇಷ ಹವಾಮಾನ ಕೇಂದ್ರವು (ಆರ್‌ಎಸ್‌ಎಂಸಿ) ಉತ್ತರ ಹಿಂದೂ ಮಹಾಸಾಗರದಲ್ಲಿ ಕಾಣಿಸಿಕೊಳ್ಳುವ ಚಂಡಮಾರುತಗಳ ನಾಮಕರಣವನ್ನು ಮಾಡುತ್ತದೆ. ಆರ್‌ಎಸ್‌ಎಂಸಿಯನ್ನು ವಿಶ್ವ ಹವಾಮಾನ ಸಂಸ್ಥೆ (ಡಬ್ಲ್ಯುಎಂಒ) ಮತ್ತು ವಿಶ್ವಸಂಸ್ಥೆಯ ಆರ್ಥಿಕ ಮತ್ತು ಸಾಮಾಜಿಕ ಆಯೋಗದ (ಏಷ್ಯಾ ಮತ್ತು ಪೆಸಿಫಿಕ್) ಉಸ್ತುವಾರಿಯಲ್ಲಿ ಭಾರತೀಯ ಹವಾಮಾನ ಇಲಾಖೆ (ಐಎಂಡಿ) ನಿರ್ವಹಿಸುತ್ತದೆ.

ಚಂಡಮಾರುತಗಳ ಹೆಸರುಗಳನ್ನು ಆ ಪ್ರದೇಶದ ವ್ಯಾಪ್ತಿಯಲ್ಲಿರುವ 13 ದೇಶಗಳು ಸರತಿ ಪ್ರಕಾರ ನಿರ್ಧರಿಸುತ್ತವೆ. ಈ ಪ್ರದೇಶದಲ್ಲಿರುವ ಭಾರತ, ಬಾಂಗ್ಲಾದೇಶ, ಮಾಲ್ದೀವ್ಸ್, ಮ್ಯಾನ್ಮಾರ್, ಒಮಾನ್, ಪಾಕಿಸ್ತಾನ, ಶ್ರೀಲಂಕಾ, ಥಾಯ್ಲೆಂಡ್, ಯೆಮನ್, ಇರಾನ್, ಕತಾರ್, ಸೌದಿ ಅರೇಬಿಯಾ ಮತ್ತು ಯುಎಇ ಮುಂತಾದ ದೇಶಗಳು ಹೆಸರುಗಳನ್ನು ಸೂಚಿಸುತ್ತವೆ. ಪ್ರತಿ ದೇಶವೂ 13 ಹೆಸರುಗಳ ಪಟ್ಟಿಯನ್ನು ಪೂರ್ವಭಾವಿಯಾಗಿಯೇ ಸಲ್ಲಿಸಿರುತ್ತದೆ. ಹೊಸ ಚಂಡಮಾರುತ ಕಾಣಿಸಿಕೊಂಡಾಗ, 169 ಹೆಸರುಗಳ ಪಟ್ಟಿಯಿಂದ ಒಂದು ಹೆಸರನ್ನು ಸರತಿಯ ಪ್ರಕಾರ ಐಎಂಡಿ ಆಯ್ಕೆ ಮಾಡುತ್ತದೆ.

ಥಾಯ್ ಭಾಷೆಯಲ್ಲಿ ಮೊಂಥಾ ಎಂದರೆ, ಸುಂದರವಾದ ಅಥವಾ ಸುವಾಸನೆಯುಕ್ತ ಹೂವು.

ಆಧಾರ: ಪಿಟಿಐ, ಐಎಂಡಿ ವೆಬ್‌ಸೈಟ್

ರಾಷ್ಟ್ರೀಯ


ನವದೆಹಲಿ ಆಗಸದಲ್ಲಿ ಮೋಡಬಿತ್ತನೆಯಲ್ಲಿ ತೊಡಗಿದ್ದ ವಿಮಾನ —ಪಿಟಿಐ ಚಿತ್ರ

ದೆಹಲಿ: ಮೋಡಬಿತ್ತನೆ

ನವದೆಹಲಿ (ಪಿಟಿಐ): ಚಳಿಗಾಲದಲ್ಲಿ ದೆಹಲಿಯಲ್ಲಿ ಉಂಟಾಗುವ ವಾಯುಮಾಲಿನ್ಯ ತಡೆಗಟ್ಟುವುದಕ್ಕಾಗಿ ಐಐಟಿ–ಕಾನ್ಪುರದ ಸಹಯೋಗದಲ್ಲಿ ದೆಹಲಿ ಸರ್ಕಾರ ನಗರದ ಸುತ್ತಮುತ್ತಲಿನ ಪ್ರದೇಶದಲ್ಲಿ ಮಂಗಳವಾರ ಮೋಡಬಿತ್ತನೆ ಕಾರ್ಯ ಕೈಗೊಂಡಿದೆ.

ಮುಂದಿನ ದಿನಗಳಲ್ಲಿ ಇನ್ನಷ್ಟು ಪ್ರದೇಶದಲ್ಲಿ ಈ ಪ್ರಯೋಗವನ್ನು ವಿಸ್ತರಿಸಲಾಗುವುದು ಎಂದು ಪರಿಸರ ಇಲಾಖೆ ಸಚಿವ ಮಜಿಂದರ್ ಸಿಂಗ್ ಸಿರ್ಸಾ ಹೇಳಿದ್ದಾರೆ.

ಮೋಡಬಿತ್ತನೆ ಮಾಡುವ ವಿಮಾನವು ಕಾನ್ಪುರದಿಂದ ಹಾರಾಟ ಆರಂಭಿಸಿ, ದೆಹಲಿ ಸುತ್ತಮುತ್ತಲಿನ ಪ್ರದೇಶಗಳಾದ ಬುರಾರಿ, ಉತ್ತರ ಕರೋಲ್ ಬಾಘ್ ಮತ್ತು ಮಯೂರ್ ವಿಹಾರ ಪ್ರದೇಶಗಳಲ್ಲಿ ಕಾರ್ಯಾಚರಣೆ ಪೂರ್ಣಗೊಳಿಸಿ, ಮೀರತ್ ವಾಯು ನೆಲೆಯಲ್ಲಿ ಇಳಿಯಿತು.

'ಎಂಟು ಗನ್‌ಗಳ ಮೂಲಕ ಅರ್ಧ ಗಂಟೆಗಳ ಕಾಲ ರಾಸಾಯನಿಕವನ್ನು ವಾತಾವರಣಕ್ಕೆ ಬಿಡುಗಡೆ ಮಾಡಿತು' ಎಂದು ಸಚಿವ ಸಿರ್ಸಾ ವಿಡಿಯೊ ಮೂಲಕ ಮಾಹಿತಿ ನೀಡಿದ್ದಾರೆ.

ಮೋಡ ಬಿತ್ತನೆಯ ಎರಡನೇ ಪ್ರಯೋಗ ದೆಹಲಿಯ ಹೊರವಲಯದಲ್ಲಿ ನಡೆಸಲಾಗುತ್ತದೆ. ಇಂಥ ಸುಮಾರು ಹತ್ತು ಪ್ರಯೋಗಗಳನ್ನು ದೆಹಲಿಯ ಸುತ್ತಮುತ್ತ ನಡೆಸಲು ಉದ್ದೇಶಿಸಲಾಗಿದೆ ಎಂದು ಅವರು ವಿವರಿಸಿದರು.

'ಮಾಲಿನ್ಯವನ್ನು ತಗ್ಗಿಸಲು ಸರ್ಕಾರ ತೆಗೆದುಕೊಂಡ ಒಂದು ದೊಡ್ಡ ಹೆಜ್ಜೆಯಾಗಿದೆ. ಈ ಪ್ರಯೋಗಗಳು ಯಶಸ್ವಿಯಾದರೆ, ದೀರ್ಘಾವಧಿಯಲ್ಲಿ ಯೋಜನೆಯನ್ನು ರೂಪಿಸಲಿದ್ದೇವೆ' ಎಂದು ಸಿರ್ಸಾ ಭವಿಷ್ಯದ ಯೋಜನೆಯ ಬಗ್ಗೆ ಮಾಹಿತಿ ನೀಡಿದರು.

ಕಳೆದ ವಾರ ಬುರಾರಿ ಪ್ರದೇಶದಲ್ಲಿ ಪರೀಕ್ಷಾರ್ಥವಾಗಿ ಮೋಡಬಿತ್ತನೆ ಕಾರ್ಯವನ್ನು ನಡೆಸಲಾಗಿತ್ತು. ಮೋಡಬಿತ್ತನೆಗೆ ಬಳಸುವ ಸಿಲ್ವರ್ ಅಯೋಡೈಡ್ ಮತ್ತು ಸೋಡಿಯಂ ಕ್ಲೋರೈಡ್ ಸಂಯುಕ್ತಗಳ ರಾಸಾಯನಿಕವನ್ನು ಅಲ್ಪ ಪ್ರಮಾಣದಲ್ಲಿ ಸಿಂಪಡಿಸಲಾಗಿತ್ತು.

'ನಿವೃತ್ತ ಅಗ್ನಿವೀರರನ್ನೇಕೆ ಖಾಸಗಿ ಭದ್ರತಾ ಸಂಸ್ಥೆಗೆ ಸೇರಿಸುತ್ತೀರಿ'

ನವದೆಹಲಿ (ಪಿಟಿಐ): ನಿವೃತ್ತರಾಗುವ 'ಅಗ್ನಿವೀರ'ರನ್ನು ದೇಶದ 10 ಪ್ರಮುಖ ಖಾಸಗಿ ಭದ್ರತಾ ಸಂಸ್ಥೆಗಳಲ್ಲಿ ನಿಯೋಜಿಸಬಹುದು ಎಂದು ಮಂಗಳವಾರ ಗೃಹಸಚಿವಾಲಯ ಹೊರಡಿಸಿರುವ ಅಧಿಸೂಚನೆ ಕುರಿತು ಕಾಂಗ್ರೆಸ್ ಪಕ್ಷ ಕೇಂದ್ರವನ್ನು ತೀವ್ರ ತರಾಟೆಗೆ ತೆಗೆದುಕೊಂಡಿದೆ.

'ಕೇಂದ್ರದ ನರೇಂದ್ರ ಮೋದಿ ಸರ್ಕಾರವೇ ಅಗ್ನಿವೀರರು ನಿವೃತ್ತಿಯಾದ ನಂತರ ಸರ್ಕಾರಿ ಉದ್ಯೋಗಗಳನ್ನು ನೀಡುವುದಾಗಿ ಭರವಸೆ ನೀಡಿರುವಾಗ, ಗೃಹ ಸಚಿವಾಲಯವು, ಖಾಸಗಿ ಭದ್ರತಾ ಸಂಸ್ಥೆಗಳಿಗೆ ಸೇರಿಸಿಕೊಳ್ಳಹುದೆಂದು ಏಕೆ ಅಧಿಸೂಚನೆ ಹೊರಡಿಸಿದೆ' ಎಂದು ಕಾಂಗ್ರೆಸ್ ಪಕ್ಷದ ನಿವೃತ್ತ ಸೇನಾ ಯೋಧರ ವಿಭಾಗದ ಅಧ್ಯಕ್ಷ ನಿವೃತ್ತ ಕರ್ನಲ್ ರೋಹಿತ್ ಚೌಧರಿ ಪ್ರಶ್ನಿಸಿದ್ದಾರೆ.

'ನಿವೃತ್ತ ಅಗ್ನಿವೀರರಿಗೆ ಪಿಂಚಣಿ ನೀಡುವ ಉದ್ಯೋಗಗಳನ್ನು ಯಾವಾಗ ಮತ್ತು ಎಲ್ಲಿ ಕೊಡಿಸುತ್ತೀರಿ' ಎಂದು ಅವರು ಪ್ರಶ್ನಿಸಿದ್ದಾರೆ.

'ಆಪರೇಷನ್ ಸಿಂಧೂರ್ ಸಮಯದಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಸೈನಿಕರನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರಕ್ಕೆ ಸಾಧ್ಯವಾಗದಿದ್ದರೆ ಪರವಾಗಿಲ್ಲ, ಆದರೆ, ಹೀಗೆ ಅವರನ್ನು ವಂಚಿಸಬಾರದಿತ್ತು' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಅಗ್ನಿವೀರರನ್ನು ಖಾಸಗಿ ಸೈನಿಕರನ್ನಾಗಿಸಲು ಹಾಗೂ ದೇಶ–ವಿದೇಶಗಳಲ್ಲಿ ಯುದ್ಧಗಳಿಗೆ ನಿಯೋಜಿಸಲು ನಾವು ಬಿಡುವುದಿಲ್ಲ. ನಮ್ಮ ಜೈ ಜವಾನ್ ಅಭಿಯಾನ ಮುಂದುವರಿಯುತ್ತದೆ. ಸೈನಿಕರ ಹಿತದೃಷ್ಟಿಯಿಂದ ನಾವು ಸರ್ಕಾರಕ್ಕೆ ಪ್ರಶ್ನೆಗಳನ್ನು ಕೇಳುತ್ತಲೇ ಇರುತ್ತವೆ' ಎಂದು ಚೌಧರಿ ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಹೋಟೆಲ್ ಒಂದರಲ್ಲಿ ಕೋತಿಯೊಂದು ಹಬೆಯಾಡುತ್ತಿರುವ ಇಡ್ಲಿಯನ್ನು ಗ್ರಾಹಕರಿಗೆ ನೀಡುತ್ತಿರುವ ವಿಡಿಯೊ ತುಣುಕೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ದಕ್ಷಿಣ ಭಾರತದ ರೆಸ್ಟೋರೆಂಟ್ ಒಂದರಲ್ಲಿ ಈ ವಿಶೇಷ ಸರ್ವರ್ ಕೋತಿ ಕಾರ್ಯ ನಿರ್ವಹಿಸುತ್ತಿದೆ ಎಂದು ಕೆಲವು ಜಾಲತಾಣ ಬಳಕೆದಾರರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು.



ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಮಲ್ಟಿವರ್ಸ್‌ಮ್ಯಾಟ್ರಿಕ್ಸ್ ಎಂಬ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಇದೇ 19ರಂದು ಪೋಸ್ಟ್ ಮಾಡಲಾದ ವಿಡಿಯೊ ಸಿಕ್ಕಿತು. ಇದು ಈಗ ಸಾಮಾಜಿಕ ಜಾಲತಾಣಗಳಲ್ಲಿ ಹಲವರು ಹಂಚಿಕೊಳ್ಳುತ್ತಿರುವ ವಿಡಿಯೊವೇ ಆಗಿತ್ತು. ಆ ಪೋಸ್ಟ್ ಅನ್ನು ಕೂಲಂಕಷ ಪರಿಶೀಲನೆಗೆ ಒಳಪಡಿಸಿದಾಗ, ಅದು ಎಐ ತಂತ್ರಜ್ಞಾನದಲ್ಲಿ ನಿರ್ಮಿಸಿರುವ ವಿಡಿಯೊ ಎಂಬುದು ಗೊತ್ತಾಯಿತು. ಇನ್‌ಸ್ಟಾಗ್ರಾಂ ಬಳಕೆದಾರ ಕೂಡ, ಇದನ್ನು ಸಂಪೂರ್ಣವಾಗಿ ಹಿಗ್ಸ್‌ಫೀಲ್ಡ್ ಎಂಬ ಎಐ ಆಧಾರಿತ ವಿಡಿಯೊ ಸೃಷ್ಟಿಸುವ ಟೂಲ್ ಬಳಸಿಕೊಂಡು ರೂಪಿಸಲಾಗಿದೆ ಎಂದು ಉಲ್ಲೇಖಿಸಿದ್ದರು. ಇದನ್ನು ದೃಢಪಡಿಸುವುದಕ್ಕಾಗಿ ವಿಡಿಯೊವನ್ನು ಎಐ ಪತ್ತೆ ಹಚ್ಚುವ ಝೂಕ್ ಎಐ ಡಿಟೆಕ್ಟರ್ ಟೂಲ್ ಮೂಲಕ ಪರಿಶೀಲಿಸಿದಾಗ ಅದು ಎಐ ವಿಡಿಯೊ ಎಂಬುದು ದೃಢಪಟ್ಟಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನುಡಿ ಬೆಳಗು

ವಾಸುದೇವ ನಾಡಿಗ್



ಹೀಗೇ ಒಂದು ವ್ಯಾಖ್ಯಾನ

ಜನನಿಬಿಡ ರಸ್ತೆಯಲ್ಲಿ ಕೂತ ವೃದ್ಧ ಭಿಕ್ಷುಕ ಹುಟ್ಟಿನಿಂದಲೂ ಅಂಧ. ಹೊಟ್ಟೆ ಹೊರುವುದೇ ನಿತ್ಯದ ಪ್ರಶ್ನೆ. ಹಗಲು ಮತ್ತು ರಾತ್ರಿಗಳ ಪರಿವೆಯೇ ಇರದ ಅವನ ಬಾಳಿನಲ್ಲಿ ಶಬ್ದ ಮತ್ತು ವಾಸನೆಗಳೇ ಪ್ರಚಂಡ ಶಕ್ತಿಗಳು. ರಸ್ತೆಯಲ್ಲಿ ಒಂದು ಬೋರ್ಡನ್ನು ಇಟ್ಟುಕೊಂಡೇ ಹೊಟ್ಟೆ ಹೊರೆಯುವಿಕೆ; 'ನಾನು ಅಂಧ. ದಯವಿಟ್ಟು ನನಗೆ ಸಹಾಯ ಮಾಡಿ'. ದಾರಿಹೋಕರೆಲ್ಲ ಒಂದಿಷ್ಟು ಕಾಸನ್ನು ಅವನ ಬಟ್ಟಲಿಗೆ ಹಾಕಿ ಸಾಗುತ್ತಿದ್ದರು. ಬಹುತೇಕರು ಅನುಕೂಲಸ್ಥರಿದ್ದರೂ ಅಸಡ್ಡೆ. ಒಂದು ಕಾಸನ್ನೂ ಹಾಕುತ್ತಿರಲಿಲ್ಲ. ಇಡೀ ದಿನ ಬಿಸಿಲು ಮಳೆ ಚಳಿಗೆ ಕೂತರೂ ಸಿಗುತ್ತಿದ್ದ ಭಿಕ್ಷೆ ತೀರಾ ನಿರಾಶಾದಾಯಕವೇ. ಮತ್ತದೇ ದಿನಚರಿ, ಮತ್ತದೇ ಜನರ ಮನೋಭಾವ.

ಈ ಬೆಳಗು ಒಂದು ವಿಸ್ಮಯವನ್ನೇ ಹುಟ್ಟುಹಾಕಿತು. ನಾಲ್ಕಾರು ದಿನಗಳಿಂದ ಎಲ್ಲವನ್ನೂ ದೂರದ ಅಂಗಡಿಯಿಂದಲೇ ಗಮನಿಸುತ್ತಿದ್ದ ಯುವಕನೊಬ್ಬ ಆ ವೃದ್ಧನ ಬಳಿ ಬಂದು ಅವನಿಗೆ ಅರಿವಿಲ್ಲದೆಯೇ ಅದೇ ಬೋರ್ಡಿನ ಮೇಲೆ ಬರೆದಿದ್ದ 'ನಾನು ಅಂಧ. ದಯವಿಟ್ಟು ನನಗೆ ಸಹಾಯ ಮಾಡಿ' ಎಂಬ ವಾಕ್ಯವನ್ನು ಅಳಿಸಿ ಅದರ ಮೇಲೆ ಹೀಗೆ ಬರೆದು ಬದಲಾಯಿಸಿ ಹೋದ: 'ಈ ಲೋಕ ಅದೆಷ್ಟು ಸುಂದರವಾಗಿದೆ. ಇದನ್ನು ನೋಡುವ ಭಾಗ್ಯ ನನಗೆ ಇಲ್ಲ'.

ಈ ಬರಹವನ್ನು ಓದಿಕೊಂಡು ಸ್ವಲ್ಪ ನಿಂತು ಹೋಗುವ ಜನರೆಲ್ಲರೂ ತಮಗೆ ಆದಷ್ಟು ಹಣವನ್ನು ವೃದ್ಧನ ಬಟ್ಟಲಿಗೆ ಹಾಕುತ್ತ ಸಾಗಿದರು. ಸಂಜೆ ಒಳಗೆ ಬಟ್ಟಲು ತುಂಬಿ ನಾಣ್ಯಗಳು ಹೊರಕ್ಕೆ ಬಿದ್ದವು. ಬಟ್ಟಲ ಸುತ್ತಲೂ ಚೆಲ್ಲಿದ ನಾಣ್ಯ, ನೋಟುಗಳು. ವೃದ್ಧನಿಗೆ ಅಚ್ಚರಿ. ಇದನ್ನು ಬರೆದ ಯುವಕ ಮತ್ತೆ ಅವನ ಬಳಿ ಬಂದು ಸಮಾಧಾನದ ಮಾತಾಡಿ ತಾನು ಮಾಡಿದ ಈ ಬದಲಾವಣೆ ಕುರಿತು ಹೇಳಿದ. ಜೀವನದ ಬಗೆಗಿನ ಒಂದು ದೃಷ್ಟಿಕೋನ ಲೋಕವನ್ನು ನೋಡುವ ಕ್ರಮವನ್ನೇ ಬದಲಾಯಿಸಬಹುದು.

ತಾನು ಅಂಧನಾದರೂ ತನಗೆ ಸಹಾಯ ಮಾಡದ ಜನರ ಬಗ್ಗೆ ಬೇಸರವನ್ನು ವ್ಯಕ್ತಪಡಿಸಿದ ವೃದ್ಧನ ಆಲೋಚನೆಯನ್ನೇ ಬದಲಾಯಿಸಿ ಭರವಸೆಯನ್ನು ಕೊಟ್ಟ ವ್ಯಾಖ್ಯಾನವಿದು. ಲೋಕ ಸುಂದರ ಎಂಬ ಮಾತು ಓದುವ ಜನರಲ್ಲೂ ಹುಟ್ಟಿಸಿದ ಭಾವ ಮತ್ತು ಲೋಕವನ್ನು ಕಾಣದೆ ಇದ್ದರೂ ಲೋಕದ ಬಗ್ಗೆ ಆ ವೃದ್ಧನಿಗೆ ಇದ್ದ ಅಭಿಮಾನ ವಿಶ್ವಾಸಕ್ಕೆ ಜನ ಪುಳಕಗೊಂಡ ಬಗೆ ಇದು. ಈ ಲೋಕದ ಸೌಂದರ್ಯ ನಮ್ಮ ನಮ್ಮ ಪ್ರತಿಕ್ರಿಯೆಗಳನ್ನು ಅವಲಂಬಿಸಿದೆ. ವೃದ್ಧ ಕಂಡನೋ ಕಾಣನೋ ಅದು ಬೇರೆ ಮಾತು. ಲೋಕವನ್ನು ಸುಂದರಗೊಳಿಸುವಲ್ಲಿ ಸಹಾನುಭೂತಿಯ ಪಾತ್ರದ ಕುರಿತ ಎಚ್ಚರ ಇಲ್ಲಿದೆ. ಒಂದೇ ಒಂದು ವಾಕ್ಯ ಅದೆಷ್ಟು ದಾರಿಹೋಕರ ಮನದಲ್ಲಿ ಖುಷಿಯನ್ನು ತಂದಿದೆ ನೋಡಿ. ಒಂದು ಒಳ್ಳೆಯ ಮಾತು, ಒಂದು ಒಳ್ಳೆಯ ಪ್ರತಿಕ್ರಿಯೆ, ಒಂದು ಒಳ್ಳೆಯ ನಡೆ ಇಡೀ ಲೋಕವನ್ನು ಸುಂದರಗೊಳಿಸಬಹುದಾದರೆ ಅದಕ್ಕೂ ಏಕೆ ಹಿಂಜರಿತ.

ಡಾ ರಾಜಕುಮಾರ್ ಅವರು ಅಭಿನಯಿಸಿದ 'ದೇವರು ಕೊಟ್ಟ ತಂಗಿ' ಚಿತ್ರದ ಕು.ರಾ.ಸೀತಾರಾಮ ಶಾಸ್ತ್ರಿ ಅವರು ರಚಿಸಿರುವ 'ಈ ಲೋಕವೆಲ್ಲ ನೀನೇ ಇರುವ ಪೂಜಾ ಮಂದಿರ' ಹಾಡೊಮ್ಮೆ ಕೇಳಬೇಕು.

ಪದಬಂಧ 6207

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಎಣ್ಣೆ ಮಜ್ಜನ (4)
3. ಶ್ರೇಷ್ಠವಾದ ಕಾವ್ಯ ಇಲ್ಲಿದೆ (4)
5. ಖರ್ಪರದ ಹತ್ತಿರವಿರುವ ಪಕ್ಷಿ ಕಾಣುತ್ತಿದೆಯೇ? (3)
7. ಮಗನು ಹೀಗೆ ಮಗ್ನ! (3)
8. ತವರಲ್ಲಿರುವ ಲೋಹ! (3)
10. ಈತ ವಿವೇಕಶಾಲಿ (5)
11. ಮರದ ಹತ್ತಿರ ಕಾಣಿಸಿದ ಹಂಸ (3)
13. ಚನ್ನಾಗಿ ಕಡೆಯಲ್ಪಟ್ಟಿದ್ದು (3)
14. ಮುಂದೆ ಬರಲಿರುವ ಕಾಲ (3)
16. ಬೇಸಾಯಗಾರನ ಬಲ! (4)
17. ಶೀರ್ಷಿಕೆ ಅಥವಾ ತಲೆಬರಹ (4)

ಮೇಲಿಂದ ಕೆಳಕ್ಕೆ

1. ಅನಿರೀಕ್ಷಿತವಾಗಿ ಬಂದಿರುವ ಅತಿಥಿ (4)
2. ನಖರ ಮಾಡುವಾಗ ಕಾಣಿಸಿದ ಉಗುರು! (2)
3. ಮಧುರ ಫಲಗಳನ್ನು ನೀಡುವ ವೃಕ್ಷ (2)
4. ತಡೆ ಎನ್ನುವ ಪದಕ್ಕೊಂದು ಪರ್ಯಾಯ ಪದ (3)
6. ಚಂಬೆಳಕಿನ ಕವಿ ಎಂದೇ ಪ್ರಖ್ಯಾತರಾದವರು (7)
7. ಈ ತರ ತಮ್ಮನು ತೋರಿದ ಭೇದಭಾವ! (4)
9. ಸೂರ್ಯನ ಮಗ (4)
12. ಭೋಜನ ಸಮಾರಂಭಕ್ಕೆ ಬೇಕಾದ ಸಾಧನ ಸಾಮಗ್ರಿ (4)
13. ಮೀನಾಕ್ಷಿ ದೇಗುಲವಿರುವ ತಮಿಳುನಾಡಿನ ಸಾಂಸ್ಕೃತಿಕ ರಾಜಧಾನಿ (3)
14. ಪೂಜ್ಯಭಾವನೆ ಅಥವಾ ನಿಷ್ಠೆ (2)
15. ಗುರುವಿಗೆ ತಕ್ಕ ವಿದ್ಯಾರ್ಥಿ ತಿರುಗಿದ್ದಾನಲ್ಲಾ! (2)



6206ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಗುಡಿ 3.ಅನುರಾಗ 5.ರಾವಣ 6.ವಾತಾಯನ 8.ತಡಸಲು 12.ಜನಹಿತ 14.ಪರಧನ 15.ನಗಾರಿ 16.ರಸಾಯನ 17.ಕಂತೆ

ಮೇಲಿಂದ ಕೆಳಕ್ಕೆ:
1.ಪರಾವಲಂಬಿ 2.ಗುಣವಂತ 3.ಅಹವಾಲು 4.ಗಹನ 7.ಯಕ್ಷ 9.ಸದನ 10.ದಟ್ಟದಾರಿದ್ರ 11.ಕ್ಷೌರ 12.ಜನಮನ 13.ತಲ್ಲೀನತೆ 14.ಪದರ

ಸುಡೊಕು 6591

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

2		6					5	
		7	5		6	3		2
3	8						6	
	2					9		4
			2	4	7			
	7					5		8
		9			8		4	
4		2					8	1
	6		4		2	7		

6590 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

29 ಅಕ್ಟೋಬರ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಶುಕ್ಲ ಸಪ್ತಮಿ ಗಂ. 9-24 **ನಕ್ಷತ್ರ:** ಉತ್ತರಾಷಾಢ ಗಂ 17-30 **ಯೋಗ:** ಧೃತಿ ಗಂ 7-51 **ಕರಣ:** ವಣಿಜ ಗಂ. 9-24 ತುಲಾ ಮಾಸದ 12 ನೇ ದಿನ. **ಮಳೆ ನಕ್ಷತ್ರ:** ಸ್ವಾತಿ 2 ನೇ ಪಾದ. **ರಾಹುಕಾಲ:** ಮಧ್ಯಾಹ್ನ 12-00 - 01-30, **ಸೂರ್ಯೋದಯ:** 06-27 **ಸೂರ್ಯಾಸ್ತ:** 06-01, **ಮುಸ್ಲಿಂ ದಿನಾಂಕ:** 06 ಜುಮಾದುಲ್ಲಾವಲ್, **ಅದೃಷ್ಟ ಸಂಖ್ಯೆ:** 3, 1

ಮೇಷ: ಪ್ರತಿದಿನವು ಗಣಕಯಂತ್ರದ ಮುಂದೆ ನಡೆಯುವ ಕೆಲಸದ ಮೇಲೆ ಬೇಸರ ಬರಬಹುದು. ಉದ್ಯೋಗಸ್ಥ ಮಹಿಳೆಯರಿಗೆ ಬಡ್ತಿ ದೊರಕುವ ಸಂಭವವಿದೆ. ಬರಬೇಕಾದ ಹಣವು ಪೂರ್ಣವಾಗಿ ಬರಲಿದೆ.

ವೃಷಭ: ಅತಿಯಾಗಿ ಆಸೆಪಟ್ಟು ಇತರರೊಂದಿಗೆ ವಾಗ್ವಾದ ನಡೆಸಿ ಪಡೆದ ವಸ್ತುವನ್ನು ಕೈಯ್ಯಾರೆ ಬೇಜವಾಬ್ದಾರಿಯಿಂದ ಹಾಳು ಮಾಡಿಕೊಳ್ಳುವಿರಿ. ರಂಗೋಲಿ ಕಲಾವಿದರ ಬೇಡಿಕೆ ಹಾಗೂ ಸ್ಥಾನಮಾನ ಹೆಚ್ಚುತ್ತದೆ.

ಮಿಥುನ: ಈವರೆಗೂ ಗಳಿಸಿದ ಒಳ್ಳೆಯ ಹೆಸರಿಗೆ ಕುತಂತ್ರಿಗಳು ಮಸಿ ಬಳಿಯುವ ಉಪಾಯವನ್ನು ಮಾಡುವರು. ಮನಸ್ಸಿನಲ್ಲಿರುವ ದುಗುಡಗಳನ್ನು ಹೇಳಿಕೊಳ್ಳಲು ಸರಿಯಾದ ವ್ಯಕ್ತಿಯ ಕೊರತೆ ಉಂಟಾಗುವುದು.

ಕರ್ಕಾಟಕ: ಜವಾಬ್ದಾರಿಯುತ ಕಾರ್ಯಕ್ರಮ ನಡೆಸಿಕೊಡಲು ತಯಾರಿಯನ್ನು ನಡೆಸುವಿರಿ. ಉತ್ತಮ ಪ್ರಜೆಯಾಗುವುದರ ಜತೆಯಲ್ಲಿ ತಂದೆ –ತಾಯಿಯರ ಮಾತಿಗೆ ಗೌರವಿಸುವಂಥ ಉತ್ತಮರೂ ಆಗಬೇಕು.

ಸಿಂಹ: ಬೀಗರ ಮನೆಯಲ್ಲಿನ ವಿಶೇಷ ಸಂದರ್ಭಕ್ಕೆ ತೆರಳುವಿರಿ. ಊಟೋಪಚಾರದಲ್ಲಿ ವ್ಯತ್ಯಾಸಗಳನ್ನು ಮಾಡಿಕೊಂಡು ಆರೋಗ್ಯ ಹಾಳು ಮಾಡಿಕೊಳ್ಳದಿರಿ. ಅಣ್ಣನ ಮಾತನ್ನು ಮೀರುವುದು ಸರಿಯಲ್ಲ.

ಕನ್ಯಾ: ಸಭೆಯಲ್ಲಿ ಸ್ಥಾನ ಹಾಗೂ ಇತಿಮಿತಿಗಳನ್ನು ಅರಿಯದ ಹೊರತು ಕನಿಷ್ಠ ಗೌರವ ಸಿಗದಂತೆ ಆಗುತ್ತದೆ. ಮಕ್ಕಳಲ್ಲಿನ ಕೆಲವು ವಾಗ್ವಾದಗಳನ್ನು ಮಧ್ಯಪ್ರವೇಶ ಮಾಡಿ ನಿಲ್ಲಿಸುವುದು ಸೂಕ್ತ.

ತುಲಾ: ವಿದ್ಯಾಧಿದೇವತೆಯ ಕೃಪಾಕಟಾಕ್ಷದಿಂದ ಭಾಗವಹಿಸಿದ ಬೌದ್ಧಿಕ ಸ್ಪರ್ಧೆಯಲ್ಲಿ ಉತ್ತಮ ಸ್ಥಾನ ಪಡೆಯುವಿರಿ. ಗೋವುಗಳ ಪಾಲನೆಯಿಂದ ಪುಣ್ಯವು ಪ್ರಾಪ್ತಿ. ವಿಶೇಷ ವ್ಯಕ್ತಿಗಳನ್ನು ಭೇಟಿಯಾಗುವಿರಿ.

ವೃಶ್ಚಿಕ: ಗಂಡ ಹೆಂಡತಿಯರ ನಡುವೆ ಭಿನ್ನಾಭಿಪ್ರಾಯಗಳು ಬರಬಹುದು. ಆದರೆ ಅದನ್ನು ಬಳಸಿಕೊಂಡು ಲಾಭ ಗಳಿಸಲು ಯೋಚಿಸುವಂಥ ಮೂರನೆ ವ್ಯಕ್ತಿಗೆ ತಿಳಿಯದಂತೆ ಬಗೆಹರಿಸಿಕೊಳ್ಳುವುದು ಉತ್ತಮ.

ಧನು: ವಿವಿಧ ರೀತಿಯ ರೋಗಿಗಳನ್ನು ಸಂದರ್ಶಿಸಿದ ವೈದ್ಯರಿಗೆ ಮನಸ್ಸನ್ನು ಮತ್ತೆ ಹಿಡಿತಕ್ಕೆ ತಂದುಕೊಳ್ಳಲು ಕ್ರೀಡೆ ಆಡುವುದು ಅಥವಾ ವೀಕ್ಷಿಸುವುದನ್ನು ಮಾಡಬಹುದು. ಹತ್ತಿ ವ್ಯಾಪಾರಿಗಳಿಗೆ ಉತ್ತಮ ದಿನ.

ಮಕರ: ಯಾವುದೋ ಒಂದು ನಂಬಿಕೆಯ ಮೇಲೆ ಸಾಗುತ್ತಿದ್ದ ಜೀವನದಲ್ಲಿ ಇತರರ ಮಾತುಗಳು ವ್ಯತಿರಿಕ್ತ ಪರಿಣಾಮವನ್ನು ಬೀರಬಹುದು. ಜನಗಳ ದೃಷ್ಟಿ ದೋಷಕ್ಕೆ ಒಳಗಾಗದಂತೆ ಜಾಗ್ರತೆವಹಿಸಿ.


ಕುಂಭ: ಹಲವು ವಿಷಯಗಳ ಮೇಲೆ ಒಟ್ಟಿಗೆ ಗಮನ ಇಡುವುದರ ಬದಲು ಒಂದಾದರ ಮೇಲೆ ಒಂದರಂತೆ ಮುಗಿಸುವುದು ನಿಮಗೆ ಲಾಭವಾಗುವುದು. ಅವಿವಾಹಿತರಿಗೆ ಕಂಕಣ ಭಾಗ್ಯ ಕೂಡಿ ಬರಲಿದೆ.

ಮೀನ: ಉದ್ಯೋಗದ ವಿಚಾರದ ಬಗ್ಗೆ ತರಬೇತಿಯನ್ನು ಪಡೆದುಕೊಳ್ಳುವುದರಿಂದ ಬಡ್ತಿಯ ಬಗ್ಗೆ ಯೋಚಿಸಬಹುದು. ವಿದೇಶಿ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ಸ್ಥಾನದಲ್ಲಿ ಅಭದ್ರತೆ ಕಾಡಬಹುದು.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,966
ಇಂದಿನ ಅಂತ್ಯ: 25.936
ದಿನದ ಕನಿಷ್ಠ: 25,810
29

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹595
12 ಕ್ಕೆ ₹80
ಮೈಸೂರು: 100 ಕ್ಕೆ ₹595

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹253-602
ದ್ವಿತಳಿ (ಬಿ.ವಿ) ₹355-751

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹185
ಆರ್‌ಎಸ್‌ಎಸ್-5 ₹179
ಗುಡ್ ಲಾಟ್ ₹167

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹29,750
ಎಸಿ ₹15,400
ಆರ್‌ಪಿ ₹19,000
ಆರ್‌ಸಿ ₹10,900

ಕೈಗಾರಿಕಾ ಉತ್ಪಾದನೆ ಪ್ರಮಾಣ ಸ್ಥಿರ

ಜಿಎಸ್‌ಟಿ ಇಳಿಕೆ, ತಯಾರಿಕಾ ವಲಯದ ಚುರುಕಿನ ಚಟುವಟಿಕೆ ಪರಿಣಾಮ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ದರ ಪರಿಷ್ಕರಣೆ ಹಾಗೂ ಹಬ್ಬಗಳ ಸಂದರ್ಭದಲ್ಲಿನ ಬೇಡಿಕೆ ಹೆಚ್ಚಳವು ತಯಾರಿಕಾ ವಲಯದ ಮೇಲೆ ಸಕಾರಾತ್ಮಕ ಪರಿಣಾಮ ಉಂಟುಮಾಡಿದೆ. ತಯಾರಿಕಾ ವಲಯದಲ್ಲಿ ಉತ್ತಮ ಪ್ರಮಾಣದ ಚಟುವಟಿಕೆ ಕಂಡುಬಂದ ಕಾರಣದಿಂದಾಗಿ ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ ಪ್ರಮಾಣವು ಸೆಪ್ಟೆಂಬರ್‌ನಲ್ಲಿ ಶೇಕಡ 4ರಷ್ಟು ಆಗಿದೆ.


ಹಿಂದಿನ ವರ್ಷದ ಸೆಪ್ಟೆಂಬರ್‌ನಲ್ಲಿ ಕೈಗಾರಿಕಾ ಉತ್ಪಾದನೆಯ ಸೂಚ್ಯಂಕವು (ಐಐಪಿ) ಶೇ 3.2ರಷ್ಟು ಬೆಳವಣಿಗೆ ಕಂಡಿತ್ತು ಎಂದು ಕೇಂದ್ರ ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಮಂಗಳವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಹೇಳುತ್ತಿವೆ.

'ಜಿಎಸ್‌ಟಿ ದರದಲ್ಲಿ ಆಗಿರುವ ಪರಿಷ್ಕರಣೆ, ಹಬ್ಬಗಳ ಋತು ಬೇಗನೆ ಶುರುವಾಗಿದ್ದುದು ಒಟ್ಟಾರೆ ಬೇಡಿಕೆಯನ್ನು ಹೆಚ್ಚಿಸಿರುವಂತಿವೆ. ಅಕ್ಟೋಬರ್ ತಿಂಗಳಲ್ಲಿಯೂ ತಯಾರಿಕಾ ವಲಯದ ಚಟುವಟಿಕೆಗಳು ಹೆಚ್ಚಿನ ಮಟ್ಟದಲ್ಲಿ ಇರುವ ನಿರೀಕ್ಷೆ ಇದೆ' ಎಂದು ಐಸಿಆರ್‌ಎ ಸಂಸ್ಥೆಯ ಮುಖ್ಯ ಅರ್ಥ ಶಾಸ್ತ್ರಜ್ಞೆ ಅದಿತಿ ನಾಯರ್ ಹೇಳಿದ್ದಾರೆ.

ಜಿಎಸ್‌ಟಿ ದರ ಪರಿಷ್ಕರಣೆಯು ಸಣ್ಣ ಮೊತ್ತದ, ದಿನಬಳಕೆಯ ಉತ್ಪನ್ನಗಳಿಗೆ ಬೇಡಿಕೆಯನ್ನು ಉತ್ತಮ ಮಟ್ಟದಲ್ಲಿ ಇರಿಸುತ್ತದೆ. ಆದರೆ ಹೆಚ್ಚಿನ ಬೆಲೆಯ ಉತ್ಪನ್ನಗಳಿಗೆ ಬೇಡಿಕೆಯು ಉಳಿದು ಕೊಳ್ಳುತ್ತದೆಯೇ ಎಂಬುದನ್ನು ಕಾದುನೋಡಬೇಕಿದೆ ಎಂದು ನಾಯರ್ ಹೇಳಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಐಐಪಿ ಹೆಚ್ಚಳ ಕಂಡಿದ್ದರೂ, ಪ್ರಸಕ್ತ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್–ಸೆಪ್ಟೆಂಬರ್ ಅವಧಿ) ಕೈಗಾರಿಕಾ ಉತ್ಪಾದನೆಯು ಶೇ 3ರಷ್ಟು ಮಾತ್ರ ಬೆಳವಣಿಗೆ ಕಂಡಿದೆ. ಹಿಂದಿನ ವರ್ಷದ ಮೊದಲಾರ್ಧದಲ್ಲಿ ಇದು ಶೇ 4.1ರಷ್ಟು ಬೆಳವಣಿಗೆ ದಾಖಲಿಸಿತ್ತು.

ಯಾವ ವಲಯದಲ್ಲಿ ಬೆಳವಣಿಗೆ ಎಷ್ಟಾಗಿದೆ?





'ರಷ್ಯಾ ತೈಲ ಖರೀದಿ ನಿಲ್ಲದು'

ನವದೆಹಲಿ (ಪಿಟಿಐ): ಇಂಡಿಯನ್ ಆಯಿಲ್ ಕಾರ್ಪೊರೇಷನ್ (ಐಒಸಿ) ಹಾಗೂ ಭಾರತದ ಇತರ ತೈಲ ಸಂಸ್ಕರಣಾ ಕಂಪನಿಗಳು ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ಸಂಪೂರ್ಣವಾಗಿ ಕೈಬಿಡುವ ಸಾಧ್ಯತೆ ಇಲ್ಲ.



ಅಮೆರಿಕವು ನಿರ್ಬಂಧ ವಿಧಿಸಿರುವುದು ರಷ್ಯಾದ ಕೆಲವು ಕಂಪನಿಗಳ ಮೇಲೆ; ನಿರ್ಬಂಧವು ರಷ್ಯಾದ ಕಚ್ಚಾ ತೈಲದ ಮೇಲೆ ಇಲ್ಲ. ಹೀಗಾಗಿ ನಿರ್ಬಂಧ ಇಲ್ಲದ ಕಂಪನಿಗಳ ಮೂಲಕ ಖರೀದಿಯು ಮುಂದುವರಿಯುವ ಸಾಧ್ಯತೆ ಇದೆ.

ರೊಸ್ನೆಫ್ಟ್ ಸೇರಿ ರಷ್ಯಾದ ನಾಲ್ಕು ಕಂಪನಿಗಳ ಮೇಲೆ ಇದುವರೆಗೆ ನಿರ್ಬಂಧ ಹೇರಲಾಗಿದೆ. ಆದರೆ ರೊಸ್ನೆಫ್ಟ್ ಕಂಪನಿಯು ತೈಲ ಉತ್ಪಾದಕ ಅಲ್ಲ; ಅದು ಉತ್ಪಾದಕರಿಂದ ಕಚ್ಚಾ ತೈಲವನ್ನು ಗ್ರಾಹಕರಿಗೆ ಒದಗಿಸಿಕೊಡುವ ಕಂಪನಿ. ರೊಸ್ನೆಫ್ಟ್ ಮಾಡುವ ಕೆಲಸವನ್ನು ರಷ್ಯಾದಲ್ಲಿ ಇತರ ಕಂಪನಿಗಳು ಮಾಡಬಹುದು, ಆಗ ಕಚ್ಚಾ ತೈಲದ ಪೂರೈಕೆಗೆ ಅಡ್ಡಿ ಇರುವುದಿಲ್ಲ ಎಂದು ಅಧಿಕಾರಿಗಳು ವಿವರಿಸಿದ್ದಾರೆ.

ರೊಸ್ನೆಫ್ಟ್ ಮತ್ತು ಲುಕಾಯಿಲ್ ಕಂಪನಿಗಳ ಮೇಲೆ ನಿರ್ಬಂಧವಿದೆ. ರಷ್ಯಾದ ಕಚ್ಚಾ ತೈಲದ ಮೇಲೆ ನಿರ್ಬಂಧ ಇಲ್ಲ. ನಿರ್ಬಂಧಕ್ಕೆ ಗುರಿಯಾಗಿರದ ರಷ್ಯಾದ ಇತರ ಕಂಪನಿಗಳಿಂದ ಖರೀದಿಯನ್ನು ಪರಿಗಣಿಸಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ.

'ನಿರ್ಬಂಧದ ನಿಯಮಗಳನ್ನು ಪಾಲಿಸಲಾಗುತ್ತದೆ. ಆದರೆ ರಷ್ಯಾದಿಂದ ಕಚ್ಚಾ ತೈಲ ಖರೀದಿಸುವುದನ್ನು ನಾವು ನಿಲ್ಲಿಸುವುದಿಲ್ಲ. ರಷ್ಯಾದ ಕಚ್ಚಾ ತೈಲದ ಮೇಲೆ ನಿರ್ಬಂಧ ಇಲ್ಲ' ಎಂದು ಐಒಸಿ ನಿರ್ದೇಶಕ ಅನುಜ್ ಜೈನ್ ಹೇಳಿದ್ದಾರೆ.

'ಚಾಟ್‌ಜಿಪಿಟಿ ಗೊ' ಒಂದು ವರ್ಷ ಉಚಿತ

ನವದೆಹಲಿ (ಪಿಟಿಐ): ಹೆಚ್ಚಿನ ಪ್ರಶ್ನೆಗಳನ್ನು ಕೇಳಲು ಹಾಗೂ ಹೆಚ್ಚು ಚಿತ್ರಗಳನ್ನು ಸೃಷ್ಟಿಸಿಕೊಳ್ಳಲು ಅವಕಾಶ ನೀಡುವ 'ಚಾಟ್‌ಜಿಪಿಟಿ ಗೊ' ಆವೃತ್ತಿಯನ್ನು ಭಾರತದ ಬಳಕೆದಾರರಿಗೆ 1 ವರ್ಷದ ಅವಧಿಗೆ ಉಚಿತವಾಗಿ ನೀಡುವುದಾಗಿ ಓಪನ್‌ಎಐ ಕಂಪನಿ ಮಂಗಳವಾರ ಹೇಳಿದೆ.

ನವೆಂಬರ್ 4ರಿಂದ ಆರಂಭವಾಗುವ ಸೀಮಿತ ಅವಧಿಯ ಕೊಡುಗೆ ಸಂದರ್ಭದಲ್ಲಿ ಹೆಸರು ನೋಂದಾಯಿಸಿಕೊಳ್ಳುವ ಬಳಕೆದಾರರಿಗೆ ಮಾತ್ರ ಇದು ಸಿಗಲಿದೆ.

'ಚಾಟ್‌ಜಿಪಿಟಿ ಗೊ' ಆವೃತ್ತಿಯನ್ನು ಚಂದಾ ಆಧಾರದಲ್ಲಿ ಓಪನ್‌ಎಐ ಕಂಪನಿಯು ಆಗಸ್ಟ್‌ನಲ್ಲಿ ಅನಾವರಣ ಮಾಡಿದೆ. ಅನಾವರಣಗೊಳಿಸಿದ ಒಂದೇ ತಿಂಗಳಲ್ಲಿ ಭಾರತದಲ್ಲಿ ಚಾಟ್‌ಜಿಪಿಟಿ ಚಂದಾದಾರರ ಸಂಖ್ಯೆಯು ಎರಡು ಪಟ್ಟಿಗಿಂತ ಹೆಚ್ಚಳ ಕಂಡಿದೆ. ಓಪನ್‌ಎಐ ಪಾಲಿಗೆ ಭಾರತವು ಎರಡನೆಯ ಅತಿದೊಡ್ಡ ಮಾರುಕಟ್ಟೆಯಾಗಿದೆ. 'ಚಾಟ್‌ಜಿಪಿಟಿ ಗೊ' ಆವೃತ್ತಿಗೆ ಈಗಾಗಲೇ ಚಂದಾದಾರರಾಗಿರುವ ಭಾರತೀಯರು 12 ತಿಂಗಳ ಉಚಿತ ಕೊಡುಗೆಗೆ ಅರ್ಹರು.

ಅಮೆಜಾನ್‌ನಲ್ಲಿ 14 ಸಾವಿರ ಉದ್ಯೋಗ ಕಡಿತ

ಸ್ಯಾನ್ ಫ್ರಾನ್ಸಿಸ್ಕೊ (ಎಎಫ್‌ಪಿ): ಅಮೆಜಾನ್ ಕಂಪನಿಯು ತನ್ನ ನೌಕರರ ಸಂಖ್ಯೆಯನ್ನು 14 ಸಾವಿರಷ್ಟು ಕಡಿಮೆ ಮಾಡುತ್ತಿರುವುದಾಗಿ ಹೇಳಿದೆ. ಯಾವೆಲ್ಲ ಹಂತಗಳಲ್ಲಿ ಉದ್ಯೋಗ ಕಡಿತ ಆಗಲಿದೆ ಎಂಬುದನ್ನು ಕಂಪನಿ ತಿಳಿಸಿಲ್ಲ.

ಕಂಪನಿಯು ಕೃತಕ ಬುದ್ಧಿಮತ್ತೆಯ ಮೇಲೆ ಹೆಚ್ಚು ಹೂಡಿಕೆ ಮಾಡುತ್ತಿದೆ. 14 ಸಾವಿರ ಹುದ್ದೆಗಳ ಕಡಿತದ ಹೇಳಿಕೆಯನ್ನು ಕಂಪನಿಯ ಹಿರಿಯ ಉಪಾಧ್ಯಕ್ಷ ಬೆತ್ ಗಲೆಟ್ಟಿ ಅವರು ತಿಳಿಸಿದ್ದಾರೆ.

'ಕೃತಕ ಬುದ್ಧಿಮತ್ತೆಯು ಇಂಟರ್ನೆಟ್ ನಂತರ ಅತ್ಯಂತ ಹೆಚ್ಚು ಪರಿವರ್ತನೆ ತರುವ ತಂತ್ರಜ್ಞಾನ' ಎಂದು ಗಲೆಟ್ಟಿ ಹೇಳಿದ್ದಾರೆ. ಇದು ಕಂಪನಿಗಳಿಗೆ ಹಿಂದೆಂದಿಗಿಂತ ಹೆಚ್ಚು ವೇಗವಾಗಿ ಹೊಸದನ್ನು ಆವಿಷ್ಕರಿಸಲು ನೆರವಾಗುತ್ತಿದೆ ಎಂದು ಹೇಳಿದ್ದಾರೆ.

ಕಂಪನಿಯ ಒಟ್ಟು ನೌಕರರ ಸಂಖ್ಯೆ 15 ಲಕ್ಷಕ್ಕೂ ಹೆಚ್ಚು. ಕಂಪನಿಯ ದಾಸ್ತಾನು ಕೇಂದ್ರಗಳಲ್ಲಿ ಕೆಲಸ ಮಾಡುವವರ ಮೇಲೆ ಈ ತೀರ್ಮಾನದಿಂದ ಯಾವುದೇ ಪರಿಣಾಮ ಆಗಲಿಕ್ಕಿಲ್ಲ ಎಂದು ಗಲೆಟ್ಟಿ ತಿಳಿಸಿದ್ದಾರೆ.

ಮಿಸ್ತ್ರಿ ಮರುನೇಮಕಕ್ಕೆ ಅಡ್ಡಿ



ನವದೆಹಲಿ (ಪಿಟಿಐ): ಉದ್ಯಮಿ ಮೆಹ್ಲಿ ಮಿಸ್ತ್ರಿ ಅವರನ್ನು ಟಾಟಾ ಟ್ರಸ್ಟ್‌ನ ಟ್ರಸ್ಟಿಯಾಗಿ ಮರುನೇಮಕ ಮಾಡುವುದನ್ನು ಟ್ರಸ್ಟ್‌ನ ಅಧ್ಯಕ್ಷ ನೋಯಲ್ ಟಾಟಾ ಹಾಗೂ ಅವರ ಜೊತೆ ಗುರುತಿಸಿಕೊಂಡಿರುವ ಇತರ ಇಬ್ಬರು ಒಟ್ಟಾಗಿ ತಡೆದಿದ್ದಾರೆ.

ಇದು ಟಾಟಾ ಟ್ರಸ್ಟ್‌ನಲ್ಲಿನ ಬಿಕ್ಕಟ್ಟನ್ನು ಇನ್ನಷ್ಟು ತೀವ್ರಗೊಳಿಸಿದೆ ಎನ್ನಲಾಗಿದೆ. ಮಿಸ್ತ್ರಿ ಅವರ ಮರುನೇಮಕದ ವಿರುದ್ಧವಾಗಿ ನೋಯಲ್ ಟಾಟಾ, ವೇಣು ಶ್ರೀನಿವಾಸನ್ (ಇವರು ಟಿವಿಎಸ್ ಮೋಟರ್ ಕಂಪನಿಯ ಗೌರವಾಧ್ಯಕ್ಷ ರೂ ಹೌದು) ಹಾಗೂ ಇನ್ನೊಬ್ಬ ಟ್ರಸ್ಟಿ ವಿಜಯ್ ಸಿಂಗ್ ಅವರು ಮತ ಚಲಾಯಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಟ್ರಸ್ಟ್‌ನಲ್ಲಿ ಇರುವ ಇತರ ಟ್ರಸ್ಟಿಗಳಾದ ಪ್ರಮೀತ್ ಝಾವೆರಿ, ಡೇರಿಯಸ್ ಖಂಬಾಟ ಮತ್ತು ಜೆಹಾಂಗಿರ್ ಎಚ್‌ಸಿ ಜೆಹಾಂಗಿರ್ ಅವರು ಮಿಸ್ತ್ರಿ ಪರವಾಗಿ ನಿಂತಿದ್ದರು ಎಂದು ಗೊತ್ತಾಗಿದೆ.

ಟಾಟಾ ಟ್ರಸ್ಟ್‌ನಲ್ಲಿ ನೋಯಲ್ ಟಾಟಾ ಮತ್ತು ಮಿಸ್ತ್ರಿ ಅವರು ಎರಡು ಅಧಿಕಾರ ಕೇಂದ್ರಗಳಂತೆ ಇದ್ದಾರೆ. ನೋಯಲ್ ಟಾಟಾ ಅವರಿಗೆ ವೇಣು ಶ್ರೀನಿವಾಸನ್ ಮತ್ತು ವಿಜಯ್ ಸಿಂಗ್ ಅವರ ಬೆಂಬಲವಿದೆ. ಶ್ರೀನಿವಾಸನ್ ಅವರನ್ನು ಕಳೆದ ವಾರ ಅವಿರೋಧ ನಿರ್ಣಯದ ಮೂಲಕ ಆಜೀವ ಟ್ರಸ್ಟಿಯಾಗಿ ನೇಮಿಸಲಾಗಿದೆ.

ತಮ್ಮ ಮುಂದಿನ ನಡೆ ಏನು ಎಂಬುದನ್ನು ಮಿಸ್ತ್ರಿ ಅವರು ತಿಳಿಸಿಲ್ಲ. ಆದರೆ ಅವರು ಕೋರ್ಟ್ ಮೆಟ್ಟಿಲೇರುವ ಸಾಧ್ಯತೆ ಇದೆ.

ಟಿವಿಎಸ್ ಲಾಭ ಹೆಚ್ಚಳ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಟಿವಿಎಸ್ ಮೋಟರ್ ಕಂಪನಿಯ ನಿವ್ವಳ ಲಾಭವು ಶೇಕಡ 42ರಷ್ಟು ಹೆಚ್ಚಾಗಿ ₹832 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಕಂಪನಿಯು ₹588 ಕೋಟಿ ಲಾಭ ಕಂಡಿತ್ತು.

ಕಾರ್ಯಾಚರಣೆ ವರಮಾನವು ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹11,197 ಕೋಟಿ ಇದ್ದಿದ್ದು ಈ ಬಾರಿ ₹14,051 ಕೋಟಿಗೆ ಹೆಚ್ಚಳ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಇದೇ ವೇಳೆ ಕಂಪನಿಯ ವೆಚ್ಚಗಳು ಕೂಡ ಏರಿಕೆ ಆಗಿವೆ. ಕಳೆದ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹10,332 ಕೋಟಿ ಇದ್ದ ವೆಚ್ಚಗಳು ಈ ಬಾರಿ ₹12,801 ಕೋಟಿಗೆ ತಲುಪಿವೆ.

ಕಂಪನಿಯ ದ್ವಿಚಕ್ರ ವಾಹನ ಹಾಗೂ ತ್ರಿಚಕ್ರ ವಾಹನಗಳ ಮಾರಾಟ ಪ್ರಮಾಣವು ಶೇ 23ರಷ್ಟು ಹೆಚ್ಚಳ ಕಂಡಿವೆ. ಕಂಪನಿಯು ಈ ತ್ರೈಮಾಸಿಕದಲ್ಲಿ ಒಟ್ಟು 15.07 ವಾಹನಗಳನ್ನು ಮಾರಾಟ ಮಾಡಿದೆ.

ಸರ್ಕಾರದ ನಡೆಗೆ ಕೋರ್ಟ್ ಅಂಕುಶ

ಒಂದನೇ ಪುಟದಿಂದ...

'ಆಕ್ಷೇಪಾರ್ಹ ಆದೇಶವು ಸಂವಿಧಾನದ 13(2)ನೇ ವಿಧಿಗೆ ವಿರುದ್ಧವಾಗಿದೆ ಮತ್ತು ಈ ಮೂಲಕ 19(1)(ಎ) ಮತ್ತು (ಬಿ) ವಿಧಿಯ ಅಡಿಯಲ್ಲಿ ಪ್ರತಿಯೊಬ್ಬ ನಾಗರಿಕರಿಗೆ ಕೊಡಮಾಡಲಾಗಿರುವ ಮೂಲಭೂತ ಹಕ್ಕನ್ನು ಕಸಿದುಕೊಳ್ಳುತ್ತದೆ. ಮೂಲಭೂತ ಹಕ್ಕುಗಳನ್ನು ಕಾರ್ಯಕಾರಿ ಆದೇಶಗಳಿಂದ ಮೊಟಕುಗೊಳಿಸಲು ಸಾಧ್ಯವಿಲ್ಲ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

'ಸಾರ್ವಜನಿಕ ಸಭೆಗಳು ಮತ್ತು ಮೆರವಣಿಗೆಗಳನ್ನು ನಿಯಂತ್ರಿಸುವ ಬಗ್ಗೆ, ಕರ್ನಾಟಕ ಪೊಲೀಸ್ ಕಾಯ್ದೆ–1963ರ ಕಲಂ 31ರಲ್ಲಿ ಈಗಾಗಲೇ ವಿಶೇಷವಾಗಿ ವಿವರಿಸಲಾಗಿದೆ. ಇಂತಹ ಸಂದರ್ಭಗಳ ನಿಯಂತ್ರಣದ ಬಗ್ಗೆ ಕಲಂ 31ರ ಉಪ ವಿಭಾಗ (6)ರಲ್ಲಿ ಏನೆಲ್ಲಾ ವಿಧಾನಗಳನ್ನು ಅನುಸರಿಸಬೇಕೆಂಬುದನ್ನು ನಿಖರವಾಗಿ ಸೂಚಿಸಲಾಗಿದೆ. ಇಂತಹುದೊಂದು ಶಾಸನಬದ್ಧ ಕಲಂ ಅಸ್ತಿತ್ವದಲ್ಲಿ ಇರುವಾಗ ಸರ್ಕಾರದ ಹೊಸ ಆದೇಶ ಸಂವಿಧಾನ ವಿರೋಧಿ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ನೋಟಿಸ್: ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಗೃಹ ಇಲಾಖೆ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣ ಇಲಾಖೆ ಕಾರ್ಯದರ್ಶಿ, ಡಿಜಿ-ಐಜಿಪಿ ಹಾಗೂ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮಿಷನರ್ ಸೇರಿದಂತೆ ಪ್ರಕರಣದ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ, ವಿಚಾರಣೆಯನ್ನು ನವೆಂಬರ್ 17ರ ಮಧ್ಯಾಹ್ನ 2:30ಕ್ಕೆ ನಿಗದಿ ಮಾಡಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಮಲ್ಲಿಕಾರ್ಜುನ ಹಿರೇಮಠ ವಕಾಲತ್ತು ವಹಿಸಿದ್ದಾರೆ.


ಅಶೋಕ ಹಾರನಹಳ್ಳಿ ವಾದಾಂಶ

- ಕರ್ನಾಟಕ ರಾಜ್ಯದಾದ್ಯಂತ ನಾಗರಿಕ ಮತ್ತು ಸಾಂಸ್ಕೃತಿಕ ಸಂಘಟನೆಗಳು, ನಡಿಗೆದಾರರ ಸಂಘಗಳು, ಯೋಗ ಕ್ಲಬ್‌ಗಳು ಮತ್ತು ಓಟಗಾರರ ಗುಂಪುಗಳು, ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ನಿಯಮಿತ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿವೆ. ಆದರೆ, ಸರ್ಕಾರ ಹೊರಡಿಸಿರುವ ಆದೇಶದ ಅನುಸಾರ ಪೂರ್ವಾನುಮತಿ ಕೊರತೆಯಿಂದಾಗಿ ಕ್ರಿಮಿನಲ್ ಕ್ರಮಕ್ಕೆ ಗುರಿಯಾಗಬಹುದು.
- ಯಾವುದೇ ವ್ಯಕ್ತಿ ಅಥವಾ ವ್ಯಕ್ತಿಗಳಿಂದ ಕೂಡಿದ ಸಂಘ, ಸಂಸ್ಥೆಗಳು, ಅಥವಾ ವ್ಯಕ್ತಿಗಳ ಗುಂಪು ಅಥವಾ ಅವರ ಪರವಾಗಿ ಯಾವುದೇ ಇತರ ವ್ಯಕ್ತಿಯ ಸಂಸ್ಥೆಯು ಈ ಸರ್ಕಾರಿ ಆದೇಶವನ್ನು ಉಲ್ಲಂಘಿಸಿ ಸರ್ಕಾರಿ ಆಸ್ತಿಗಳಲ್ಲಿ ಯಾವುದೇ ಕಾರ್ಯಕ್ರಮ ಅಥವಾ ಮೆರವಣಿಗೆಯನ್ನು ನಡೆಸಿದರೆ, ಅಂತಹುದನ್ನು ಕಾನೂನುಬಾಹಿರ ಎಂದು ಪರಿಗಣಿಸಲಾಗುತ್ತದೆ ಮತ್ತು ಭಾರತೀಯ ನ್ಯಾಯ ಸಂಹಿತೆ–2023ರ (ಬಿಎನ್‌ಎಸ್) ಕಲಂಗಳ ಪ್ರಕಾರ ಸಭೆ ಸೇರುವುದನ್ನು ಕಾನೂನುಬಾಹಿರ ಸಭೆ ಎಂದು ಪರಿಗಣಿಸಲಾಗುತ್ತದೆ.
- **ಸರ್ಕಾರಿ ಆಸ್ತಿ ಎಂದರೆ:** ಸ್ಥಳೀಯ ಪ್ರಾಧಿಕಾರ ಅಥವಾ ಇಲಾಖೆ, ಮಂಡಳಿಗಳು, ಬೆಳೆಗಾರರ ಒಡೆತನದಲ್ಲಿರುವ ಮತ್ತು ನಿರ್ವಹಿಸುವ ಯಾವುದೇ ಭೂಮಿ, ಕಟ್ಟಡ, ರಚನೆ, ರಸ್ತೆ, ಉದ್ಯಾನವನ, ಆಟದ ಮೈದಾನ, ಜಲಮೂಲ ಅಥವಾ ಕರ್ನಾಟಕ ಸರ್ಕಾರದ ನಿಯಂತ್ರಣದಲ್ಲಿರುವ ಅಥವಾ ನಿಹಿತವಾಗಿರುವ, ವಹಿಸಲಾಗಿರುವ ಅಥವಾ ನಿರ್ವಹಿಸುವ ಯಾವುದೇ ಇತರ ಸ್ಥಿರ ಆಸ್ತಿ.

ಅರ್ಜಿದಾರರ ಪ್ರಶ್ನೆಯ ಮುಖ್ಯಾಂಶಗಳು

- 16.10.2025: ಖಾಸಗಿ ಸಂಸ್ಥೆಗಳು ಸಾರ್ವಜನಿಕ ಸ್ಥಳಗಳನ್ನು ದುರುಪಯೋಗ ಮಾಡಿಕೊಳ್ಳುವುದನ್ನು ತಡೆಗಟ್ಟುವ ಸಲುವಾಗಿ 'ಪರಿಹಾರ ಮತ್ತು ನಿಯಂತ್ರಣ'ಕ್ಕಾಗಿ ಸಂಪುಟ ಸಭೆ ಕೈಗೊಂಡ ನಿರ್ಧಾರ
- ಇದಕ್ಕೆ ಅನುಗುಣವಾಗಿ 18.10.2025ರಂದು ರಾಜ್ಯ ಗೃಹ ಇಲಾಖೆಯ ಕಾರ್ಯದರ್ಶಿ ಹೊರಡಿಸಿದ ಆದೇಶ.
- 19.10.2025 ಮತ್ತು 20.10.2025ರಂದು ಕೆಲವು ಸಚಿವರು ಮಾಧ್ಯಮಗಳೊಂದಿಗೆ ಮಾತನಾಡುತ್ತಾ ಸಂಪುಟದ ನಿರ್ಧಾರವನ್ನು ಸಮರ್ಥಿಸಿಕೊಂಡರು
- ಅದರಲ್ಲೂ ಐ.ಟಿ–ಬಿ.ಟಿ ಸಚಿವ ಪ್ರಿಯಾಂಕ್ ಖರ್ಗೆ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಶಾಖೆಗಳಿಗೆ ಮತ್ತು ಖಾಸಗಿ ಸಂಸ್ಥೆಗಳಿಗೆ ಸರ್ಕಾರದ ಜಾಗ ಬಳಸಲು ಅನುಮತಿ ನೀಡಲಾಗುವುದಿಲ್ಲ ಎಂದು ಉಚ್ಚರಿಸಿದರು. ಈ ಮಾತುಗಳಲ್ಲಿ ಅವರು ಯಾರನ್ನು ಉದ್ದೇಶಿಸಿ ಈ ನಿರ್ಧಾರ ಕೈಗೊಂಡರು ಎಂಬುದು ಸ್ಪಷ್ಟವಾಗಿದೆ
- **ಕೋರಿಕೆ ಏನು?:** ಸರ್ಕಾರಿ ಸ್ಥಳಗಳಲ್ಲಿ ಅನುಮತಿಯಿಲ್ಲದ ಮೆರವಣಿಗೆ, ಸಭೆ ನಡೆಸುವುದನ್ನು ನಿರ್ಬಂಧಿಸಿ ಸರ್ಕಾರ ಇದೇ 18ರಂದು ಹೊರಡಿಸಿರುವ ಆದೇಶವು ಸಂವಿಧಾನದ 13, 14 ಮತ್ತು 19ನೇ ವಿಧಿಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಆದ್ದರಿಂದ, ಈ ಆದೇಶವನ್ನು ರದ್ದುಗೊಳಿಸಬೇಕು

ಸರ್ಕಾರಿ ಸ್ಥಳದಲ್ಲಿ ಜನ ಜಮಾವಣೆ ಸ್ವರೂಪ



- 'ಮೆರವಣಿಗೆ ಅಥವಾ ರ್‍ಯಾಲಿ' ಎಂದರೆ ಮದುವೆ ಮತ್ತು ಅಂತ್ಯಕ್ರಿಯೆ ಸಭೆಗಳು ಮತ್ತು ಚಳವಳಿಗಳನ್ನು ಹೊರತುಪಡಿಸಿ, ಸಂಗೀತ ಅಥವಾ ಇತರ ರೀತಿಯಲ್ಲಿ, ಸರ್ಕಾರಿ ಆಸ್ತಿಯ ಮೂಲಕ ಹಾದುಹೋಗುವ ಸಾಮಾನ್ಯ ಚಳವಳಿ ಅಥವಾ ಮಾರ್ಗ ಮೆರವಣಿಗೆಯನ್ನು ನಡೆಸಲು ಸಾಮಾನ್ಯ ಉದ್ದೇಶ ಹೊಂದಿರುವ ಅಥವಾ ಯಾವುದೇ ಇತರ ಚಟುವಟಿಕೆಯೊಂದಿಗೆ ಯಾವುದೇ ಹೆಸರಿನಿಂದ ಕರೆಯಲಾಗುವ 10ಕ್ಕೂ ಹೆಚ್ಚು ಜನರ ಸಭೆ.
- ಪೂರ್ವಾನುಮತಿ ಇಲ್ಲದೆ 10ಕ್ಕೂ ಹೆಚ್ಚು ವ್ಯಕ್ತಿಗಳು ಸಭೆ ಸೇರುವುದನ್ನು ಸರ್ಕಾರದ ಹೊಸ ಆದೇಶ ನಿಷೇಧಿಸುತ್ತದೆ. ಅಂತಹ ಸಭೆಯನ್ನು ಕಾನೂನುಬಾಹಿರ ಸಭೆ ಎಂದು ಘೋಷಿಸುತ್ತದೆ. ಇದರಿಂದಾಗಿ ಈ ರೀತಿ ಸಭೆಯಲ್ಲಿ ಭಾಗವಹಿಸುವವರು ಬಿಎನ್‌ಎಸ್ ಕಾಯ್ದೆಯ ಅಡಿಯಲ್ಲಿ ದಂಡದ ಪರಿಣಾಮಗಳಿಗೆ ಗುರಿಯಾಗುತ್ತಾರೆ. ಅನುಮತಿ ಉಲ್ಲಂಘಿಸಿ ನಡೆಸುವ ಅಪರಾಧಗಳನ್ನು ತಡೆಗಟ್ಟಲು ಅಥವಾ ವಿಚಾರಣೆಗೆ ಒಳಪಡಿಸಲು ನ್ಯಾಯವ್ಯಾಪ್ತಿಯ ಅನುಸಾರ ಆದೇಶವು ಪೊಲೀಸರಿಗೆ ಅಧಿಕಾರ ನೀಡಲಾಗಿದೆ.

ಭಾರತೀಯನ ಸೆರೆ

ನ್ಯೂಯಾರ್ಕ್ (ಪಿಟಿಐ): ವಿಮಾನದಲ್ಲಿ ಪ್ರಯಾಣಿಸುತ್ತಿದ್ದ ಇಬ್ಬರು ಬಾಲಕರಿಗೆ ಫೋರ್ಕ್‌ನಿಂದ ಇರಿದು, ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ಮಾಡಿದ ಆರೋಪದಡಿ ಭಾರತೀಯರೊಬ್ಬರನ್ನು ಅಮೆರಿಕದಲ್ಲಿ ಬಂಧಿಸಲಾಗಿದೆ. ಆರೋಪಿ ಪ್ರಣೀತ್‌ಕುಮಾರ್ ಉಸಿರಿಪಳ್ಳಿ ಅವರು 17 ವರ್ಷದ ಬಾಲಕರೊಬ್ಬರ ಭುಜಕ್ಕೆ ಫೋರ್ಕ್‌ನಿಂದ ಚುಚ್ಚಿದ್ದಾರೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ರೇವತಿ ಭಟ್, ಮಂಗಳೂರು

- **ಪ್ರಶ್ನೆ: ನಾವು ಕೆಲವು ವರ್ಷಗಳ ಹಿಂದೆ ಮನೆ ಕಟ್ಟಿಸಿದ್ದೆವು. ನವೀನ ಮಾದರಿಯ ಕಟ್ಟಡಗಳನ್ನು ನೋಡಿ ಇದನ್ನು ಒಡೆದು ಹೊಸ ಮನೆ ಕಟ್ಟಿಸುವ ಯೋಜನೆಯಲ್ಲಿದ್ದೇವೆ. ನನ್ನ ಬಳಿ ಸುಮಾರು ₹75 ಲಕ್ಷ ಉಳಿತಾಯದ ಹಣ ಇದೆ. ಇದಕ್ಕೆ ಬಡ್ಡಿ ಬರುತ್ತಿದೆ. ನನಗೆ ಇಬ್ಬರು ಗಂಡು ಮಕ್ಕಳಿದ್ದಾರೆ, ಅವರು ಉದ್ಯೋಗದಲ್ಲಿದ್ದಾರೆ. ನನ್ನ ಉಳಿತಾಯದ ಹಣ ಉಪಯೋಗಿಸಿ ಹೊಸ ಮನೆ ನಿರ್ಮಿಸುವ ಉದ್ದೇಶ ನನ್ನದು. ಇದಕ್ಕೆ ಸುಮಾರು ₹50 ಲಕ್ಷದವರೆಗೆ ವೆಚ್ಚವಾಗಬಹುದು. ಅಷ್ಟು ಸಮಯ ಬಾಡಿಗೆ ಮನೆಯಲ್ಲಿ ಇರಬೇಕು. ಈ ಆಸ್ತಿ ಮಕ್ಕಳ ಹೆಸರಲ್ಲಿಲ್ಲ. ಆದರೆ ನನಗೆ ಹೆಚ್ಚಿನ ಆದಾಯ ಇಲ್ಲ. ಹೀಗಾಗಿ ನನಗೆ ಸಾಲ ಸಿಗುವುದು ಕಷ್ಟ. ಇಂತಹ ಸಂದರ್ಭದಲ್ಲಿ ನಾವು ಉಳಿತಾಯ ಮೊತ್ತ ಉಪಯೋಗಿಸಿ ಮನೆ ಕಟ್ಟಬೇಕೇ ಅಥವಾ ಮಕ್ಕಳ ಹೆಸರಲ್ಲಿ ಸಾಲ ಪಡೆಯುವ ಅವಕಾಶ ಇದ್ದರೆ ಅದು ಆರ್ಥಿಕವಾಗಿ ಲಾಭದಾಯಕವೇ? ಹಳೆಯ ಮನೆ ಒಡೆದಾಗ ಸಂಭವಿಸುವ ನಷ್ಟವನ್ನು ಆದಾಯ ತೆರಿಗೆಯಡಿ ಏನೆಂದು ಪರಿಗಣಿಸಲಾಗುತ್ತದೆ?**

ಉತ್ತರ: ನಿಮ್ಮ ಪ್ರಶ್ನೆ ಬಹಳ ಪ್ರಸ್ತುತ. ಉಳಿತಾಯದ ಹಣ ಇದ್ದಾಗ ಅದನ್ನು ಬ್ಯಾಂಕಿನಲ್ಲಿ ಹಾಗೆಯೇ ಇರಿಸಿ ಬಡ್ಡಿ ಸಂಪಾದಿಸಬೇಕೇ, ಸಂಪಾದನೆ ಮಾಡುವ ಮಕ್ಕಳಿದ್ದಾಗ ಆರ್ಥಿಕ ಜವಾಬ್ದಾರಿಗಳನ್ನು ಅವರಿಗೆ ಹಸ್ತಾಂತರಿಸಿ ನೆಮ್ಮದಿಯಿಂದ ಇರಬಹುದೇ ಎಂಬುದು ಇಲ್ಲಿರುವ ವಿಚಾರ. ಕಾನೂನಿನ ಪರಿಧಿಯಲ್ಲಿ ಇಂದಲ್ಲ ನಾಳೆ ನಿಮ್ಮ ಯಾವುದೇ ಬ್ಯಾಂಕ್ ಠೇವಣಿ ಅಥವಾ ಮನೆ ನಿಮ್ಮ ನಂತರ ಅವರಿಗೇ ಸೇರಿದ್ದಲ್ಲವೇ?

ನಿಮ್ಮ ಮಕ್ಕಳು ನಿಮ್ಮ ಆರ್ಥಿಕ ಅಗತ್ಯಗಳನ್ನು ಪೂರೈಸುತ್ತಿದ್ದು, ನೀವು ನಿಮ್ಮ ಬಡ್ಡಿ ಆದಾಯವನ್ನು ಆಶ್ರಯಿಸುತ್ತಿಲ್ಲವಾದರೆ, ಸಾಲ ಮಾಡಿ ನಿಮ್ಮ ಆದಾಯಕ್ಕಿಂತ ಹೆಚ್ಚಿನ ಬಡ್ಡಿ ಪಾವತಿಸುವ ಅಗತ್ಯ ಇಲ್ಲ. ಆದರೆ, ಸಾಲ ಪಡೆದ ಸಂದರ್ಭದಲ್ಲಿ ನಿಮ್ಮ ಮಕ್ಕಳಿಗೆ ಆದಾಯ ತೆರಿಗೆ ಲಾಭವಾಗುವುದಿದ್ದರೆ (ಹಳೆ ತೆರಿಗೆ ಪದ್ಧತಿ) ಮಾತ್ರ ಸಾಲ ಪಡೆಯುವುದು ಸೂಕ್ತವಾಗಬಹುದು. ಇದನ್ನು ಎಲ್ಲ ಆಯಾಮಗಳಿಂದ ಪರಿಶೀಲಿಸಿ. ಮುಂದೆ ಮನೆಯ ಮಾಲೀಕತ್ವ ಹಾಗೂ ಉಳಿಕೆ ಹಣವನ್ನು ಯಾವ ರೀತಿ ಸಮಾನವಾಗಿ ಹಂಚುವಿರಿ ಎನ್ನುವ ಬಗ್ಗೆಯೂ ಸ್ಪಷ್ಟತೆ ಇರಲಿ.

ನೀವು ಹಳೆಯ ಮನೆ ಒಡೆದು ಹೊಸ ಮನೆ ಕಟ್ಟುವ ಯೋಜನೆ ಮಾಡುತ್ತಿದ್ದೀರಿ. ಇಲ್ಲಿ ಆಸ್ತಿ ವರ್ಗಾವಣೆ ಇಲ್ಲ, ಮನೆಯ ಮಾಲೀಕತ್ವದ ಹಕ್ಕನ್ನು ನೀವು ಕಳೆದುಕೊಂಡಿಲ್ಲ. ಯಾವುದೇ ದುಡ್ಡು ನಿಮಗೆ ಲಭಿಸಲಿಲ್ಲ. ಬದಲಾಗಿ ಹೊಸ ಮನೆ ಕಟ್ಟಿದಾಗ ಹಳೆಯ ಮೌಲ್ಯಕ್ಕೆ ಹೆಚ್ಚುವರಿ ಮೊತ್ತ ಸೇರುತ್ತದೆ. ಒಟ್ಟಾರೆ ಆಸ್ತಿ ಮೌಲ್ಯ ಹೊಸ ಮನೆ ನಿರ್ಮಾಣದಿಂದ ವರ್ಧಿಸುತ್ತದೆ. ಮುಂದೆ ಮಾರಾಟ ಮಾಡುವ ಸಂದರ್ಭ ಬಂದರೆ, ಆಸ್ತಿಯ ಅಸಲು ಬೆಲೆ ನಿರ್ಣಯಿಸುವಾಗ ಹಳೆಯ ಹಾಗೂ ಹೊಸ ಮೌಲ್ಯ ಎರಡನ್ನೂ ಸೇರಿಸಲಾಗುತ್ತದೆ. ನಿರ್ಮಾಣದ ಪೂರ್ಣ ಮಾಹಿತಿ ದಾಖಲಿಸಿಟ್ಟಿರಿ. ಹಳೆ ಮನೆಯ ಮೌಲ್ಯ ಇದರೆದುರು ಗೌಣವಾಗಬಹುದು.

ವೆಂಕಟಾಚಲಂ, ಬಾಣಸವಾಡಿ, ಬೆಂಗಳೂರು

- **ಪ್ರಶ್ನೆ: ಕಳೆದ ಕೆಲವು ವರ್ಷಗಳಿಂದ ಷೇರುಪೇಟೆಯಲ್ಲಿ ವಹಿವಾಟು ನಡೆಸದಿರುವ ಒಂದೆರಡು ಕಂಪನಿಗಳ ಷೇರುಗಳು ನನ್ನಲ್ಲಿವೆ. ಇದರಲ್ಲಿ ನಾನು ಭಾರೀ ನಿರೀಕ್ಷೆಯೊಂದಿಗೆ ಸುಮಾರು ₹1 ಲಕ್ಷ ಹೂಡಿಕೆ ಮಾಡಿದ್ದೆ. ಆದರೆ ಈ ಕಂಪನಿ ಷೇರುಗಳು ಯಾವುದೇ ವಹಿವಾಟು ನಡೆಸುತ್ತಿಲ್ಲ. ಈ ನಷ್ಟ ಏನು ಮಾಡಲಿ? ಆದಾಯ ತೆರಿಗೆ ವಿಚಾರಕ್ಕೆ ಸಂಬಂಧಿಸಿ ಇದನ್ನು ಏನೆಂದು ತಿಳಿದುಕೊಳ್ಳಬೇಕು? ಮಾರಾಟ ಮಾಡದೆ ಐ.ಟಿ. ವಿವರದಲ್ಲಿ ನಷ್ಟ ದಾಖಲಿಸಿಕೊಳ್ಳುವುದಕ್ಕೆ ಅವಕಾಶ ಇದೆಯೇ?**

ಉತ್ತರ: ಷೇರು ಮಾರುಕಟ್ಟೆಯಲ್ಲಿ ಲಾಭ–ನಷ್ಟ ಸಹಜ ಹಾಗೂ ಈ ಮಾಹಿತಿಯನ್ನು ಐಟಿಆರ್‌ಗಳಲ್ಲಿ ದಾಖಲಿಸಬೇಕು. ಆದರೆ, ಯಾವುದೇ ಷೇರು ವಹಿವಾಟಾಗದೆ ಇದ್ದಾಗ ಹೂಡಿಕೆ ಹಣ ಸ್ಥಗಿತವಾಗುತ್ತದೆ. ಇದು ವಾಸ್ತವದಲ್ಲಿ ಹಣ ಹಿಂಪಡೆಯುವ ಸಾಧ್ಯತೆ ಇಲ್ಲದಿರುವ ಸನ್ನಿವೇಶವಾದರೂ, ಐ.ಟಿ ವಿವರಗಳಲ್ಲಿ ದಾಖಲಿಸುವ ಹಂತದಲ್ಲಿ ನಾವು ಇದನ್ನು 'ನಷ್ಟ' ಎಂದು ನಿರ್ಣಯಿಸಲು ಸಾಧ್ಯವಿಲ್ಲ. ಕಾರಣ, ಷೇರು ವರ್ಗಾವಣೆ ಆಗಿರುವುದಿಲ್ಲ. ಕಂಪನಿ ದಿವಾಳಿ ಪ್ರಕ್ರಿಯೆಗೆ ಒಳಗಾಗಿರುವುದಿಲ್ಲ.

ಸಾಮಾನ್ಯವಾಗಿ ಷೇರುಗಳು ವಹಿವಾಟು ನಿಲ್ಲಿಸಿದ ಸಂದರ್ಭದಲ್ಲಿ 'ಡಿಲಿಸ್ಟ್' ಆಗಿರುವ ಸಾಧ್ಯತೆಯೂ ಇದೆ. ಆಗಲೂ ಮೇಲೆ ತಿಳಿಸಿದ ದಿವಾಳಿ ಪ್ರಕ್ರಿಯೆಗೆ ನಂತರದ ಹಂತದಲ್ಲಿ ಒಳಗಾಗಬೇಕು. ಆದಾಯ ತೆರಿಗೆಯ 'ವರ್ಗಾವಣೆ' ವ್ಯಾಖ್ಯೆಯಡಿ ಬರುವ ವ್ಯವಹಾರಗಳಷ್ಟೇ ಬಂಡವಾಳ ಲಾಭ-ನಷ್ಟ ಲೆಕ್ಕಾಚಾರಕ್ಕೆ ಬರುತ್ತವೆ. ನೀವು ಉಲ್ಲೇಖಿಸಿರುವ ವಿಚಾರದಲ್ಲಿ ನಷ್ಟ ಎಂದು ಪರಿಗಣಿಸಲು ಮಾರಾಟ ಮಾತ್ರವಲ್ಲ, ಹಕ್ಕು ನಷ್ಟವಾದರೂ ಅದನ್ನು ಪರಿಗಣಿಸಬಹುದು. ಆದರೆ ಇದು ಕಂಪನಿಗೆ ಅಧಿಕೃತವಾಗಿ ಬರ್ಖಾಸ್ತುದಾರರನ್ನು ನಿಯೋಜಿಸಿ, ಕಂಪನಿಯ ಆಸ್ತಿ-ಹೊಣೆಗಳನ್ನು ಕಾನೂನು ಪ್ರಕಾರ ಪೂರ್ಣಗೊಳಿಸಿ, ಏನಾದರೂ ಬಾಕಿ ಮೊತ್ತ ಉಳಿದರೆ ಷೇರುದಾರರಿಗೆ ಕಟ್ಟಕಡೆಗೆ ಹಂಚಲಾಗುತ್ತದೆ. ಇದರಲ್ಲಿ ಕೆಲವೊಮ್ಮೆ ನಷ್ಟವೇ ಆಗುತ್ತದೆ. ಇದನ್ನು ಷೇರುದಾರರಿಗೆ ಅಧಿಕೃತವಾಗಿ ತಿಳಿಸಲಾಗುತ್ತದೆ. ಆ ಹಂತದಲ್ಲಿ ನಿಮ್ಮ ಷೇರು ಇದ್ದರೆ, ಮೊತ್ತ ಏನೆಂದು ತಿಳಿದು ನಷ್ಟ ಘೋಷಣೆ ಮಾಡಬಹುದು.

ಒಂದು ವೇಳೆ ಈ ಮೊತ್ತ ದೀರ್ಘಾವಧಿ ಬಂಡವಾಳ ನಷ್ಟವಾಗಿದ್ದರೆ, ಅದನ್ನು ಎಂಟು ವರ್ಷಗಳ ಕಾಲ ಅದೇ ವರ್ಗದ ಲಾಭದೊಡನೆ ವಜಾ ಮಾಡಲು ಅವಕಾಶ ಇದೆ. ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯು (ಎನ್‌ಸಿಎಲ್‌ಟಿ) ಕಂಪನಿಯ ದಿವಾಳಿ ಪ್ರಕ್ರಿಯೆ ಪೂರ್ಣಗೊಳಿಸಿ ತೀರ್ಮಾನ ನೀಡಿದ ನಂತರವಷ್ಟೇ ಇದು ಸಾಧ್ಯ. ಆಯಾ ಕಂಪನಿಯ ರಿಜಿಸ್ಟ್ರಾರ್ ಕೂಡಾ ಷೇರುಗಳ ಸ್ಥಿತಿ ಬಗ್ಗೆ ಮಾಹಿತಿ ನೀಡಬಲ್ಲರು. ಇದರ ಆಧಾರದಲ್ಲಿ ನೀವು ನಿಮ್ಮ ನಷ್ಟವನ್ನು ಘೋಷಿಸಿಕೊಳ್ಳಬಹುದು. ಷೇರುಗಳ ಬಗ್ಗೆ ಹೆಚ್ಚಿನ ಮಾಹಿತಿಗೆ ನಿಮ್ಮ ಡಿ-ಮ್ಯಾಟ್ ದಾಖಲೆ ಪರಿಶೀಲಿಸಿ, ಬ್ರೋಕರ್ ಮೂಲಕ ಷೇರುಗಳು ಯಾವ ಹಂತದಲ್ಲಿ ಇವೆ ಎಂದು ತಿಳಿದುಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1405 (1410)
ಸೋಯಾ (ರಿಫೈನ್ಡ್)	₹1280 (1285)
ಸೂರ್ಯಕಾಂತಿ (ರಿಫೈನ್ಡ್)	₹1480 (1480)
ಪಾಮೋಲಿನ್	₹1285 (1285)

ಅಡಿಕೆ ಧಾರಣೆ

ಪುತ್ತೂರು					
ಕೋಕ	20000-31500	ಗೊರಬಲು	19589-46009	ಬೆಟ್ಟೆ	40018-52989
ಹೊಸತು	26000-36000	ಹೊಸತು	57129-64599	ಬಿಳಿಗೋಟು	30099-40099
ಹಳತು	48500-53000	ರಾಶಿ	52366-67099	ಚಾಲಿ	44099-50099
ಸಾಗರ		ಸರಕು	59000-94999	ಕೆಂಪುಗೋಟು	22009-38099
ಬಿಳಿಗೋಟು	28290-33339	ಸಿದ್ದಾಪುರ		ರಾಶಿ	53199-59259
ಚಾಲಿ	43309-43309	ಬಿಳಿಗೋಟು	26999-36500	ಯಲ್ಲಾಪುರ	
ಕೋಕ	32989-33399	ಚಾಲಿ	41509-48259	ಬಿಳಿಗೋಟು	21600-38800
ರಾಶಿ	60029-60029	ಕೋಕ	24819-33889	ಚಾಲಿ	39059-50011
ಸಿಪ್ಪೆಗೋಟು	17099-23919	ಕೆಂಪುಗೋಟು	33099-33099	ಕೋಕ	12099-28812
ಶಿವಮೊಗ್ಗ		ರಾಶಿ	46000-62099	ಕೆಂಪುಗೋಟು	25188-37969
ಬೆಟ್ಟೆ	54619-78569	ತಟ್ಟಿಬೆಟ್ಟೆ	36799-45099	ರಾಶಿ	52500-66799
		ಶಿರಸಿ		ತಟ್ಟಿಬೆಟ್ಟೆ	39115-51421

ಮೂವರು ಉಗ್ರರ ಹತ್ಯೆ: ಇಸ್ರೇಲ್

ಜೆರುಸಲೇಂ (ಎಪಿ): ವೆಸ್ಟ್ ಬ್ಯಾಂಕ್‌ನ ಉತ್ತರ ಭಾಗದಲ್ಲಿ ನಡೆಸಿದ ಕಾರ್ಯಾಚರಣೆಯಲ್ಲಿ ಮೂವರು ಪ್ಯಾಲೆಸ್ಟೀನಿಯನ್ ಉಗ್ರರನ್ನು ಮಂಗಳವಾರ ಮುಂಜಾನೆ ಹತ್ಯೆ ಮಾಡಲಾಗಿದೆ ಎಂದು ಇಸ್ರೇಲ್ ತಿಳಿಸಿದೆ.

ಬಂಡುಕೋರರ ಭದ್ರಕೋಟೆ ಎಂದೇ ಬಿಂಬಿತವಾಗಿರುವ ವೆಸ್ಟ್ ಬ್ಯಾಂಕ್‌ನ ಉತ್ತರದ ಜೆನಿನ್ ಪಟ್ಟಣದ ಸನಿಹದ ಗುಹೆಯೊಂದರಿಂದ ಉಗ್ರರು ಹೊರಬರುತ್ತಿದ್ದಂತೆ ಗುಂಡು ಹಾರಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಉಗ್ರರು ದಾಳಿ ನಡೆಸಲು ಯೋಜಿಸಿದ್ದರು ಎಂದಿರುವ ಇಸ್ರೇಲ್, ಹೆಚ್ಚಿನ ಮಾಹಿತಿ ನೀಡಿಲ್ಲ.

ಮುಂಬೈ ಧಾರಣೆ (ಶೇಂಗಾ)

28-10-2025	
ಜಾವಾ 70/80(ಹೊಸ)	10300-10400
ಜಾವಾ 80/90(ಹೊಸ)	9600-9700
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	8400-8500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1415 (1420)
ಒಂದು ವಾರದ ಡೆಲಿವರಿ	1410 (1415)
ಪಾಮ್ ವಾರದ ಡೆಲಿವರಿ	1285 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	-- (1430)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,18,000 (1,20,800)
ಬೆಳ್ಳಿ ಕೆ.ಜಿಗೆ	1,43,000 (1,45,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

'ಶಾಂತಿ ಸಭೆ'ಯಲ್ಲಿ ಮೂಡದ ಒಮ್ಮತ

ಒಂದನೇ ಪುಟದಿಂದ...

ಬಿಗಿ ಭದ್ರತೆ: ಶಾಂತಿ ಸಭೆಯ ಕಾರಣ ಬಿಗಿ ಭದ್ರತೆ ಕಲ್ಪಿಸಲಾಗಿತ್ತು. ಸಂಘಟನೆಗಳ ನಿಗದಿತ ಪ್ರತಿನಿಧಿ ಹೊರತುಪಡಿಸಿ ಅನ್ಯರಿಗೆ ಸಭೆಯಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಿಲ್ಲ. ಪೊಲೀಸ್ ಆಯುಕ್ತ ಶರಣಪ್ಪ ಎಸ್.ಡಿ., ಜಿಲ್ಲಾ ಪಂಚಾಯಿತಿ ಸಿಇಒ ಭಂವರ್‌ಸಿಂಗ್ ಮೀನಾ, ಎಸ್‌ಪಿ ಅಡ್ಡೂರು ಶ್ರೀನಿವಾಸಲು ಹಲವು ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

> ನಾವು ಶಾಂತಿಯುತವಾಗಿ ನಿಲುವು ವ್ಯಕ್ತಪಡಿಸಿದೆವು. ಬೇರೆಯವರು ಕ್ರಾಂತಿಯ ಮಾತನಾಡಿದ್ದಾರೆ. ಇವರೆಲ್ಲರೂ ಸಚಿವ ಪ್ರಿಯಾಂಕ್ ಖರ್ಗೆ ಕಡೆಯ ಜನರು
> **ಅಂಬಾರಾಯ ಅಷ್ಟಗಿ,** ಆರ್‌ಎಸ್‌ಎಸ್ ಪ್ರತಿನಿಧಿಸಿದ್ದ ಬಿಜೆಪಿ ಮುಖಂಡ

ಬಿಗುವಿನ ಸ್ಥಿತಿ, ಧಿಕ್ಕಾರದ ಘೋಷಣೆ

'ಆರ್‌ಎಸ್‌ಎಸ್‌ನವರು ಲಾಠಿ ಬಿಟ್ಟು, ತ್ರಿವರ್ಣ ಧ್ವಜ, ಸಂವಿಧಾನ ಪ್ರತಿ ಹಿಡಿದು ಪಥಸಂಚಲನ ನಡೆಸಿದರೆ ಸಭೆಯ ದಿನಾಂಕ, ಸಮಯ ಬದಲಿಸಿಕೊಳ್ಳುವ ಬಗ್ಗೆ ಚಿಂತಿಸಲಾಗುವುದು' ಎಂದು ಕೆಲವು ಸಂಘಟನೆಗಳ ಮುಖಂಡರು ಹೇಳಿದರು.

ಆರ್‌ಎಸ್‌ಎಸ್ ಪ್ರತಿನಿಧಿಸಿದ್ದ ಬಿಜೆಪಿ ಮುಖಂಡ ಅಂಬಾರಾಯ ಅಷ್ಟಗಿ, 'ಪ್ರತಿಭಟನೆ–ಪಥಸಂಚಲನ ನಡೆಸಲು ಬಾಬಾಸಾಹೇಬರು ಬರೆದ ಸಂವಿಧಾನದಲ್ಲೇ ಅವಕಾಶವಿದೆ. ಲಾಠಿ ಬಿಟ್ಟುಬನ್ನಿ ಎನ್ನಲು ನೀವ್ಯಾರು' ಎಂದು ಪ್ರಶ್ನಿಸಿದರು. ಇದಕ್ಕೆ ವಿವಿಧ ಮುಖಂಡರಿಂದ ವಿರೋಧ ವ್ಯಕ್ತವಾಯಿತು.

ಈ ಹಂತದಲ್ಲಿ ವಾಗ್ವಾದ ನಡೆದು ಸಭೆಯೇ ಬರಖಾಸ್ತುಗೊಂಡಿತು ಎಂದು ಮುಖಂಡರು ತಿಳಿಸಿದ್ದಾರೆ. ಸಭೆಯ ಬಳಿಕ ಹೊರ ಬಂದ ದಲಿತ ಸಂಘಟನೆಗಳ ಮುಖಂಡರು ಅಂಬಾರಾಯ ಅಷ್ಟಗಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

> ಆರ್‌ಎಸ್‌ಎಸ್ ನವರು ಚಿತ್ತಾಪುರದಲ್ಲಿ ಏನು ಹಿಡಿದು, ಯಾವ ದಿನ ಪಥಸಂಚಲನ ನಡೆಸುತ್ತಾರೋ ಅದಕ್ಕೆ ಉತ್ತರ ನೀಡಲು ನಾವೂ ಅದೇ ದಿನ ಸನ್ನದ್ಧರಾಗಿರುತ್ತೇವೆ
> **ರಾಜೇಂದ್ರ ಕಪನೂರು,** ಗೌರವಾಧ್ಯಕ್ಷ, ರಾಜ್ಯ ಛಲವಾದಿ ಕ್ಷೇಮಾಭಿವೃದ್ಧಿ ಸಂಘ

> ಚಿತ್ತಾಪುರದಲ್ಲಿ ಪಥಸಂಚಲನ ನಡೆಸುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್‌ನ ಕಲಬುರಗಿ ಪೀಠದ ತೀರ್ಪಿಗೆ ಅನುಗುಣವಾಗಿ ನಡೆಯುತ್ತೇವೆ
> **ಅಶೋಕ ಪಾಟೀಲ,** ಆರ್‌ಎಸ್‌ಎಸ್ ಜಿಲ್ಲಾ ಸಂಘಚಾಲಕ

ವಿದ್ವತ್ ಮಿಂಚು: ಕರ್ನಾಟಕಕ್ಕೆ 3 ಅಂಕ

ಗೋವಾ ವಿರುದ್ಧದ ರಣಜಿ ಪಂದ್ಯ ನಿರೀಕ್ಷೆಯಂತೆ ಡ್ರಾದಲ್ಲಿ ಅಂತ್ಯ

• ಜಿ.ಶಿವಕುಮಾರ

ಶಿವಮೊಗ್ಗ: ನಿರೀಕ್ಷೆಯಂತೆ ಕರ್ನಾಟಕ ತಂಡಕ್ಕೆ ಮೊದಲ ಇನಿಂಗ್ಸ್ ಮುನ್ನಡೆ ದೊರೆಯಿತು. ಆದರೆ, ಗೆಲುವು ದಕ್ಕಿಸಿಕೊಳ್ಳುವ ದಿಟ್ಟತನ ದೊಂದಿಗೆ ಗೋವಾ ಮೇಲೆ ಫಾಲೋ ಆನ್ ಹೇರಿ, ಅಂತಿಮ ದಿನ ದಾಟದ ಎರಡನೇ ಅವಧಿವರೆಗೂ ನಡೆಸಿದ ಪ್ರಯತ್ನ ಮಾತ್ರ ಫಲಿಸಲಿಲ್ಲ.

ಮಂಥನ್ ಖುತ್ಕರ್ (ಔಟಾಗದೆ 55; 135ಎ, 5X4) ಮತ್ತು ಅಭಿನವ್ ತೇಜ್‌ರಾಣಾ (ಔಟಾಗದೆ 73; 126ಎ, 9X4) ದಿಟ್ಟ ಆಟ ಆಡಿದ್ದರಿಂದ ಬೇರೆ ದಾರಿಯೇ ಕಾಣದಂತಾದ ಆತಿಥೇಯರು ನವುಲೆಯ ಕೆಎಸ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರ ಮುಕ್ತಾಯಗೊಂಡ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಡ್ರಾ ಸಾಧಿಸಿದರು. ಇದರೊಂದಿಗೆ ಖಾತೆಗೆ ಮೂರು ಅಂಕ ಸೇರ್ಪಡೆ ಮಾಡಿಕೊಂಡು 'ಬಿ' ಗುಂಪಿನ ಪಾಯಿಂಟ್ಸ್ ಪಟ್ಟಿಯಲ್ಲಿ ನಾಲ್ಕನೇ ಸ್ಥಾನ ಗಳಿಸಿದರು. ಇಲ್ಲಿ ಒಂದು ಅಂಕವನ್ನಷ್ಟೇ ಪಡೆದ ಸ್ನೇಹಲ್ ಕೌತಂಕರ್ ಪಡೆ ಎರಡನೇ ಸ್ಥಾನಕ್ಕಿಳಿಯಿತು.

ಮಯಂಕ್ ಅಗರವಾಲ್ ಬಳಗ ಮೊದಲ ಇನಿಂಗ್ಸ್‌ನಲ್ಲಿ ಗಳಿಸಿದ್ದ 371 ರನ್‌ಗಳಿಗೆ ಉತ್ತರವಾಗಿ ಗೋವಾ 87.2 ಓವರ್‌ಗಳಲ್ಲಿ 217 ರನ್‌ಗಳಿಗೆ ಆಲೌಟ್ ಆಯಿತು. ಫಾಲೋ ಆನ್ ಪಡೆದು ಎರಡನೇ ಇನಿಂಗ್ಸ್ ಆರಂಭಿಸಿದ ಈ ತಂಡ 46 ಓವರ್‌ಗಳಲ್ಲಿ 1 ವಿಕೆಟ್‌ಗೆ 143ರನ್ ಗಳಿಸಿತು.

ದಿನದ ಮೊದಲ ಒಂದು ಗಂಟೆಯಲ್ಲೇ ಗೋವಾ ಆಲೌಟ್ ಆಗಿದ್ದರಿಂದ ಕರ್ನಾಟಕ ಗೆಲುವಿನ ಕನಸು ಕಂಡಿತ್ತು. ಎರಡನೇ ಇನಿಂಗ್ಸ್‌ನ 6ನೇ ಓವರ್‌ನ ಎರಡನೇ ಎಸೆತದಲ್ಲಿ ವೈಶಾಖ್, ಸುಯಶ್ ಪ್ರಭುದೇಸಾಯಿ (13: 15ಎ, 2X4) ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದಾಗ ಈ ಕನಸಿಗೆ ರೆಕ್ಕೆಯೂ ಮೂಡಿತ್ತು. ಆದರೆ ಮಂಥನ್ ಮತ್ತು ಅಭಿನವ್ ರಕ್ಷಣಾತ್ಮಕ ಆಟದ ಮೂಲಕ ಆತಿಥೇಯರ ಲೆಕ್ಕಾಚಾರಗಳನ್ನು ತಲೆಕೆಳಗಾಗಿಸಿದರು. ಇವರು ಮುರಿಯದ 2ನೇ ವಿಕೆಟ್ ಜೊತೆಯಾಟ ಯಲ್ಲಿ 244 ಎಸೆತಗಳಲ್ಲಿ 123ರನ್ ಗಳಿಸಿದರು.

ವಿದ್ವತ್ ಮಿಂಚು: ಕರ್ನಾಟಕ ತಂಡದ ಮಧ್ಯಮ ವೇಗಿ ವಿದ್ವತ್ ಕಾವೇರಪ್ಪ (51ಕ್ಕೆ5) ದಿನದಾಟದ ಆರಂಭದಲ್ಲಿ ಮಿಂಚು ಹರಿಸಿದರು. ತಾವು ಎಸೆದ ಮೊದಲ ಓವರ್‌ನಲ್ಲೇ ಅರ್ಜುನ್ ತೆಂಡೂಲ್ಕರ್ (47; 122ಎ, 6X4, 1X6) ವಿಕೆಟ್ ಉರುಳಿಸಿ ಸಂಭ್ರಮಿಸಿದರು. ಸೋಮವಾರ ಆತಿಥೇಯರನ್ನು ಕಾಡಿದ್ದ ಅರ್ಜುನ್, ವಿದ್ವತ್ ಪ್ರಯೋಗಿಸಿದ ಬೌನ್ಸರ್ ಅಸ್ತ್ರಕ್ಕೆ ಅವಾಕ್ಕಾದರು. ವಿಕೆಟ್ ಕೀಪರ್ ಕೆ.ಎಲ್. ಶ್ರೀಜಿತ್‌ಗೆ ಕ್ಯಾಚಿತ್ತರು.

ಆದರೆ, ಮೋಹಿತ್ ರೇಡ್ಕರ್ (53; 77ಎ, 3X4, 3X6) ಪ್ರವಾಸಿ ಪಡೆಗೆ ಆಸರೆಯಾಗುವ ಲಕ್ಷಣ ತೋರಿದ್ದರು. ಕರ್ನಾಟಕದ ಬೌಲರ್‌ಗಳನ್ನು ಕೆಲ ಹೊತ್ತು ದಂಡಿಸಿದರು. ವೈಶಾಖ್ ವಿಜಯ ಕುಮಾರ್ ಹಾಕಿದ 86ನೇ ಓವರ್‌ನ 5ನೇ ಎಸೆತವನ್ನು ಎಕ್ಸ್ಟ್ರಾ ಕವರ್‌ನತ್ತ ಸಿಕ್ಸರ್ ಎತ್ತಿ ಅರ್ಧಶತಕ ಪೂರೈಸಿದರು.

ಮರು ಓವರ್‌ನಲ್ಲಿ ವಿದ್ವತ್ ಎರಡು ವಿಕೆಟ್‌ಗಳನ್ನು ಕೆಡವಿ ಗೋವಾ ತಂಡಕ್ಕೆ ಬಲವಾದ ಪೆಟ್ಟು ನೀಡಿದರು. ಎರಡನೇ ಎಸೆತದಲ್ಲಿ ಮೋಹಿತ್ ವಿಕೆಟ್ ಉರುಳಿಸಿದ ಅವರು, 5ನೇ ಎಸೆತದಲ್ಲಿ ವಿಕೆಟ್ ಕೀಪರ್ ಸಮರ್ ದುಭಾಶಿಗೆ (6) ಪೆವಿಲಿಯನ್ ಹಾದಿ ತೋರಿಸಿದರು.

ವೈಶಾಖ್ 88ನೇ ಓವರ್‌ನಲ್ಲಿ ದಾಳಿಗಿಳಿದಾಗ ಫಾಲೋ ಆನ್ ತಪ್ಪಿಸಿ ಕೊಳ್ಳಲು ಗೋವಾ ತಂಡಕ್ಕೆ 8 ರನ್ ಬೇಕಿದ್ದವು. ಮೊದಲ ಎಸೆತವನ್ನು ಬೌಂಡರಿಗಟ್ಟಿದ ವಿ.ಕೌಶಿಕ್, ಮರು ಎಸೆತದಲ್ಲಿ ಬೌಲ್ಡ್ ಆದರು. ಆಗ ಕರ್ನಾಟಕದ ಪಾಳಯದಲ್ಲಿ ಸಂತಸದ ಹೊನಲು ಹರಿಯಿತು.

ಕರುಣೆ ತೋರಿದ ವರುಣ: ಶಿವಮೊಗ್ಗದಲ್ಲಿ ಸೋಮವಾರ ಮತ್ತು ಮಂಗಳವಾರ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ್ದರಿಂದ ಆತಿಥೇಯರಲ್ಲಿ ಆತಂಕವೂ ಮನೆ ಮಾಡಿತ್ತು. ಆದರೆ ವರುಣ ಕರುಣೆ ತೋರಿದ್ದರಿಂದ ಕರ್ನಾಟಕದ ಇನಿಂಗ್ಸ್ ಮುನ್ನಡೆ ಹಾದಿ ಸುಗಮವಾಯಿತು.



ಗೋವಾ ತಂಡದ ಮೋಹಿತ್ ಅವರ ವಿಕೆಟ್ ಪಡೆದು ಸಂಭ್ರಮಿಸಿದ ಕರ್ನಾಟಕದ ವಿದ್ವತ್ ಕಾವೇರಪ್ಪ ಚಿತ್ರ: ಕೃಷ್ಣ ಕುಮಾರ್ ಪಿ.ಎಸ್

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 110.1 ಓವರ್‌ಗಳಲ್ಲಿ 371. ಗೋವಾ: 87.2 ಓವರ್‌ಗಳಲ್ಲಿ 217 (ಸೋಮವಾರ 77 ಓವರ್‌ಗಳಲ್ಲಿ 6 ವಿಕೆಟ್‌ಗೆ 171)

ಅರ್ಜುನ್ ತೆಂಡೂಲ್ಕರ್ ಸಿ ಶ್ರೀಜಿತ್ ಬಿ ವಿದ್ವತ್ 47 (122ಎ, 4X6, 6X1)
ಮೋಹಿತ್ ರೆಡ್ಕರ್ ಸಿ ಶ್ರೀಜಿತ್ ಬಿ ವಿದ್ವತ್ 53 (77ಎ, 4X3, 6X3)
ಸಮರ್ ದುಭಾಶಿ ಸಿ ಸ್ಮರಣ್ ಬಿ ವಿದ್ವತ್ 6 (27ಎ)
ಕೌಶಿಕ್ ವಿ. ಬಿ ವೈಶಾಖ್ ವಿಜಯಕುಮಾರ್ 5 (4ಎ, 4X1)
ವಿಜೇಶ್ ಪ್ರಭುದೇಸಾಯಿ ಔಟಾಗದೆ 0 (1ಎ)
ಇತರೆ: 9 (ನೋಬಾಲ್ 1, ಬೈ 3, ಲೆಗ್ ಬೈ 5).
ವಿಕೆಟ್ ಪತನ: 7–185 (ಅರ್ಜುನ್; 78.6), 8–212 (ಮೋಹಿತ್; 86.2), 9–213 (ಸಮರ್; 86.5), 10–217 (ಕೌಶಿಕ್; 87.2).
ಬೌಲಿಂಗ್: ವಿದ್ವತ್ ಕಾವೇರಪ್ಪ 23–6–51–5, ಅಭಿಲಾಷ್ ಶೆಟ್ಟಿ 22–3–74–3, ಯಶೋವರ್ಧನ್ ಪರಂತಾಪ್ 16–6–18–1, ವೈಶಾಖ್ ವಿಜಯಕುಮಾರ್ 18.2–2–53–1, ಶ್ರೇಯಸ್ ಗೋಪಾಲ್ 8–2–13–0.

ಎರಡನೇ ಇನಿಂಗ್ಸ್: ಗೋವಾ: 46 ಓವರ್‌ಗಳಲ್ಲಿ 1 ವಿಕೆಟ್‌ಗೆ 143

ಮಂಥನ್ ಖುತ್ಕರ್ ಔಟಾಗದೆ 55 (135ಎ, 4X5)
ಸುಯಶ್ ಪ್ರಭುದೇಸಾಯಿ ಎಲ್‌ಬಿಡಬ್ಲ್ಯು ವೈಶಾಖ್ 13 (15ಎ, 4X2)
ಅಭಿನವ್ ತೇಜ್‌ರಾಣಾ ಔಟಾಗದೆ 73 (126ಎ, 4X9)
ಇತರೆ: 2 (ಲೆಗ್ ಬೈ 2)
ವಿಕೆಟ್ ಪತನ: 1–20 (ಸುಯಶ್; 5.2).
ಬೌಲಿಂಗ್: ವಿದ್ವತ್ ಕಾವೇರಪ್ಪ 8–2–12–0, ವೈಶಾಖ್ ವಿಜಯಕುಮಾರ್ 8–1–33–1, ಅಭಿಲಾಷ್ ಶೆಟ್ಟಿ 7–1–20–0, ಯಶೋವರ್ಧನ್ ಪರಂತಾಪ್ 7–2–20–0, ಶ್ರೇಯಸ್ ಗೋಪಾಲ್ 9–1–28–0, ಎಸ್.ಜೆ.ನಿಕಿನ್ ಜೋಸ್ 7–0–28–0.
ಪಂದ್ಯಶ್ರೇಷ್ಠ: ಕರುಣ್ ನಾಯರ್

ಫಲಿತಾಂಶ: ಪಂದ್ಯ ಡ್ರಾ. ಇನಿಂಗ್ಸ್ ಮುನ್ನಡೆ ಗಳಿಸಿದ ಕರ್ನಾಟಕಕ್ಕೆ 3 ಪಾಯಿಂಟ್.

ನ.30ರಂದು ಕೆಎಸ್‌ಸಿಎ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಚುನಾವಣೆಯು ನವೆಂಬರ್ 30ರಂದು ನಡೆಯಲಿದೆ.

'ಅಕ್ಟೋಬರ್ 14ರಂದು ನಡೆದಿದ್ದ ಸಭೆಯಲ್ಲಿ ಚುನಾವಣೆಯ ದಿನಾಂಕ ವನ್ನು ನಿರ್ಧರಿಸಲಾಗಿತ್ತು. ತದನಂತರ ಅಕ್ಟೋಬರ್ 25 ರಂದು ನಡೆದ ಸಭೆಯಲ್ಲಿ ಚುನಾವಣೆ ದಿನಾಂಕವನ್ನು ಮರು ಉಲ್ಲೇಖಿಸಲಾಯಿತು. ನವೆಂಬರ್ 30ರಂದು (ಭಾನುವಾರ) ಚುನಾವಣೆ ನಡೆಯಲಿದೆ' ಎಂದು ಕೆಎಸ್‌ಸಿಎ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶುಭೇಂದು ಘೋಷ್ ಅವರು ಮಂಗಳವಾರ ಇಮೇಲ್ ಮೂಲಕ ನೀಡಿರುವ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಘುರಾಮ್ ಭಟ್ ಅಧ್ಯಕ್ಷತೆ ಸಮಿತಿಯ ಕಾರ್ಯಾವಧಿಯು ಸೆಪ್ಟೆಂಬರ್ 30ಕ್ಕೆ ಕೊನೆಗೊಂಡಿತ್ತು.

ಕೆಎಸ್‌ಸಿಎ ಅಧಿಕಾರದ ಚುಕ್ಕಾಣಿ ಹಿಡಿಯುವ ಆಕಾಂಕ್ಷಿಯಾಗಿರುವ ಭಾರತ ತಂಡದ ಮಾಜಿ ಆಟಗಾರ ವೆಂಕಟೇಶ್ ಪ್ರಸಾದ್, ಕೆಎಸ್‌ಸಿಎ ಮಾಜಿ ಪದಾಧಿಕಾರಿ ವಿನಯ್ ಮೃತ್ಯುಂಜಯ ಮತ್ತು ಅವರ ತಂಡದವರು ಶೀಘ್ರವೇ ಚುನಾವಣೆ ದಿನಾಂಕ ಪ್ರಕಟಿಸಬೇಕು ಎಂದು ಸೋಮವಾರ ನಡೆದಿದ್ದ ಸುದ್ದಿ ಗೋಷ್ಠಿಯಲ್ಲಿ ಆಗ್ರಹಿಸಿದ್ದರು.

'ನಿಯಮಾವಳಿಯಲ್ಲಿರುವ 9 ವರ್ಷ ಅಧಿಕಾರ ನಿರ್ವಹಣೆಯ ನಂತರ ಚುನಾವಣೆಗೆ ಸ್ಪರ್ಧಿಸು ವಂತಿಲ್ಲ ಎಂಬ ನಿಯಮವನ್ನು ತಪ್ಪಾಗಿ ವ್ಯಾಖ್ಯಾನಿಸುವ ಮೂಲಕ ಕೆಲವರನ್ನು ಅನರ್ಹಗೊಳಿಸಲಾಗುತ್ತಿದೆ' ಎಂದೂ ಪ್ರಸಾದ ನೇತೃತ್ವದ ತಂಡವು ಆರೋಪಿಸಿತ್ತು.

ಇದಕ್ಕೆ ಪ್ರತಿಕ್ರಿಯಿಸಿರುವ ಸಿಇಒ, 'ಆರೋಪಗಳು ಸತ್ಯವಲ್ಲ. ಯಾವುದೇ ಅರ್ಹ ವ್ಯಕ್ತಿಗಳನ್ನು ಚುನಾವಣೆಯಲ್ಲಿ ಸ್ಪರ್ಧಿಸದಂತೆ ತಡೆಯೊಡ್ಡಿಲ್ಲ' ಎಂದು ಪ್ರಕಟಣೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

'ನಿಯಮಾವಳಿಗೆ ಸಂಸ್ಥೆಯು ಬದ್ಧವಾಗಿದೆ. ಕ್ರಿಕೆಟಿಗರಿಗೆ ಬಿಸಿಸಿಐ ಟೂರ್ನಿಗಳಲ್ಲಿ ಯಾವುದೇ ಅವಕಾಶ ಗಳೂ ಕೈತಪ್ಪಿಹೋಗದಂತೆ ನೋಡಿ ಕೊಳ್ಳುವುದು ನಮ್ಮ ಆದ್ಯತೆ. ಯಾವುದೇ ವ್ಯಕ್ತಿಗಿಂತ ಸಂಸ್ಥೆ ದೊಡ್ಡದು. ಬಿಸಿಸಿಐನಲ್ಲಿ ಕೆಎಸ್‌ಸಿಎ ತನ್ನ ಸದಸ್ಯತ್ವವನ್ನು ಕಳೆದು ಕೊಳ್ಳದಂತೆ ನೋಡಿಕೊಳ್ಳುವುದು ನಮ್ಮ ಪರಮೋಚ್ಚ ಗುರಿ' ಎಂದೂ ತಿಳಿಸಿದ್ದಾರೆ.

ನಿಯಮದ ಪ್ರಕಾರ ರಾಜ್ಯ ಸಂಸ್ಥೆ ಯಲ್ಲಿ ಆಡಳಿತ ಸಮಿತಿಯ ಸದಸ್ಯರಾಗಿ ಒಂಬತ್ತು ಮತ್ತು ಪದಾಧಿಕಾರಿಯಾಗಿ ಒಂಬತ್ತು ವರ್ಷ ಕಾರ್ಯನಿರ್ವಹಿಸುವ ಅವಕಾಶವಿದೆ ಎಂದು ವೆಂಕಟೇಶ್ ಪ್ರಸಾದ್ ಅವರ ಬಣ ಪ್ರತಿಪಾದಿಸು ತ್ತಿದೆ. ಆದರೆ ಆಡಳಿತ ಸಮಿತಿ ಸದಸ್ಯರಾಗಿ, ಪದಾಧಿಕಾರಿಯಾಗಿ ಒಟ್ಟು ಒಂಬತ್ತು ವರ್ಷ ಕಾರ್ಯನಿರ್ವಹಿಸಿದ್ದರೆ ಮತ್ತೆ ಚುನಾವಣೆಗೆ ಸ್ಪರ್ಧಿಸುವಂತಿಲ್ಲ. ರಾಜ್ಯ ಸಂಸ್ಥೆಯಲ್ಲಿ ಯಾವುದೇ ಅಧಿಕಾರ ಪಡೆ ಯುವಂತಿಲ್ಲ ಎಂದು ಹಾಲಿ ಸಮಿತಿಯು ನಿಯಮವನ್ನು ವಿವರಿಸಿದೆ.

ನಾಗಾಲ್ಯಾಂಡ್ ಆಟಗಾರನಿಗೆ ತಮ್ಮ ಪ್ರಶಸ್ತಿ ಕೊಟ್ಟ ಪಾಲ್

ಬೆಂಗಳೂರು: ದೇಶಿ ಕ್ರಿಕೆಟ್‌ನಲ್ಲಿ ಅಂಬೆಗಾಲಿಡುತ್ತಿರುವ ನಾಗಾಲ್ಯಾಂಡ್ ತಂಡವು ಬಲಾಢ್ಯ ತಮಿಳುನಾಡು ಎದುರು ದಿಟ್ಟ ಆಟವಾಡಿ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯವನ್ನು ಡ್ರಾ ಮಾಡಿಕೊಂಡಿತು. ಇದರೊಂದಿಗೆ ಎದುರಾಳಿ ತಂಡದ ಆಟಗಾರರೂ ಸೇರಿದಂತೆ ಹಲವರ ಮನ ಗೆಲ್ಲುವಲ್ಲಿ ನಾಗಾಲ್ಯಾಂಡ್ ಯಶಸ್ವಿಯಾಯಿತು.



ಡೆಗಾ ನಿಶ್ಚಲ್

ಮಂಗಳವಾರ ಮುಕ್ತಾಯವಾದ ಈ ಹಣಾಹಣಿಯಲ್ಲಿ ತಮಿಳುನಾಡು ತಂಡದ ಪ್ರದೋಷ್ ಪಾಲ್ (ಔಟಾಗದೇ 201; 314ಎ) ಅವರು ತಮಗೆ ಲಭಿಸಿದ ಪಂದ್ಯಶ್ರೇಷ್ಠ ಪ್ರಶಸ್ತಿಯನ್ನು ನಾಗಾಲ್ಯಾಂಡ್‌ನ ಇಮ್ಲಾವತಿ ಲೆಮತೂರ್ (146; 287ಎ, 4X20, 6X3) ಅವರಿಗೆ ನೀಡಿದರು. ಪ್ರದೋಷ್ ಅವರ ನಡೆಯು ಅಪಾರ ಮೆಚ್ಚುಗೆಗೆ ಪಾತ್ರವಾಯಿತು.

ತಮಿಳುನಾಡು ತಂಡವು ಮೊದಲ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗಳಿಗೆ 512 ರನ್ ಗಳಿಸಿತ್ತು. ಅದಕ್ಕುತ್ತರ-ವಾಗಿ ನಾಗಾಲ್ಯಾಂಡ್ 157.4 ಓವರ್‌ಗಳಲ್ಲಿ 446 ರನ್ ಗಳಿಸಿತು. ತಮಿಳುನಾಡು ತಂಡದ ಅನುಭವಿ ಬೌಲರ್‌ಗಳಾದ ಗುರ್ಜಪನೀತ್ ಸಿಂಗ್ (75ಕ್ಕೆ4), ಚಂದ್ರಶೇಖರ್ (69ಕ್ಕೆ3) ಅವರ ಬೌಲಿಂಗ್ ಎದುರಿಸಿ ನಿಂತ ಇಮ್ಲಾವತಿ ಅವರು ತಂಡವು ದೀರ್ಘ ಇನಿಂಗ್ಸ್ ಆಡಲು ಕಾರಣರಾದರು. ಅವರಿಗೆ ಯುಗಂಧರ್ ಸಿಂಗ್ (67; 180ಎ) ಉತ್ತಮ ಜೊತೆ ನೀಡಿದರು.

ಇಮ್ಲಾವತಿ ಮತ್ತು ಕನ್ನಡಿಗ ಡೆಗಾ ನಿಶ್ಚಲ್ (175; 376 ಎ, 4x25) ಅವರು 6ನೇ ವಿಕೆಟ್ ಜೊತೆಯಾಟದಲ್ಲಿ 230 ರನ್ ಸೇರಿಸಿದರು. ಇದರಿಂದಾಗಿ ತಮಿಳುನಾಡು ತಂಡಕ್ಕೆ ಜಯದ ಅವಕಾಶ ಸಿಗಲಿಲ್ಲ.

ನಗರದ ಹೊರವಲಯದಲ್ಲಿನ ಬಿಸಿಸಿಐ–ಸಿಒಇ ಕ್ರೀಡಾಂಗಣ ದಲ್ಲಿ ನಡೆದ ಈ ಪಂದ್ಯವು ಡ್ರಾ ಆಯಿತು. ತಮಿಳುನಾಡು ಮೂರು ಮತ್ತು ನಾಗಾಲ್ಯಾಂಡ್ ಒಂದು ಅಂಕ ಪಡೆಯಿತು.

ಚಿಟಿಕೆ ಸುದ್ದಿ

ಶ್ರೇಯಸ್ ಚೇತರಿಕೆ



ಸಿಡ್ನಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶ್ರೇಯಸ್ ಅಯ್ಯರ್ –'ಎಕ್ಸ್' ಚಿತ್ರ

ನವದೆಹಲಿ (ಪಿಟಿಐ): ಆಸ್ಟ್ರೇಲಿಯಾ ಎದುರಿನ ಪಂದ್ಯದಲ್ಲಿ ಕ್ಯಾಚ್ ಪಡೆಯು ವಾಗ ಆಯತಪ್ಪಿ ಬಿದ್ದು ಪಕ್ಕೆಲುಬಿಗೆ ಗಾಯಗೊಂಡಿದ್ದ ಭಾರತ ಏಕದಿನ ಕ್ರಿಕೆಟ್ ತಂಡದ ಉಪನಾಯಕ ಶ್ರೇಯಸ್ ಅಯ್ಯರ್ ಅವರ ಆರೋಗ್ಯ ಸ್ಥಿರವಾಗಿದೆ. ಅವರನ್ನು ತೀವ್ರ ನಿಗಾ ಘಟಕದಿಂದ (ಐಸಿಯು) ಸ್ಥಳಾಂತರಿಸಲಾಗಿದೆ ಎಂದು ಬಿಸಿಸಿಐ ಮಂಗಳವಾರ ತಿಳಿಸಿದೆ.

'ಗಾಯವನ್ನು ತ್ವರಿತವಾಗಿ ಪತ್ತೆಹಚ್ಚಿ ಆಂತರಿಕ ರಕ್ತಸ್ರಾವವನ್ನು ನಿಲ್ಲಿಸಲಾಗಿದೆ. ತಜ್ಞ ವೈದ್ಯರ ನಿಗಾದಲ್ಲಿ ಚಿಕಿತ್ಸೆ ಮುಂದುವರಿದಿದ್ದು, ಶ್ರೇಯಸ್ ಅವರು ಚೇತರಿಸಿಕೊಳ್ಳುತ್ತಿದ್ದಾರೆ' ಎಂದು 'ಎಕ್ಸ್'ನಲ್ಲಿ ಹೇಳಿದೆ.

ಅಯ್ಯರ್ ಅವರ ಕುಟುಂಬದವರು ಸಿಡ್ನಿಗೆ ಶೀಘ್ರದಲ್ಲೇ ತೆರಳುವ ಸಾಧ್ಯತೆ ಇದೆ ಎಂದು ಮೂಲಗಳು ಪಿಟಿಐಗೆ ತಿಳಿಸಿವೆ.

ಸ್ಮೃತಿ ಜೀವನಶ್ರೇಷ್ಠ ರೇಟಿಂಗ್

ದುಬೈ (ಪಿಟಿಐ): ಭಾರತ ತಂಡದ ಆರಂಭಿಕ ಆಟಗಾರ್ತಿ ಸ್ಮೃತಿ ಮಂದಾನ ಅವರು ಐಸಿಸಿ ಏಕದಿನ ಕ್ರಿಕೆಟ್ ಬ್ಯಾಟಿಂಗ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಭದ್ರಪ-ಡಿಸಿಕೊಂಡಿದ್ದಾರೆ.



ತವರಿನಲ್ಲಿ ನಡೆಯುತ್ತಿರುವ ವಿಶ್ವಕಪ್ ಟೂರ್ನಿಯಲ್ಲಿ ಮಿಂಚುತ್ತಿರುವ ಅವರು ತಮ್ಮ ವೃತ್ತಿಜೀವನದಲ್ಲೇ ಅತ್ಯುತ್ತಮ ರೇಟಿಂಗ್ ಪಾಯಿಂಟ್ಸ್ ಗಳಿಸಿದ್ದಾರೆ.

29 ವರ್ಷದ ಎಡಗೈ ಬ್ಯಾಟರ್ ಮಂದಾನ ತಮ್ಮ ಕೊನೆಯ ಎರಡು ಪಂದ್ಯಗಳಲ್ಲಿ ಕ್ರಮವಾಗಿ ನ್ಯೂಜಿಲೆಂಡ್ ವಿರುದ್ಧ 109 ರನ್ ಮತ್ತು ಬಾಂಗ್ಲಾದೇಶ ವಿರುದ್ಧ ಔಟಾಗದೇ 34 ರನ್ ಗಳಿಸಿದ್ದಾರೆ. ಇದರೊಂದಿಗೆ ರೇಟಿಂಗ್ ಪಾಯಿಂಟ್ಸ್‌ಗಳನ್ನು 828ಕ್ಕೆ ಹೆಚ್ಚಿಸಿಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾಗೆ ಇಂಗ್ಲೆಂಡ್ ಸವಾಲು

ಗುವಾಹಟಿ (ಪಿಟಿಐ): ನಾಲ್ಕು ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡವು ಬುಧವಾರ ನಡೆಯಲಿರುವ ಮಹಿಳಾ ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ.

ಐಸಿಸಿ ಮಹಿಳಾ ಏಕದಿನ ವಿಶ್ವಕಪ್

ದಕ್ಷಿಣ ಆಫ್ರಿಕಾ ತಂಡ ಲೀಗ್ ಹಂತದಲ್ಲಿ ಎರಡು ಪಂದ್ಯಗಳಲ್ಲಿ ದೊಡ್ಡ ಅಂತರ ದಿಂದ ಸೋತಿತ್ತು. ಆ ಪಂದ್ಯ ಗಳಲ್ಲಿ ಸ್ಪಿನ್ ಬೌಲಿಂಗ್ ಎದುರು ಬ್ಯಾಟರ್‌ಗಳು ವಿಫಲರಾಗಿದ್ದರು. ಮೊದಲ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು 69 ರನ್‌ಗಳಿಗೆ ಆಲೌಟ್ ಆಗಿತ್ತು. ಸೋಲುಗಳ ನಂತರ ಪುಟಿದೆದ್ದ ತಂಡವು ನ್ಯೂಜಿಲೆಂಡ್, ಭಾರತ, ಬಾಂಗ್ಲಾದೇಶ, ಶ್ರೀಲಂಕಾ ಮತ್ತು ಪಾಕಿಸ್ತಾನ ಎದುರಿನ ಪಂದ್ಯಗಳಲ್ಲಿ ಜಯಿಸಿತ್ತು.

ಲೀಗ್ ಹಂತದ ಕೊನೆ ಪಂದ್ಯದಲ್ಲಿ ಆಸ್ಟ್ರೇಲಿಯಾ ಎದುರು ಕೂಡ ಸ್ಪಿನ್ನರ್‌ಗಳ ಎದುರು 24 ಓವರ್‌ಗಳಲ್ಲಿ 97 ರನ್‌ಗಳಿಗೆ ಕುಸಿದಿತ್ತು. ಅಲನಾ ಕಿಂಗ್ ಲೆಗ್‌ಸ್ಪಿನ್ ಮೋಡಿಯನ್ನು ಅಂದಾಜು ಮಾಡುವಲ್ಲಿ ಆಟಗಾರ್ತಿಯರು ಎಡವಿದ್ದರು.

ದಕ್ಷಿಣ ಆಫ್ರಿಕಾ ತಂಡದ ಈ ದೌರ್ಬಲ್ಯ ವನ್ನು ತನ್ನ ಗೆಲುವಿನ ಮೆಟ್ಟಿಲನ್ನಾಗಿ ಬಳಸಿ ಕೊಳ್ಳುವತ್ತ ಇಂಗ್ಲೆಂಡ್ ಚಿತ್ತ ನೆಟ್ಟಿದೆ. ತಂಡದ ಸ್ಪಿನ್ ಬೌಲಿಂಗ್ ಆಲ್‌ರೌಂಡರ್ ಗಳಾದ ಸೋಫಿ ಎಕ್ಲೆಸ್ಟೋನ್, ಲಿನ್ಸೆ ಸ್ಮಿತ್ ಮತ್ತು ಚಾರ್ಲಿ ಡೀನ್ ಅವರು ಎದುರಾಳಿ ತಂಡಕ್ಕೆ ಕಠಿಣ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ಆದರೆ ಸೋಫಿ ಅವರು ನ್ಯೂಜಿಲೆಂಡ್ ಎದುರಿನ ಪಂದ್ಯದಲ್ಲಿ ಫೀಲ್ಡಿಂಗ್ ಮಾಡುವಾಗ ಗಾಯಗೊಂಡಿದ್ದರು. ಅವರ ಭುಜಕ್ಕೆ ಪೆಟ್ಟುಬಿದ್ದಿತ್ತು.

'ಅವರ ಎಡಭುಜದ ಗಾಯದ ಎಂಆರ್‌ಐ ಸ್ಕ್ಯಾನ್ ಮಾಡಲಾಗಿದೆ. ಸಣ್ಣ ಪ್ರಮಾಣದ ಗಾಯವಾಗಿದೆ. ಸೂಕ್ತ ಚಿಕಿತ್ಸೆ ನೀಡಲಾಗಿದ್ದು, ಬುಧವಾರ ಬೆಳಿಗ್ಗೆ ಅವರ ಫಿಟ್‌ನೆಸ್ ಕುರಿತು ಸ್ಪಷ್ಟತೆ ದೊರೆಯಲಿದೆ' ಎಂದು ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ (ಇಸಿಬಿ) ಪ್ರಕಟಣೆಯಲ್ಲಿ ತಿಳಿಸಿದೆ.

ದಕ್ಷಿಣ ಆಫ್ರಿಕಾ ನಾಯಕಿ ಲಾರಾ ವೊಲ್ವಾರ್ಟ್ ಒಟ್ಟು 301 ರನ್ ಗಳಿಸಿದ್ದು, ತಂಡದ ಬ್ಯಾಟಿಂಗ್ ವಿಭಾಗದ ಶಕ್ತಿ-ಯಾಗಿದ್ದಾರೆ. ತಾಜ್ಮೀನ್ ಬ್ರಿಟ್ಸ್ ಅವರು ಭಾರತ ಎದುರು ಶತಕ ಬಾರಿಸಿದ್ದರು. ಆದರೆ ನಂತರ ಮೂರು ಪಂದ್ಯಗಳಲ್ಲಿ ಸೊನ್ನೆ ಸುತ್ತಿದ್ದರು. ಸುನೆ ಲೂಸ್ ಮತ್ತು ಮರೈಝನ್ ಕಾಪ್ ಅವರು ಕೂಡ ಸ್ಥಿರ ಪ್ರದರ್ಶನ ನೀಡುತ್ತಿಲ್ಲ. ಇಂಗ್ಲೆಂಡ್ ತಂಡದ ಹೀದರ್ ನೈಟ್ (288) ಮತ್ತು ಎಮಿ ಜೋನ್ಸ್ (220, ಟ್ಯಾಮಿ ಬೇಮೌಂಟ್ (210) ಅವರು ತಮ್ಮ ಉತ್ತಮ ಲಯದಲ್ಲಿ ಮುಂದುವರಿದರೆ ತಂಡದ ಬಲ ಹೆಚ್ಚಲಿದೆ. ಆಲ್‌ರೌಂಡರ್ ನ್ಯಾಟ್ ಶಿವರ್ ಬ್ರಂಟ್ ಅವರ ಆಟವೇ ಇಂಗ್ಲೆಂಡ್‌ಗೆ ಪ್ರಮುಖವಾಗಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3

ಮತ್ತೆ ಮಿಂಚಿದ ಮೊಹಮ್ಮದ್ ಶಮಿ

ಕೋಲ್ಕತ್ತ (ಪಿಟಿಐ): ಭಾರತ ಕ್ರಿಕೆಟ್ ತಂಡಕ್ಕೆ ಮರಳುವ ತವಕದಲ್ಲಿರುವ ಅನುಭವಿ ವೇಗಿ ಮೊಹಮ್ಮದ್ ಶಮಿ ಅವರು ರಣಜಿ ಟ್ರೋಫಿ ಟೂರ್ನಿಯ ಎರಡೂ ಪಂದ್ಯಗಳಲ್ಲಿ ಅಮೋಘವಾಗಿ ಬೌಲಿಂಗ್ ಮಾಡಿ ತಮ್ಮ ಫಿಟ್‌ನೆಸ್ ಸಾಬೀತುಮಾಡಿದ್ದಾರೆ.



ರಣಜಿ ಟ್ರೋಫಿ ಟೂರ್ನಿಯಲ್ಲಿ ಬಂಗಾಳ ತಂಡಕ್ಕೆ ಆಡುತ್ತಿರುವ ಶಮಿ ಅವರು ಗುಜರಾತ್ ವಿರುದ್ಧದ ಪಂದ್ಯದಲ್ಲಿ ಎಂಟು ವಿಕೆಟ್ ಕಬಳಿಸಿದ್ದಾರೆ. ಮೊದಲ ಇನಿಂಗ್ಸ್‌ನಲ್ಲಿ ಮೂರು ವಿಕೆಟ್ ಗಳಿಸಿದ ಅವರು, ಎರಡನೇ ಇನಿಂಗ್ಸ್‌ನಲ್ಲಿ ಐದು ವಿಕೆಟ್‌ಗಳ ಗೊಂಚಲು ಪಡೆದರು. ಅವರ ಆಟದ ನೆರವಿನಿಂದ ಬಂಗಾಳ ತಂಡವು 141 ರನ್‌ಗಳಿಂದ ಗೆದ್ದಿದೆ.

35 ವರ್ಷದ ಶಮಿ ಅವರು ಉತ್ತರಾ ಖಂಡದ ವಿರುದ್ಧದ ಪಂದ್ಯದಲ್ಲೂ ಏಳು ವಿಕೆಟ್ ಪಡೆದಿದ್ದರು. ಸತತ ಎರಡೂ ಪಂದ್ಯಗಳಲ್ಲಿ ಮಿಂಚುವ ಮೂಲಕ ತಮ್ಮ ಫಿಟ್‌ನೆಸ್ ಪ್ರಶ್ನಿಸಿದ್ದ ಬಿಸಿಸಿಐ ಆಯ್ಕೆ ಸಮಿತಿಗೆ ಆಟದ ಮೂಲಕವೇ ಉತ್ತರ ನೀಡಿದ್ದಾರೆ. 'ರಾಷ್ಟ್ರೀಯ ತಂಡಕ್ಕೆ ವಾಪಸಾಗಲು ಸಿದ್ಧನಿದ್ದೇನೆ. ಎಲ್ಲಾ ಸಮಯದಲ್ಲಿ ಫಿಟ್ ಆಗಿ ಇರುವುದು ನನ್ನ ಆದ್ಯತೆ. ಉಳಿದದ್ದು ಆಯ್ಕೆದಾರರ ಕೈಯಲ್ಲಿದೆ' ಎಂದು ಶಮಿ ಹೇಳಿದ್ದಾರೆ.

ಲಯಕ್ಕೆ ಮರಳುವ ಒತ್ತಡದಲ್ಲಿ ಸೂರ್ಯ

ಭಾರತ–ಆಸ್ಟ್ರೇಲಿಯಾ ಮೊದಲ ಟಿ20 ಪಂದ್ಯ ಇಂದು • ಬೂಮ್ರಾ ಮೇಲೆ ಭರವಸೆ

ಕ್ಯಾನ್‌ಬೆರಾ (ಪಿಟಿಐ): ಸೂರ್ಯಕುಮಾರ್ ಯಾದವ್ ತಮ್ಮ ಬ್ಯಾಟಿಂಗ್ ಲಯಕ್ಕೆ ಮರಳುವ ಒತ್ತಡದಲ್ಲಿದ್ದಾರೆ. ಆದ್ದರಿಂದಲೇ ಬುಧವಾರ ಆಸ್ಟ್ರೇಲಿಯಾ ಎದುರು ಆರಂಭವಾಗುವ ಟಿ20 ಕ್ರಿಕೆಟ್ ಸರಣಿಯು ಅವರ ಪಾಲಿಗೆ 'ಸತ್ವಪರೀಕ್ಷೆ'ಯ ಕಣವಾಗಲಿದೆ.

ಮೂರು ಪಂದ್ಯಗಳ ಸರಣಿಯ ಮೊದಲ ಹಣಾಹಣಿ ಮನುಕಾ ಓವೆಲ್‌ನಲ್ಲಿ ನಡೆಯಲಿದೆ. ಸೂರ್ಯ ನಾಯಕತ್ವದ ಭಾರತ ತಂಡ ಕಣಕ್ಕಿಳಿಯಲಿದೆ. ಏಕದಿನ ಸರಣಿಯಲ್ಲಿ 2–1ರಿಂದ ಜಯಭೇರಿ ಬಾರಿಸಿರುವ ಆತಿಥೇಯ ಬಳಗವನ್ನು ಮಿಚೆಲ್ ಮಾರ್ಷ್ ಮುನ್ನಡೆಸುವರು.

ಭಾರತ ತಂಡ ತಾನು ಆಡಿರುವ ಕಳೆದ ಹತ್ತು ಪಂದ್ಯಗಳಲ್ಲಿ 8ರಲ್ಲಿ ಜಯಿಸಿದೆ. ಒಂದು ಟೈ ಆಗಿದೆ. ಇನ್ನೊಂದರಲ್ಲಿ ಸೋತಿತ್ತು. ಆಸ್ಟ್ರೇಲಿಯಾ ಈಚೆಗೆ ಆಡಿದ ಹತ್ತು ಪಂದ್ಯಗಳಲ್ಲಿ ಒಂದರಲ್ಲಿ ಸೋತಿತ್ತು. ಇನ್ನೊಂದು ಪಂದ್ಯ ಮಳೆಗೆ ರದ್ದಾಗಿತ್ತು.

ಸೂರ್ಯಕುಮಾರ್ ಅವರು ನಾಯಕತ್ವ ವಹಿಸಿದ ನಂತರ ತಂಡವು 29 ಪಂದ್ಯಗಳಲ್ಲಿ 23ರಲ್ಲಿ ಜಯಿಸಿದೆ. ಚುಟುಕು ಕ್ರಿಕೆಟ್‌ನ ಹೊಸ ಶೈಲಿಯಾದ 'ನಿರ್ಭೀತ ಆಟ'ಕ್ಕೆ ತಂಡವು ಹೊಂದಿಕೊಂಡಿದೆ. ಸೂರ್ಯ ನಾಯಕತ್ವ ದಲ್ಲಿ ಮೊದಲ ಎಸೆತದಿಂದಲೇ ಬೀಸಾಟವಾಡುವ ಶೈಲಿ ಈಗ ಹೆಚ್ಚು ಕಂಡುಬರುತ್ತಿದೆ.

ಏಷ್ಯಾ ಕಪ್ ಜಯಿಸಿರುವ ತಂಡದ ನಾಯಕತ್ವ ವಹಿಸಿದ್ದ ಸೂರ್ಯ ಆಸ್ಟ್ರೇಲಿಯಾ ನೆಲದಲ್ಲಿಯೂ ಯಶಸ್ಸಿನ ಕನಸು ಕಾಣುತ್ತಿದ್ದಾರೆ. ಮುಂದಿನ ವರ್ಷ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಗಾಗಿ ಈ ಸರಣಿಯಿಂದಲೇ ಭಾರತದ ಪೂರ್ವಾಭ್ಯಾಸ ನಡೆಯಲಿದೆ. ವಿಶ್ವಕಪ್ ಟೂರ್ನಿಯವರೆಗೂ 15 ಪಂದ್ಯಗಳಲ್ಲಿ ತಂಡ ಆಡಬೇಕಿದೆ. ಈ ಸರಣಿ ನಂತರ ತಂಡವು ದಕ್ಷಿಣ ಆಫ್ರಿಕಾ ಮತ್ತು ನ್ಯೂಜಿಲೆಂಡ್ ಎದುರು ಕೂಡ ಆಡಲಿದೆ.



ಭಾರತ ತಂಡದ ಜಸ್‌ಪ್ರೀತ್ ಬೂಮ್ರಾ, ಅರ್ಷದೀಪ್ ಸಿಂಗ್ ಮತ್ತು ಅಕ್ಷರ್ ಪಟೇಲ್ ಅಭ್ಯಾಸ 'ಎಕ್ಸ್' ಚಿತ್ರ

ಟಿ20 ಮುಖಾಮುಖಿ

ಒಟ್ಟು ಪಂದ್ಯ	32
ಭಾರತ ಜಯ	20
ಆಸ್ಟ್ರೇಲಿಯಾ ಗೆಲುವು	11
ಫಲಿತಾಂಶವಿಲ್ಲ	1

ಬ್ಯಾಟಿಂಗ್‌ನಲ್ಲಿ ಫಾರ್ಮ್ ಕಳೆದುಕೊಂಡಿರುವ ಸೂರ್ಯ ಅವರಿಗೆ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರ 'ಅಭಯಹಸ್ತ' ಇದೆ. ನಾಯಕನಾಗಿ ಉತ್ತಮ ಸಾಧನೆ ಮಾಡಿರುವ ಸೂರ್ಯ ಬ್ಯಾಟಿಂಗ್‌ನಲ್ಲಿ ಲಯಕ್ಕೆ ಮರಳುವ ವಿಶ್ವಾಸ ಅವರಿಗೆ ಇದೆ.

ಏಷ್ಯಾ ಕಪ್ ಟೂರ್ನಿಯಲ್ಲಿ ತಮ್ಮ ಸ್ಫೋಟಕ ಶೈಲಿಯ ಬ್ಯಾಟಿಂಗ್ ಮೂಲಕ ಅಮೋಘ ಆರಂಭ ನೀಡಿದ್ದ ಅಭಿಷೇಕ್ ಶರ್ಮಾ ಈಗ ಯುವ ಅಭಿಮಾನಿಗಳ ಕಣ್ಮಣಿಯಾಗಿದ್ದಾರೆ. ಆಸ್ಟ್ರೇಲಿಯಾ ಎದುರಿನ ಪಂದ್ಯಗಳಲ್ಲಿ ಅಭಿಷೇಕ್ ಅಬ್ಬರದ ಆರಂಭ ನೀಡಿದರೆ ಮಹತ್ವದ ಕಾಣಿಕೆಯಾಗಲಿದೆ. ಮಧ್ಯಮಕ್ರಮಾಂಕದಲ್ಲಿ ತಿಲಕ್ ವರ್ಮಾ, ಸಂಜು ಸ್ಯಾಮ್ಸನ್, ಶಿವಂ ದುಬೆ ಹಾಗೂ ಅಕ್ಷರ್ ಪಟೇಲ್ ಬಲವಿದೆ.

ವೇಗಿ ಜಸ್‌ಪ್ರೀತ್ ಬೂಮ್ರಾ ತಂಡಕ್ಕೆ ಮರಳಿರುವುದು ಸೂರ್ಯ ಆತ್ಮವಿಶ್ವಾಸ ಇಮ್ಮಡಿಸಿದೆ. ಅವರೊಂದಿಗೆ ಸ್ಪಿನ್ನರ್ ವರುಣ್ ಚಕ್ರವರ್ತಿ ಕೂಡ ಇದ್ದಾರೆ. ವರುಣ್, ಕುಲದೀಪ್ ಯಾದವ್ ಮತ್ತು ಅಕ್ಷರ್ ಅವರು ಸೇರಿ ಪ್ರಯೋಗಿಸುವ ಒಟ್ಟು 12 ಓವರ್‌ಗಳು ಪಂದ್ಯಕ್ಕೆ ಮಹತ್ವದ ತಿರುವು ನೀಡುವ ಸಾಧ್ಯತೆ ಇದೆ.

ಈ ಬೌಲಿಂಗ್ ಪಡೆಗೆ ಟ್ರಾವಿಸ್ ಹೆಡ್, ಮಿಚೆಲ್ ಮಾರ್ಷ್ ಹಾಗೂ ಮಿಚೆಲ್ ಓವೆನ್ ಅವರನ್ನು ಕಟ್ಟಿಹಾಕುವ ಸವಾಲು ಇದೆ. ಈಚೆಗೆ ನಡೆದ ಏಕದಿನ ಕ್ರಿಕೆಟ್ ಸರಣಿಯಲ್ಲಿ ಓವೆನ್ ಅಮೋಘವಾಗಿ ಆಡಿದ್ದರು.

ಪಂದ್ಯ ಆರಂಭ: ಮಧ್ಯಾಹ್ನ 1.45 (ಭಾರತೀಯ ಕಾಲಮಾನ)

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಹಾಟ್‌ಸ್ಟಾರ್

ಟೈಟನ್ಸ್ ಜಯದಲ್ಲಿ ಭರತ್ ಮಿಂಚು

ನವದೆಹಲಿ (ಪಿಟಿಐ): ಅನುಭವಿ ಭರತ್ ಹೂಡಾ ಅವರ ಅಮೋಘ ರೇಡಿಂಗ್ ಬಲದಿಂದ ತೆಲುಗು ಟೈಟನ್ಸ್ ತಂಡವು ಮಂಗಳವಾರ ಪ್ರೊ ಕಬಡ್ಡಿ ಲೀಗ್‌ನ ಮೂರನೇ ಎಲಿಮಿನೇಟರ್ ಪಂದ್ಯದಲ್ಲಿ 46–39ರಿಂದ ಪಟ್ನಾ ಪೈರೇಟ್ಸ್ ತಂಡವನ್ನು ಮಣಿಸಿತು.

ಟೈಟನ್ಸ್ ತಂಡವು ಬುಧವಾರ ನಡೆಯುವ ಎರಡನೇ ಕ್ವಾಲಿಫೈಯರ್‌ನಲ್ಲಿ ಪುಣೇರಿ ಪಲ್ಟನ್ ತಂಡವನ್ನು ಎದುರಿಸಲಿದೆ. ಈ ಪಂದ್ಯದಲ್ಲಿ ಗೆದ್ದ ತಂಡವು ಶುಕ್ರವಾರ ದಬಂಗ್ ಡೆಲ್ಲಿ ತಂಡದೊಂದಿಗೆ ಪ್ರಶಸ್ತಿಗಾಗಿ ಸೆಣಸಾಡಲಿದೆ. ಪಟ್ನಾ ತಂಡವು ಮೊದಲ ಕ್ವಾಲಿಫೈಯರ್‌ನಲ್ಲಿ ದಬಂಗ್ ವಿರುದ್ಧ ಸೋತಿತ್ತು.

ತ್ಯಾಗರಾಜ ಒಳಾಂಗಣ ಕ್ರೀಡಾಂ-ಗಣದಲ್ಲಿ ನಡೆದ ಪಂದ್ಯದಲ್ಲಿ ಟೈಟನ್ಸ್ ತಂಡವು 2 ಅಂಕಗಳ (22–20) ಮುನ್ನಡೆ ಪಡೆದಿತ್ತು. ಉತ್ತರಾರ್ಧ ದಲ್ಲೂ ಚುರುಕಿನ ಆಟವಾಡಿದ ಟೈಟನ್ಸ್ ಪಾರಮ್ಯ ಮೆರೆಯಿತು. 17 ಟಚ್ ಪಾಯಿಂಟ್ಸ್ ಮತ್ತು 6 ಬೋನಸ್ ಸೇರಿದಂತೆ 23 ಪಾಯಿಂಟ್ಸ್ ಗಳಿಸಿದ ಭರತ್ ಗೆಲುವಿನ ರೂವಾರಿಯಾದರು. ಅವರು ಹಾಲಿ ಆವೃತ್ತಿಯಲ್ಲಿ 224 ಅಂಕ (20 ಪಂದ್ಯ) ಕಲೆಹಾಕಿದರು.

ಪಟ್ನಾ ತಂಡದ ಪರ ಅಯನ್ ಲೋಚಬ್ 22 ಅಂಕ (20 ಟಚ್ ಪಾಯಿಂಟ್ಸ್ + 2 ಬೋನಸ್) ಗಳಿಸಿ ಏಕಾಂಗಿ ಹೋರಾಟ ನಡೆಸಿದರು. ಅವರು ಹಾಲಿ ಆವೃತ್ತಿಯಲ್ಲಿ 324 ಪಾಯಿಂಟ್ಸ್ (22 ಪಂದ್ಯ) ಸೇರಿದಂತೆ ಪ್ರೊ ಕಬಡ್ಡಿ ಲೀಗ್‌ನಲ್ಲಿ 500 ಅಂಕಗಳ ಮೈಲುಗಲ್ಲು ತಲುಪಿದರು. ಅವರಿಗೆ ಉಳಿದ ಆಟಗಾರರಿಂದ ನಿರೀಕ್ಷಿತ ಬೆಂಬಲ ಸಿಗಲಿಲ್ಲ. ಈ ಸೋಲಿನೊಂದಿಗೆ ಪಟ್ನಾ ತಂಡದ ಸತತ ಎಂಟು ಪಂದ್ಯಗಳ ಗೆಲುವಿನ ಸರಪಳಿ ತುಂಡಾಯಿತು. ಜೊತೆಗೆ ಹಾಲಿ ಟೂರ್ನಿಯಿಂದಲೂ ಹೊರಬಿತ್ತು.

ಯೂತ್ ಗೇಮ್ಸ್: ಯಶಿತಾಗೆ ಚಿನ್ನ

ಮನಾಮಾ (ಬಹರೇನ್) (ಪಿಟಿಐ): ಭಾರತದ ಉದಯೋನ್ಮುಖ ಕುಸ್ತಿಪಟು ಯಶಿತಾ ರಾಣಾ ಅವರು ಕಜಾಕಸ್ತಾನದ ಝ್ಯುದರ್ ಮುಕ್ತರ್ ಅವರನ್ನು ಮಣಿಸಿ ಏಷ್ಯನ್ ಯೂತ್ ಗೇಮ್ಸ್‌ನಲ್ಲಿ ಮಂಗಳವಾರ ಚಿನ್ನದ ಪದಕ ಗೆದ್ದುಕೊಂಡರು. ಜೊತೆಗೆ, ಆರು ಬಾಕ್ಸರ್‌ಗಳು ವಿವಿಧ ವಿಭಾಗಗಳಲ್ಲಿ ಫೈನಲ್ ಪ್ರವೇಶಿಸುವ ಮೂಲಕ ಅರ್ಧ ಡಜನ್ ಪದಕಗಳನ್ನು ಖಚಿತಪಡಿಸಿದರು.



ಯಶಿತಾ ಅವರು 61ಕೆ.ಜಿ.ಯೊಳಗಿನ ಬಾಲಕಿಯರ ಫೈನಲ್‌ನಲ್ಲಿ ಆರಂಭಿಕ ಹಿನ್ನಡೆ (0–3) ಅನುಭವಿಸಿದರೂ, ನಂತರ ಪುಟಿದೆದ್ದು 5–5ರಲ್ಲಿ ಸಮಬಲ ಸಾಧಿಸಿದರು. ಬಳಿಕ ನಡೆದ ನಿರ್ಣಾಯಕ ಬೌಟ್‌ನಲ್ಲಿ ಎದುರಾಳಿಯನ್ನು ಹಿಮ್ಮೆಟ್ಟಿಸಿ ಪ್ರಶಸ್ತಿಗೆ ಕೊರಳೊಡ್ಡಿದರು. ಅದರೊಂದಿಗೆ, ಟೂರ್ನಿಯ ಇತಿಹಾಸದಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಕುಸ್ತಿಪಟು ಎಂಬ ಹಿರಿಮೆಗೂ ಪಾತ್ರರಾದರು.

ಬಾಲಕಿಯರ ಬಾಕ್ಸಿಂಗ್‌ನ 46 ಕೆ.ಜಿ. ವಿಭಾಗದಲ್ಲಿ ಖುಷಿ ಚಂದ್ 5–0 ಅಂತರದಿಂದ ಮಂಗೋಲಿಯಾದ ಅಲ್ತಾಂಜುಲ್ ಅಲ್ತಂಗದಾಸ್ ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿದರು.

54 ಕೆಜಿ ಸ್ಪರ್ಧೆಯಲ್ಲಿ ಚಂದ್ರಿಕಾ ಪೂಜಾರಿ 5-0 ಅಂತರದಿಂದ ಕಜಾಕಸ್ತಾನದ ರಮಿನಾ ಮಖಾನೋವಾ ಅವರನ್ನು ಮಣಿಸಿದರು.

50 ಕೆಜಿ ವಿಭಾಗದಲ್ಲಿ ಅಹಾನಾ ಶರ್ಮಾ, 66 ಕೆ.ಜಿ. ವಿಭಾಗದಲ್ಲಿ ಹರ್ನೂರ್ ಕೌರ್, 80 ಕೆ.ಜಿ. ವಿಭಾಗದಲ್ಲಿ ಅನ್ನಿಕಾ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಬಾಲಕರ ವಿಭಾಗದಲ್ಲಿ ಲ್ಯಾಂಚೆನ್ಬಾ ಸಿಂಗ್ (50) ಸೆಮಿಫೈನಲ್‌ನಲ್ಲಿ 5–0ಯಿಂದ ಕೊರಿಯಾದ ಆನ್ ಫ್ಯೊಂಗ್ ಗುಕ್ ವಿರುದ್ಧ ಗೆದ್ದರು.

ಬ್ಯಾಡ್ಮಿಂಟನ್: ಹೇಮಂತ್ ಎಂ. ಗೌಡ, ಉಮಾಮಹೇಶ್ವರ್ ರೆಡ್ಡಿ ನಿರ್ಗಮನ

ಅಗ್ರ ಶ್ರೇಯಾಂಕಿತರಿಗೆ ಆಘಾತ

ಪ್ರಜಾವಾಣಿ ವಾರ್ತೆ

ಮಂಗಳೂರು: ಅಗ್ರ ಶ್ರೇಯಾಂಕದ ಹೇಮಂತ್ ಎಂ. ಗೌಡ ಮತ್ತು ಎರಡನೇ ಶ್ರೇಯಾಂಕದ ಉಮಾಮಹೇಶ್ವರ್ ರೆಡ್ಡಿ ಅವರು ಇಲ್ಲಿ ಮಂಗಳವಾರ ಆರಂಭವಾದ 'ಚೀಫ್ ಮಿನಿಸ್ಟರ್ಸ್ ಮಂಗಳೂರು ಇಂಡಿಯಾ ಇಂಟರ್‌ನ್ಯಾಷನಲ್ ಚಾಲೆಂಜ್- 2025' ಅಂತರರಾ-ಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾಲಿಫೈಯರ್‌ನ ಮೊದಲ ಸುತ್ತಿನಲ್ಲಿ ಆಘಾತ ಅನುಭವಿಸಿದರು.

ಉರ್ವ ಒಳಾಂಗಣ ಕ್ರೀಡಾಂಗಣ ದಲ್ಲಿ ನಡೆದ ಪುರುಷರ ಸಿಂಗಲ್ಸ್‌ನ ಪಂದ್ಯದಲ್ಲಿ ಗೌತಮ್ ವಾಲಿಯಾ ಅವರು 21–18, 21–16ರಿಂದ ಹೇಮಂತ್ ಅವರನ್ನು ಮಣಿಸಿದರು. ಶಿವಾಂಶ್ 21–13, 21–10ರಿಂದ ಉಮಾಮಹೇಶ್ವರ್ ಅವರನ್ನು ಹಿಮ್ಮೆಟ್ಟಿಸಿದರು.



ಅರ್ಹತಾ ಸುತ್ತಿನ ಪಂದ್ಯದಲ್ಲಿ ಅಖಿಲ್ ರಾವ್ ಸೂರ್ಯನೇನಿ ಪ್ರಜಾವಾಣಿ ಚಿತ್ರ: ಫಕ್ರುದ್ದೀನ್ ಎಚ್

ಮೂರನೇ ಶ್ರೇಯಾಂಕದ ಇರ್ವಿನ್ ಅರೋಕಿಯಾ ವಾಲ್ಟರ್ ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡು 15–21, 21–19, 21–16ರಿಂದ ಮನೀಶ್ ಫೋಗಟ್ ಅವರನ್ನು ಮಣಿಸಿ ಕ್ವಾಲಿಫೈಯರ್‌ನ ಎರಡನೇ ಸುತ್ತು ಪ್ರವೇಶಿಸಿದರು. ಐದನೇ ಶ್ರೇಯಾಂಕದ ಅಂಶ್ ನೇಗಿ 21–14, 21–10ರಿಂದ ಶ್ರವಂತ್ ಸಾಯಿ ಸೂರಿ ಅವರನ್ನು ಸೋಲಿಸಿದರು.

ಎಂಟನೇ ಶ್ರೇಯಾಂಕದ ಆದಿತ್ಯ ದಿವಾಕರ್, ಒಂಬತ್ತನೇ ಶ್ರೇಯಾಂಕದ ಪ್ರಜ್ವಲ್ ಸೋನವಾನ್ ನಿರಾಯಾಸವಾಗಿ ಎರಡನೇ ಸುತ್ತು ತಲುಪಿದರು. ಆದಿತ್ಯ 21–13, 21–16ರಿಂದ ಅಥರ್ವ ಜೋಶಿ ವಿರುದ್ಧ; ಪ್ರಜ್ವಲ್ 21–18, 21–9ರಿಂದ ಹರ್ಷನ್ ತಡಿಪರ್ತಿ ವಿರುದ್ಧ ಗೆಲುವು ಸಾಧಿಸಿದರು. ಹತ್ತನೇ ಶ್ರೇಯಾಂಕದ ತನ್ಮೊಯ್ ಬಿಕಾಶ್ ಬೋರುವಾ16–21, 22–20, 21–9ರಿಂದ ಕ್ರಿಶ್ ದೇಸಾಯಿ ಅವರನ್ನು ಮಣಿಸಿದರು.

11ನೇ ಶ್ರೇಯಾಂಕದ ನವೀನ್ ರಾಜೇಂದ್ರನ್ ಅವರು ಚಿರಾಗ್ ಸೇತ್ ಎದುರು ವಾಕ್‌ಓವರ್ ಪಡೆದರು. 12ನೇ ಶ್ರೇಯಾಂಕದ ಸಿದ್ಧಾಂತ್ ಸಲಾರ್ 21–15, 21–12ರಿಂದ ವರ್ಷಿತ್ ರೆಡ್ಡಿ ಬೊಕ್ಕ ಎದುರು; 13ನೇ ಶ್ರೇಯಾಂಕದ ಶಿಖರ್ ರಲ್ಲನ್ 21–16, 21–18ರಿಂದ ನಾಗೇಶ್ ಚಾಮ್ಲೆ ಎದುರು; 14ನೇ ಶ್ರೇಯಾಂಕದ ಅಖಿಲ್ ರಾವ್ ಸೂರ್ಯನೇನಿ 21–13, 21–15 ದಿಶಾಂತ್ ಅಹ್ಲಾವತ್ ಎದುರು ಗೆಲುವು ಸಾಧಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರವೀಣ ಸುಬ್ಬುರಾಜ್ 21–18, 13–21, 21–12ರಿಂದ ತನೀಶಾ ಸಿಂಗ್ ವಿರುದ್ಧ; ಆಯುಷಿ ಭಟ್ 21–4, 21–12ರಿಂದ ನಂದಿನಿ ಎಸ್. ವಿರುದ್ಧ ಜಯ ಸಾಧಿಸಿದರು.

ಚೆಸ್: ಕಿಶನ್‌ಗೆ ಸ್ವರ್ಣ

ಬೆಂಗಳೂರು: ಕರ್ನಾಟಕದ ಕಿಶನ್ ಗಂಗೊಳ್ಳಿ ಅವರು ಕಜಾಕಸ್ತಾನದ ಅಸ್ತಾನಾದಲ್ಲಿ ದೈಹಿಕ ನ್ಯೂನತೆಯುಳ್ಳವರಿಗಾಗಿ ನಡೆದ ಎರಡನೇ ಫಿಡೆ ಚೆಸ್ ಒಲಿಂಪಿಯಾಡ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದು ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಭಾರತ ತಂಡದ ಪರ ಮೂರನೇ ಬೋರ್ಡ್‌ನಲ್ಲಿ ನೀಡಿದ ಉತ್ತಮ ಆಟಕ್ಕೆ ಅವರಿಗೆ ಈ ಪಕದ ಒಲಿದಿದೆ.



ಈ ತಿಂಗಳ 19 ರಿಂದ 26ರವರೆಗೆ ನಡೆದ ಟೂರ್ನಿಯಲ್ಲಿ ಅಜೇಯರಾಗುಳಿದ ಅವರು ಆರು ಸುತ್ತುಗಳಿಂದ ಐದು ಪಾಯಿಂಟ್ಸ್ (4 ಗೆಲುವು, 2 ಡ್ರಾ) ಕಲೆಹಾಕಿದರು. ಆದರೆ ಭಾರತ ತಂಡ 12ನೇ ಸ್ಥಾನ ಗಳಿಸಲಷ್ಟೇ ಶಕ್ತವಾಯಿತು.

ತಿಂಗಳ ಹಿಂದೆಷ್ಟೇ ಬೆಂಗಳೂರಿನಲ್ಲಿ ಸಹಕಾರ ಲೆಕ್ಕಪರಿಶೋಧಕ ಇಲಾಖೆ ಯಲ್ಲಿ ಸಹಾಯಕ ನಿರ್ದೇಶಕರಾಗಿ ನೇಮಕಗೊಂಡ ಕಿಶನ್ ಅವರು ಸರ್ಬಿಯಾದಲ್ಲಿ ನಡೆದಿದ್ದ ಮೊದಲ ಒಲಿಂಪಿಯಾಡ್‌ನಲ್ಲಿ ವೈಯಕ್ತಿಕ ಆಟಕ್ಕೆ ಬೆಳ್ಳಿ ಪದಕ ಗೆದ್ದುಕೊಂಡಿದ್ದರು.